prajavani.net prajavani
ಶನಿವಾರ, ಫೆಬ್ರುವರಿ 7, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 38 | ಪುಟ 20
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ವಿಶ್ವ' ಜಯದತ್ತ ಸೂರ್ಯ ಚಿತ್ತ
ಮುಂಬೈನಲ್ಲಿ ಶನಿವಾರ ಆರಂಭವಾಗಲಿರುವ ಐಸಿಸಿ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಅಮೆರಿಕ ತಂಡದ ಎದುರು ಆಡುವ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ತಾಲೀಮು ನಡೆಸಿದರು



ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,580 | ನಿಫ್ಟಿ 25,693 | $/₹ 90.65 | ಚಿನ್ನ (Std. 10g) ₹1,56,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,56,900 (ಬೆಂಗಳೂರು)

ಆತ್ಮಾಹುತಿ ಬಾಂಬ್ ಸ್ಫೋಟ: 31 ಜನರ ಸಾವು

ಇಸ್ಲಾಮಾಬಾದ್ (ಪಿಟಿಐ): ಇಲ್ಲಿನ ಶಿಯಾ ಮಸೀದಿ ಆವರಣದಲ್ಲಿ ಶುಕ್ರವಾರದ ಪ್ರಾರ್ಥನೆಯ ವೇಳೆ ಆತ್ಮಾಹುತಿ ಬಾಂಬರ್ ಒಬ್ಬ ತನ್ನನ್ನು ಸ್ಫೋಟಿಸಿಕೊಂಡ ಪರಿಣಾಮ 31 ಜನರು ಮೃತಪಟ್ಟಿದ್ದಾರೆ. ▶10

ಹೊತ್ತಿ ಉರಿದ ಬಸ್: ಪ್ರಯಾಣಿಕರು ಪಾರು

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ–48ರ ಹನುಮಂತಪುರ ಗೇಟ್ ಬಳಿ ಶುಕ್ರವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಬಸ್‌ವೊಂದು ಹೊತ್ತಿ ಉರಿದಿದ್ದು, ಬಸ್‌ನಲ್ಲಿದ್ದ 40 ಪ್ರಯಾಣಿಕರು ಪಾರಾಗಿದ್ದಾರೆ. ▶4

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೈಬರ್ ವಂಚಿತರಿಗೆ ಪರಿಹಾರ

ಹಣ ಕಳೆದುಕೊಂಡವರಿಗೆ ₹25 ಸಾವಿರ ನೀತಿ ರೂಪಿಸಲು ಮುಂದಾದ ಆರ್‌ಬಿಐ

ಮುಂಬೈ (ಪಿಟಿಐ): ಡಿಜಿಟಲ್ ವಂಚನೆಗೆ ಒಳಗಾದ ಗ್ರಾಹಕರಿಗೆ ಒಂದು ಬಾರಿ ಪರಿಹಾರವಾಗಿ ₹25 ಸಾವಿರ ಪಾವತಿಸುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

'ಒಟಿಪಿ' ಹಂಚಿಕೊಂಡು ವಂಚನೆಗೆ ಒಳಗಾದ ಗ್ರಾಹಕರಿಗೂ ಪರಿಹಾರ ಲಭಿಸಲಿದೆ.

ಆದರೆ, ಒಬ್ಬ ಗ್ರಾಹಕ ಜೀವಿತಾವಧಿಯಲ್ಲಿ ಒಂದು ಬಾರಿ ಮಾತ್ರ (ಒಂದು ವಂಚನೆ ವಹಿವಾಟಿಗೆ) ಪರಿಹಾರ ಪಡೆಯಲು ಅರ್ಹ ಎಂದಿರುವ ಆರ್‌ಬಿಐ, ಶೀಘ್ರದಲ್ಲೇ, ಪರಿಹಾರ ನೀತಿಯ ಕರಡನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಕಟ ಮಾಡಲಾಗುವುದು ಎಂದಿದೆ.

ಆರ್‌ಬಿಐ ನಿರ್ವಹಿಸುತ್ತಿರುವ ಸುಮಾರು ₹85 ಸಾವಿರ ಕೋಟಿ ಮೊತ್ತದ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಯಿಂದ (ಡಿಇಎ) ಪರಿಹಾರದ ಮೊತ್ತವನ್ನು ವಂಚನೆಗೆ ಒಳಗಾದ ಗ್ರಾಹಕರ ಖಾತೆಗೆ ಪಾವತಿ ಸಲಾಗುವುದು ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಹತ್ತು ವರ್ಷಗಳಿಂದ ಗ್ರಾಹಕರು ಹಿಂದಕ್ಕೆ ಪಡೆಯದ ಠೇವಣಿ ಮೊತ್ತವು ಈ ನಿಧಿಯಲ್ಲಿ ಸೇರಿಕೊಂಡಿದೆ.

'ಬ್ಯಾಂಕ್ ಗ್ರಾಹಕ ತನ್ನ ತಪ್ಪಿನಿಂದ ಉದ್ದೇಶಪೂರ್ವಕವಲ್ಲದೆ ಡಿಜಿಟಲ್ ವಂಚನೆಗೆ ಒಳಗಾಗಿದ್ದರೆ, ನಾವು ಹೆಚ್ಚಿನ ಪ್ರಶ್ನೆ ಕೇಳದೆ ₹25 ಸಾವಿರ ಪರಿಹಾರ ಪಾವತಿಸುತ್ತೇವೆ' ಎಂದು ಅವರು ಸ್ಪಷ್ಟಪಡಿಸಿದರು.

'ಡಿಜಿಟಲ್ ವಂಚನೆಗೆ ಒಳಗಾಗಿರುವುದು ಖಚಿತಗೊಂಡ ನಂತರ ಗ್ರಾಹಕರಿಗೆ 'ಡಿಇಎ' ನಿಧಿಯಿಂದ ಪರಿಹಾರ ವರ್ಗಾವಣೆ ಆಗಲಿದೆ' ಎಂದು ಆರ್‌ಬಿಐನ ಡೆಪ್ಯುಟಿ ಗವರ್ನರ್ ಜೆ.ಸ್ವಾಮಿನಾಥನ್ ಹೇಳಿದರು. ▶10

ಮುಖ್ಯಾಂಶಗಳು
- ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿಡಿಪಿ ಪ್ರಗತಿ ಶೇ 7.4ಕ್ಕೆ ಪರಿಷ್ಕರಣೆ
- ವಿದೇಶಿ ವಿನಿಮಯ ಸಂಗ್ರಹ ₹65.59 ಲಕ್ಷ ಕೋಟಿಗೆ ಏರಿಕೆ ನಿರೀಕ್ಷೆ

> ಫಲಾನುಭವಿ ಖಾತೆಗೆ ಹಣ ವರ್ಗಾವಣೆ ವಿಳಂಬ ಮತ್ತು ಹಿರಿಯ ನಾಗರಿಕರು ವಂಚನೆಗೆ ಒಳಗಾಗದಂತೆ ನೋಡಿಕೊಳ್ಳಲು ದೃಢೀಕರಣ ಸೇರಿ ಹೆಚ್ಚುವರಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುವುದು
> **ಸಂಜಯ್ ಮಲ್ಹೋತ್ರಾ,** ಆರ್‌ಬಿಐ ಗವರ್ನರ್

ಸಾಲದ ಮಿತಿ ₹20 ಲಕ್ಷಕ್ಕೆ ಹೆಚ್ಚಳ

ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ (ಎಂಎಸ್‌ಇ) ಪೂರಕ ಭದ್ರತೆ ಇಲ್ಲದೆ (ಅಡಮಾನರಹಿತ) ನೀಡುವ ಸಾಲದ ಮಿತಿಯನ್ನು ಆರ್‌ಬಿಐ ₹10 ಲಕ್ಷದಿಂದ ₹20 ಲಕ್ಷಕ್ಕೆ ಹೆಚ್ಚಿಸಿದೆ.

ಮುಂದಿನ ಹಣಕಾಸು ವರ್ಷದಿಂದ ಮಂಜೂರಾಗುವ ಸಾಲಕ್ಕೆ ಇದು ಅನ್ವಯಿಸಲಿದೆ. ಮಾರ್ಗಸೂಚಿಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.

ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಮಾರ್ಗಸೂಚಿಗಳ ಪರಿಷ್ಕರಣೆಗೂ ಆರ್‌ಬಿಐ ಮುಂದಾಗಿದ್ದು, ಕೆಸಿಸಿ ಅವಧಿಯನ್ನು ಆರು ವರ್ಷಕ್ಕೆ ವಿಸ್ತರಣೆ ಮಾಡುವುದು, ವ್ಯಾಪ್ತಿಯನ್ನು ಹೆಚ್ಚಿಸುವುದೂ ಪ್ರಸ್ತಾವಿತ ಮಾರ್ಗಸೂಚಿಯಲ್ಲಿ ಸೇರಿದೆ. ಕರಡು ಮಾರ್ಗಸೂಚಿ ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೆಪೊ ದರ ಯಥಾಸ್ಥಿತಿ

ಮುಂಬೈ (ಪಿಟಿಐ): ದೇಶೀಯ ಹಣದುಬ್ಬರ ಮತ್ತು ಆರ್ಥಿಕ ಪ್ರಗತಿಯ ಮುನ್ನೋಟವು ಸಕಾರಾತ್ಮಕವಾಗಿ ಮುಂದುವರಿದಿರುವುದರಿಂದ ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಶೇ 5.25 ಯಥಾಸ್ಥಿತಿಯಲ್ಲೇ ಮುಂದುವರಿಸಲು ಶುಕ್ರವಾರ ನಡೆದ ಸಭೆಯಲ್ಲಿ ಸರ್ವಾನುಮತದ ನಿರ್ಧಾರ ಕೈಗೊಂಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2026-27ನೇ ಸಾಲಿನ ಬಜೆಟ್ ಪ್ರಕಟಿಸಿದ ನಂತರದ, ಆರ್‌ಬಿಐನ ಮೊದಲ ಹಣಕಾಸು ನೀತಿ ಪರಿಶೀಲನೆ ಇದಾಗಿದೆ.

'ದೇಶೀಯ ಮತ್ತು ಜಾಗತಿಕ ಮಟ್ಟದ ಆರ್ಥಿಕ ಪರಿಸ್ಥಿತಿಗಳು ಸ್ಥಿರತೆಯತ್ತ ಮರಳುತ್ತಿರುವುದರ ವಿವರವಾದ ಮೌಲ್ಯಮಾಪನದ ನಂತರ ಎಂಪಿಸಿ, ರೆಪೊ ದರದಲ್ಲಿ ತಟಸ್ಥ ನಿಲುವನ್ನು ಕಾಯ್ದುಕೊಂಡಿದೆ ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದರು. ▶10

> ಡಿಜಿಟಲ್ ವಂಚನೆಗೆ ತಿಳಿಯದೆ ಬಲಿಯಾಗುವ ಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು ಪರಿಹಾರವನ್ನು ಘೋಷಿಸಲಾಗಿದೆ. ಇದರಿಂದ ಆರ್‌ಬಿಐಗೆ ಹೆಚ್ಚಿನ ಹಣಕಾಸು ಹೊರೆ ಬೀಳುವುದಿಲ್ಲ
> **ಜೆ.ಸ್ವಾಮಿನಾಥನ್,** ಡೆಪ್ಯುಟಿ ಗವರ್ನರ್

ಯುವಶಕ್ತಿಯ ಪ್ರಶಸ್ತಿ 'ವೈಭವ'

ಚಿತ್ರ: ಐಸಿಸಿ



ಹರಾರೆಯಲ್ಲಿ ಶುಕ್ರವಾರ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಇಂಗ್ಲೆಂಡ್ ಯುವಪಡೆಯ ಎದುರು 100 ರನ್‌ಗಳಿಂದ ಗೆದ್ದ ಭಾರತದ ಯುವ ಬಳಗವು ಪ್ರಶಸ್ತಿ ತನ್ನದಾಗಿಸಿಕೊಂಡಿತು. ಭಾರತಕ್ಕೊಲಿದ ಆರನೇ ಕಿರೀಟ ಇದಾಗಿದೆ ವಿವರ ▶12

'ಯತೀಂದ್ರ ನಮ್ಮ ಹೈಕಮಾಂಡ್'

ಮುಖ್ಯಮಂತ್ರಿ ಮಗನ ಹೇಳಿಕೆಗೆ ಶಿವಕುಮಾರ್ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯತೀಂದ್ರ ಅವರೇ ನಮ್ಮ ಹೈಕಮಾಂಡ್. ಅವರು ಹೇಳಿದ ಮೇಲೆ ಇನ್ನೇನಿದೆ. ಅವರು ಏನು ಹೇಳುತ್ತಾರೋ ಅದನ್ನು ಗೌರವದಿಂದ ಸ್ವೀಕರಿಸುವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.



ಶಿವಕುಮಾರ್

ಮೈಸೂರಿನಲ್ಲಿ ಶುಕ್ರವಾರ ಬೆಳಿಗ್ಗೆ ಮಾತನಾಡಿದ ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಯತೀಂದ್ರ, 'ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರುತ್ತಾರೆ. ಹೈಕಮಾಂಡ್ ನೇರವಾಗಿ ಹೇಳದಿದ್ದರೂ ಸ್ಪಷ್ಟ ಸಂದೇಶವನ್ನು ಈಗಾಗಲೇ ನೀಡಿದೆ' ಎಂದಿದ್ದರು.

ಈ ಬಗ್ಗೆ ಮಂಗಳೂರು ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಪ್ರಶ್ನೆಗೆ ತುಸು ಸಿಟ್ಟಿನಲ್ಲಿಯೇ ಉತ್ತರಿಸಿದ ಡಿ.ಕೆ. ಶಿವಕುಮಾರ್, 'ಅವರೇ (ಯತೀಂದ್ರ) ಹೈಕಮಾಂಡ್ ಎಂಬಂತೆ ಹೇಳಿಕೆ ನೀಡಿರುವಾಗ ಅವರನ್ನೇ ಹೈಕಮಾಂಡ್ ಎಂದು ಸ್ವೀಕಾರ ಮಾಡೋಣ' ಎಂದರು. ▶6

> ಶಿವಕುಮಾರ್ ಮುಖ್ಯಮಂತ್ರಿಯಾಗುವ ಬಗ್ಗೆ ಹಿಂದೆ ಹೇಳಿದ್ದೆ. ಆದರೆ, ಆಗಲಿಲ್ಲ. ಈ ಬಾರಿ ಖಂಡಿತಾ ಸ್ಥಾನ ಸಿಗುತ್ತದೆ. ಈ ಬಗ್ಗೆ ಎಲ್ಲ ಶಾಸಕರೂ ಚರ್ಚಿಸುತ್ತೇವೆ
> **ಎಚ್.ಎ. ಇಕ್ಬಾಲ್ ಹುಸೇನ್**
> ರಾಮನಗರ ಕಾಂಗ್ರೆಸ್ ಶಾಸಕ

ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಗಿನ ಜಾವ ಚಳಿಯ ವಾತಾವರಣ ನಂತರ ಶುಭ್ರ ಆಕಾಶ ಇರಲಿದೆ

ಪ್ರವೇಶದ್ವಾರ ತಾತ್ಕಾಲಿಕ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಗಾಗಿ ತುಮಕೂರು ರಸ್ತೆ ಕಡೆಗೆ ಇರುವ ಪ್ರವೇಶದ್ವಾರವನ್ನು ತಾತ್ಕಾಲಿಕವಾಗಿ ಸ್ಥಳಾಂತರ ಮಾಡಲಾಗಿದೆ.

ಯಶವಂತಪುರ ರೈಲು ನಿಲ್ದಾಣದಲ್ಲಿ ಸುಧಾರಿತ ಪ್ರಯಾಣಿಕ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಕಾಮಗಾರಿಗಳು ನಡೆಯುತ್ತಿವೆ. ನಮ್ಮ ಮೆಟ್ರೊ ಬದಿಯಲ್ಲಿ ಇರುವ ಈ ಪ್ರವೇಶದ್ವಾರವನ್ನು ತಾತ್ಕಾಲಿಕವಾಗಿ ಪ್ಲಾಟ್‌ಫಾರ್ಮ್ 6ರ ಬಳಿ ಸುಮಾರು 150 ಮೀಟರ್ ದೂರದ ಮುಖ್ಯ ರಸ್ತೆಯ ಕಡೆಗೆ ಸ್ಥಳಾಂತರಿಸಲಾಗಿದೆ. ಸಾಮಾನ್ಯ ಟಿಕೆಟ್ ಕೌಂಟರ್‌ಗಳನ್ನು ಕೂಡಾ ಈ ತಾತ್ಕಾಲಿಕ ಪ್ರವೇಶದ್ವಾರಕ್ಕೆ ಸ್ಥಳಾಂತರಿಸಿದ್ದು ಪ್ರಯಾಣಿಕರು ಪ್ಲಾಟ್‌ಫಾರ್ಮ್‌ಗಳಿಗೆ ತೆರಳಲು ಇಲ್ಲಿರುವ 30 ಮೀ. ಅಗಲದ ಪಾದಚಾರಿ ಮೇಲ್ಸೇತುವೆಯನ್ನು ಬಳಸಿಕೊಳ್ಳುವಂತೆ ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಯಾಣಿಕರಿಗೆ ಈ ಬಗ್ಗೆ ಮಾಹಿತಿ ಮತ್ತು ನೆರವು ನೀಡಲು ಆರ್.ಪಿ.ಎಫ್. ಸಿಬ್ಬಂದಿಯನ್ನು ನಿಯೋಜಿಸಿದ್ದು ಸಹಾಯ ಕೇಂದ್ರವನ್ನು ತೆರೆಯಲಾಗಿದೆ. ಮಾಹಿತಿ ಫಲಕಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕರಿಗೆ ಅನನುಕೂಲವಾಗದಂತೆ ನೋಡಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಮೆಟ್ರೊ ದರ ಹೆಚ್ಚಳಕ್ಕೆ ಕೇಂದ್ರವೇ ಕಾರಣ’

ದರ ಪರಿಷ್ಕರಣೆಯ ಹೊಣೆಯನ್ನು ನಮ್ಮ ಸರ್ಕಾರದ ತಲೆಗೆ ಕಟ್ಟುವುದು ದುಷ್ಟತನ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಪ್ರಯಾಣ ದರದ ಹೆಚ್ಚಳಕ್ಕೆ ಕೇಂದ್ರ ಸರ್ಕಾರವೇ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಮೆಟ್ರೊ ರೈಲ್ವೆ ಕಾಯ್ದೆ ಪ್ರಕಾರ ಮೆಟ್ರೊ ದರಗಳನ್ನು ರಾಜ್ಯ ಸರ್ಕಾರ ನಿರ್ಧರಿಸುವುದಿಲ್ಲ. ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಮೂಲಕ ರಚಿಸಲಾದ ಸ್ವತಂತ್ರ ದರ ನಿಗದಿ ಸಮಿತಿ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ.

ಕಾಯ್ದೆಯ ಸೆಕ್ಷನ್ 36ರ ಪ್ರಕಾರ, ದರ ನಿಗದಿ ಸಮಿತಿಯು ನಿಗದಿತ ಅವಧಿಯೊಳಗೆ ತನ್ನ ಶಿಫಾರಸುಗಳನ್ನು ಸಲ್ಲಿಸಬೇಕು ಮತ್ತು ಸೆಕ್ಷನ್ 37ರ ಅಡಿ ಈ ಶಿಫಾರಸುಗಳನ್ನು ಮೆಟ್ರೊ ಆಡಳಿತವು ಒಪ್ಪಲೇಬೇಕಿದೆ ಹಾಗೂ ಜಾರಿ ಮಾಡಬೇಕಿದೆ. ರಾಜ್ಯ ಸರ್ಕಾರಕ್ಕೆ ಅಥವಾ ಮೆಟ್ರೊ ರೈಲು ನಿಗಮಕ್ಕೆ ಈ ಶಿಫಾರಸುಗಳನ್ನು ರದ್ದುಗೊಳಿಸುವ ಅಥವಾ ಉಲ್ಲಂಘಿಸುವ ಕಾನೂನಾತ್ಮಕ ಅಧಿಕಾರವಿಲ್ಲ ಎಂದು ತಿಳಿಸಿದ್ದಾರೆ.

‘ಸಂಸತ್ತಿನಲ್ಲಿ ತಾವೇ (ಕೇಂದ್ರ) ಈ ಶಿಫಾರಸುಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ಮಾಡಿ ಈಗ ನಮ್ಮ ಸರ್ಕಾರದ ಮೇಲೆ ಬೆಲೆ ಏರಿಕೆ ನಿರ್ಧಾರದ ಆರೋಪ ಹೊರಿಸಲಾಗುತ್ತಿದೆ. ಇದು ಜನರನ್ನು ಉದ್ದೇಶಪೂರ್ವಕವಾಗಿ ತಪ್ಪು ದಾರಿಗೆಳೆಯುವ ಪ್ರಯತ್ನ. ದರ ಪರಿಷ್ಕರಣೆಯ ಹೊಣೆಯನ್ನು ನಮ್ಮ ಸರ್ಕಾರದ ತಲೆಗೆ ಕಟ್ಟುವುದು ದುಷ್ಟತನ’ ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ.

‘ದರ ಪರಿಷ್ಕರಣೆಯ ಎಲ್ಲ ಪ್ರಕ್ರಿಯೆಗಳನ್ನು ಕಾನೂನು ನಿಗದಿಪಡಿಸುತ್ತದೆ. ಆದರೆ ಜನ ಹಿತದ ವಿಚಾರದಲ್ಲಿ ನಮ್ಮ ಬದ್ಧತೆ ಪ್ರಶ್ನಾತೀತವಾಗಿದ್ದು, ನಾವು ಜನರೊಂದಿಗೆ ದೃಢವಾಗಿ ಇರುತ್ತೇವೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ಎಲ್ಲರಿಗೂ ಲಭ್ಯವಾಗುವಂತೆ ಕೈಗೆಟುಕುವ ದರದಲ್ಲಿರಬೇಕು. ಬೆಂಗಳೂರಿನ ಬೆಳವಣಿಗೆಯೂ ಪ್ರಯಾಣಿಕರಿಗೆ ಹೊರೆಯಾಗಬಾರದು’ ಎಂದು ಅವರು ಹೇಳಿದ್ದಾರೆ. ‘ನಗರಗಳ ಸಂಪರ್ಕ ಹಾಗೂ ಸಾರಿಗೆ, ಸಾರ್ವಜನಿಕ ಸೇವೆಗಳು ಮತ್ತು ಜನರ ಹಿತ ರಕ್ಷಿಸುವಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿ ರಾಜ್ಯ. ಬೆಂಗಳೂರು ನಗರ ನಿವಾಸಿಗಳ ಹಿತರಕ್ಷಣೆಗಾಗಿ ಸಂವಿಧಾನಾತ್ಮಕವಾಗಿ, ರಚನಾತ್ಮಕವಾಗಿ ಮತ್ತು ದೃಢವಾಗಿ ನಿಲ್ಲಲಿದ್ದೇವೆ. ವಿರೋಧ ಪಕ್ಷಗಳು ಹರಡುತ್ತಿರುವ ತಪ್ಪು ಮಾಹಿತಿಯನ್ನು ಬದಿಗೊತ್ತಿ ರಾಜ್ಯದ ಹಿತಕ್ಕಾಗಿ ನೀವೆಲ್ಲರೂ ನಮ್ಮ ಜೊತೆ ನಿಲ್ಲಬೇಕು’ ಎಂದು ಅವರು ಜನರಿಗೆ ಮನವಿ ಮಾಡಿದ್ದಾರೆ.

ಕೇಂದ್ರಕ್ಕೆ ಸಿ.ಎಂ ಒತ್ತಾಯವೇನು?

- ದರ ನಿಗದಿ ಸಮಿತಿಯು ಶಿಫಾರಸು ಮಾಡಿರುವ ದರವನ್ನು ಮರುಪರಿಶೀಲಿಸಬೇಕು.
- ದೈನಂದಿನ ಪ್ರಯಾಣಿಕರು, ವಿದ್ಯಾರ್ಥಿಗಳು ಮತ್ತು ಬಡಜನರಿಗೆ ಅನುಕೂಲವಾಗುವಂತೆ ಸಮಾನವಾಗಿ ದರ ನಿಗದಿ ಮಾಡುವ ವ್ಯವಸ್ಥೆಯನ್ನು ಅನುಸರಿಸಬೇಕು.
- ಸಾಮಾಜಿಕ ನ್ಯಾಯದೊಂದಿಗೆ ಸುಸ್ಥಿರ ಆರ್ಥಿಕತೆಯನ್ನು ಸರಿದೂಗಿಸುವ ನೀತಿಗಳ ಬಗ್ಗೆ ಗಮನ ಹರಿಸಬೇಕು.

ಸಿದ್ದರಾಮಯ್ಯ

ದರ ಏರಿಕೆ ಖಂಡಿಸಿ ದಿನಸಿ ಪ್ರದರ್ಶನ

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣ ದರ ಏರಿಕೆಯನ್ನು ಖಂಡಿಸಿ ‘ನಮ್ಮ ಕನ್ನಡ ಸೇನೆ’ಯ ಸದಸ್ಯರು ಶಾಂತಿನಗರದಲ್ಲಿ ಇರುವ ಬಿಎಂಆರ್‌ಸಿಎಲ್ ಕಚೇರಿ ಬಳಿ ದಿನಸಿ ವಸ್ತುಗಳನ್ನು ಪ್ರದರ್ಶಿಸಿ ವಿನೂತನವಾಗಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ‘ಬಿಎಂಆರ್‌ಸಿಎಲ್ ಕಳೆದ ವರ್ಷ ಪ್ರಯಾಣ ದರವನ್ನು ವಿಪರೀತ ಏರಿಕೆ ಮಾಡಿತ್ತು. ಈಗ ಮತ್ತೆ ಏರಿಸುತ್ತಿದೆ. ನಮ್ಮಲ್ಲಿ ದುಡ್ಡಿಲ್ಲ. ದಿನಸಿ ವಸ್ತುಗಳನ್ನು ತೆಗೆದುಕೊಂಡು ನಮಗೆ ಟಿಕೆಟ್ ಕೊಡಿ’ ಎಂದು ಪ್ರತಿಭಟನಕಾರರು ಆಗ್ರಹಿಸಿದರು. ಸೇನೆಯ ಅಧ್ಯಕ್ಷ ಎಂ. ಬಸವರಾಜ ಪಡುಕೋಟೆ ನೇತೃತ್ವದಲ್ಲಿ ನಿತ್ಯ ಬಳಕೆ ವಸ್ತುಗಳಾದ ಅಕ್ಕಿ ಬೇಳೆ, ಹಾಲು, ಸೋಪು ಪ್ರದರ್ಶಿಸಲಾಯಿತು.

ಕಿತ್ತಳೆ ಮಾರ್ಗ ಬದಲಾವಣೆ ಕೋರಿಕೆ ಪಿಐಎಲ್ ವಿಲೇವಾರಿ

ಬೆಂಗಳೂರು: ನಾಗರಬಾವಿ ಹೊರವರ್ತುಲ ರಸ್ತೆಯಲ್ಲಿನ ‘ನಮ್ಮ ಮೆಟ್ರೊ’ ಕಿತ್ತಳೆ ಮಾರ್ಗದಲ್ಲಿನ ಉದ್ದೇಶಿತ ಅಲೈನ್‌ಮೆಂಟ್ (ಜೋಡಣೆ) ಪ್ರಶ್ನಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.


ಈ ಸಂಬಂಧ ‘ನಾಗರಬಾವಿ ಸ್ಥಿರಾಸ್ತಿಗಳ ಮಾಲೀಕರು ಮತ್ತು ವಾಣಿಜ್ಯ ಸಂಸ್ಥೆಗಳ ಕಲ್ಯಾಣ ಸಂಘ’ದ ಕಾರ್ಯದರ್ಶಿ ಕೆ.ಗಿರೀಶ್ ಗೌಡ ಸಲ್ಲಿಸಿದ್ದ ಪಿಐಎಲ್ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲ ಎ.ವಿ.ಅಮರನಾಥನ್ ಅವರ ವಾದ ಆಲಿಸಿದ ನ್ಯಾಯಪೀಠ, ‘ಮೆಟ್ರೊ ಮಾರ್ಗದ ಅಲೈನ್‌ಮೆಂಟ್ ನಿರ್ಧರಿಸುವುದು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿದೆ. ಆದಾಗ್ಯೂ, ಪರಿಸರದ ಮೇಲೆ ಇದರಿಂದ ಉಂಟಾಗುವ ಪರಿಣಾಮದ ಬಗ್ಗೆ ಅರ್ಜಿದಾರರು ಆಕ್ಷೇಪ ಎತ್ತಿದ್ದಾರೆ. ಹಾಗಾಗಿ, ಅವರು ನೀಡಿರುವ ಮನವಿಯನ್ನು ಪ್ರತಿವಾದಿಗಳಾದ ರಾಜ್ಯ ಸರ್ಕಾರ ಮತ್ತು ಬಿಎಂಆರ್‌ಸಿಎಲ್ ಪರಿಗಣಿಸಬೇಕು ಎಂದು ನ್ಯಾಯಪೀಠ ಹೇಳಿದೆ.

ಕೋರಿಕೆ ಏನಿತ್ತು?: ‘ಮೂಲ ಯೋಜನೆಯಂತೆ ದ್ವಾರಕಾ ನಗರ ನಿಲ್ದಾಣದಿಂದ ಚೌಡೇಶ್ವರಿ ನಗರ ನಿಲ್ದಾಣದವರೆಗೆ ಹೊರವರ್ತುಲ ರಸ್ತೆಯಲ್ಲಿ ಮೆಟ್ರೊ ನಿರ್ಮಿಸಲು ನಿರ್ದೇಶಿಸಬೇಕು. ಉದ್ದೇಶಿತ ಮೆಟ್ರೊ ಮಾರ್ಗದ ಜೋಡಣೆಯಿಂದ ನಾಗರಬಾವಿಯಲ್ಲಿನ ಹಸಿರು ಹೊದಿಕೆಯ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಈ ಮಾರ್ಗದ 600ಕ್ಕೂ ಹೆಚ್ಚು ಮರಗಳನ್ನು ಕತ್ತರಿಸಬೇಕಾಗುತ್ತದೆ ಮತ್ತು 600ಕ್ಕೂ ಅಧಿಕ ಮನೆಗಳನ್ನು ತೆರವುಗೊಳಿಸಬೇಕಾಗುತ್ತದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ರಂಗ ಮಹೋತ್ಸವ ಪರಿಷೆ ಸಂಪನ್ನ

ಪ್ರಜಾವಾಣಿ ವಾರ್ತೆ



ವಾಲ್ಟರ್ ಡಿಸೋಜಾ ಅವರಿಗೆ ‘ಉತ್ಸವ ಗೌರವ’ ನೀಡಿ ಸನ್ಮಾನಿಸಲಾಯಿತು. ನೀಲಮ್ಮ, ಶೇಖ್ ಮಾಸ್ತರ್, ಸತೀಶ್ ತಿಪಟೂರು, ಕೆ.ವಿ. ನಾಗರಾಜಮೂರ್ತಿ, ದುನಿಯಾ ವಿಜಯ್, ಕೋಟಿಗಾನಹಳ್ಳಿ ರಾಮಯ್ಯ, ಜಡೇಶ್, ಶಶಿಧರ್ ಭಾರಿಘಾಟ್ ಇದ್ದರು

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ ಮತ್ತು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಜಂಟಿಯಾಗಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಮಾಧ್ಯಮ ಸಹಯೋಗದಲ್ಲಿ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಹಮ್ಮಿಕೊಂಡಿದ್ದ ಆರು ದಿನಗಳ ‘ಭಾರತ ರಂಗ ಮಹೋತ್ಸವ’ ಹಾಗೂ ‘ರಂಗ ಪರಿಷೆ’ಯು ಶುಕ್ರವಾರ ಸಂಪನ್ನವಾಯಿತು.

ಕೊನೆಯ ದಿನದ ಕಾರ್ಯಕ್ರಮದಲ್ಲಿ ರಂಗಕರ್ಮಿ ವಾಲ್ಟರ್ ಡಿಸೋಜಾ ಅವರಿಗೆ ‘ಉತ್ಸವ ಗೌರವ’ ನೀಡಿ ಸನ್ಮಾನಿಸಲಾಯಿತು. 40 ವರ್ಷ ಪೂರೈಸಿರುವ ಧಾರವಾಡದ ಅಭಿನಯ ಭಾರತಿ ತಂಡಕ್ಕೆ ‘ರಂಗ ಗೌರವ’ ಪ್ರದಾನ ಮಾಡಲಾಯಿತು.

‘ಚಿತ್ರಸಂತೆಯಂತೆ ರಂಗ ಪರಿಷೆ ನಿರಂತರ ನಡೆಯಬೇಕು’ ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

ವೃತ್ತಿ ನಾಟಕ ಕಂಪನಿ ಮಾಲೀಕ ಶೇಖ್ ಮಾಸ್ತರ್, ‘ರಂಗಭೂಮಿಗೆ ತನ್ನದೇ ಆದ ತಾಕತ್ತಿದೆ. ವೃತ್ತಿ ರಂಗಭೂಮಿಯಿಂದ ಮೇರು ನಟರು ಹೊರಹೊಮ್ಮಿದ್ದಾರೆ. ರಾಜ್ಯದ ವಿವಿಧೆಡೆ ಈ ಪರಿಷೆ ನಡೆಯುವಂತಾಗಬೇಕು’ ಎಂದರು.

ನಟ ‘ದುನಿಯಾ’ ವಿಜಯ್, ಕಲಾವಿದೆ ಸುಮತಿಶ್ರೀ, ಮೈಸೂರು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಚಲನಚಿತ್ರ ನಿರ್ದೇಶಕ ಜಡೇಶ್ ಹಂಪಿ, ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ರಿಜಿಸ್ಟ್ರಾರ್ ನೀಲಮ್ಮ ಪಾಲ್ಗೊಂಡಿದ್ದರು. ಮೈಸೂರು ರಂಗಾಯಣದ ಕಲಾವಿದರಿಂದ ‘ಅಂಬೇಡ್ಕರ್ ಕೊಲಾಜ್’, ಹಸ್ಮಿ ಥಿಯೇಟರ್ ಫೋರಂ ತಂಡದಿಂದ ‘ಮ್ಯಾಡ್ ಉಮೆನ್ ಆಫ್ ಶಯೋ’ ಮತ್ತು ಯುವ ರಂಗ ಸಂಭ್ರಮದಲ್ಲಿ ಅಭಿನಯ ತರಂಗದಿಂದ ‘ತಾರಾ’ ನಾಟಕ ಪ್ರದರ್ಶನಗೊಂಡಿತು.

ರಂಗಪಯಣ ಮತ್ತು ದೃಶ್ಯ ಕಾವ್ಯ ತಂಡವು ರಂಗಗೀತೆಗಳನ್ನು ಪ್ರಸ್ತುತಪಡಿಸಿದವು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಬಿಂಬ ರಾಘವೇಂದ್ರ ಮತ್ತು ತಂಡದಿಂದ ಹಮ್ಮಿಕೊಳ್ಳಲಾಗಿದ್ದ ವೀಣಾ ವಾದನ ನೆರೆದಿದ್ದವರನ್ನು ರಂಜಿಸಿತು.

‘ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಶತಮಾನೋತ್ಸವ ಸಂಭ್ರಮ ಕವಿಗೋಷ್ಠಿ’ ನಡೆಯಿತು. ರಾಜಶೇಖರ್ ಮಠಪತಿ ಅಧ್ಯಕ್ಷತೆ ವಹಿಸಿದ್ದರು. ಮಲ್ಲಿಕಾರ್ಜುನ ಮಹಾಮನೆ ಉಪನ್ಯಾಸ ನೀಡಿದರು. ಕಾಂತರಾಜಪುರ ಸುರೇಶ, ಕರಿಯಣ್ಣ ನಿಷಾದ, ಮಂಜುಳ ಬಿ.ವಿ, ಜಯಮಾಲಾ, ರೈಗಾ ಥಾಮಸ್, ವಿ. ಮಂಜುಳಾ ಪಾಟೀಲ, ಸುಮನಾ, ಅನಿತಾ ಚಿಕ್ಕಡಂಕಣಕಲ್, ಕೆ.ಎಸ್. ಯುಕ್ತಿ, ದೇವರಾಜ್ ಆರ್. ಮತ್ತು ಕಿರಣ್ ಭಟ್ ಇದ್ದರು.

‘ಉದ್ಯಮಿಗಳಿಗೆ ಸಹಾಯಧನ ಬಿಡುಗಡೆ ಮಾಡಿ’

ಬೆಂಗಳೂರು: ದಲಿತ ಉದ್ಯಮಿಗಳ ಕೈಗಾರಿಕೆ ನಿವೇಶನ ಮತ್ತು ಶೆಡ್‌ಗಳಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆಯು ₹811 ಕೋಟಿ ಮೊತ್ತದ ಸಹಾಯಧನ ಬಾಕಿ ಉಳಿಸಿಕೊಂಡಿದ್ದು, ಅದನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ದಲಿತ ಉದ್ದಿಮೆದಾರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸನ್ ಕೋರಿದ್ದಾರೆ.

ದಲಿತ ಉದ್ಯಮಿಗಳ ಜತೆ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿದ್ದ ಶ್ರೀನಿವಾಸನ್ ಈ ಕುರಿತು ಮನವಿ ಸಲ್ಲಿಸಿದ್ದಾರೆ. ‘ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಪರಿಶಿಷ್ಟ ಜಾತಿಯ 4,353 ಹಾಗೂ ಪರಿಶಿಷ್ಟ ಪಂಗಡಗಳ 1,159 ಮಂದಿಗೆ ನಿವೇಶನ ಮಂಜೂರು ಮಾಡಿದೆ. ನಿವೇಶನಗಳ ಖರೀದಿ ಮತ್ತು ಶೆಡ್ ನಿರ್ಮಾಣಕ್ಕೆ ಸಮಾಜ ಕಲ್ಯಾಣ ಇಲಾಖೆಯು ಸಹಾಯಧನ ಒದಗಿಸಬೇಕಿದ್ದು, 2016–17ನೇ ಸಾಲಿನಿಂದ ಬಾಕಿ ಇರಿಸಿಕೊಂಡಿದೆ’ ಎಂದು ವಿವರಿಸಿದ್ದಾರೆ.

3 ಕೆ.ಜಿ ಹೈಡ್ರೊ ಗಾಂಜಾ ವಶ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಥಾಯ್ಲೆಂಡ್‌ನ ಫುಕೆಟ್‌ನಿಂದ ಬಂದಿದ್ದ ಇಬ್ಬರು ಪ್ರಯಾಣಿಕರು ಅಕ್ರಮವಾಗಿ ಸಾಗಿಸುತ್ತಿದ್ದ ಮಾದಕ ವಸ್ತುಗಳನ್ನು ಡಿಆರ್‌ಐ ಹಾಗೂ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಫೆಬ್ರುವರಿ 4ರ ತಡರಾತ್ರಿ ಆರೋಪಿಗಳು ತಂದಿದ್ದ ಲಗೇಜ್ ಬ್ಯಾಗ್‌ನಲ್ಲಿ ಅಡಗಿಸಿಟ್ಟಿದ್ದ 3.03 ಕೆ.ಜಿ ಹೈಡ್ರೊ ಗಾಂಜಾವನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಮಾದಕ ವಸ್ತುವಿನ ಮೌಲ್ಯವು ಸುಮಾರು ₹1.06 ಕೋಟಿ ಎಂದು ಅಂದಾಜಿಸಲಾಗಿದೆ.

ಈ ಸಂಬಂಧ ಇಬ್ಬರು ಪ್ರಯಾಣಿಕರನ್ನು ಬಂಧಿಸಲಾಗಿದೆ.

ಚಿಟಿಕೆ ಸುದ್ದಿ

ತೆಂಗಿನ ಮರ ಏರಿದ ಚಿರತೆ



ನಿಟ್ಟೂರು ಹೋಬಳಿ ಹಾರನಹಳ್ಳಿಯಲ್ಲಿ ತೆಂಗಿನ ಮರ ಏರಿ ಕುಳಿತಿದ್ದ ಚಿರತೆ

ಗುಬ್ಬಿ: ತಾಲ್ಲೂಕಿನ ನಿಟ್ಟೂರು ಹೋಬಳಿ ಹಾರನಹಳ್ಳಿಯಲ್ಲಿ ಶುಕ್ರವಾರ ಚಿರತೆಯೊಂದು ತೆಂಗಿನ ಮರ ಏರಿ ಕುಳಿತು ರೈತರಲ್ಲಿ ಆತಂಕ ಉಂಟು ಮಾಡಿದೆ.

ಜಮೀನಿನ ಮಾಲೀಕರು ತೋಟಕ್ಕೆ ಹೋದ ಸಂದರ್ಭದಲ್ಲಿ ಚಿರತೆಯನ್ನು ಗಮನಿಸಿ ಗ್ರಾಮಸ್ಥರಿಗೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ಜನರು ಗುಂಪು ಸೇರುವುದರೊಳಗೆ ಚಿರತೆ ತೆಂಗಿನ ಮರದಿಂದ ಕೆಳಗೆ ಜಿಗಿದು ಹೋಗಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಗ್ರಾಮದ ಆಯಕಟ್ಟಿನ ಜಾಗದಲ್ಲಿ ಚಿರತೆ ಸೆರೆಹಿಡಿಯಲು ಬೋನು ಇಟ್ಟಿದ್ದಾರೆ.

‘ಬಳಕೆಯಲ್ಲಿಲ್ಲದ ಜಾಗಕ್ಕೆ ಮರುಜೀವ’

ಸಮೂಹ ಸಹಕಾರಕ್ಕೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಳಕೆಯಲ್ಲಿಲ್ಲದ ಜಾಗಗಳಿಗೆ ಮರುಜೀವ ನೀಡುವ ಉದ್ದೇಶದಿಂದ ಜಿಬಿಎ ಜೊತೆ ನಾಗರಿಕರು ಕೈಜೋಡಿಸಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಕರೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳ ಪುನರುಜ್ಜೀವನಕ್ಕಾಗಿ ನಾಗರಿಕರಿಗೆ ಮುಕ್ತ ಅವಕಾಶ (ಓಪನ್ ಹೌಸ್) ಕಲ್ಪಿಸುವ ಉದ್ದೇಶದಿಂದ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಬಳಕೆಯಲ್ಲಿರದ ಅನೇಕ ಜಾಗಗಳಿವೆ. ಇಂತಹ ಜಾಗಗಳನ್ನು ಗುರುತಿಸಿ, ಸರ್ಕಾರ, ಸಿಎಸ್‌ಆರ್, ಎನ್‌ಜಿಒ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಅವುಗಳನ್ನು ಹೇಗೆ ಅಭಿವೃದ್ಧಿಪಡಿಸಬೇಕು ಎಂಬುದರ ಬಗ್ಗೆ ಯೋಜನೆ ರೂಪಿಸಬೇಕಿದೆ. ನಂತರ ಸ್ಥಳೀಯರೊಂದಿಗೆ ಸೇರಿ ಆ ಜಾಗಗಳನ್ನು ಆಕರ್ಷಕ ಸಾರ್ವಜನಿಕ ಸ್ಥಳಗಳಾಗಿ ಪರಿವರ್ತಿಸುವ ಕೆಲಸ ಮಾಡಬೇಕು. ಸ್ಥಳೀಯವಾಗಿ ಬಳಕೆಯಲ್ಲಿಲ್ಲದ ಜಾಗಗಳನ್ನು ಅಭಿವೃದ್ಧಿಪಡಿಸುವಾಗ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಎಂದರು.

ಪ್ರತಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಕಾರ್ಯ ಕೈಗೊಳ್ಳಬೇಕು. ನಾಗರಿಕರು ಸ್ವಂತ ವಾಹನಗಳ ಬಳಕೆಯನ್ನು ಕಡಿಮೆ ಮಾಡಿ, ಸಾರ್ವಜನಿಕ ಸಾರಿಗೆ ಹಾಗೂ ಪಾದಚಾರಿ ಮಾರ್ಗಗಳನ್ನು ಹೆಚ್ಚಾಗಿ ಬಳಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

5 ನಗರ ಪಾಲಿಕೆಗಳಲ್ಲಿಯೂ ಇಂತಹ ಕಾರ್ಯಕ್ರಮಗಳನ್ನು ನಡೆಸಿ ನಾಗರಿಕರು, ಸ್ಟಾರ್ಟ್‌ಅಪ್‌ಗಳು ಹಾಗೂ ಸಂಸ್ಥೆಗಳಿಂದ ಸಲಹೆಗಳನ್ನು ಆಹ್ವಾನಿಸಬೇಕು. ಸಮೂಹ ಸಹಕಾರ ಮತ್ತು ಜನ ಪಾಲ್ಗೊಳ್ಳುವಿಕೆಯ ಮೂಲಕ ಉತ್ತಮ ಮತ್ತು ವಾಸಯೋಗ್ಯ ನಗರವನ್ನು ನಿರ್ಮಿಸಬೇಕು ಎಂದು ತಿಳಿಸಿದರು. ಬಯಸಿದಂತೆ ಬಯಲು ಉಪಕ್ರಮದಲ್ಲಿ ಐದು ನಗರ ಪಾಲಿಕೆಗಳ ಮೂಲಕ ಹಂತ ಹಂತವಾಗಿ ಜಾರಿಗೊಳಿಸುವ ಯೋಜನೆ ರೂಪಿಸಲಾಗಿದೆ. ಅದರ ವಿವರಗಳನ್ನು ಲಿಂಕ್‌ನಲ್ಲಿ (https://www.blrpublicspace-revival.in/repository) ವೀಕ್ಷಿಸಬಹುದು.

‘ಸಹಯೋಗಿ ನಿಧಿ’ ವಿಷಯದ ಕುರಿತು ನಡೆದ ಪ್ಯಾನಲ್ ಚರ್ಚೆಯಲ್ಲಿ ಸಾರ್ವಜನಿಕ ನಿಧಿಗಳಿಗೆ ಪೂರಕವಾಗಿ ಸಿಎಸ್‌ಆರ್ ಹಾಗೂ ಲೋಕೋಪಕಾರಿ ಬಂಡವಾಳವನ್ನು ಜೋಡಿಸುವ ಕುರಿತು ನಗರ ಯೋಜನಾ ತಜ್ಞರು ಸಲಹೆ ನೀಡಿದರು.

ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್, ಪೂರ್ವ ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರಾದ ಲೋಖಂಡೆ ಸ್ನೇಹಲ್ ಸುಧಾಕರ್, ಮುಖ್ಯ ಎಂಜಿನಿಯರ್‌ಗಳಾದ ಬಸವರಾಜ್ ಕಬಾಡೆ, ಲೋಕೇಶ್, ರವಿ, ಕೃಷ್ಣಮೂರ್ತಿ, ವಿಶ್ವನಾಥ್, ಯಮುನಾ, ಸ್ವಯಂಪ್ರಭಾ, ಹೇಮಲತಾ ಉಪಸ್ಥಿತರಿದ್ದರು.



ಸಾರ್ವಜನಿಕ ಸ್ಥಳಗಳ ಪುನರುಜ್ಜೀವನದ ಯೋಜನೆಗಳನ್ನು ಮಹೇಶ್ವರ್ ರಾವ್ ವೀಕ್ಷಿಸಿದರು. ಬಸರಾಜ ಕಬಾಡೆ ಉಪಸ್ಥಿತರಿದ್ದರು

‘ಚುನಾವಣೆಗೆ ಇವಿಎಂ ಬಳಸಿ’

‘ನಗರ ಪಾಲಿಕೆ ಚುನಾವಣೆಗಳನ್ನು ಬ್ಯಾಲೆಟ್ ಪೇಪರ್ ಮೂಲಕ ನಡೆಸಿದರೆ ಹೆಚ್ಚು ಕಷ್ಟವಾಗುತ್ತದೆ. ಮತಯಂತ್ರದ (ಇವಿಎಂ) ಮೂಲಕ ಚುನಾವಣೆ ನಡೆಸಬೇಕು’ ಎಂದು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಅಭಿಪ್ರಾಯಪಟ್ಟರು.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಜಕೀಯ ಪಕ್ಷಗಳ ಜೊತೆಗೆ ಆಯೋಜಿಸಿದ್ದ ಸಭೆಯಲ್ಲಿ ಪ್ರತಿನಿಧಿಗಳು, ಮತಗಟ್ಟೆ ಮಟ್ಟದ ಅಧಿಕಾರಿಗಳ ಮೊಬೈಲ್ ಸಂಖ್ಯೆ ನಮೂದು, ಒಂದೇ ಕುಟುಂಬದ ಮತದಾರರು ಬೇರೆ ಬೇರೆ ಮತಗಟ್ಟೆಗಳಿಗೆ ಮತ್ತು ವಾರ್ಡ್‌ಗಳಿಗೆ ಹಂಚಿಕೆಯಾಗಿರುವುದನ್ನು ಸರಿಪಡಿಸುವುದು ಸೇರಿದಂತೆ ಹಲವು ಸಲಹೆಗಳನ್ನು ನೀಡಿದರು.

‘ಪರಿಶೀಲಿಸಿಕೊಳ್ಳಿ’

‘ವಾರ್ಡ್‌ವಾರು ಮತದಾರರ ಕರಡು ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಮತದಾರರು ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳಬೇಕು. ಆಕ್ಷೇಪಣೆಗಳಿದ್ದಲ್ಲಿ ಸಂಬಂಧ ಪಟ್ಟ ಮತದಾರರ ನೋಂದಣಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಸರಿಪಡಿಸಿಕೊಳ್ಳಬೇಕು’ ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ತಿಳಿಸಿದರು.

ವಾರ್ಡ್ ವಿಂಗಡಣೆ ಮತ್ತು ಆ ಪ್ರಕಾರ ಮತದಾರರ ಪಟ್ಟಿಯು ವೆಬ್‌ಸೈಟ್ https://gba.karnataka.gov.in/electoral2026/ ನಲ್ಲಿ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ



ಕೇಂದ್ರ ಬಜೆಟ್ ಆರೆಂಜ್ ಆರ್ಥಿಕತೆಗೆ ಪ್ರಾಮುಖ್ಯತೆ ನೀಡಿದೆ!


ಶಾಸಕರು, ಪರಿಷತ್ ಸದಸ್ಯರು ಭಾಗಿ

ಬಿಜೆಪಿ ಪಕ್ಷದ ಕಚೇರಿಯಲ್ಲಿ ಶನಿವಾರ ನಡೆಯಲಿರುವ ಮೊದಲ ಸಭೆಯಲ್ಲಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮತ್ತಿತರರು ಭಾಗವಹಿಸುವರು

ಪಾಲಿಕೆ ಚುನಾವಣೆ: ರಾಮ್ ಮಾಧವ್ ನೇತೃತ್ವದಲ್ಲಿ ಸಭೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ತಯಾರಿ ಸಂಬಂಧ ಬಿಜೆಪಿಯ ಚುನಾವಣಾ ಉಸ್ತುವಾರಿ ರಾಮ್ ಮಾಧವ್ ಅವರು ಶನಿವಾರ ಮೊದಲ ಸಭೆ ನಡೆಸಲಿದ್ದಾರೆ.

ಚುನಾವಣಾ ಉಸ್ತುವಾರಿಯನ್ನಾಗಿ ಘೋಷಣೆ ಮಾಡಿದ ಬಳಿಕ ಅವರು ಸಹ ಉಸ್ತುವಾರಿಗಳಾದ ಸತೀಶ್ ಪೂನಿಯಾ ಮತ್ತು ಸಂಜಯ್ ಉಪಾಧ್ಯಾಯ ಅವರ ಜತೆ ಶುಕ್ರವಾರ ರಾತ್ರಿ ಬೆಂಗಳೂರಿಗೆ ಬಂದಿಳಿದರು.



ಪಕ್ಷದ ಕಚೇರಿಯಲ್ಲಿ ಬೆಳಿಗ್ಗೆ ಜಿಲ್ಲಾ ಘಟಕಗಳ ಪದಾಧಿಕಾರಿಗಳು, ನಗರದ ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸತ್ ಸದಸ್ಯರು, ಬಿಬಿಎಂಪಿಯ ಮಾಜಿ ಮೇಯರ್‌ಗಳ ಮತ್ತು ಮಾಜಿ ಕಾರ್ಪೊರೇಟರ್‌ಗಳ ಜತೆ ಅವರು ಸಭೆ ನಡೆಸಲಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೂ ಸಭೆಯಲ್ಲಿ ಭಾಗವಹಿಸುವರು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಸಭೆ ಕುರಿತು ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ‘ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗಲೇ ಬಿಬಿಎಂಪಿ ಚುನಾವಣೆಯಲ್ಲಿ ಬಿಜೆಪಿ ಗೆದ್ದಿತ್ತು. ಬೆಂಗಳೂರು ಜನರ ಮೇಲೆ ನಿರಂತರ ತೆರಿಗೆ ಹಾಕಿರುವುದರಿಂದ ಜನ ಕಾಂಗ್ರೆಸ್‌ಗೆ ಕಪಾಳ ಮೋಕ್ಷ ಮಾಡಲಿದ್ದಾರೆ. ಐದೂ ಪಾಲಿಕೆಗಳನ್ನು ಗೆಲ್ಲುವ ಸಂಬಂಧ ತಂತ್ರಗಾರಿಕೆ ಮಾಡಲಿದ್ದೇವೆ’ ಎಂದು ತಿಳಿಸಿದರು.

ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಳ್ಳುವುದಾಗಿ ಜೆಡಿಎಸ್ ನಾಯಕರಾದ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಈಗಾಗಲೇ ಪ್ರಕಟಿಸಿದ್ದಾರೆ. ಬಿಜೆಪಿಯಿಂದ ಈ ಕುರಿತು ಅಧಿಕೃತ ಪ್ರಕಟಣೆ ಹೊರಬೀಳಬೇಕಾಗಿದೆ.



ಗಣರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ ಪ್ರಧಾನಮಂತ್ರಿ ಆರ್‌ಡಿಸಿ ಬ್ಯಾನರ್ ರಾಷ್ಟ್ರೀಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಎನ್‌ಸಿಸಿ ಕೆಡೆಟ್‌ಗಳನ್ನು ಕೋರಮಂಗಲದ ಜೆಎನ್‌ಸಿ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ನಿರ್ದೇಶನಾಲಯದ ಉಪ ಮಹಾನಿರ್ದೇಶಕ ಏರ್ ಕಮಾಂಡರ್ ಎಸ್‌.ಬಿ. ಅರುಣ್ ಕುಮಾರ್ ಉಪಸ್ಥಿತರಿದ್ದರು

ಪಿಟಿಸಿಎಲ್ ಜಮೀನು ಮರುವಶ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪಿಟಿಸಿಎಲ್ ಕಾಯ್ದೆಯಡಿ ಮಂಜೂರಾಗಿದ್ದ ಜಮೀನಿನಲ್ಲಿ ಕೆಲವರು ನಿರ್ಮಿಸಿಕೊಂಡಿದ್ದ ಮನೆಗಳನ್ನು ಹೈಕೋರ್ಟ್ ಆದೇಶದ ಮೇರೆಗೆ ಕಂದಾಯ ಅಧಿಕಾರಿಗಳು ಸ್ವಾಧೀನಕ್ಕೆ ಪಡೆದು ಮೂಲ ಮಾಲೀಕರಿಗೆ ಹಸ್ತಾಂತರಿಸಿದರು.

ಕೆ.ಆರ್.ಪುರ ಹೋಬಳಿಯ ಬಸವನಪುರ ಗ್ರಾಮದ ಸರ್ವೆ ನಂಬರ್ 25/1ರಲ್ಲಿ 35 ಗುಂಟೆ ಜಮೀನಿನಲ್ಲಿ 40 ಮನೆಗಳು ನಿರ್ಮಾಣ ಮಾಡಿಕೊಂಡಿರುವ ಮನೆ ಮಾಲೀಕರು ಮೂಲ ವಾರಸುದಾರರಿಗೆ ಮಾರುಕಟ್ಟೆ ಮೌಲ್ಯ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಆದೇಶದ ಮೇರೆಗೆ ಉಪ ತಹಶೀಲ್ದಾರ್ ಸರಸವಾಣಿ ನೇತೃತ್ವದಲ್ಲಿ ಸ್ವಾಧೀನ ಬಿಡಿಸಿ ಮೂಲ ವಾರಸುದಾರರಿಗೆ ಜಮೀನು ನೀಡಲಾಯಿತು.

ಸರಸವಾಣಿ ಮಾತನಾಡಿ, ‘ಪೂರ್ವ ತಾಲ್ಲೂಕು ತಹಶೀಲ್ದಾರ್ ಮತ್ತು ಉತ್ತರ ಉಪ ವಿಭಾಗಾಧಿಕಾರಿ ಸೂಚನೆ ಮೇರೆಗೆ 40 ಮನೆಗಳ ಪೈಕಿ 22 ಸ್ವತ್ತುಗಳಿಗೆ ಬೀಗ ಹಾಕಿ, ಸ್ವತ್ತುಗಳನ್ನು ಮೂಲ ಮಾಲೀಕರಿಗೆ ಹಸ್ತಾಂತರ ಮಾಡಲಾಗಿದೆ. ಉಳಿದ 18 ಮನೆಯ ವಾರಸುದಾರರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಕೆಲವರಿಗೆ ಕೋರ್ಟ್ ಆದೇಶದ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಹೀಗಾಗಿ ವಾರದೊಳಗೆ ಮನೆ ಖಾಲಿ ಮಾಡುವಂತೆ ನೋಟಿಸ್ ನೀಡಲಾಗುವುದು’ ಎಂದರು.



ಉಪ ತಹಶೀಲ್ದಾರ್ ಸರಸವಾಣಿ ನೇತೃತ್ವದಲ್ಲಿ ಮನೆಗಳ ಸ್ವಾಧೀನ ಬಿಡಿಸಿ ಮೂಲ ವಾರಸುದಾರರಿಗೆ ನೀಡಲಾಯಿತು

ಕೋನಘಟ್ಟ ಪಿಡಿಒ ವಿರುದ್ಧದ ತನಿಖೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗಿಯಾಗಿಲ್ಲ ಮತ್ತು ಪರಿಶಿಷ್ಟ ಜಾತಿಗೆ ಸೇರಿದ ದೊಡ್ಡಬಳ್ಳಾಪುರದ ಕೋನಘಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕೊಠಡಿಗೆ ಹೋಗುವುದಿಲ್ಲ’ ಎಂದು ಹೇಳಿದ ಆರೋಪದಡಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಎನ್.ರಶ್ಮಿ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ನನ್ನ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ದೊಡ್ಡಬಳ್ಳಾಪುರ ಕಸಬಾ ಹೋಬಳಿಯ ಕೋನಘಟ್ಟ ಗ್ರಾಮ ಪಂಚಾಯಿತಿ ಪಿಡಿಒ ಎನ್.ರಶ್ಮಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಅರ್ಜಿದಾರರು ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಹಾಜರಾಗಿದ್ದಾರೆ ಮತ್ತು ಇತರ ಆರೋಪಗಳು ಆಧಾರರಹಿತ’ ಎಂದು ದಾಖಲೆಗಳನ್ನು ಸಲ್ಲಿಸಿದರು.

ಇದನ್ನು ಪರಿಶೀಲಿಸಿದ ನ್ಯಾಯಪೀಠ, ‘ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ದುರುಪಯೋಗಕ್ಕೆ ಈ ಪ್ರಕರಣ ಮತ್ತೊಂದು ಉತ್ಕೃಷ್ಟ ಉದಾಹರಣೆಯಾಗಿದೆ’ ಎಂಬ ಅಭಿಪ್ರಾಯದೊಂದಿಗೆ ಅರ್ಜಿದಾರರ ವಿರುದ್ಧದ ಎಫ್‌ಐಆರ್ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಿ ಆದೇಶಿಸಿತು.

ಅಂತೆಯೇ, ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣಾ ಪೊಲೀಸ್ ಹಾಗೂ ದೂರುದಾರೆ ಕೋನಘಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚಾಂದಿನಿ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಟೋಲ್: ನ್ಯಾಯಪೀಠದ ಆದೇಶಕ್ಕೆ ತಡೆ

ಬೆಂಗಳೂರು: ಕನಕಪುರ ರಸ್ತೆಯ ಸೋಮನಹಳ್ಳಿ ಟೋಲ್ ಪ್ಲಾಜಾದಲ್ಲಿ ಸ್ಥಳೀಯ ವಾಹನ ಸವಾರರಿಗೆ ಉಚಿತ ಪಾಸ್‌ಗಳನ್ನು ನೀಡುವಂತೆ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ತಡೆ ನೀಡಿದೆ. ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಸಲ್ಲಿಸಿದ್ದ ರಿಟ್ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಎನ್‌ಎಚ್‌ಎಐ ಪರ ವಕೀಲರು, ‘ಏಕಸದಸ್ಯ ನ್ಯಾಯಪೀಠದ ಆದೇಶ ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ಈಗಾಗಲೇ ಟೋಲ್ ಪ್ಲಾಜಾದಲ್ಲಿ ದ್ವಿಚಕ್ರ ವಾಹನಗಳು ಮತ್ತು ಟ್ರ್ಯಾಕ್ಟರ್‌ಗಳನ್ನು ಯಾವುದೇ ಶುಲ್ಕ ಪಡೆಯದೆ ಉಚಿತವಾಗಿ ಬಿಡಲಾಗುತ್ತಿದೆ. ಸ್ಥಳೀಯ ನಿವಾಸಿಗಳಿಗೆ ಪ್ರತಿ ತಿಂಗಳಿಗೆ ₹340 ಮೊತ್ತದ ಪಾಸ್‌ಗಳನ್ನು ವಿತರಣೆ ಮಾಡಲಾಗುತ್ತಿದೆ. ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಬೇಕು’ ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಏಪ್ರಿಲ್ 23ಕ್ಕೆ ಮುಂದೂಡಿದೆ.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ

ಬೆಂಗಳೂರು: ಯೂನಿವರ್ಸಲ್ ಕೋಚಿಂಗ್ ಸೆಂಟರ್ ಬೆಳ್ಳಿಹಬ್ಬ ಮಹೋತ್ಸವದ ಪ್ರಯುಕ್ತ, ರಾಜ್ಯದ 100 ಅಭ್ಯರ್ಥಿಗಳಿಗೆ ಉಚಿತವಾಗಿ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಏಪ್ರಿಲ್ 15 ಕೊನೆ ದಿನ. ವಿವರಗಳಿಗೆ ಮೊ. 9686664983 ಸಂಪರ್ಕಿಸಬಹುದು.

ದಂತ ಆರೋಗ್ಯ ಜಾಗೃತಿಗೆ ‘ಸ್ಮೈಲಥಾನ್’ ಸ್ಪರ್ಧೆ

ಬೆಂಗಳೂರು: ದಂತ ಆರೋಗ್ಯದ ಜಾಗೃತಿಗಾಗಿ ಇಂಡಿಯನ್ ಡೆಂಟಲ್ ಅಸೋಸಿಯೇಷನ್ (ಐಡಿಎ), ಇಂಡಿಯನ್ ಪ್ರೊಸ್ಥೊಡೊಂಟಿಕ್ ಸೊಸೈಟಿ (ಐಪಿಎಸ್) ಮತ್ತು ರೋಟರಿ ಬೆಂಗಳೂರು ಸೋಶಿಯಲ್ ಕ್ಲಬ್ ಜಂಟಿಯಾಗಿ ‘ಸ್ಮೈಲಥಾನ್’ ಸ್ಪರ್ಧೆ ಆಯೋಜಿಸಿವೆ.

ಈ ಸ್ಪರ್ಧೆಯಲ್ಲಿ ಭಾಗವಹಿಸಲು ಉಚಿತವಾಗಿ ಹೆಸರು ನೋಂದಾಯಿಸಿಕೊಳ್ಳಬೇಕು. ನಂತರ ಪಾಲುದಾರ ಕ್ಲಿನಿಕ್‌ಗಳಲ್ಲಿ ಕಡ್ಡಾಯವಾಗಿ ಉಚಿತ ದಂತ ತಪಾಸಣೆಗೆ ಒಳಪಟ್ಟು, ನಿಗದಿತ ಸಾಮಾಜಿಕ ಮಾಧ್ಯಮ ಪುಟದಲ್ಲಿ ಫೋಟೊ ಹಾಕಬೇಕು. ಅಲ್ಲಿ ಮತದಾನ ಪ್ರಕ್ರಿಯೆ ನಡೆಯಲಿದೆ. ಟಾಪ್ 500 ಸ್ಪರ್ಧಿಗಳನ್ನು ಆಯ್ಕೆ ಮಾಡಲಾಗುತ್ತದೆ. ಮಾರ್ಚ್ 1ರಂದು ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಯಲ್ಲಿ ₹6 ಲಕ್ಷದವರೆಗೆ ನಗದು ಬಹುಮಾನ, ದಂತ ಆರೋಗ್ಯ ಪ್ಯಾಕೇಜ್‌ಗಳನ್ನು ಗೆಲ್ಲುವ ಅವಕಾಶ ಇರಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ‘ಅಧ್ಯಯನವೊಂದರ ಪ್ರಕಾರ ಶೇ 90ರಷ್ಟು ಭಾರತೀಯರು ದಂತ ಸಮಸ್ಯೆಯಿಂದ ಬಳಲುತ್ತಿದ್ದು, ಶೇ 9ರಷ್ಟು ಜನರು ಮಾತ್ರ ನಿಯಮಿತವಾಗಿ ದಂತ ವೈದ್ಯರನ್ನು ಭೇಟಿಯಾಗುತ್ತಾರೆ’ ಎಂದು ಸ್ಮೈಲಥಾನ್‌ನ ಆಯೋಜಕ ಡಾ. ಅಕ್ಷಯ್ ಎಂ. ಶೆಟ್ಟಿ ಹೇಳಿದ್ದಾರೆ.

ವಿವರಕ್ಕೆ: www.ssmileathon.com

ಶಿಕ್ಷಕರಿಗೆ ನೋಟಿಸ್

ಮುಳಬಾಗಿಲು: ತಾಲ್ಲೂಕಿನ ನಂಗಲಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಎನ್. ರಾಮಚಂದ್ರಪ್ಪ ಶುಕ್ರವಾರ ಭೇಟಿ ನೀಡಿ ಶಿಕ್ಷಕರಿಗೆ ನೋಟಿಸ್ ನೀಡಿದರು.

ಶಾಲೆಯಲ್ಲಿ ಮುಖ್ಯ ಶಿಕ್ಷಕ ಬಾಬಾಜಾನ್ ವಿದ್ಯಾರ್ಥಿಗಳ ಕೈಯಲ್ಲಿ ಮಂಗಳವಾರ ಶೌಚಾಲಯ ಸ್ವಚ್ಛಗೊಳಿಸಿದ್ದರು. ಈ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ರಾಮಚಂದ್ರಪ್ಪ, ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳ ಜತೆ ಸಮಾಲೋಚನೆ ನಡೆಸಿದರು.








ಕ್ಯಾನ್ಸರ್ ಇರಲಿ ಜಾಗೃತಿ

ಗರ್ಭಾಶಯದ ಕ್ಯಾನ್ಸರ್

ಕಾರಣ: ಈ ಕ್ಯಾನ್ಸರ್‌ಗೆ ಒಳಗಾದ ಶೇಕಡ 7ರಷ್ಟು ಮಹಿಳೆಯರಿಗೆ ಆನುವಂಶೀಯತೆ ಕಾರಣವಾಗಿರುತ್ತದೆ. ಅತಿಯಾದ ಬೊಜ್ಜು ಇರುವವರಲ್ಲಿ ಇದು ಬರುವ ಸಂಭವ ಮೂರು ಪಟ್ಟು ಹೆಚ್ಚು. ಪ್ರಮುಖ ಕಾರಣಗಳೆಂದರೆ, ದೀರ್ಘಾವಧಿ ಹಾರ್ಮೋನ್ ಚಿಕಿತ್ಸೆ, ಕೆಲವು ಬಗೆಯ ಮಾತ್ರೆ ಸೇವನೆ, ಮಕ್ಕಳನ್ನು ಹೆರದೇ ಇರುವುದು, ಪಿಸಿಒಡಿ ಸಮಸ್ಯೆ, ಮಧುಮೇಹ, ಏರು ರಕ್ತದೊತ್ತಡ...

ಮುಂಜಾಗ್ರತೆ: ವೈದ್ಯರ ಮೇಲ್ವಿಚಾರಣೆ ಇಲ್ಲದೆ ಹಾರ್ಮೋನ್ ಚಿಕಿತ್ಸೆ ತೆಗೆದುಕೊಳ್ಳಬಾರದು. ಮುಟ್ಟಿನ ನಂತರದ ರಕ್ತಸ್ರಾವ, ಎರಡು ಮುಟ್ಟುಗಳ ನಡುವೆ ರಕ್ತಸ್ರಾವ ಆಗುತ್ತಿದ್ದರೆ ತಪಾಸಣೆಗೆ ಒಳಗಾಗಿ ಸೂಕ್ತ ಚಿಕಿತ್ಸೆ ಪಡೆಯಬೇಕು. ಸಮತೂಕ ಹೊಂದಲು ಪ್ರಯತ್ನಿಸಬೇಕು.



ಅಂಡಾಶಯದ ಕ್ಯಾನ್ಸರ್

ಲಕ್ಷಣ: ಇದನ್ನು 'ಮೌನ ಹಂತಕ' ಎಂದು ಕರೆಯಲಾಗುತ್ತದೆ. ಏಕೆಂದರೆ ಈ ಕ್ಯಾನ್ಸರ್ ಯಾವುದೇ ಆರಂಭಿಕ ರೋಗಲಕ್ಷಣಗಳನ್ನು ನೀಡುವುದಿಲ್ಲ. ಆದರೆ ಸದಾ ಹೊಟ್ಟೆ ತುಂಬಿದಂತೆ ಇರುವುದು, ಕೆಳಹೊಟ್ಟೆಯಲ್ಲಿ ಸೆಳೆತ ಆಗುವುದು. ವಾಂತಿ, ವಾಕರಿಕೆಯಂತಹ ಅನುಭವಗಳು ಪದೇ ಪದೇ ಆಗುತ್ತಿದ್ದಲ್ಲಿ ಅದನ್ನು ನಿರ್ಲಕ್ಷಿಸಬಾರದು. ವೈದ್ಯರನ್ನು ಕಾಣಲು ಹಿಂಜರಿಯಬಾರದು. ಅವರ ಸಲಹೆಯ ಮೇರೆಗೆ ಸೂಕ್ತ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು. ಆನುವಂಶೀಯತೆಯು ಇದಕ್ಕೆ ಒಂದು ಕಾರಣವಾಗಿರುತ್ತದೆ. ಜೊತೆಗೆ ಬಂಜೆತನ, ದೈಹಿಕ ಚಟುವಟಿಕೆಗಳನ್ನು ರೂಢಿಸಿಕೊಳ್ಳದೇ ಇರುವವರು, ಸರಿಯಾಗಿ ಸ್ತನ್ಯಪಾನ ಮಾಡಿಸದೇ ಇರುವವರಲ್ಲಿ ಈ ಬಗೆಯ ಕ್ಯಾನ್ಸರ್ ಹೆಚ್ಚಾಗಿ ಕಂಡುಬರುತ್ತದೆ.



ಮಹಿಳೆ–ಪುರುಷ ಇಬ್ಬರನ್ನೂ ಬಾಧಿಸುವ ಕ್ಯಾನ್ಸರ್ ಹೊರತಾಗಿ ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಅಥವಾ ಮಹಿಳೆಯರಿಗೆ ಮಾತ್ರ ಬರುವ ಕೆಲವು ಕ್ಯಾನ್ಸರ್‌ಗಳಿವೆ. ಅವುಗಳಲ್ಲಿ ಸ್ತನ, ಗರ್ಭಗೊರಳು ಅಥವಾ ಸರ್ವೈಕಲ್, ಗರ್ಭಾಶಯ ಅಥವಾ ಎಂಡೋಮೆಟ್ರಿಯಲ್, ಅಂಡಾಶಯ, ಗೊಲ್ಲಿ ಅಥವಾ ವಲ್ವ, ಯೋನಿ, ಗರ್ಭನಾಳದ ಕ್ಯಾನ್ಸರ್‌ಗಳು ಪ್ರಮುಖವಾಗಿವೆ. ಅಜ್ಞಾನ, ಅರೆ ಅರಿವು, ಜಾಗೃತಿಯ ಕೊರತೆ, ಕ್ಯಾನ್ಸರ್ ಬಗೆಗಿನ ಹಲವಾರು ಮಿಥ್ಯೆಗಳು ಈ ರೋಗ ಬೇಗ ಪತ್ತೆಯಾಗದೇ ಇರುವುದಕ್ಕೆ ಮತ್ತು ಪತ್ತೆಯಾದರೂ ಸೂಕ್ತ ಸಮಯದಲ್ಲಿ ಸೂಕ್ತ ಚಿಕಿತ್ಸೆ ದೊರೆಯದೇ ಇರುವುದಕ್ಕೆ ಸಾಮಾನ್ಯ ಕಾರಣಗಳು. ಒಮ್ಮೆ ಕ್ಯಾನ್ಸರ್ ಪತ್ತೆಯಾದರೆ ಎದೆಗುಂದಬಾರದು, ಪ್ರಸ್ತುತ ಲಭ್ಯವಿರುವ ಸೂಕ್ತ ಚಿಕಿತ್ಸಾ ವಿಧಾನಗಳನ್ನು ಅರಿತು ಚಿಕಿತ್ಸೆ ಪಡೆಯಬೇಕು; ಉಚಿತವಾಗಿ ಸಿಗುವ ಸೌಲಭ್ಯಗಳ ಬಗ್ಗೆ ತಿಳಿದುಕೊಂಡು ಪ್ರಯೋಜನ ಪಡೆದುಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಮಾನಸಿಕ ಸ್ಥೈರ್ಯ ಬಹಳ ಮುಖ್ಯ ಎಂಬುದನ್ನು ವಿಶ್ವ ಕ್ಯಾನ್ಸರ್ ದಿನದ (ಫೆ. 4) ಈ ಸಂದರ್ಭ ನಮಗೆ ನೆನಪಿಸುತ್ತಿದೆ.


• ಡಾ. ವೀಣಾ ಭಟ್

ಗರ್ಭಗೊರಳಿನ ಕ್ಯಾನ್ಸರ್

ಲಕ್ಷಣ: ಎರಡು ಋತುಚಕ್ರಗಳ ನಡುವೆ ರಕ್ತಸ್ರಾವ, ಋತುಬಂಧ ಅಥವಾ ಮೆನೊಪಾಸ್ ನಂತರ ರಕ್ತಸ್ರಾವ, ಸಂಭೋಗದ ಬಳಿಕ ರಕ್ತಸ್ರಾವ, ದುರ್ವಾಸನೆಯುಳ್ಳ ಕೆಂಪುಮಿಶ್ರಿತ ಬಿಳಿಮುಟ್ಟು, ನಿರಂತರ ಹೊಟ್ಟೆಯುಬ್ಬರ, ಬೇಗನೆ ಹೊಟ್ಟೆ ತುಂಬಿದ ಅನುಭವ, ಕೆಳಹೊಟ್ಟೆಯ ಒತ್ತಡ, ನೋವು...

ಕಾರಣ: ಚಿಕ್ಕವಯಸ್ಸಿನಲ್ಲೇ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವುದು, ಬಾಲ್ಯವಿವಾಹ, ಪದೇ ಪದೇ ಹೆಚ್ಚು ಮಕ್ಕಳನ್ನು ಹಡೆಯುವುದು, ಒಬ್ಬರಿಗಿಂತ ಹೆಚ್ಚು ಲೈಂಗಿಕ ಸಂಗಾತಿಗಳನ್ನು ಹೊಂದುವುದು, ಅಪೌಷ್ಟಿಕತೆ, ಸ್ವಚ್ಛತೆಯ ಕೊರತೆ, ತಂಬಾಕು ಸೇವನೆ...

ಶೇ 80ರಷ್ಟು ಪ್ರಕರಣಗಳಿಗೆ ಎಚ್‌ಪಿವಿ ಎಂಬ ಸೋಂಕು ಕಾರಣವಾಗಿದ್ದು, ಇದಕ್ಕೆ ಲಸಿಕೆ ಲಭ್ಯವಿದೆ. ಹೀಗಾಗಿ, ಇದನ್ನು 'ತಡೆಗಟ್ಟಬಹುದಾದ ಕ್ಯಾನ್ಸರ್' ಎಂದು ಗುರುತಿಸಲಾಗಿದೆ. ಸರ್ಕಾರದ ವತಿಯಿಂದ ಲಸಿಕೆ ನೀಡಲಾಗುತ್ತದೆ. 9ರಿಂದ 14 ವರ್ಷದ ಒಳಗಿನವರಿಗೆ, ಅಂದರೆ ಲೈಂಗಿಕವಾಗಿ ಸಕ್ರಿಯರಾಗುವ ಮೊದಲೇ ಈ ಲಸಿಕೆ ಹಾಕಿಸಿದಾಗ ಮುಂದೆ ಗರಿಷ್ಠ ಫಲಿತಾಂಶ ಸಾಧ್ಯ.



ಸ್ತನ ಕ್ಯಾನ್ಸರ್

ಇದು ಪುರುಷರಲ್ಲಿಯೂ ಉಂಟಾಗಬಹುದಾದರೂ ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್‌ಗಳಲ್ಲಿ ಅಗ್ರಸ್ಥಾನದಲ್ಲಿದೆ. ಈ ರೋಗದ ಲಕ್ಷಣಗಳ ಬಗ್ಗೆ ಮುಕ್ತವಾಗಿ ಹೇಳಿಕೊಳ್ಳಲು ಮಹಿಳೆಯರು ಸಂಕೋಚ ಪಡುವುದರಿಂದ, ಹೆಚ್ಚಿನವರಲ್ಲಿ ಅದು ತಡವಾಗಿ ಪತ್ತೆಯಾಗುತ್ತದೆ. ಆರಂಭದಲ್ಲೇ ಪತ್ತೆಹಚ್ಚಿದರೆ ಬದುಕುಳಿಯುವ ಸಾಧ್ಯತೆ ಹೆಚ್ಚು.

ಲಕ್ಷಣ: ಸ್ತನದಲ್ಲಿ ಗಂಟು, ಸ್ತನದ ಚರ್ಮ ಕುಗ್ಗುವುದು, ತೊಟ್ಟು ಒಳಗೆಳೆದುಕೊಂಡಂತೆ ಇರುವುದು, ತೊಟ್ಟಿನಲ್ಲಿ ರಕ್ತಸ್ರಾವ.

ಕಾರಣ: ಆನುವಂಶೀಯತೆ, ಬೇಗನೆ ಮೈನೆರೆದು ತಡವಾಗಿ ಮುಟ್ಟು ನಿಲ್ಲುವುದು, ಜಡವಾದ ಜೀವನಶೈಲಿ, ತಡವಾದ ತಾಯ್ತನ, ಬಂಜೆತನದ ಚಿಕಿತ್ಸೆ, ಮಗುವಿಗೆ ಎದೆ ಹಾಲುಣಿಸದೇ ಇರುವುದು, ಒತ್ತಡ, ನಿದ್ರಾಹೀನತೆ, ನಿರಂತರವಾಗಿ ಪಡೆಯುವ ಹಾರ್ಮೋನ್ ಚಿಕಿತ್ಸೆ, ಅತಿಯಾದ ರಾಸಾಯನಿಕಗಳಿಗೆ ಒಡ್ಡಿಕೊಳ್ಳುವುದು, ಅತಿಯಾದ ಪ್ಲಾಸ್ಟಿಕ್ ಬಳಕೆ...

ಮುಂಜಾಗ್ರತೆ: ಸ್ವಯಂ ಸ್ತನ ತಪಾಸಣೆಯನ್ನು ನಿಯಮಿತವಾಗಿ ಮಾಡಿಕೊಳ್ಳುತ್ತಿರಬೇಕು. ಅಸಹಜ ಎನಿಸುವ ಗಡ್ಡೆ ಏನಾದರೂ ಕಂಡುಬಂದರೆ ವೈದ್ಯರ ಸಲಹೆಯ ಮೇರೆಗೆ ಮ್ಯಾಮೊಗ್ರಫಿ, ಬಯಾಪ್ಸಿ ಪರೀಕ್ಷೆಗಳಿಗೆ ಒಳಗಾಗಬೇಕು.



ನಿರ್ಲಕ್ಷ್ಯ ಬೇಡ

- ಸ್ತನ ಅಥವಾ ಇತರ ಯಾವುದಾದರೂ ಭಾಗದಲ್ಲಿ ನೋವಿಲ್ಲದ ಗಂಟು
- ದೀರ್ಘಕಾಲ ಕೆಮ್ಮು/ಧ್ವನಿ ಒಡೆಯುವುದು
- ಕಫದಲ್ಲಿ ರಕ್ತ, ಕಾರಣವಿಲ್ಲದೇ ಉಸಿರಾಟಕ್ಕೆ ತೊಂದರೆಯಾಗುವುದು
- ಕುತ್ತಿಗೆ, ಕಂಕುಳಲ್ಲಿ ಗಟ್ಟಿಯಾದ ದೀರ್ಘಕಾಲಿಕ ಗಂಟುಗಳು
- ಜೀರ್ಣಕ್ರಿಯೆ, ಮಲ ವಿಸರ್ಜನೆಯಲ್ಲಿ ಪದೇ ಪದೇ ವ್ಯತ್ಯಾಸ
- ಅಕಾರಣವಾಗಿ ತೂಕ ಇಳಿಯುವುದು
- ಆಹಾರ ನುಂಗಲು ತೊಂದರೆ

ಈ ಮೇಲಿನ ಯಾವುದೇ ಲಕ್ಷಣಗಳು ಸಂದೇಹ ಮೂಡಿಸಿದರೆ ತಪಾಸಣೆಗೆ ಒಳಗಾಗಲೇಬೇಕು.

ಕಾರಣ ಹತ್ತಾರು

ಆನುವಂಶೀಯ ಕಾರಣ ಕೇವಲ ಶೇ 5–10 (ಸ್ತನ, ಅಂಡಾಶಯ, ಕರುಳಿನ ಕ್ಯಾನ್ಸರ್ ಇತ್ಯಾದಿಗಳಲ್ಲಿ ಮಾತ್ರ). ಹೆಪಟೈಟಿಸ್ ಬಿ, ಎಚ್‌ಪಿವಿ ವೈರಸ್ ಸೋಂಕು, ತಂಬಾಕು ಸೇವನೆ, ಮದ್ಯಪಾನ, ಧೂಮಪಾನ, ವಿಟಮಿನ್ 'ಸಿ' ಮತ್ತು 'ಎ' ಕೊರತೆ, ಆಹಾರ ತಯಾರಿಕೆಯಲ್ಲಿ ಎಗ್ಗಿಲ್ಲದೇ ಬಳಸುತ್ತಿರುವ ಕೃತಕ ರಾಸಾಯನಿಕಗಳು, ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ರಸಗೊಬ್ಬರ–ಕೀಟನಾಶಕಗಳ ಅತಿಯಾದ ಬಳಕೆ, ಮಿತಿಮೀರಿದ ಪ್ಲಾಸ್ಟಿಕ್ ಬಳಕೆ, ಹಾರ್ಮೋನ್ ಅಸಮತೋಲನ, ಅತಿಯಾಗಿ ಯು.ವಿ. ಕಿರಣಗಳಿಗೆ ಒಡ್ಡಿಕೊಳ್ಳುವುದು, ಹದಗೆಟ್ಟ ಜೈವಿಕ ಗಡಿಯಾರ, ಜಲ-ವಾಯುಮಾಲಿನ್ಯ...

ಮುಂಜಾಗ್ರತೆ ಹೀಗಿರಲಿ

- ಸೌಂದರ್ಯವರ್ಧಕಗಳ ಬಳಕೆ ಕಡಿಮೆಯಾಗಲಿ
- ಸೂಕ್ತ ಆಹಾರ ಪದ್ಧತಿ ಅನುಸರಿಸಬೇಕು
- ಕರಿದ, ಹುರಿದ, ಸಂಸ್ಕರಿಸಿದ ಆಹಾರ, ಕೃತಕ ರಾಸಾಯನಿಕಗಳ ಬಳಕೆ ಕಡಿಮೆ ಮಾಡಬೇಕು
- ಹಸಿರುಸೊಪ್ಪು, ತರಕಾರಿ, ಹಣ್ಣು, ಬೇಳೆಕಾಳು ಉಪಯೋಗಿಸಬೇಕು
- ರೋಗನಿರೋಧಕ ಶಕ್ತಿ ಹೆಚ್ಚಿಸುವ ಕಿತ್ತಳೆ, ಕ್ಯಾರೆಟ್, ಕುಂಬಳಬೀಜ, ಈರುಳ್ಳಿ, ಬೆಳ್ಳುಳ್ಳಿ, ನೆಲ್ಲಿಕಾಯಿ ಇತ್ಯಾದಿಗಳನ್ನು ಹೆಚ್ಚು ಸೇವಿಸಬೇಕು. ಕುಟುಂಬದವರಿಗೂ ಈ ಬಗ್ಗೆ ಮನವರಿಕೆ ಮಾಡಬೇಕು.
- ಬೊಜ್ಜು ನಿವಾರಿಸಿಕೊಂಡು ಸರಿಯಾದ ತೂಕ ಕಾಯ್ದುಕೊಳ್ಳಬೇಕು.
- ಪ್ರತಿದಿನ ಕನಿಷ್ಠ ಒಂದು ಗಂಟೆ ದೈಹಿಕ ಚಟುವಟಿಕೆ ಅಗತ್ಯ
- ದಿನವೂ ರಾತ್ರಿ 6–8 ಗಂಟೆ ನಿದ್ದೆ
- ಸದಾ ಸಾಧ್ಯವಾದಷ್ಟು ದೀರ್ಘವಾಗಿ ಉಸಿರಾಡುವುದು
- ಸಕಾರಾತ್ಮಕ ಚಿಂತನೆ
- ಜೀವನಶೈಲಿ ಸುಧಾರಣೆ ಮಾತ್ರದಿಂದಲೇ ಶೇ 50ರಷ್ಟು ಕ್ಯಾನ್ಸರ್ ತಡೆಗಟ್ಟಬಹುದು

ಕೌನ್ಸೆಲಿಂಗ್: ಕೀಳರಿಮೆ ಸಲ್ಲದು



ಅಂತರಂಗ

ಅಕ್ಷರ ದಾಮ್ಲೆ ಮನಃಶಾಸ್ತ್ರಜ್ಞ

• ಕುಟುಂಬದಲ್ಲಿ ಸಮಸ್ಯೆಗಳು ಎದುರಾದಾಗ, ಸ್ನೇಹಿತೆಯರು ಮಾನಸಿಕವಾಗಿ ನೊಂದಿದ್ದಾಗ ಖುದ್ದು ಕೌನ್ಸೆಲಿಂಗ್ ಮಾಡುತ್ತಿದ್ದೆ. ಈಗ ನಾನೇ ನನ್ನ ಬದುಕಿನ ಜಂಜಾಟದಲ್ಲಿ ಸಿಲುಕಿಕೊಂಡು ನಲುಗುತ್ತಿದ್ದೇನೆ. ಅದರಿಂದ ಹೊರಬರಲಾಗದೆ ಒದ್ದಾಡುತ್ತಿದ್ದೇನೆ. ನನ್ನನ್ನು ನಾನೇ ಸಂತೈಸಿಕೊಳ್ಳಲಾಗದೆ ಅನ್ಯರಿಂದ ಕೌನ್ಸೆಲಿಂಗ್ ಪಡೆಯುವ ಹಾಗೆ ಆಗಿದೆ. ಇದು ನನ್ನಲ್ಲಿ ಒಂದು ಬಗೆಯ ಕೀಳರಿಮೆ ಹುಟ್ಟಿಸುತ್ತಿದೆ. ಇಂಥ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುವುದು ಹೇಗೆ?

ಹೇಮಾ, ಬೆಂಗಳೂರು

ಎಷ್ಟೋ ಮಂದಿಗೆ ತಾವು ಇತರರಿಗೆ ಕೌನ್ಸೆಲಿಂಗ್ ಮಾಡುತ್ತೇವೆ ಎನ್ನುವುದರ ಕುರಿತು ಅಭಿಮಾನದ ಜೊತೆಗೆ ಅಹಂಕಾರವೂ ಇರುತ್ತದೆ. ತಾನು ಇತರರಿಗೆ ಸಲಹೆ ಕೊಡುತ್ತಿದ್ದೇನೆ, ತಾನು ಅವರಿಗಿಂತ ಹೆಚ್ಚು ಚೆನ್ನಾಗಿ ಯೋಚಿಸಬಲ್ಲೆ, ಸಮಸ್ಯೆಗಳನ್ನು ಪರಿಹರಿಸಬಲ್ಲೆ, ಕೌನ್ಸೆಲಿಂಗ್ ಪಡೆದುಕೊಳ್ಳುತ್ತಿರುವವರಿಗಿಂತ ತನಗೆ ಹೆಚ್ಚು ತಿಳಿದಿದೆ ಎಂದೆಲ್ಲ. ಕೌನ್ಸೆಲಿಂಗ್ ಮಾಡುವವರು ದೊಡ್ಡವರಲ್ಲ ಅಥವಾ ಕೌನ್ಸೆಲಿಂಗ್ ಪಡೆಯುವವರು ಸಣ್ಣವರೇನಲ್ಲ ಎಂಬುದನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು.

ನಾವೆಲ್ಲರೂ ಮನುಷ್ಯರೇ ಮತ್ತು ನಮ್ಮ ಜೀವನದಲ್ಲಿ ಸಮಸ್ಯೆಗಳು ಬರುವುದು ಸಹಜ. ನಮಗೆಲ್ಲರಿಗೂ ಒಂದು ಹಂತದವರೆಗೆ ಸಮಸ್ಯೆಯನ್ನು ಪರಿಹರಿಸುವ ಸಾಮರ್ಥ್ಯ ಇರುತ್ತದೆ. ಆದರೆ, ಅದು ಒಂದು ಹಂತ ಮೀರಿ ಹೋದಾಗ ನಮಗೆ ಇತರರ ಸಹಾಯ ಬೇಕಾಗುತ್ತದೆ. ನಾವು ಮೊದಲಿಗೆ ಸುಲಭವಾಗಿ ನಮ್ಮ ಸ್ನೇಹಿತರಿಂದ ಸಹಾಯವನ್ನು ಪಡೆಯುತ್ತೇವೆ. ಆದರೆ ಆಮೇಲೆ ಹೆಚ್ಚಿನ ಸಹಾಯ ಬೇಕಾದಾಗ ತಜ್ಞರ ಬಳಿಗೆ ತೆರಳುತ್ತೇವೆ. ತಜ್ಞತೆ ಇರುವವರು ಮೊದಲು ಅರ್ಥ ಮಾಡಿಕೊಳ್ಳಬೇಕಾದುದು ಏನೆಂದರೆ, ನಾವು ಕೌನ್ಸೆಲಿಂಗ್ ಅಥವಾ ಸೈಕೊಥೆರಪಿ ಮಾಡುವ ಮೂಲಕ ನಮ್ಮ ಗ್ರಾಹಕರು ತಮ್ಮ ಸಮಸ್ಯೆಗಳನ್ನು ಸ್ವತಃ ಪರಿಹರಿಸಿಕೊಳ್ಳುವುದಕ್ಕೆ ಸಮರ್ಥರಾಗುವಂತೆ ಮಾಡುವಲ್ಲಿ ಸಹಾಯಕರಾಗಿರುತ್ತೇವೆಯೇ ವಿನಾ ನಾವೇ ಅವರ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯದಲ್ಲಿ ತೊಡಗಬಾರದು. ಪರಿಹಾರ ಕಂಡುಕೊಳ್ಳುವಲ್ಲಿ ಅವರಿಗೆ ಮಾರ್ಗದರ್ಶನ ಮಾಡಬಹುದೇ ವಿನಾ 'ಇದೇ ನಿನ್ನ ಸಮಸ್ಯೆಗೆ ಪರಿಹಾರ' ಎಂದು ಹೇಳುವ ತಪ್ಪನ್ನು ಮಾಡಬಾರದು.

ನಾವು ಯಾವಾಗ ಒಂದು ಸಮಸ್ಯೆಯ ಭಾಗವಾಗಿರುತ್ತೇವೆಯೋ, ಆಗ ನಮಗೆ ಆ ಸಮಸ್ಯೆಯ ವಿಭಿನ್ನ ಆಯಾಮಗಳು ಕಾಣಿಸದೇ ಇರಬಹುದು. ಆದರೆ, ಆ ಸಮಸ್ಯೆಯಿಂದ ಹೊರಗೆ ಹೋಗಿ ನೋಡಿದಾಗ, ಆ ಎಲ್ಲ ಆಯಾಮಗಳೂ ಗೋಚರವಾಗಬಹುದು ಮತ್ತು ಅವುಗಳಿಂದಲೇ ನಾವು ಪರಿಹಾರವನ್ನು ಕಂಡುಕೊಳ್ಳಬಹುದು. ಮೊದಲನೆಯದಾಗಿ, ಕೌನ್ಸೆಲಿಂಗ್ ಪಡೆಯುತ್ತಿರುವುದರ ಬಗ್ಗೆ ಕೀಳರಿಮೆಯನ್ನು ಬಿಡಿ. ಮನಃಶಾಸ್ತ್ರವನ್ನು ಕಲಿತು ಹತ್ತು ವರ್ಷಗಳಿಂದ ನಾನು ವೃತ್ತಿಪರನಾಗಿದ್ದರೂ, ನನ್ನ ಜೀವನದಲ್ಲಿ ಸಮಸ್ಯೆಗಳು ಬಂದಾಗ ನಾನೂ ಥೆರಪಿಗೆ ಒಳಪಟ್ಟಿದ್ದೇನೆ ಮತ್ತು ಆ ಮೂಲಕ ಅನೇಕ ಸುಧಾರಣೆಗಳನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಒಬ್ಬ ಉತ್ತಮ ಥೆರಪಿಸ್ಟ್ ಆಗಲು ಮೊದಲು ನಾವು ಥೆರಪಿ ಪಡೆಯಬೇಕು. ನಮ್ಮಲ್ಲಿರುವ ಟ್ರಾಮಾಗಳನ್ನು ಹೀಲ್ ಮಾಡಿಕೊಳ್ಳಬೇಕು, ವೃತ್ತಿಪರರ ಅವಶ್ಯಕತೆ ಬಂದಲ್ಲಿ, ತತ್‌ಕ್ಷಣ ಅವರಿಂದ ಸಲಹೆ, ಸೂಚನೆಗಳನ್ನು ಪಡೆಯಬೇಕು. ಒಬ್ಬ ವೈದ್ಯನಿಗೆ ಇನ್ನೊಬ್ಬ ವೈದ್ಯನ ಅವಶ್ಯಕತೆ ಹೇಗೆ ಇರುತ್ತದೊ ಹಾಗೆಯೇ ಒಬ್ಬ ಥೆರಪಿಸ್ಟ್‌ಗೆ ಇನ್ನೊಬ್ಬ ಥೆರಪಿಸ್ಟ್‌ನ ಅಗತ್ಯ ಇರುತ್ತದೆ.

ಕಡುಬು ಫಿಟ್‌ನೆಸ್ ಮಂತ್ರ!

• ಸುನಾದ

'ಇದೇನೇ... ಕೆನ್ನೆ ಕಡುಬಿನಂಗೆ ಊದಿದೆ. ಆ ಮಗೀಗೆ ಇಷ್ಟು ಜೋರಾಗಿ ಹೊಡ್ದೀಯಲ್ಲ'. 'ಅಯ್ಯೋ... ನಾ ಹೊಡೆದಿದ್ದಲ್ಲ, ಅವ್ಳಿಗೆ ಹಲ್ಲು ನೋವಂತೆ'. ಮೊಮ್ಮಗಳ ಉಬ್ಬಿದ ಕೆನ್ನೆ ನೋಡಿ ಅಜ್ಜಿಗೆ ನೆನಪಾದದ್ದು 'ಕಡುಬು'.

***

'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು'–1870-1901ರ ಕಾಲಘಟ್ಟದ ಕವಿ ಮುದ್ದಣ ರಚಿಸಿದ 'ರಾಮಾಶ್ವಮೇಧ' ಕೃತಿಯಲ್ಲಿ ಈ ಸಾಲು ಇದೆ. ಮುದ್ದಣ ತನ್ನ ಸತಿ ಮನೋರಮೆಗೆ ಶ್ರೀರಾಮಚಂದ್ರನ ಕತೆಯನ್ನು ಸಂಸ್ಕೃತದಲ್ಲಿ ಹೇಳಲು ಹೊರಟಾಗ ಅದನ್ನು ತಡೆಯುವ ಮನೋರಮೆ, 'ಕನ್ನಡವೇ ಸರಿಯಾಗಿ ಗೊತ್ತಿಲ್ಲದ ನನಗೆ ಸಂಸ್ಕೃತದಲ್ಲಿ ಕತೆಯ ಸೊಗಸನ್ನು ಹೇಳುವುದೇ' ಎಂಬ ಅರ್ಥದಲ್ಲಿ ಈ ಸಾಲುಗಳನ್ನು ಉಲ್ಲೇಖಿಸುತ್ತಾಳೆ. ಕಡುಬೆಂಬೋ ಖಾದ್ಯ ಆ ಕಾಲದಿಂದಲೂ ಬಳಕೆಯಲ್ಲಿದೆ ಎನ್ನುವುದನ್ನು ಈ ಸಾಲುಗಳು ಪುಷ್ಟೀಕರಿಸುತ್ತವೆ.

ಆರೋಗ್ಯವರ್ಧಕ, ಸುಲಭ ಜೀರ್ಣಕಾರಿ, ಕಡಿಮೆ ಕ್ಯಾಲೊರಿ ಇರುವ, ಕೊಬ್ಬು ಅಥವಾ ಕೊಲೆಸ್ಟ್ರಾಲ್ ಹಂಗಿಲ್ಲದ ಮಲೆನಾಡಿನ ಹಬೆ ಕಡುಬಿನ ನೆನಪಿನ ಸುರುಳಿ ಹೀಗೆ ತೆರೆದುಕೊಳ್ಳುತ್ತದೆ.

ಕಡುಬಿನ ಕವಲುಗಳು ಹಲವು. ಒಂದೊಂದು ಭಾಗದಲ್ಲಿ ಒಂದೊಂದು ಖಾದ್ಯಕ್ಕೆ 'ಕಡುಬು' ಎಂಬ ನಾಮಾಂಕಿತ ಅಂಟಿಕೊಂಡಿದೆ.

ಅಕ್ಕಿ ಕಡುಬು, ಕರಿಗಡುಬು, ಖಾರದ ಕಡುಬು, ಸಿಹಿ ಕಡುಬು, ಕುಚ್ಚಿದ ಕಡುಬು, ಉದ್ದಿನ ಕಡುಬು, ರವೆ ಕಡುಬು, ಕೊಟ್ಟೆ ಕಡುಬು, ಮೂಡೆ ಕಡುಬು, ಕೊಬ್ಬರಿ ಕಡುಬು ಹೀಗೆ ಮಲೆನಾಡು, ಕರಾವಳಿ, ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಭಾಗಗಳಲ್ಲಿ ಕಡುಬಿನ ಕವಲುಗಳು ಟಿಸಿಲೊಡೆದಿವೆ.

ಕೆಲವರು ಕಡುಬನ್ನು ಎಣ್ಣೆಯಲ್ಲಿ ಕರಿದರೆ, ಇನ್ನು ಕೆಲವರು ಹಬೆಯಲ್ಲಿ ಬೇಯಿಸುವರು. ಮಗದೊಂದು ಕಡೆ ಎಲೆಯ ರಕ್ಷಾ ಕವಚ ಕಡುಬಿಗೆ ಜೊತೆಯಾಗುತ್ತದೆ. ಮಲೆನಾಡು, ಅರೆ ಮಲೆನಾಡಿನ ಭಾಗದಲ್ಲಿ ಹಬೆ ಕಡುಬು, ಉದ್ದಿನ ಕಡುಬು ಸಾಂಪ್ರದಾಯಿಕ ಖಾದ್ಯಗಳು. ಎಣ್ಣೆಯ ಪಸೆ ಇಲ್ಲದ, ಹೆಚ್ಚು ಸಾಮಗ್ರಿ ಬೇಡದ ಇದು ಫಿಟ್‌ನೆಸ್ ಮಂತ್ರ ಜಪಿಸುವವರಿಗೆ ಹೇಳಿ ಮಾಡಿಸಿದ ಖಾದ್ಯ.

ಅಕ್ಕಿಹಿಟ್ಟು ಅಥವಾ ಅಕ್ಕಿ ರವೆಯಿಂದ ತಯಾರಿಸುವ ಇದು ಬಹುತೇಕರಿಗೆ ಅಚ್ಚುಮೆಚ್ಚು. ಆದರೆ, ತಯಾರಿಕೆಗೆ ಸ್ವಲ್ಪ ಸಮಯ ಬೇಡುತ್ತದೆ.

ರಸಾಸ್ವಾದ

ಗ್ರಾಮೀಣ ಭಾಗದ ಮನೆಗಳಲ್ಲಿ ಹಸು ಅಥವಾ ಎಮ್ಮೆ ಕರು ಹಾಕಿತೆಂದರೆ ಆ ಮನೆಗಳಲ್ಲಿ ಅರಸಿನದ ಎಲೆ ಹಾಕಿ ಹಬೆಯಲ್ಲಿ ಬೇಯಿಸಿದ 'ಬೊಟ್ಟು ಕಡುಬಿನ' ಘಮಲು ಕೇರಿಯ ತುಂಬಾ ಪಸರಿಸುತ್ತದೆ. ಹಸುವಿನ ಮೊದಲ ಹಾಲಿನಿಂದ ತಯಾರಿಸುವ ಗಿಣ್ಣಿಗೆ ಕಡುಬು ಅತ್ಯುತ್ತಮ ಸಂಗಾತಿ.

ಮಾಂಸಾಹಾರ ಪ್ರಿಯರಿಗೂ ಇದು ಅಚ್ಚುಮೆಚ್ಚು. ಚಿಕನ್ ಸಾಂಬಾರ್, ಅಣಬೆ ಸಾರಿಗೆ ಅತ್ಯುತ್ತಮ ಕಾಂಬಿನೇಷನ್. ಅಕ್ಕಿಹಿಟ್ಟಿನ ಸರಿಯನ್ನು ತಯಾರಿಸಿಕೊಂಡು ಬಟ್ಟಲಿನ ರೀತಿ ಕಡುಬು ಮಾಡಿಕೊಂಡು ಬೇಳೆ, ಹಸಿಕೊಬ್ಬರಿ ಮಿಶ್ರಿತ ಹೂರಣ ತುಂಬಿದರೆ ಅದು ಸಿಹಿ ಕಡುಬು. ಕಾಳುಗಳ ಮಿಶ್ರಣದ ಪೇಸ್ಟ್ ತುಂಬಿದರೆ ಅದು ಉದ್ದಿನ ಕಡುಬು. ಇನ್ನು ಮಕ್ಕಳಿಗೆ ಪೋಷಕಾಂಶಯುಕ್ತ ಆಹಾರವನ್ನೇ ಕೊಡಬೇಕು ಎಂದು ಬಯಸುವ ಆಧುನಿಕ ಅಮ್ಮಂದಿರು ಸಕ್ಕರೆ, ಖೋವಾ ಜೊತೆಗೆ ಒಣಹಣ್ಣುಗಳ ಹುಡಿಯನ್ನು ಮಿಶ್ರ ಮಾಡಿ ಕಡುಬು ತಯಾರಿಸುವುದುಂಟು.

ಚಿಕ್ಕ ಮಕ್ಕಳಿಗೆ ಅದು ಸಿಹಿ ಕಡುಬೋ ಅಥವಾ ಖಾರದ್ದೋ ಎಂಬ ಕುತೂಹಲದ ಮೂಟೆಯಾಗಿಯೂ ಗೋಚರಿಸುತ್ತದೆ.



ಉದ್ದಿನ ಕಡುಬು

ವಿವಿಧ ಬೇಳೆಗಳನ್ನು ನೆನೆಸಿ ತಯಾರಿಸುವ ಉದ್ದಿನ ಕಡುಬು ಮಲೆನಾಡಿನ ಮನೆಗಳಲ್ಲಿ ಘಮಗುಡುತ್ತದೆ.

ಏನೇನು ಬೇಕು? : ಅಕ್ಕಿಹಿಟ್ಟು 2 ಕಪ್, ಉದ್ದಿನಬೇಳೆ, ಹೆಸರುಬೇಳೆ, ಕಡಲೆಬೇಳೆ ತಲಾ 1/4 ಕಪ್, ಕೊತ್ತಂಬರಿ ಬೀಜ 1 ಟೀ ಚಮಚ, ಜೀರಿಗೆ 1 ಟೀ ಚಮಚ, ಬೆಳ್ಳುಳ್ಳಿ 6ರಿಂದ 8 ಎಸಳು, ಶುಂಠಿ ಸ್ವಲ್ಪ, ಕರಿಬೇವು 2 ಎಸಳು, ಹಸಿಮೆಣಸಿನಕಾಯಿ 2–3, ಉಪ್ಪು, ನೀರು.

ಹೀಗೆ ಮಾಡಿ: ಹಿಂದಿನ ರಾತ್ರಿ ಮೂರೂ ಬೇಳೆಗಳನ್ನು ತೊಳೆದು ನೆನೆಹಾಕಿ (ರಾತ್ರಿ ನೆನೆಹಾಕಲು ಮರೆತರೆ ಬೆಳಿಗ್ಗೆ ಬಿಸಿನೀರಿನಲ್ಲಿ ಒಂದು ಗಂಟೆ ನೆನೆಸಿಡಬಹುದು). ನೆನೆದ ಬೇಳೆಗಳನ್ನು ಮಿಕ್ಸಿಯಲ್ಲಿ ಹಾಕಿ, ಅದಕ್ಕೆ ಕೊತ್ತಂಬರಿ ಬೀಜ, ಜೀರಿಗೆ, ಬೆಳ್ಳುಳ್ಳಿ, ಶುಂಠಿ, ಕರಿಬೇವು, ಹಸಿಮೆಣಸಿನಕಾಯಿ, ಉಪ್ಪು ಹಾಕಿ ನೀರು ಹಾಕದೆ ತರಿತರಿಯಾಗಿ ರುಬ್ಬಿಕೊಳ್ಳಬೇಕು.

ಇತ್ತ ಒಂದು ಪಾತ್ರೆಯಲ್ಲಿ ಮೂರು ಲೋಟ ನೀರು, ಸ್ವಲ್ಪ ಉಪ್ಪು ಹಾಕಿ ಕುದಿಯಲು ಬಿಡಬೇಕು. ನೀರು ಕುದಿ ಬಂದ ಬಳಿಕ ನಿಧಾನಕ್ಕೆ ಸ್ವಲ್ಪ ಸ್ವಲ್ಪವೇ ಅಕ್ಕಿಹಿಟ್ಟು ಹಾಕುತ್ತ ಕೂಡಿಸಬೇಕು. ಹಿಟ್ಟು ಸ್ವಲ್ಪ ಗಟ್ಟಿಯಾದ ಬಳಿಕ ಎರಡು ನಿಮಿಷ ಬಿಟ್ಟು ಉರಿ ಆರಿಸಬೇಕು.

ಸ್ವಲ್ಪ ಉಗುರು ಬೆಚ್ಚಗಿರುವಾಗಲೇ ಹಿಟ್ಟನ್ನು ಚೆನ್ನಾಗಿ ನಾದಿಕೊಳ್ಳಬೇಕು. ನಾದಿಕೊಂಡಷ್ಟೂ ಕಡುಬು ಮೃದುವಾಗಿ ಬರುತ್ತದೆ. ಬಳಿಕ ಸ್ವಲ್ಪ ಸ್ವಲ್ಪವೇ ಹಿಟ್ಟಿನಿಂದ ಬಟ್ಟಲಿನ ಆಕೃತಿ ಮಾಡಿಕೊಂಡು ಅದರ ಒಳಗೆ ರುಬ್ಬಿಕೊಂಡ ಮಿಶ್ರಣ ತುಂಬಿ ಕಡುಬಿನ ಎರಡೂ ಬದಿಯನ್ನೂ ಸೇರಿಸಬೇಕು. ಈ ರೀತಿ ಎಲ್ಲವನ್ನೂ ಮಾಡಿಟ್ಟುಕೊಂಡ ಬಳಿಕ ಇಡ್ಲಿ ಪಾತ್ರೆಯಲ್ಲಿ ತಳಕ್ಕೆ ನೀರು ಹಾಕಿ, ತೂತಿರುವ ತಾಟು ಇಟ್ಟು, ಅದರ ಮೇಲೆ ಕಡುಬುಗಳನ್ನು ಜೋಡಿಸಿಡಬೇಕು.

ಮುಚ್ಚಳ ಮುಚ್ಚಿ 20ರಿಂದ 25 ನಿಮಿಷ ಮಧ್ಯಮ ಪ್ರಮಾಣದ ಉರಿಯಲ್ಲಿ ಬೇಯಿಸಬೇಕು. ಬೇಯಿಸುವಾಗ ಲಭ್ಯವಿದ್ದರೆ ಅರಸಿನದ ಎಲೆಗಳನ್ನು ಕಡುಬುಗಳ ಮೇಲ್ಭಾಗದಲ್ಲಿ ಇರಿಸಿ. ಉತ್ತಮ ಘಮ ಬರುತ್ತದೆ.

(ರುಬ್ಬಿಕೊಂಡ ಪೇಸ್ಟ್ ಉಳಿದರೆ ಅದಕ್ಕೆ ಸಣ್ಣಗೆ ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು, ಸ್ವಲ್ಪ ಅಕ್ಕಿಹಿಟ್ಟು ಸೇರಿಸಿ ಉದ್ದಿನ ವಡೆ ಸಹ ಮಾಡಿಕೊಳ್ಳಬಹುದು)

ಜುವೆಲ್ ಬ್ಲೌಸ್

ಸೋ ಬ್ಯೂಟಿಫುಲ್, ಸೋ ಎಲಿಗಂಟ್...



• ಕೀರ್ತಿಕುಮಾರಿ ಎಂ.

ಮದುವೆ ಅಥವಾ ಇತರ ಸಮಾರಂಭಕ್ಕೆ ಸಿದ್ಧರಾಗುವ ಹೆಣ್ಣುಮಕ್ಕಳಿಗೆ ಯಾವ ಆಭರಣ ಧರಿಸುವುದು ಎಂಬ ಜಿಜ್ಞಾಸೆ ಕಾಡುವುದು ಸಹಜ. ಕಂಠಿಹಾರವೋ ನೆಕ್ಲೆಸ್ಸೋ ಅಥವಾ ಚೋಕರ್ ಧರಿಸುವುದೋ ಎಂಬ ಗೊಂದಲ ಬಗೆಹರಿಯುವ ಹೊತ್ತಿಗೆ ಸಮಾರಂಭದ ದಿನವೇ ಹತ್ತಿರ ಬಂದುಬಿಟ್ಟಿರುತ್ತದೆ! ಅಂತಹವರ ಸಮಸ್ಯೆ ಬಗೆಹರಿಸಲೆಂದೇ ಈಗ ಬಂದಿದೆ 'ಜುವೆಲ್ ಬ್ಲೌಸ್'.

ಚಿನ್ನದ ಬೆಲೆ ಗಗನಕ್ಕೇರಿರುವ ಈ ಹೊತ್ತಿನಲ್ಲಿ, ಸೀರೆಗೆ ಸರಿಹೊಂದುವ ಚಿನ್ನದ ಆಭರಣವನ್ನು ಖರೀದಿಸಲು ಸಾಧ್ಯವಿಲ್ಲ, ಇರುವ ಚಿನ್ನದ ಆಭರಣಗಳನ್ನೇ ಪದೇ ಪದೇ ಧರಿಸಲೂ ಇಷ್ಟವಿಲ್ಲ ಎನ್ನುವ ಆಧುನಿಕ ನಾರಿಯರಿಗೆ ಜುವೆಲ್ ಬ್ಲೌಸ್ ಈಗ ಬೆಸ್ಟ್ ಚಾಯ್ಸ್. ಈ ರವಿಕೆಯೇ ಗ್ರ್ಯಾಂಡ್ ಲುಕ್ ಕೊಡುವುದರಿಂದ, ಕತ್ತಿಗೆ ಅಥವಾ ತೋಳಿಗೆ ಪ್ರತ್ಯೇಕ ಆಭರಣ ಧರಿಸಬೇಕಾದ ಅಗತ್ಯವೇ ಬರುವುದಿಲ್ಲ. ಹಾಕಿಕೊಳ್ಳಲೇಬೇಕು ಎನಿಸಿದರೆ ಕೃತಕ ಆಭರಣ ಧರಿಸಿದರೂ ನಡೆಯುತ್ತದೆ.

ಏನಿದು ಜುವೆಲ್ ಬ್ಲೌಸ್?

ಸೀರೆ ಸಿಂಪಲ್ ಆಗಿದ್ದರೂ ಬ್ಲೌಸ್‌ನಲ್ಲಿ ಜಾಸ್ತಿ ವರ್ಕ್ ಇರಬೇಕು, ಗ್ರ್ಯಾಂಡ್ ಲುಕ್ ನೀಡಬೇಕು ಎಂಬುದು ಸದ್ಯದ ಟ್ರೆಂಡ್. ಅದಕ್ಕೆ ತಕ್ಕಂತೆ ಅತ್ಯಂತ ಗ್ರ್ಯಾಂಡ್ ಆಗಿ ಕಾಣುವ ಡಿಸೈನರ್ ಬ್ಲೌಸ್ ಇದು. ಕುಂದನ್, ಬೀಡ್ಸ್‌ನಂತಹ ನಾನಾ ಬಗೆಯ ಆಕರ್ಷಕವಾದ ಆಲಂಕಾರಿಕ ವಸ್ತುಗಳನ್ನು ಬಳಸಿ ಇದನ್ನು ವಿನ್ಯಾಸ ಮಾಡಲಾಗುತ್ತದೆ. ಉದಾಹರಣೆಗೆ– ನೆಕ್ಲೆಸ್, ಬಾಜುಬಂದ್ ಧರಿಸುವ ಬದಲಾಗಿ ಬ್ಲೌಸ್‌ನಲ್ಲಿಯೇ ಅದೇ ರೀತಿಯ ವಿನ್ಯಾಸ ಮಾಡಲಾಗಿರುತ್ತದೆ. ಹೀಗಾಗಿ, ನೋಡಲು ಅದು ಥೇಟ್ ನೆಕ್ಲೆಸ್, ತೋಳಬಂದಿಯಂತೆಯೇ ಭಾಸವಾಗುತ್ತದೆ. ಹ್ಯಾಂಡ್ ಎಂಬ್ರಾಯಿಡರಿಗೆ ವಿವಿಧ ಜುವೆಲರಿಗಳನ್ನು ಬಳಸಿಯೂ ಇದನ್ನು ವಿನ್ಯಾಸ ಮಾಡಲಾಗುತ್ತದೆ.

ಜುವೆಲ್ ಬ್ಲೌಸ್ ಅನ್ನು ಸೀರೆ ಮಾತ್ರವಲ್ಲ ಹಾಫ್ ಸೀರೆ ಜತೆಗೆ ಮತ್ತು ಕ್ರಾಪ್ ಟಾಪ್ ಆಗಿಯೂ ಬಳಸಬಹುದು ಎಂಬುದು ಅದರ ಹೆಚ್ಚುಗಾರಿಕೆ. ಈ ವಿನ್ಯಾಸದ ಬ್ಲೌಸ್, ಸೀರೆ ಅಥವಾ ಲೆಹೆಂಗಾದ ಸಂಪೂರ್ಣ ಅಂದವನ್ನೇ ಬದಲಾಯಿಸಬಲ್ಲದು. ಉದ್ಯಮಿ ಮುಕೇಶ್ ಅಂಬಾನಿ ಅವರ ಮಗಳು ಇಶಾ ಅಂಬಾನಿ ತಮ್ಮ ಸಹೋದರ ಅನಂತ್ ಅಂಬಾನಿ ಅವರ ವಿವಾಹಪೂರ್ವ ಕಾರ್ಯಕ್ರಮವೊಂದರಲ್ಲಿ ಲೆಹೆಂಗಾ ಜತೆ ಧರಿಸಿದ್ದ ಜುವೆಲರಿ ಬ್ಲೌಸ್ ಫ್ಯಾಷನ್ ಲೋಕದಲ್ಲಿ ಸದ್ದು ಮಾಡಿತ್ತು. ಅಬು ಜಾನಿ ಮತ್ತು ಸಂದೀಪ್ ಖೋಸ್ಲಾ ವಿನ್ಯಾಸ ಮಾಡಿದ್ದ ಈ ಕಲಾತ್ಮಕ ಕಸೂತಿಯ ವಿನ್ಯಾಸಕ್ಕೆ 'ಸೋ ಬ್ಯೂಟಿಫುಲ್, ಸೋ ಎಲಿಗಂಟ್, ಜಸ್ಟ್ ಲುಕಿಂಗ್ ಲೈಕ್ ವ್ವಾವ್' ಎನ್ನುವ ಮೆಚ್ಚುಗೆ ಹರಿದುಬಂದಿತ್ತು. ಕಾರ್ಯಕ್ರಮವೊಂದರಲ್ಲಿ ನಟಿ ಜಾಹ್ನವಿ ಕಪೂರ್ ಅವರು ಧರಿಸಿದ್ದ ಜುವೆಲರಿ ಲೆಹೆಂಗಾ ಅವರಿಗೆ ಥೇಟ್ ಬಂಗಾರದ ಗೊಂಬೆಯ ಲುಕ್ ನೀಡಿತ್ತು.

ಸಾಂಪ್ರದಾಯಿಕವಲ್ಲದ ಆಭರಣಗಳನ್ನು ಇಷ್ಟಪಡುವವರು, ಚಿನ್ನ ಅಥವಾ ಬೆಳ್ಳಿಯನ್ನು ಇಷ್ಟಪಡದೆ ಇರುವವರಿಗೂ ಈ ರೀತಿಯ ಬ್ಲೌಸ್ ಡಿಸೈನ್ ಹೆಚ್ಚು ಇಷ್ಟವಾಗಬಹುದು. ಈ ಆಲಂಕಾರಿಕ ಬ್ಲೌಸ್‌ನಲ್ಲಿ ವಿಧವಿಧದ ಡಿಸೈನ್‌ಗಳು ಲಭ್ಯವಿವೆ. ಮಹಾರಾಣಿ ಬ್ಲೌಸ್, ಕಾಜಲ್ ವಂಕಿ ಡಿಸೈನ್ ಬ್ಲೌಸ್ ಕೆಲವು ಉದಾಹರಣೆಗಳು. ನಿಮ್ಮ ಬಳಿ ಇರುವ ಸೀರೆ ಮತ್ತು ಅದರ ಬಣ್ಣ ಆಧರಿಸಿ ಅದಕ್ಕೆ ತಕ್ಕಂತೆ ನೀವು ವಿನ್ಯಾಸ ಮಾಡಿಸಿಕೊಳ್ಳಬಹುದು. ಅಂತಹ ಕೆಲವು ಬ್ಲೌಸ್‌ಗಳ ವಿವರ ಇಲ್ಲಿದೆ:



ನೆಕ್ಲೆಸ್ ಡಿಸೈನ್: ಟ್ರೆಂಡಿ ಬ್ಲೌಸ್ ಡಿಸೈನ್ ಎಂದರೆ ಅದು ಬೋಟ್‌ನೆಕ್ ಅಥವಾ ಹೈ ನೆಕ್ ಡಿಸೈನ್. ಜುವೆಲ್ ನೆಕ್ಲೆಸ್ ಡಿಸೈನ್ ಈ ರೀತಿಯ ಬ್ಲೌಸ್‌ಗೆ ಹೇಳಿ ಮಾಡಿಸಿದಂತೆ ಇರುತ್ತದೆ. ಸಣ್ಣ ಚೋಕರ್ ಅಥವಾ ದೊಡ್ಡದಾದ ನೆಕ್ಲೆಸ್ ರೀತಿಯಲ್ಲಿಯೂ ಡಿಸೈನ್ ಮಾಡಿಸಿಕೊಳ್ಳಬಹುದು.

ಟೆಂಪಲ್ ಡಿಸೈನ್: ವಿವಾಹದ ದಿನ ಮದುಮಗಳ ಅಂದ ಹೆಚ್ಚಿಸುವಲ್ಲಿ ಝರಿ ಸೀರೆಯದ್ದು ಒಂದು ತೂಕವಾದರೆ ಬ್ಲೌಸ್‌ನದ್ದು ಮತ್ತೊಂದು ತೂಕ. ಹೊಸ ಜೀವನದ ಹೊಸ್ತಿಲಿನಲ್ಲಿರುವ ವಧುವಿಗೆ ಟೆಂಪಲ್ ಡಿಸೈನ್ ಹೆಚ್ಚು ಆಕರ್ಷಕವಾಗಿ ಕಾಣಿಸುತ್ತದೆ. ಸಮೃದ್ಧಿಯ ಸಂಕೇತವಾದ ಲಕ್ಷ್ಮಿ, ಪಲ್ಲಕ್ಕಿಯಲ್ಲಿ ಕೂತ ವಧು... ಹೀಗೆ ವಿವಿಧ ಕಾನ್ಸೆಪ್ಟ್‌ನ ಬ್ಲೌಸ್‌ಗಳು ಮದುಮಗಳ ಅಂದವನ್ನು ಹೆಚ್ಚಿಸುತ್ತವೆ. ಮದುವೆಯಲ್ಲಿ ಪಾಲ್ಗೊಳ್ಳುವ ಅತಿ ಹತ್ತಿರದ ಸಂಬಂಧಿ ಹೆಣ್ಣುಮಕ್ಕಳಿಗೂ ಇದು ಚೆನ್ನಾಗಿ ಒಪ್ಪುತ್ತದೆ.

ವಂಕಿ ಜುವೆಲ್: ತೋಳಬಂದಿ ವಿನ್ಯಾಸವು ಮದುವೆ ಅಥವಾ ಸಾಂಪ್ರದಾಯಿಕ ಸಮಾರಂಭಗಳಿಗೆ ಸೂಕ್ತ ಎನಿಸುವ ಸರಳ ವಿನ್ಯಾಸ. ಈ ರೀತಿ ಡಿಸೈನ್ ಮಾಡಿಸಿದರೆ ವಂಕಿಯನ್ನು ಧರಿಸಬೇಕಾಗಿಲ್ಲ. ಸೀರೆಯ ಬಣ್ಣಕ್ಕೆ ತಕ್ಕಂಥ ವಂಕಿ ಡಿಸೈನ್ ಇರುವುದರಿಂದ ಬಂಗಾರಕ್ಕಿಂತ ಹೆಚ್ಚು ಆಕರ್ಷಕವಾಗಿ ಕಾಣಿಸುತ್ತದೆ. ರವಿಕೆಯ ತೋಳಿಗೆ ಪೂರ್ತಿಯಾಗಿ ಅಥವಾ ತುದಿಯಲ್ಲಿ ಇಲ್ಲವೇ ಮಧ್ಯದಲ್ಲಿ ಮಾಡಿಸುವ ವಂಕಿ ವಿನ್ಯಾಸವು ಬ್ಲೌಸ್‌ಗೆ ಮತ್ತಷ್ಟು ಮೆರುಗು ತಂದುಕೊಡುತ್ತದೆ.

ಬೀಡ್ಸ್ ಜುವೆಲ್: ಕುತ್ತಿಗೆ ಮತ್ತು ತೋಳುಗಳಿಗೆ ಬೀಡ್ಸ್‌ಗಳಿಂದ ವರ್ಕ್ ಮಾಡಿರುವ ವಿನ್ಯಾಸದ ಬ್ಲೌಸ್‌ಗಳು ಫ್ಯಾಷನ್‌ಪ್ರಿಯರನ್ನು ಸೆಳೆಯುತ್ತವೆ.


ಕಾಸಿನ ಡಿಸೈನ್: ಪಟ್ಟು ಸೀರೆ ಮತ್ತು ಬ್ರೈಡಲ್ ಬ್ಲೌಸ್‌ಗೆ ಈ ಡಿಸೈನ್ ಸೂಕ್ತ. ಚಿನ್ನದ ವರ್ಣದ, ಚಿಕ್ಕ ಮತ್ತು ದೊಡ್ಡದಾದ ಕೃತಕ ನಾಣ್ಯಗಳನ್ನು ಈ ವಿನ್ಯಾಸಕ್ಕೆ ಬಳಸಲಾಗುತ್ತದೆ.

ಪರ್ಲ್ ಜುವೆಲ್: ಕೋಲ್ಡ್ ಶೋಲ್ಡರ್ ಬ್ಲೌಸ್‌ಗಳಿಗೆ ಈ ವಿನ್ಯಾಸ ಆಕರ್ಷಕವಾಗಿ ಕಾಣಿಸುತ್ತದೆ. ಇದು ರಾಯಲ್ ಲುಕ್ ಸಹ ನೀಡುತ್ತದೆ.

ಫ್ಯಾಷನ್

ಅಲ್ಪ ದುಬಾರಿ ಚಿನ್ನಕ್ಕಿಂತ ಲೇಸು!

ಡಿಸೈನರ್‌ಗಳಿಂದ ಜುವೆಲ್ ಬ್ಲೌಸ್ ವಿನ್ಯಾಸ ಮಾಡಿಸಿಕೊಳ್ಳುವುದು ಅಲ್ಪ ದುಬಾರಿಯೇ. ಆದರೆ ಚಿನ್ನ ಕೊಳ್ಳುವುದಕ್ಕಿಂತ ಈ ರೀತಿಯ ಡಿಸೈನರ್ ಬ್ಲೌಸ್ ಲೇಸು. ಆಕರ್ಷಕವಾದ ವಿವಿಧ ಬಗೆಯ ಕೃತಕ ಆಭರಣಗಳಿಂದ ವಿನ್ಯಾಸಗೊಳಿಸುವ ಈ ಬ್ಲೌಸ್ ಮೂರ್ನಾಲ್ಕು ಸಾವಿರ ರೂಪಾಯಿಗಳಿಂದ ಆರಂಭವಾಗುತ್ತದೆ. ಪ್ರತಿ ಜುವೆಲ್ ಬ್ಲೌಸ್‌ನ ದರವು ಅದರ ವಿನ್ಯಾಸಕ್ಕೆ ಬಳಸುವ ಕೃತಕ ಆಭರಣದ ಬೆಲೆ ಮತ್ತು ಗುಣಮಟ್ಟವನ್ನು ಆಧರಿಸಿರುತ್ತದೆ.



ಜುವೆಲ್ ಬ್ಲೌಸ್‌ನಲ್ಲಿ ಚೈತ್ರಾ ವಾಸುದೇವನ್

ಚಿತ್ರಕೃಪೆ: ಇನ್‌ಸ್ಟಾಗ್ರಾಂ

₹130 ಕೋಟಿ ಮೌಲ್ಯದ ಸ್ವತ್ತು ವಶ

ಜೆ.ಪಿ. ನಗರ: ಬಿಡಿಎ ಅಧಿಕಾರಿಗಳ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



ಜೆ.ಪಿ. ನಗರ ಬಡಾವಣೆಯ 9ನೇ ಫೇಸ್‌ನಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡವನ್ನು ತೆರವುಗೊಳಿಸಲಾಯಿತು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶುಕ್ರವಾರ ನಡೆಸಿದ ಕಾರ್ಯಾಚರಣೆಯಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ, ಜೆ.ಪಿ. ನಗರ ಬಡಾವಣೆಯ 9ನೇ ಫೇಸ್‌ನಲ್ಲಿ ₹130 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಆಲಹಳ್ಳಿ ಗ್ರಾಮದ ಸರ್ವೆ ನಂ. 20ರಲ್ಲಿ 3 ಎಕರೆ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಗೋದಾಮು, ಕಟ್ಟಡ ಗಳನ್ನು ಜೆಸಿಬಿ ಯಂತ್ರದ ನೆರವಿನೊಂದಿಗೆ ತೆರವು ಗೊಳಿಸಲಾಯಿತು. ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡು, ಜಾಗದ ಸುತ್ತಲೂ ಬೇಲಿ ಹಾಕಿ, ಪ್ರಾಧಿಕಾರದ ಫಲಕ ಅಳವಡಿಸಲಾಗಿದೆ.

ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು. ಬಿಡಿಎ ಕಾರ್ಯ ನಿರತ ಪಡೆಯ ಉಪ ಆರಕ್ಷಕ ಅಧೀಕ್ಷಕ, ವಲಯ ಆಯುಕ್ತ (ದಕ್ಷಿಣ ವಲಯ), ದಕ್ಷಿಣ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಇದ್ದರು.

ಶ್ರೀ ಚೈತನ್ಯ ಶಾಲೆಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಸಾದ ನ್ಯಾಷನಲ್ ಸ್ಪೇಸ್ ಸೊಸೈಟಿ (ಎನ್‌ಎಸ್‌ಎಸ್) 12 ರಿಂದ 18 ವರ್ಷದ ವಿದ್ಯಾರ್ಥಿಗಳಿಗಾಗಿ ವಿಶ್ವದಾದ್ಯಂತ ಏರ್ಪಡಿಸಿದ್ದ 'ಲೈವ್ ಇನ್ ಎ ಹೆಲ್ತಿ ಸ್ಪೇಸ್' ಸ್ಪರ್ಧೆಯಲ್ಲಿ ಶ್ರೀ ಚೈತನ್ಯ ಶಾಲೆಯ ವಿದ್ಯಾರ್ಥಿಗಳು ಬಹುಮಾನ ಪಡೆದಿದ್ದಾರೆ.

ಬಾಹ್ಯಾಕಾಶ ನೆಲೆಯ ಒಂದು ನಿರ್ದಿಷ್ಟ ಘಟಕವನ್ನು - ಕೃಷಿ ಮಾಡ್ಯೂಲ್ ವಿನ್ಯಾಸಗೊಳಿಸಲು ಸ್ಪರ್ಧೆ ಆಯೋಜಿಸಲಾಗಿತ್ತು. ಚೈತನ್ಯ ಶಾಲೆಯ ವಿದ್ಯಾರ್ಥಿಗಳು ಒಟ್ಟು 85 ಬಹುಮಾನಗಳ ಪೈಕಿ 34 ಗೆದ್ದಿದ್ದಾರೆ. ಅದರಲ್ಲೂ 7 ವಿಶ್ವ ಮಟ್ಟದ ಪ್ರಥಮ ಬಹುಮಾನ ತಮ್ಮದಾಗಿಸಿಕೊಂಡಿದ್ದಾರೆ.

ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ಸೀಮಾ ಮಾತನಾಡಿ, 'ಇತ್ತೀಚೆಗೆ ನಡೆದ ನಾಸಾದ 'ರೋಡ್ ಮ್ಯಾಪ್ ಟು ಸ್ಪೇಸ್' ಸ್ಪರ್ಧೆಯಲ್ಲಿಯೂ ಶಾಲೆ ಗೆಲುವು ಸಾಧಿಸಿದೆ. 14 ವರ್ಷಗಳಿಂದ ಈ ಸ್ಪರ್ಧೆಯಲ್ಲಿ ವಿಶ್ವ ಚಾಂಪಿಯನ್ ಆಗಿರುವ ಏಕೈಕ ಶಿಕ್ಷಣ ಸಂಸ್ಥೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಬೆಳ್ಳಂದೂರು ಕೆರೆ ರಕ್ಷಿಸಿ'

ಬೆಂಗಳೂರು: ಬೆಳ್ಳಂದೂರು ಕೆರೆ ಮಧ್ಯೆ ರಸ್ತೆ ಮಾಡುವುದನ್ನು ನಿಲ್ಲಿಸಬೇಕು. ಕೆರೆಯ ಹೂಳೆತ್ತಿ ಪುನಶ್ಚೇತನಗೊಳಿಸಬೇಕು ಎಂದು ಕೆಂಪಾಪುರ-ಯೆಮಲೂರು-ಬೆಳ್ಳಂದೂರು ಸಂಸ್ಥೆಗಳ ಸಂಘ (ಕೆವೈಬಿಐಎ ಟ್ರಸ್ಟ್) ಒತ್ತಾಯಿಸಿದೆ.

ಸಂಘದ ಸದಸ್ಯ ಹರಿಕೃಷ್ಣ ಪಿ.ಎಲ್. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಬಂಡ್ ರಸ್ತೆ ವಿಸ್ತರಣೆ ನಿಲ್ಲಿಸಬೇಕು. ಮಣ್ಣು ಅವಶೇಷಗಳು ಅಥವಾ ನಿರ್ಮಾಣ ತ್ಯಾಜ್ಯವನ್ನು ಕೆರೆಗೆ ಸುರಿಯುವುದನ್ನು ತಡೆಯಬೇಕು. ಕೆರೆ ಅಥವಾ ಬಫರ್ ವಲಯದಲ್ಲಿ ಯಾವುದೇ ಶಾಶ್ವತ ಕಾಮಗಾರಿ ನಡೆಸಬಾರದು' ಎಂದು ಆಗ್ರಹಿಸಿದರು.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. **CIN : L23209KA1977PLC043357**
E-mail : info@gpl.in, secretarial@gujaratpetrosynthese.com Website: www.gpl.in

ಡಿಸೆಂಬರ್ 31, 2025 ರ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಡಿಸೆಂಬರ್ 2025 ರ ತ್ರೈಮಾಸಿಕಕ್ಕೆ ಅಂತ್ಯಗೊಂಡ	ಡಿಸೆಂಬರ್ 2025 ರ ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ	ಡಿಸೆಂಬರ್ 2024 ರ ತ್ರೈಮಾಸಿಕಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	80,574	1,89,334	50,391
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	13,108	24,334	6,697
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	13,108	24,334	6,697
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	10,141	19,302	5,335
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	10,141	19,302	5,335
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969
7	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			4,39,528
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	1.70	3.23	0.89

ಸೂಚನೆಗಳು:

ಎ). ಈ ಮೇಲಿನವು 31ನೇ ಡಿಸೆಂಬರ್ 2025ರ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ಫೆಬ್ರುವರಿ 06, 2026 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನಾರಾ–ವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಶಾಸನಬದ್ಧ ಲೆಕ್ಕಪರಿಶೋಧಕರು ಮೇಲಿನ ಫಲಿತಾಂಶಗಳ ಸೀಮಿತ ಪರಿಶೀಲನೆಯನ್ನು ನಡೆಸಿದ್ದಾರೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. ಈ ಕೆಳಗಿನ ಕ್ಯೂ. ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಪೂರ್ಣ ಸ್ವರೂಪವನ್ನು ಪಡೆಯಬಹುದು. ಬಿ). ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. ಸಿ). ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ/ ಮರು ಜೋಡಿಸಲಾಗಿದೆ. ಡಿ). ಸಾಮಾಜಿಕ ಭದ್ರತಾ ಸಂಹಿತೆ, 2020 21 ನವೆಂಬರ್ 2025 ರಿಂದ ಜಾರಿಗೆ ಬಂದಿದೆ. ಕಂಪನಿಯು ಉದ್ಯೋಗಿ ಸೌಲಭ್ಯಗಳ ಹೊಣೆಗಾರಿಕೆಗಳ ಮೇಲೆ ಈ ಸಂಹಿತೆಯ ಪ್ರಭಾವವನ್ನು ಮೌಲ್ಯಮಾಪನ ಮಾಡುತ್ತದೆ ಮತ್ತು ಅನ್ವಯವಾಗುವಂತೆ ಹಣಕಾಸು ವರ್ಷ 2025–26 ರಲ್ಲಿ ಅದನ್ನು ಲೆಕ್ಕಹಾಕಲಿದೆ.

ಸ್ಥಳ : ಬೆಂಗಳೂರು
ದಿನಾಂಕ : 06/02/2026

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಸಹಿ/– ಉರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕರು ಡಿ.ಐ.ಎನ್: 00319482

ಸಂಗಾತಿ ಹುಡುಕಾಟ: ಹಣ ದೋಚಿದ ವಂಚಕರು

ಫ್ಲ್ಯಾಟ್ ಖರೀದಿಸುವ ನೆಪದಲ್ಲಿ ಹಣ ಪಡೆದು ಕೃತ್ಯ ಸೈಬರ್ ಪೊಲೀಸರಿಂದ ತನಿಖೆ

• ಆದಿತ್ಯ ಕೆ.ಎ.



ಬೆಂಗಳೂರು: 'ಜೀವನ್ ಸಾಥಿ' ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ನಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದ ಮಹಿಳೆಯಿಂದ ಸೈಬರ್ ವಂಚಕರು ಹಣ ದೋಚಿದ್ದಾರೆ. ಸಂಗಾತಿಯ ಹುಡುಕಾಟದಲ್ಲಿದ್ದ ಮಹಿಳೆ, ಈಗ ಹಣ ಕಳೆದುಕೊಂಡು ಕಂಗಾಲಾಗಿದ್ದಾರೆ.

₹15.94 ಲಕ್ಷ ಹಣ ಕಳೆದುಕೊಂಡಿರುವ ಭಟ್ಟರಹಳ್ಳಿಯ ನಿವಾಸಿ, 41 ವರ್ಷದ ಮಹಿಳೆ ದೂರು ನೀಡಿದ್ದಾರೆ. ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಹಣ ದೋಚಲು ಸೈಬರ್ ಕಳ್ಳರು ನಾನಾ ತಂತ್ರ ಅನುಸರಿಸುತ್ತಿದ್ದಾರೆ. ಇದೀಗ ಮದುವೆಗೆ ವರನ ಹುಡುಕಾಟದಲ್ಲಿರುವ ಮಹಿಳೆಯರು ಹಾಗೂ ಯುವತಿಯರನ್ನು ಗುರಿಯಾಗಿಸಿ, ನಂಬಿಸಿ ವಂಚಿಸುತ್ತಿದ್ದಾರೆ. ಈ ರೀತಿಯ ಅನೇಕ ಪ್ರಕರಣಗಳು ನಗರದಲ್ಲಿ ವರದಿ ಆಗುತ್ತಿದ್ದು, ಅವರೆಲ್ಲರೂ ಠಾಣೆಯ ಮೆಟ್ಟಿಲೇರುತ್ತಿದ್ದಾರೆ.

'ಮದುವೆ ಮಾಡಿಕೊಳ್ಳಲು ವರನ ಹುಡುಕಾಟದಲ್ಲಿದ್ದ ಮಹಿಳೆ, ಮ್ಯಾಟ್ರಿಮೋನಿಯಲ್ ವೆಬ್‌ಸೈಟ್ 'ಜೀವನ್ ಸಾಥಿ'ಯಲ್ಲಿ ಕ್ರಿಶ್ಚಿಯನ್ ಸಮುದಾಯಕ್ಕೆ ಮೀಸಲಾದ ಪ್ರತ್ಯೇಕ ವಿಭಾಗದಲ್ಲಿ ಕೆಲವು ತಿಂಗಳ ಹಿಂದೆ ನೋಂದಣಿ ಮಾಡಿಕೊಂಡು, ಸ್ವವಿವರ ಹಾಕಿದ್ದರು. ಕೆಲವು ದಿನಗಳು ಕಳೆದ ಮೇಲೆ ಫ್ಯಾಬಿಯನ್ ಡಿಸೋಜ ಹೆಸರಿನ ವ್ಯಕ್ತಿಯೊಬ್ಬರು, ಫೇಸ್‌ಬುಕ್‌ನ ಮೆಸೆಂಜರ್‌ನಲ್ಲಿ 'ನಿಮಗೆ ಹೊಂದಾಣಿಕೆ ಆಗುವ ವರನಿದ್ದಾನೆ' ಎಂಬುದಾಗಿ ಸಂದೇಶ ಕಳುಹಿಸಿದ್ದರು. ಸಂದೇಶದ ಜತೆಗೆ ಮೊಬೈಲ್ ಸಂಪರ್ಕ ಸಂಖ್ಯೆಯನ್ನೂ ಹಾಕಿದ್ದರು. ಮಿಲ್ಟನ್ ಹೆಸರಿನ ವ್ಯಕ್ತಿ ಕರೆ ಮಾಡಿ, 'ನಿಮ್ಮನ್ನು ಮದುವೆ ಮಾಡಿಕೊಳ್ಳುತ್ತೇನೆ' ಎಂಬುದಾಗಿ ಹೇಳಿಕೊಂಡಿದ್ದರು. ನಂಬಿಕೆ ಬರುವಂತೆಯೂ ಮಹಿಳೆಯ ಜತೆಗೆ ಮಿಲ್ಟನ್ ಮಾತನಾಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಫ್ಲ್ಯಾಟ್ ಖರೀದಿಸುವುದಾಗಿ ಹೇಳಿದ್ದ ಆರೋಪಿ: 'ಮದುವೆಯಾದ ಮೇಲೆ ಚೆನ್ನಾಗಿ ಸಂಸಾರ ಸಾಗಿಸೋಣ. ಅದಕ್ಕೆ ನಮ್ಮದೇ ಪುಟ್ಟ ಗೂಡು ಬೇಕಿದೆ. ಅದಕ್ಕಾಗಿ ಫ್ಲ್ಯಾಟ್ ಖರೀದಿಸಲು ನಿರ್ಧರಿಸಿದ್ದೇನೆ. ಫ್ಲ್ಯಾಟ್ ಖರೀದಿಸಲು ಸಾಲ ಬೇಕಿದೆ' ಎಂಬುದಾಗಿ ಮಿಲ್ಟನ್ ಅವರು ಮಹಿಳೆಗೆ ತಿಳಿಸಿದ್ದರು. ಖಾಸಗಿ ಹಣಕಾಸು ಸಂಸ್ಥೆಯಿಂದ ಸಾಲ ಪಡೆದುಕೊಳ್ಳಲು ಇಮ್ರಾನ್ ಅವರು ನೆರವು ನೀಡಲಿದ್ದಾರೆ ಎಂದು ಹೇಳಿ, ಅವರ ಮೊಬೈಲ್ ಸಂಖ್ಯೆಯನ್ನು ಮಿಲ್ಟನ್ ಕಳುಹಿಸಿದ್ದರು. ಅವರ ಮಾತು ನಂಬಿದ್ದ ದೂರುದಾರೆ, ಸೇಂಟ್ ಫಿಲೋಮಿನಾ ಆಸ್ಪತ್ರೆಯ ಬಳಿ ಇಮ್ರಾನ್ ಅವರನ್ನು ಭೇಟಿ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

ಮಹಿಳೆಯ ಹೆಸರಿನಲ್ಲೇ ಸಾಲ

ಎಲ್ಲ ದಾಖಲೆಗಳನ್ನು ಪಡೆದುಕೊಂಡಿದ್ದ ಇಮ್ರಾನ್ ಅವರು, ನಾಲ್ಕು ಬೇರೆ ಬೇರೆ ಖಾಸಗಿ ಹಣಕಾಸು ಸಂಸ್ಥೆಗಳಿಂದ ಮಹಿಳೆಯ ಹೆಸರಿಗೆ ₹14.29 ಲಕ್ಷ ಸಾಲ ಮಂಜೂರು ಮಾಡಿಸಿದ್ದರು. ಆ ಹಣವೂ ಸೇರಿದಂತೆ ಒಟ್ಟು ₹15.94 ಲಕ್ಷವನ್ನು ಸೈಬರ್ ವಂಚಕ ಮಿಲ್ಟನ್ ಅವರು ನೀಡಿದ್ದ ಬ್ಯಾಂಕ್ ಖಾತೆಗೆ ಮಹಿಳೆ ವರ್ಗಾವಣೆ ಮಾಡಿದ್ದರು. 'ಷೇರು ಮಾರುಕಟ್ಟೆ ವ್ಯವಹಾರದಲ್ಲಿ ಅಷ್ಟಾಗಿ ನಿಮಗೆ ಅರಿವು ಇಲ್ಲ. ನಿಮ್ಮ ಎರಡು ಬ್ಯಾಂಕ್ ಖಾತೆಗಳನ್ನು ನಾನೇ ನಿರ್ವಹಣೆ ಮಾಡುತ್ತೇನೆ' ಎಂದೂ ಮಹಿಳೆಯನ್ನು ಆರೋಪಿ ನಂಬಿಸಿದ್ದರು. ಎಚ್‌ಡಿಎಫ್‌ಸಿ, ಆ್ಯಕ್ಸಿಸ್ ಬ್ಯಾಂಕ್ ಖಾತೆಗಳ ವಿವರವನ್ನೂ ಮಹಿಳೆ ನೀಡಿದ್ದರು. ಅದಾದ ಮೇಲೆ ಮದುವೆಯನ್ನೂ ಆಗದೇ, ಹಣವನ್ನೂ ವಾಪಸ್ ನೀಡದೇ ವಂಚನೆ ನಡೆಸಲಾಗಿದೆ' ಎಂದು ಸೈಬರ್ ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ವ್ಹೀಲಿ: 9 ಯುವಕರ ವಿರುದ್ಧ ಸಂಚಾರ ಠಾಣೆಯಲ್ಲಿ ಎಫ್‌ಐಆರ್

ಬೆಂಗಳೂರು: ವ್ಹೀಲಿ ಮಾಡುವ ಯುವಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಕೆ.ಆರ್.ಪುರ ಸಂಚಾರ ಠಾಣೆಯ ಪೊಲೀಸರು, 9 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ಠಾಣಾ ವ್ಯಾಪ್ತಿಯ ಟಿ.ಸಿ.ಪಾಳ್ಯ ಜಂಕ್ಷನ್, ಭಟ್ಟರಹಳ್ಳಿ ಜಂಕ್ಷನ್, ಹಳೆ ಮದ್ರಾಸ್ ರಸ್ತೆ ಹಾಗೂ ಮೇಡಹಳ್ಳಿ ಸೇತುವೆ ಬಳಿ ಸಿಬ್ಬಂದಿ ಗಸ್ತಿನಲ್ಲಿದ್ದಾಗ 9 ಯುವಕರು ಪ್ರತ್ಯೇಕ ದ್ವಿಚಕ್ರ ವಾಹನಗಳಲ್ಲಿ ವ್ಹೀಲಿ ನಡೆಸುತ್ತಿರುವುದು ಕಂಡುಬಂದಿತ್ತು. ತಕ್ಷಣವೇ ಎಲ್ಲ ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿ, ಯುವಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ (ಸಂಚಾರ) ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.



'ಕೆಲವು ದಿನಗಳಿಂದ ವ್ಹೀಲಿ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಟಿ.ಸಿ ಪಾಳ್ಯದ ಸುತ್ತಮುತ್ತ ರಾತ್ರಿ ವೇಳೆ ವ್ಹೀಲಿ ನಡೆಸಲಾಗುತ್ತಿದೆ. ಅಂತಹವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಚರಂಡಿಗೆ ಬಿದ್ದ ವಿದ್ಯಾರ್ಥಿ ಅಪಾಯದಿಂದ ಪಾರು

ಬೆಂಗಳೂರು: ಸರ್ವಜ್ಞನಗರದ ಗೋವಿಂದಪುರದಲ್ಲಿ ಶುಕ್ರವಾರ ಬೆಳಿಗ್ಗೆ ಚರಂಡಿಗೆ ಬಿದ್ದಿದ್ದ ವಿದ್ಯಾರ್ಥಿಯನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಪೋಷಕರ ಜತೆಗೆ ಒಂದನೇ ತರಗತಿಯ ವಿದ್ಯಾರ್ಥಿ ಶುಕ್ರವಾರ ಬೆಳಿಗ್ಗೆ ಶಾಲೆಗೆ ತೆರಳುತ್ತಿದ್ದ. ಪಾದಚಾರಿ ಮಾರ್ಗದಲ್ಲಿ ನಡೆದು ತೆರಳುವಾಗ ಸ್ಲ್ಯಾಬ್ ತೆರೆದು ಹಾಗೆಯೇ ಬಿಡಲಾಗಿದ್ದ ಚರಂಡಿಗೆ ವಿದ್ಯಾರ್ಥಿ ಬಿದ್ದಿದ್ದ. ಅದನ್ನು ಗಮನಿಸಿದ ಸ್ಥಳೀಯರು, ಓಡಿಬಂದು ವಿದ್ಯಾರ್ಥಿಯನ್ನು ರಕ್ಷಿಸಿ, ಅಪಾಯದಿಂದ ಪಾರು ಮಾಡಿದ್ದಾರೆ.

ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೇ ಶಾಲೆಯ ಎದುರು ಕಾಮಗಾರಿ ನಡೆಸಲಾಗುತ್ತಿದೆ. ಅದೇ ಮಾರ್ಗದಲ್ಲಿ ನಡೆದುಕೊಂಡು ಶಾಲೆಗೆ ತೆರಳುವ ವಿದ್ಯಾರ್ಥಿಗಳು ಚರಂಡಿಗೆ ಬೀಳುತ್ತಿದ್ದಾರೆ ಎಂದು ಸ್ಥಳೀಯರು ಹೇಳಿದರು.

ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ತಾತಗುಣಿ ಎಂಬಲ್ಲಿ ಜಲಮಂಡಳಿಯ ಕಾವೇರಿ ಐದನೇ ಹಂತದ ಕೊಳವೆ ಮಾರ್ಗದ ಚೇಂಬರ್‌ಗೆ ಬಿದ್ದು 9ನೇ ತರಗತಿಯ ವಿದ್ಯಾರ್ಥಿಯೊಬ್ಬ ಕಳೆದ ವಾರ ಮೃತಪಟ್ಟಿದ್ದ. ಜಲಮಂಡಳಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯದಿಂದ ಆ ಘಟನೆ ಸಂಭವಿಸಿತ್ತು. ಸರ್ವಜ್ಞನಗರದಲ್ಲೂ ಚರಂಡಿಯ ಸ್ಲ್ಯಾಬ್ ತೆರೆದಿದ್ದರೂ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು ಹಾಗೂ ಸಿಬ್ಬಂದಿ ಅದನ್ನು ಮುಚ್ಚಿಸದೇ ಹಾಗೆಯೇ ಬಿಟ್ಟಿದ್ದರಿಂದ ವಿದ್ಯಾರ್ಥಿ ಚರಂಡಿಗೆ ಬಿದ್ದಿದ್ದ. ಏನಾದರೂ ಅನಾಹುತ ಸಂಭವಿಸಿದ್ದರೆ ಯಾರು ಹೊಣೆ ಎಂದು ಸ್ಥಳೀಯರು ಪ್ರಶ್ನಿಸಿದರು.

ಮೆಜೆಸ್ಟಿಕ್: ಮೊಬೈಲ್ ಕಸಿದು ಓಡಿದ ಆರೋಪಿಗೆ ಥಳಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿ ಸುಲಿಗೆ ಪ್ರಕರಣಗಳು ಮುಂದುವರಿದಿದ್ದು, ಗುರುವಾರ ರಾತ್ರಿ ಯುವತಿಯ ಮೊಬೈಲ್‌ಅನ್ನು ವ್ಯಕ್ತಿಯೊಬ್ಬ ಕಿತ್ತುಕೊಂಡು ಓಡಿದ್ದ. ಸಾರ್ವಜನಿಕರು ಬೆನ್ನಟ್ಟಿ ಹಿಡಿದು ಥಳಿಸಿ ಮೊಬೈಲ್‌ಅನ್ನು ಯುವತಿಗೆ ವಾಪಸ್ ಕೊಡಿಸಿದ್ದಾರೆ.

ಬಿಎಂಟಿಸಿ ಬಸ್ ನಿಲ್ದಾಣದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಕಡೆಗೆ ಹೋಗಲು ಇಬ್ಬರು ಯುವತಿಯರು ರಾತ್ರಿ 8.30ರ ಸಮಯದಲ್ಲಿ ರಸ್ತೆ ದಾಟುತ್ತಿದ್ದರು. ಎದುರಿನಿಂದ ಬಸ್ ಬಂದಾಗ ಯುವತಿಯರು ನಿಂತಿದ್ದರು. ಇದೇ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಒಬ್ಬ ಯುವತಿಯ ಕೈಯಿಂದ ಮೊಬೈಲ್ ಕಿತ್ತುಕೊಂಡು ಓಡಿದ್ದ. ಯುವತಿಯರು ಕಿರುಚಿದ್ದರಿಂದ ಬಿಎಂಟಿಸಿ ನೌಕರರು ಮತ್ತು ಸಾರ್ವಜನಿಕರು ಆ ವ್ಯಕ್ತಿಯನ್ನು ಬೆನ್ನಟ್ಟಿ ಹಿಡಿದು ಥಳಿಸಿದರು.

ಮೆಜೆಸ್ಟಿಕ್‌ನಲ್ಲಿ ಸುಲಿಗೆಕೋರರ, ಕಳ್ಳಕಾಕರ ಹಾಗೂ ವೇಶ್ಯಾವಾಟಿಕೆ ಹಾವಳಿ ಹೆಚ್ಚಾಗಿರುವ ಬಗ್ಗೆ 'ಪ್ರಜಾವಾಣಿ'ಯು 'ಮೆಜೆಸ್ಟಿಕ್: ಅಕ್ರಮಗಳ ಹಾವಳಿ' ವಿಶೇಷ ವರದಿಯನ್ನು ಬುಧವಾರ ಪ್ರಕಟಿಸಿ ಗಮನ ಸೆಳೆದಿತ್ತು.

ಬಳಿಕ ಮೆಜೆಸ್ಟಿಕ್ ಸುತ್ತಮುತ್ತ ಅಧಿಕ ಪೊಲೀಸರನ್ನು ನಿಯೋಜಿಸಲಾಗಿತ್ತು. ಇದರ ನಡುವೆಯೇ ಈ ಸುಲಿಗೆ ನಡೆದಿದ್ದು, ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

'ಆರೋಪಿಯನ್ನು ಹಿಡಿದ ಬಳಿಕ 112 ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದರೂ, ಸ್ಪಂದಿಸಿಲ್ಲ. ಪೊಲೀಸ್ ಇಲಾಖೆಯ ಮೇಲಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ ನೀಡಿದರೂ ಸ್ಥಳೀಯ ಪೊಲೀಸರು ನಿರ್ಲಕ್ಷಿಸುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೈಬರ್ ಪೊಲೀಸರ ಕಾರ್ಯಾಚರಣೆ

ನಕಲಿ ಖಾತೆಗೆ ನೆರವು: 13 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣದ ಆಮಿಷವೊಡ್ಡಿ, ಸಾರ್ವಜನಿಕರ ಬ್ಯಾಂಕ್ ಖಾತೆಗಳ ವಿವರ ಪಡೆದು, ಸೈಬರ್ ವಂಚಕರಿಗೆ ನೀಡುತ್ತಿದ್ದವರ ವಿರುದ್ಧ ಕಾರ್ಯಾಚರಣೆ ಆರಂಭಿಸಿರುವ ಸಿಐಡಿಯ 'ಸೈಬರ್ ಕಮಾಂಡ್ ಘಟಕ' ಅಧಿಕಾರಿಗಳು ರಾಜ್ಯದಾದ್ಯಂತ 13 ಆರೋಪಿಗಳನ್ನು ಬಂಧಿಸಿದ್ದಾರೆ. ಅಲ್ಲದೇ, ಬ್ಯಾಂಕ್‌ನಲ್ಲಿ ವಂಚಕರು ತೆರೆದಿರುವ 42 ಸಾವಿರಕ್ಕೂ ಹೆಚ್ಚು ನಕಲಿ ಖಾತೆಗಳನ್ನೂ (ಮ್ಯೂಲ್ ಅಕೌಂಟ್) ಪತ್ತೆ ಹಚ್ಚಿದ್ದಾರೆ.

ರಾಜ್ಯದ ವಿವಿಧ ಜಿಲ್ಲಾ ಸೆನ್ ಪೊಲೀಸ್ ಠಾಣೆಗಳಲ್ಲಿ 17 ಪ್ರಕರಣ ದಾಖಲಿಸಿಕೊಂಡಿರುವ ಸೈಬರ್ ಪೊಲೀಸರು, ನಕಲಿ ಖಾತೆ ತೆರೆಯಲು ನೆರವು ನೀಡುತ್ತಿದ್ದ 13 ಮಂದಿಯನ್ನು ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು, ಚಿತ್ರದುರ್ಗ, ಗದಗ, ಕೊಪ್ಪಳ, ಹುಬ್ಬಳ್ಳಿ- ಧಾರವಾಡ, ಹಾಸನ, ಮಂಗಳೂರು ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಲ್ಲಿ ಗುರುವಾರ ಹಾಗೂ ಶುಕ್ರವಾರ ಏಕಕಾಲದಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಈ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

'ರಾಜ್ಯದಲ್ಲಿ 42 ಸಾವಿರ ಮ್ಯೂಲ್ ಅಕೌಂಟ್‌ಗಳಿವೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಪ್ರಾಥಮಿಕ ಹಂತದ ಕಾರ್ಯಾಚರಣೆಯಲ್ಲಿ 158 ನಕಲಿ ಖಾತೆಗಳಲ್ಲಿರುವ ವಿಳಾಸ ಕಲೆ ಹಾಕಲಾಗಿದೆ. ಅವರು ತಮ್ಮ ದಾಖಲೆಗಳನ್ನು ಯಾರಿಗೆ ನೀಡಿದ್ದರು ಎಂಬುದನ್ನು ಪತ್ತೆ ಹಚ್ಚುವಂತೆ 29 ಸೆನ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಹಾಗೂ ಪಿಎಸ್‌ಐಗಳಿಗೆ ಸೂಚನೆ ನೀಡಲಾಗಿದೆ' ಎಂದು ಮೂಲಗಳು ಹೇಳಿವೆ.

ಕಾರ್ಮಿಕರ ದಾಖಲೆ ಪಡೆಯುವ ವಂಚಕರು: ಆನ್‌ಲೈನ್ ಮೂಲಕ ವಂಚನೆ ಮಾಡಿದ ಹಣವನ್ನು ವರ್ಗಾಯಿಸಲು ವಂಚಕರು ಹೆಚ್ಚು ನಕಲಿ ಖಾತೆ ಬಳಸುತ್ತಾರೆ. ಪಂಜಾಬ್, ಉತ್ತರ ಪ್ರದೇಶ, ಬಿಹಾರ ಹಾಗೂ ಕರ್ನಾಟಕದ ಕಾರ್ಮಿಕರ ಆಧಾರ್ ಕಾರ್ಡ್ ಪಡೆದು, ಅವರ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆಯಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ರಾಜ್ಯದ 29 ಜಿಲ್ಲೆಗಳಲ್ಲಿ ಎರಡು ದಿನ ಕಾರ್ಯಾಚರಣೆ ನಡೆಸಲಾಯಿತು. ಈ ರೀತಿಯ ಕಾರ್ಯಾಚರಣೆ ಮುಂದುವರಿಯಲಿದೆ' ಎಂದು ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣವ್ ಮೊಹಂತಿ ತಿಳಿಸಿದರು.

ಮುಖ್ಯಾಂಶಗಳು

- ದಾಖಲೆ ನೀಡಿದವರಿಗೆ ₹ 10 ಸಾವಿರದಿಂದ ₹20 ಸಾವಿರ ಹಣ
- 25 ಎಟಿಎಂ ಕಾರ್ಡ್, 13 ಚೆಕ್‌ಬುಕ್, 12 ಮೊಬೈಲ್ ಫೋನ್ ಜಪ್ತಿ

ಹೇಗೆ ನಡೆಯುತ್ತಿದೆ ವಂಚನೆ?

'ಖಾತೆದಾರರಿಗೆ ಅರಿವಿಗೆ ಬಾರದಂತೆ ಅಥವಾ ವಿವಿಧ ರೀತಿಯ ಆಮಿಷವೊಡ್ಡಿ, ಸಾರ್ವಜನಿಕರ ಬ್ಯಾಂಕ್ ಖಾತೆಗಳ ವಿವರಗಳನ್ನು ಸೈಬರ್ ವಂಚಕರು ಪಡೆದು-ಕೊಳ್ಳುತ್ತಾರೆ. ಸೈಬರ್ ವಂಚನೆ ನಡೆಸಿ, ಆ ಹಣವನ್ನು ನೈಜ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಳ್ಳುತ್ತಾರೆ. ಹಣ ವರ್ಗಾವಣೆಯ ಮಾಹಿತಿ ಅಸಲಿ ಖಾತೆದಾರರ ಅರಿವಿಗೇ ಬರುವುದಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಂಚನೆ ಬಗ್ಗೆ ಪ್ರಕರಣ ದಾಖಲಾದಾಗ ಹಣ ವರ್ಗಾವಣೆ ಆಧರಿಸಿ, ನೈಜ ಖಾತೆದಾರರನ್ನು ಪತ್ತೆ ಹಚ್ಚಿ ಮಾಹಿತಿ ನೀಡಿದಾಗಷ್ಟೇ ತನ್ನ ಖಾತೆ ದುರ್ಬಳಕೆ ಆಗಿರುವ ವಿಚಾರ ಅಸಲಿ ಬ್ಯಾಂಕ್ ಖಾತೆದಾರರಿಗೆ ಗೊತ್ತಾಗುತ್ತಿದೆ. ಕೆಲವು ಖಾತೆದಾರರು ಕಮಿಷನರ್ ರೂಪದಲ್ಲಿ ಹಣ ಪಡೆದು ತಮ್ಮ ದಾಖಲೆಗಳನ್ನೂ ವಂಚಕರಿಗೆ ನೀಡಿರುವುದು ಪತ್ತೆಯಾಗಿದೆ' ಎಂದೂ ಅವರು ವಿವರಿಸಿದರು.

63 ವಿದ್ಯಾರ್ಥಿಗಳಿಗೆ ಬಿ ಫಾರ್ಮಾ ಪದವಿ ಪ್ರದಾನ



ನಿಟ್ಟೆ ಕಾಲೇಜ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸ್‌ನ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

ಬೆಂಗಳೂರು: 'ಔಷಧೀಯ ಕ್ಷೇತ್ರ ಈಗ ಕೇವಲ ವಾಣಿಜ್ಯೋದ್ಯಮವಾಗಿ ಉಳಿದಿಲ್ಲ. ಸಾರ್ವಜನಿಕ ಆರೋಗ್ಯ ಕ್ಷೇತ್ರದ ಪ್ರಮುಖ ಆಧಾರಸ್ತಂಭ. ರೋಗಕ್ಕೆ ಚಿಕಿತ್ಸೆ ನಾಣ್ಯದ ಒಂದು ಮುಖವಾದರೆ, ಅದರ ತಡೆಗಟ್ಟುವಿಕೆ ಇನ್ನೊಂದು ಮುಖ' ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಬಿ.ಸಿ. ಭಗವಾನ್ ಅಭಿಪ್ರಾಯಪಟ್ಟರು.

ನಿಟ್ಟೆ ಕಾಲೇಜ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸ್‌ನ ದ್ವಿತೀಯ ಘಟಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರಲಾಗಿದೆ ಎಂದರು.

'ಭವಿಷ್ಯದ ದಿನಗಳಲ್ಲಿ ಔಷಧ ವಿಜ್ಞಾನಿಗಳು ಸಂಶೋಧನೆಗಳಿಂದ ಸಾರ್ವಜನಿಕರು ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹೊಸತುಗಳನ್ನು ಪರಿಚಯಿಸಲಿದ್ದಾರೆ. ಸಂಶೋಧನೆಯಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರತ್ಯೇಕ ಸಂಶೋಧನಾ ನಿಧಿ ಒದಗಿಸಲಾಗುತ್ತಿದೆ. ಯುವ ಸಂಶೋಧಕರು ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಅಭೂತಪೂರ್ವ ಬದಲಾವಣೆಗಳನ್ನು ಮುಂಬರುವ ದಿನಗಳಲ್ಲಿ ತರಲಿದ್ದಾರೆ' ಎಂದು ತಿಳಿಸಿದರು.

ಇದೇ ವೇಳೆ 63 ವಿದ್ಯಾರ್ಥಿಗಳಿಗೆ ಬಿ ಫಾರ್ಮಾ ಪದವಿ ಪ್ರದಾನ ಮಾಡಲಾಯಿತು. ವಿಶ್ವವಿದ್ಯಾಲಯ ಮಟ್ಟದಲ್ಲಿ ಅತ್ಯುತ್ತಮ ಅಂಕ ಗಳಿಸಿದ್ದಕ್ಕಾಗಿ ವಿದ್ಯಾರ್ಥಿನಿ ಲಾವಣ್ಯ ಚಿನ್ನದ ಪದಕ ಸ್ವೀಕರಿಸಿದರು.

ತೇಜನಾ ಕನ್ಸಲ್ಟಿಂಗ್ ಎಲ್.ಎಲ್.ಪಿಯ ಸಂಸ್ಥಾಪಕ ಡಾ. ಕ್ರತೀಶ್ ಬೋಪಣ್ಣ ಮಾತನಾಡಿ, 'ಭಾರತದ ಔಷಧೀಯ ಉದ್ಯಮ ಇಂದು ವಿಶ್ವದ ಶಕ್ತಿಕೇಂದ್ರಗಳಲ್ಲಿ ಒಂದಾಗಿದೆ. ವಿಸ್ತಾರದಲ್ಲಿ ವಿಶ್ವದಲ್ಲಿ ಮೂರನೇ ಸ್ಥಾನ ಗಳಿಸಿದೆ ಎಂದರು.

ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಎಸ್. ಮೂಡಿತ್ತಾಯ ಅಧ್ಯಕ್ಷತೆ ವಹಿಸಿದ್ದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಎಚ್.ಸಿ. ನಾಗರಾಜ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸದಸ್ಯ ಕರುಣಾಕರ ರೈ, ನಿಟ್ಟೆ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಪ್ರಾಂಶುಪಾಲೆ ವಿ. ಕುಸುಮ್ ದೇವಿ ಸ್ವಾಗತಿಸಿದರು. ಪ್ರಾಧ್ಯಾಪಕಿ ವೇದಾ ಬಿ. ಹಚ್ಚೊಳ್ಳಿ ವಂದಿಸಿದರು.

ಜಗಳ ಬಗೆಹರಿಸಿಕೊಳ್ಳದಿದ್ದರೆ ₹7 ಕೋಟಿ ಕಳುಹಿಸಲು ಒತ್ತಾಯ

ಬೆದರಿಕೆ ಪತ್ರ: ನಟಿ ಸ್ನೇಹಿತನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಅರವಿಂದ್ ವೆಂಕಟೇಶ್ ರೆಡ್ಡಿ ಅವರಿಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ಸ್ಯಾಂಡಲ್‌ವುಡ್ ನಟಿಯೊಬ್ಬರ ಸ್ನೇಹಿತ ವೈಶಾಕ್ ಎಂಬವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಟಿಯ ಮನೆಯಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಅರವಿಂದ ರೆಡ್ಡಿ ಅವರಿಗೆ ಜನವರಿಯಲ್ಲಿ ಆರೋಪಿ ವೈಶಾಕ್ ಅವರು ಕೊರಿಯರ್ ಮೂಲಕ ಬೆದರಿಕೆ ಪತ್ರ ಕಳುಹಿಸಿದ್ದರು. ವಿಳಾಸ ಹಾಗೂ ಸಹಿ ಇಲ್ಲದ ಅನಾಮಧೇಯ ಬೆದರಿಕೆ ಪತ್ರವಾಗಿತ್ತು. 'ನಟಿಯ ಜತೆಗೆ ಇರುವ ಜಗಳವನ್ನು ಬಗೆಹರಿಸಿಕೊಳ್ಳಬೇಕು. ಇಲ್ಲದಿದ್ದರೆ ನನ್ನ ಗ್ಯಾರೇಜ್‌ಗೆ ₹6ರಿಂದ ₹7 ಕೋಟಿ ಕಳುಹಿಸಬೇಕು. ಬೇಡಿಕೆ ಈಡೇರಿಸದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು. ಈ ಬೆದರಿಕೆ ಪತ್ರದ ವಿರುದ್ಧ ಅರವಿಂದ ರೆಡ್ಡಿ ಅವರು ದೂರು ನೀಡಿದ್ದರು. ಈ ಸಂಬಂಧ ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಕಾರ್ಯಾಚರಣೆ ಆರಂಭಿಸಿದಾಗ ಬನಶಂಕರಿ ಬಳಿಯ ಬ್ಲೂ-ಡಾರ್ಟ್ ಕೊರಿಯರ್ ಮೂಲಕ ಪತ್ರ ಬಂದಿರುವುದು ಪತ್ತೆಯಾಗಿತ್ತು. ಇದರ ಬೆನ್ನಲ್ಲೇ ತನಿಖೆ ಚುರುಕುಗೊಳಿಸಲಾಯಿತು. ಗ್ಯಾರೇಜ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. 'ಮಾಲೀಕರು ಹೇಳಿದಂತೆ ನಾನು ಪತ್ರ ಕೊರಿಯರ್ ಮಾಡಿದ್ದೇನೆ. ಇದನ್ನು ಹೊರತುಪಡಿಸಿ ಹೆಚ್ಚಿನ ಮಾಹಿತಿ ತಿಳಿದಿಲ್ಲ' ಎಂದು ಯುವಕ ಹೇಳಿದ್ದರು. ಈ ಮಾಹಿತಿಯ ಆಧಾರದಲ್ಲಿ ಗ್ಯಾರೇಜ್ ಮಾಲೀಕನ ಬಗ್ಗೆ ಮಾಹಿತಿ ಕಲೆ ಹಾಕಲಾಯಿತು. ವೈಶಾಕ್ ಅವರು ಪತ್ರ ಕಳುಹಿಸಿರುವುದು ಎಂಬುದು ಪತ್ತೆಯಾಗಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಉದ್ಯಮಿ, ನಿರ್ಮಾಪಕ ಅರವಿಂದ ರೆಡ್ಡಿ ಹಾಗೂ ಸ್ಯಾಂಡಲ್‌ವುಡ್ ನಟಿಯ ನಡುವೆ ಈ ಹಿಂದೆ ಗಲಾಟೆ ಆಗಿತ್ತು. ಅರವಿಂದ್ ರೆಡ್ಡಿ ವಿರುದ್ಧ ನಟಿ ದೂರು ನೀಡಿದ್ದರು. ಅರವಿಂದ್ ರೆಡ್ಡಿ ಅವರ ಬಂಧನವಾಗಿತ್ತು. ಜಾಮೀನಿನ ಮೇಲೆ ಬಿಡುಗಡೆ ಆಗಿದ್ದರು' ಎಂದು ಪೊಲೀಸರು ಹೇಳಿದರು.

ವಿಚಾರಣೆಗೆ ಬರುವಂತೆ ನಟಿಗೆ ನೋಟಿಸ್?: ಬೆದರಿಕೆ ಪತ್ರ ಕಳುಹಿಸಿದ ನಂತರ ನಟಿಯ ಮನೆಯಲ್ಲಿಯೇ ಆರೋಪಿ ಇದ್ದರು. ಆರೋಪಿ ಬಳಸಿದ್ದ ಮೊಬೈಲ್ ನಟಿಯ ಮನೆಯಲ್ಲಿ ಬಚ್ಚಿಟ್ಟಿದ್ದರು. ಆರೋಪಿಯ ಮೊಬೈಲ್ ಜಪ್ತಿ ಮಾಡಲಾಗಿದೆ. ಈ ಪ್ರಕರಣದ ಸಂಬಂಧ ನಟಿಗೂ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಥೀಮ್ ಪಾರ್ಕ್ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಮಾಣವಾಗುತ್ತಿರುವ ಥೀಮ್ ಪಾರ್ಕ್ ಕಾಮಗಾರಿಯನ್ನು ಏಪ್ರಿಲ್ ಒಳಗಾಗಿ ಪೂರ್ಣಗೊಳಿಸಿ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಗುತ್ತಿಗೆದಾರರಿಗೆ ಸೂಚನೆ ನೀಡಿದರು.



ಕೆ.ಜೆ. ಜಾರ್ಜ್

ಸರ್ವಜ್ಞನಗರ ಕ್ಷೇತ್ರದಲ್ಲಿ ಕೈಗೊಳ್ಳಲಾಗಿರುವ ವಿವಿಧ ಕಾಮಗಾರಿಗಳನ್ನು ಶುಕ್ರವಾರ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಎಚ್‌ಬಿಆರ್ ಲೇಔಟ್‌ನ 5ನೇ ಬ್ಲಾಕ್‌ನ ಕೆಪಿಟಿಸಿಎಲ್ ಸ್ಟೇಷನ್ ಬಳಿ ನಿರ್ಮಾಣಗೊಳ್ಳುತ್ತಿರುವ ಥೀಮ್ ಪಾರ್ಕ್‌ನ ಕಾಮಗಾರಿ ಗುಣಮಟ್ಟದ ಜತೆಗೆ ತ್ವರಿತವಾಗಿ ಕೆಲಸ ಮುಗಿಸಬೇಕು. ಸಮಾಜಕ್ಕೆ ಹಸಿರಿನ ಮಹತ್ವ ತಿಳಿಸುವ ಉದ್ದೇಶದಿಂದ ನಿರ್ಮಾಣಗೊಳ್ಳುತ್ತಿರುವ ಈ ಥೀಮ್ ಪಾರ್ಕ್ ಕ್ಷೇತ್ರಕ್ಕೆ ಮಾತ್ರವಲ್ಲ, ರಾಜ್ಯದಲ್ಲೂ ಮಾದರಿಯಾಗಿರಬೇಕು ಎಂದರು.

ಥೀಮ್ ಪಾರ್ಕ್‌ನಲ್ಲಿ ತರಬೇತಿ ಕೇಂದ್ರ, ಗ್ರಾಮೀಣ ಆಟಗಳು, ಬಯಲು ರಂಗಮಂದಿರ, ಪಾದಚಾರಿ ಪಥ, ಓಪನ್ ಜಿಮ್, ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯ ವ್ಯವಸ್ಥೆ, ಮ್ಯಾಪಿಂಗ್ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ರೂಪಿಸಬೇಕು ಎಂದು ನಿರ್ದೇಶನ ನೀಡಿದರು.

ಎಚ್.ಬಿ.ಆರ್. ಲೇಔಟ್ 1ನೇ ಬ್ಲಾಕ್, ಸುಬ್ಬಯ್ಯ ಲೇಔಟ್ 1ನೇ ಮುಖ್ಯರಸ್ತೆಯ ಸಮೀಪ ಅಳವಡಿಸಲಾಗುತ್ತಿರುವ 600 ಎಂಎಂ ಎಂ.ಎಸ್ ನೀರಿನ ಪೈಪ್‌ಲೈನ್ ಯೋಜನೆಯನ್ನು ಪರಿಶೀಲಿಸಿದರು. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಎಚ್.ಬಿ.ಆರ್. ವಾರ್ಡ್ ಸಂಖ್ಯೆ 78ರಲ್ಲಿರುವ ಕಾಡುಗೊಂಡನಹಳ್ಳಿ ಸರ್ಕಾರಿ ಕನ್ನಡ ಮಾದರಿ ಪಾಠಶಾಲೆಯಲ್ಲಿ ನಿರ್ಮಿಸಿರುವ ಕೊಠಡಿ ಹಾಗೂ ಊಟದ ಕೊಠಡಿಯನ್ನು ಉದ್ಘಾಟಿಸಿದರು.

ವೀರಣ್ಣಪಾಳ್ಯ ಮುಖ್ಯರಸ್ತೆ ಮತ್ತು 4ನೇ ಅಡ್ಡರಸ್ತೆ-ಇಂದಿರಾ ಕ್ಯಾಂಟೀನ್ ರಸ್ತೆ ಮತ್ತು ನಾಗವಾರ ಮುಖ್ಯರಸ್ತೆಯಿಂದ ರೈಲ್ವೆ ಗೇಟ್‌ವರೆಗಿನ ವಿನಾಯಕ ದೇವಸ್ಥಾನದ ರಸ್ತೆಗಳ ಸಮಗ್ರ ಅಭಿವೃದ್ಧಿಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅನುದಾನದಡಿಯಲ್ಲಿ ಮಂಜೂರು ಮಾಡಲಾದ ರಸ್ತೆ ಕಾಮಗಾರಿಗಳಿಗೆ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು. ಇದೇ ಸಂದರ್ಭ ಕ್ಷೇತ್ರದ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದರು.

ಚಿನ್ನಾಭರಣವಿದ್ದ ಬ್ಯಾಗ್ ಕಳವು: ದೂರು

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಜ್ರಾಭರಣ ಮತ್ತು ಚಿನ್ನ ಇರುವ ಲಗೇಜ್ ಕಳವು ಆಗಿದೆ.

ಅಮೆರಿಕಕ್ಕೆ ಪ್ರಯಾಣಿಸಲು ಕಳೆದ ಡಿಸೆಂಬರ್‌ನಲ್ಲಿ ಹುಬ್ಬಳ್ಳಿಯ ಶಾಂತ ಎಂಬುವವರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಇಲ್ಲಿಂದ ಅಬುಧಾಬಿ ಮಾರ್ಗವಾಗಿ ಅಮೆರಿಕಕ್ಕೆ ಪ್ರಯಾಣ ಬೆಳೆಸಿದ್ದರು.

ಅಬುಧಾಬಿಯಲ್ಲಿ ಲಗೇಜ್ ಸ್ವೀಕರಿಸಲು ತೆರಳಿದಾಗ ಒಡವೆಗಳಿದ್ದ ಬ್ಯಾಗ್ ಕಾಣೆಯಾಗಿರುವುದು ಗಮನಕ್ಕೆ ಬಂದಿದೆ.

ಕಾಣೆಯಾದ ಲಗೇಜ್‌ನಲ್ಲಿ ಸುಮಾರು 790 ಗ್ರಾಂ ಚಿನ್ನ, ₹8ಲಕ್ಷ ಮೌಲ್ಯದ ವಜ್ರಾಭರಣ ಹಾಗೂ ₹20 ಸಾವಿರ ಮೌಲ್ಯದ ಔಷಧ ಇದ್ದವು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಘಟನೆ ಸಂಬಂಧ ಮಹಿಳೆ ಬೆಂಗಳೂರಿಗೆ ವಾಪಸ್ ಬಂದ ನಂತರ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಠಾಣೆಗೆ ದೂರು ನೀಡಿದ್ದಾರೆ.

ನಗರದಲ್ಲಿ ಇಂದು

ರಸ್ಕಿನ್ ಬಾಂಡ್ ಅವರ ಆತ್ಮಚರಿತ್ರೆ 'ಬರಹಗಾರನೊಬ್ಬನ ಒಂಟಿ ನಡಿಗೆ' ಪುಸ್ತಕ **ಬಿಡುಗಡೆ:** ಎಸ್. ದಿವಾಕರ್, ಅಧ್ಯಕ್ಷತೆ: ಕೆ.ಈ.ರಾಧಾಕೃಷ್ಣ, ಪುಸ್ತಕದ ಬಗ್ಗೆ ಮಾತು: ಆರ್. ಲಕ್ಷ್ಮೀನಾರಾಯಣ, ಅನುವಾದ: ಎಂ.ಎಸ್. ರಘುನಾಥ್, ಆಯೋಜನೆ: ಕಾಮಧೇನು ಪುಸ್ತಕ ಭವನ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್.ಕಾಲೊನಿ, ಬೆಳಿಗ್ಗೆ 10


ಎಂ 'ಜವಳಿ' ಹಬ್ಬ! ಎಫ್&ಎ ಶೋ ಮತ್ತು ಸಿದ್ಧ ಉಡುಪುಗಳ ಮೇಳ: ಕೆಟಿಪಿಒ ಟ್ರೇಡ್ ಸೆಂಟರ್, ವೈಟ್‌ಫೀಲ್ಡ್, ಬೆಳಿಗ್ಗೆ 10

'ಎಂಎಸ್‌ಐಎಲ್ ಚಿಟ್ಸ್' ಹೊಸ ತಂತ್ರಾಂಶ ಹಾಗೂ ಮೊಬೈಲ್ ಆ್ಯಪ್ ಬಿಡುಗಡೆ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ಎಂ.ಬಿ. ಪಾಟೀಲ, ಅತಿಥಿಗಳು: ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಸಿ. ಪುಟ್ಟರಂಗಶೆಟ್ಟಿ, ರಿಜ್ವಾನ್ ಅರ್ಷದ್, ಆಯೋಜನೆ: ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30

ಭಾರತೀಯ ಕಲಾ ಕಾಂಗ್ರೆಸ್‌ನ 33ನೇ ಅಧಿವೇಶನ: ಉದ್ಘಾಟನೆ: ಜಿ.ಬಿ. ದೆಗ್ಲೂರ್ಕರ್, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ: ದಿ ಮಿಥಿಕ್ ಸೊಸೈಟಿ, ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟೋರಿಕಲ್ ರಿಸರ್ಚ್, ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಮಾಗಡಿ ರಸ್ತೆ, ಬೆಳಿಗ್ಗೆ 10.30

10ನೇ ವಾರ್ಷಿಕ ಘಟಿಕೋತ್ಸವ: ಪದವಿ ಪ್ರದಾನ: ಎಂ.ಸಿ. ಸುಧಾಕರ್, ಘಟಿಕೋತ್ಸವ ಭಾಷಣ: ಸಂಜೀವ್ ಕೇಸ್ಕರ್, ಅತಿಥಿಗಳು: ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಲೇಕ್‌ಸೈಡ್ ಕ್ಯಾಂಪಸ್, ಹೆಣ್ಣೂರು-ಬಾಗಲೂರು ಮುಖ್ಯರಸ್ತೆ, ಚಾಗಲಟ್ಟಿ, ಬೆಳಿಗ್ಗೆ 10.45


ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ ಸಮಾರೋಪ ಸಮಾರಂಭ: ಭಾಗವಹಿಸುವವರು: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಿವಾನಂದ ಭಾರತೀ ಚಿಂತಾಮಣಿ ಸ್ವಾಮೀಜಿ, ಆಯೋಜನೆ: ಡಾ. ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ 100ನೇ ಜಯಂತಿ ಅಂಗವಾಗಿ ಕವನ ವಾಚನ: ಆಯೋಜನೆ: ಪ್ರೊ.ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾ ಸಮಿತಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಡಾ.ಜಿಎಸ್ಸೆಸ್ ಪ್ರಶಸ್ತಿ ಪ್ರದಾನ: ಕೆ.ವಿ. ನಾರಾಯಣ, ಎಸ್.ಜಿ. ಸಿದ್ಧರಾಮಯ್ಯ ಅವರ 'ನಮ್ಮ ಮೇಷ್ಟ್ರು ಜಿಎಸ್ಸೆಸ್' ಪುಸ್ತಕ ಬಿಡುಗಡೆ, ಪ್ರಶಸ್ತಿ ಪುರಸ್ಕೃತರು: ಎಚ್.ಎಸ್. ಶಿವಪ್ರಕಾಶ್, ಕೃಷ್ಣಮೂರ್ತಿ ಹನೂರು, ವಿನಯಾ ಒಕ್ಕುಂದ, ಅಭಿನಂದನಾ ನುಡಿ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಅತಿಥಿಗಳು: ಕೆ.ಎಂ. ಗಾಯತ್ರಿ, ವೂಡೇ ಪಿ. ಕೃಷ್ಣ, ಮೋಹನ್ ಕುಮಾರ್ ಕೊಂಡಜ್ಜಿ, ಆಯೋಜನೆ: ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನ, ರಾಷ್ಟ್ರಕವಿ ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಳಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿಭವನ, ಕುಮಾರ ಪಾರ್ಕ್, ಬೆಳಿಗ್ಗೆ 10.30



ಶಿವರುದ್ರಪ್ಪ

ರಾಷ್ಟ್ರಕವಿ ಪ್ರೊ. ಜಿ.ಎಸ್. ಶಿವರುದ್ರಪ್ಪ ರಾಷ್ಟ್ರೀಯ ಪುರಸ್ಕಾರ ಪ್ರದಾನ: ಸತೀಶ್ ಕುಮಾರ್ ಎಸ್. ಹೊಸಮನಿ, ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಪ್ರಶಸ್ತಿ ಪುರಸ್ಕೃತರು: ಸುಬ್ಬು ಹೊಲೆಯಾರ್, ಅತಿಥಿಗಳು: ವೀಣಾ ಶರ್ಮಾ ಬೂಸನೂರುಮಠ, ಎಂ. ಬೈರೇಗೌಡ, ಚಂದ್ರಶೇಖರ್ ಎನ್., ಆಯೋಜನೆ: ಪ್ರೊ. ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾ ಸಮಿತಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಶೋಷಿತ ಸಮುದಾಯಗಳ ವಿಮೋಚನಾ ದಿನ: ರಮಾಬಾಯಿ ಅಂಬೇಡ್ಕರ್ ಅವರ 128ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ, ಉದ್ಘಾಟನೆ: ಎಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ಇಂದಿರಾ ಕೃಷ್ಣಪ್ಪ, ಮಾವಳ್ಳಿ ಶಂಕರ್, ಅತಿಥಿಗಳು: ಮಲ್ಲಿಕಾ ಘಂಟಿ, ಪಲ್ಲವಿ ಜಿ., ಜಯದೇವಿ ಗಾಯಕ್ವಾಡ್, ಅನುಸೂಯಮ್ಮ, ಜಾನಕಿ ನಾಗವಾರ, ಭಾರತಿ ರಾಜಣ್ಣ, ನಿರ್ಮಲಾ, ಆಯೋಜನೆ: ಕರ್ನಾಟಕ ದಲಿತ ಮಹಿಳಾ ಒಕ್ಕೂಟ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಪುಸ್ತಕ ಸುಗ್ಗಿ: ಜಿ.ಕೆ. ಪ್ರಮೋದ್ ಅವರ ಉದ್ಯಮದ ಬಗ್ಗೆ ಸಂವಾದ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 11

ಕನ್ನಡದ ವ್ಯಂಗ್ಯಚಿತ್ರಕಾರರಿಂದ ವಾರ್ಷಿಕ ವ್ಯಂಗ್ಯಚಿತ್ರ ಪ್ರದರ್ಶನ: ಉದ್ಘಾಟನೆ: ಬಿ.ವಿ. ಪಾಂಡುರಂಗ ರಾವ್, ಅತಿಥಿ: ಜಿ.ಎನ್. ಮೋಹನ್, ಅಧ್ಯಕ್ಷತೆ: ನಂಜುಂಡಸ್ವಾಮಿ, ಗೌರವ ಸಮರ್ಪಣೆ: ವಿ.ಆರ್.ಸಿ. ಶೇಖರ್, ಬಿ.ಜಿ. ಗುಜ್ಜಾರಪ್ಪ, ಆಯೋಜನೆ: ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 11

ಪ್ರತಿಭಟನಾ ಸಮಾವೇಶ: 'ಕೆಪಿಎಸ್-ಮ್ಯಾಗ್ನೆಟ್' ಯೋಜನೆ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವುದನ್ನು ವಿರೋಧಿಸಿ, ಅತಿಥಿಗಳು: ಎಸ್.ಜಿ. ಸಿದ್ಧರಾಮಯ್ಯ, ನಿರಂಜನಾರಾಧ್ಯ, ಕವಿರಾಜ್, ಕಿಶೋರ್, ಬಿ. ಸುರೇಶ್, ಸಬಿಹಾ ಭೂಮಿಗೌಡ, ಲತಾ ಮೈಸೂರು, ಕಿರಣ್ ಗಾಜನೂರು, ಗುರುಪ್ರಸಾದ್ ಕೆರೆಗೋಡು, ವಿ.ಎನ್. ರಾಜಶೇಖರ್, ಅಲೀನಾ ಎಸ್., ಅಶ್ವಿನಿ ಕೆ.ಎಸ್., ಅಜಯ್ ಕಾಮತ್, ಆಯೋಜನೆ: ಎಐಡಿಎಸ್‌ಒ ಕರ್ನಾಟಕ ರಾಜ್ಯ ಸಮಿತಿ, ಸ್ಥಳ: ಮೈಲಾರ ಮಹಾದೇವಪ್ಪ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 11

ಸಂಗಮೇಶ ಬಾದವಾಡಗಿಯವರ ಅಭಿನಂದನಾ ಸಮಾರಂಭ ಹಾಗೂ 'ಸಂಗಮ' ಅಭಿನಂದನಾ ಗ್ರಂಥ ಜನಾರ್ಪಣೆ: ಸಾನ್ನಿಧ್ಯ; ಗವಿಸಿದ್ದೇಶ್ವರ ಸ್ವಾಮೀಜಿ, ಶಿವಶಾಂತವೀರ ಸ್ವಾಮೀಜಿ, ಉದ್ಘಾಟನೆ: ಜಗದೀಶ ಶೆಟ್ಟರ್, ಅಧ್ಯಕ್ಷತೆ: ಶಂಕರ್ ಬಿದರಿ, ಗ್ರಂಥ ಬಿಡುಗಡೆ: ಈಶ್ವರ್ ಖಂಡ್ರೆ, ಅತಿಥಿಗಳು: ರಾಮಲಿಂಗಾರೆಡ್ಡಿ, ಶರಣಬಸಪ್ಪ ದರ್ಶನಾಪುರ, ಶಿವರಾಜ ತಂಗಡಗಿ, ರಾಘವೇಂದ್ರ ಹಿಟ್ನಾಳ್, ಆಯೋಜನೆ: ಸಂಗಮೇಶ ಬಾದವಾಡಗಿ ಅಭಿನಂದನಾ ಸಮಿತಿ, ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ ಸಭಾಂಗಣ, ಆನಂದರಾವ್ ವೃತ್ತ, ಮಧ್ಯಾಹ್ನ 2.30

ಪುಟ್ಟರಾಜ ಗವಾಯಿ ಅವರ ಪುಣ್ಯ ಸ್ಮರಣೆ ಹಾಗೂ 16ನೇ ಸಂಗೀತೋತ್ಸವ: ಅಧ್ಯಕ್ಷತೆ: ಸಂತೋಷ್ ಹೆಗ್ಡೆ, ಉದ್ಘಾಟನೆ: ಸತೀಶ್ ಹಂಪಿಹೊಳಿ, ಅತಿಥಿ: ಪೂರ್ಣಾ ಆಚಾರ್ಯ, ಪ್ರಶಸ್ತಿ ಪುರಸ್ಕೃತರು: ವಾಗೀಶ್ ಭಟ್, ಪ್ರಭುರಾವ್ ಸೊನ್ನ, ಆಯೋಜನೆ: ಗುರು ಗಾನಲಹರಿ ಸಂಗೀತ ಅಕಾಡೆಮಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3



ಸುಶೀಲಮ್ಮ

ಕನ್ನಡ ಗೀತೆಗಳ ತರಬೇತಿ ಶಿಬಿರ ಮತ್ತು ಸಮೂಹ ಗಾಯನ ಹಾಗೂ ಎಸ್.ಜಿ. ಸುಶೀಲಮ್ಮ ಅವರಿಗೆ ಅಭಿನಂದನೆ: ಮಧುರ ಅಶೋಕ್ ಕುಮಾರ್, ಅತಿಥಿಗಳು: ಲಕ್ಷ್ಮೀನಾರಾಯಣ, ಮಂಜುನಾಥ, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಕುವೆಂಪು ರಂಗಮಂದಿರ, ಸುಮಂಗಲಿ ಸೇವಾಶ್ರಮ, ಚೋಳನಾಯಕನಹಳ್ಳಿ, ಬೆಳಿಗ್ಗೆ 10.30

ಬೃಹತ್ ಶೋಭಾಯಾತ್ರೆ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಆಯೋಜನೆ: ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿ, ಸ್ಥಳ: ಬಾಲಗಂಗಾಧರನಾಥ ಸ್ವಾಮೀಜಿ ಕ್ರಿಡಾಂಗಣ, ಎಂ.ಸಿ. ಲೇಔಟ್, ಗೋವಿಂದರಾಜನಗರ, ಸಂಜೆ 4

ಜೈನ್ ಸಾಹಿತ್ಯ ಸಿರಿ: 'ಕವಿಚಕ್ರವರ್ತಿ ರನ್ನ: ಕಾವ್ಯಾನುಸಂಧಾನ' ವಿಷಯದ ಬಗ್ಗೆ ಉಪನ್ಯಾಸ: ಬಾಳಾಸಾಹೇಬ ಲೋಕಾಪುರ, ಅಧ್ಯಕ್ಷತೆ: ಸಂತೋಷ್ ಹಾನಗಲ್, ಉಪಸ್ಥಿತಿ: ಮಮತ ಕಾಂತರಾಜ್, ನಾಗಶ್ರೀ ಮುಪ್ಪಾನೆ, ಆಯೋಜನೆ: ಜೈನ್ ಮಿಲನ್ ಬೆಂಗಳೂರು ಸೆಂಟ್ರಲ್ ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ಆನೆಬಂಡೆ ರಸ್ತೆ, ಜಯನಗರ 3ನೇ ಬಡಾವಣೆ, ಸಂಜೆ 4.15

'ನಮ್ಮ ಹಟ್ಟಿ...ಆತ್ಮಕತೆ...' ಪುಸ್ತಕ ಬಿಡುಗಡೆ: ಕೋಟಿಗಾನಹಳ್ಳಿ ರಾಮಯ್ಯ, ಅಧ್ಯಕ್ಷತೆ: ಬಸವರಾಜ ಕೌತಾಳ್, ಅತಿಥಿಗಳು: ಅಗ್ರಹಾರ ಕೃಷ್ಣಮೂರ್ತಿ, ನೆಲ್ಲುಕುಂಟೆ ವೆಂಕಟೇಶಯ್ಯ, ಗಂಗಮ್ಮ ಕೆಂಪಣ್ಣ, ಪುಸ್ತಕದ ಬಗ್ಗೆ ಮಾತು: ವಿ.ಎಲ್.ನರಸಿಂಹಮೂರ್ತಿ, ರವಿಕುಮಾರ ಬಾಗಿ, ಆಯೋಜನೆ: ರವಿಕುಮಾರ್ ಈಚಲಮರ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 4.30

'ಪುರಾಣ ಗೀತಂ' 17ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: 'ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ' ಪುರಸ್ಕೃತರು: ಗಣೇಶ್ ರಾಜಗೋಪಾಲನ್, ಕುಮರೇಶ್ ರಾಜಗೋಪಾಲನ್, 'ಸಾಮಗಾನ ವಸಂತ ಪ್ರಶಸ್ತಿ' ಪುರಸ್ಕೃತರು: ಸ್ಫೂರ್ತಿ ರಾವ್, ಅತಿಥಿಗಳು: ಎಸ್. ಆರ್. ರಾಮಕೃಷ್ಣ, ಎಂ.ಪಿ. ಶ್ಯಾಮ್, ಕರ್ನಾಟಕ ಶಾಸ್ತ್ರೀಯ ಸಂಗೀತ: ಹರಿಶಂಕರ್ ಕೆ.ಎಸ್., ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿ ಕಾವಲ್, ಸಂಜೆ 5

ದತ್ತಿ ಉಪನ್ಯಾಸ: 'ಯಶೋಧರ ಚರಿತೆ' ವಿಷಯದ ಬಗ್ಗೆ: ಪ್ರೊ.ಎಸ್.ಪಿ. ಅಜಿತ್ ಪ್ರಸಾದ್, ಅಧ್ಯಕ್ಷತೆ: ಆರ್. ಲಕ್ಷ್ಮೀನಾರಾಯಣ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 5

'ಬೀಯಿಂಗ್ ಹೈಪರ್ ಹ್ಯೂಮನ್' ಅಂತರರಾಷ್ಟ್ರೀಯ ಛಾಯಾಚಿತ್ರ ಪ್ರದರ್ಶನ: ಆಯೊಜನೆ: ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಡಿಸೈನ್ ಆ್ಯಂಡ್ ಟೆಕ್ನಾಲಜಿ, ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ, ಸಂಜೆ 6

ಹಿಂದೂ ಸಮಾಜೋತ್ಸವ: ಸಾನ್ನಿಧ್ಯ: ಸ್ವಾಮಿ ಗಿರಿಜಾತ್ಮಾನಂದ, ಅತಿಥಿಗಳು: ಟಿ.ಎ.ಪಿ. ಶೆಣೈ, ಮೀರಾ ಭಾಯಿ, ಆಯೋಜನೆ: ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿ, ಸ್ಥಳ: ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನ, ಕೆಂಗುಂಟೆ ಆಟದ ಮೈದಾನ, ಸಂಜೆ 6.30 (ಸಂಜೆ 4ರಿಂದ ಸಾಂಸ್ಕೃತಿಕ ಕಾರ್ಯಕ್ರಮ)

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಅಶ್ವತ್ಥ ಕಲಾ ಭವನ, ಎನ್.ಆರ್.ಕಾಲೊನಿ, ಸಂಜೆ 7

ಇಂಗ್ಲಿಷ್‌ನಲ್ಲಿ 'ಜಾಂಬವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಭಾಗವತಿಕೆ: ದೀಪಕ್ ತುಳುಪುಲೆ, ಚೆಂಡೆ: ಪೃಥ್ವಿ ಬಡೆಕ್ಕಿಲ, ಮದ್ದಳೆ: ಪ್ರಜೇಶ್ ದೇಂದಡ್ಕ, ಚಕ್ರತಾಳ: ಪ್ರದೀಪ್ ಬಿ., ಮುಮ್ಮೇಳ: ಆರತಿ ಪಟ್ರಮೆ, ಶ್ರೀಶಂಕರ ಜೋಯಿಸ ಬಿ., ಸಿಬಂತಿ ಪದ್ಮನಾಭ, ತೇಜು ವಿಘ್ನೇಶ, ಸಂವೃತ್ ಶರ್ಮಾ, ವಾರಿಧಿ, ಪ್ರಸ್ತುತಿ: ಯಕ್ಷದೀವಿಗೆ ತುಮಕೂರು, ಆಯೋಜನೆ: ದಿ ಮಿಥಿಕ್ ಸೊಸೈಟಿ, ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟೋರಿಕಲ್ ರಿಸರ್ಚ್, ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಮಾಗಡಿ ರಸ್ತೆ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಜೈಲು, ಬಿಎಂಟಿಸಿ, ಮೆಟ್ರೊ ಆಸ್ತಿ ಹರಾಜಿಗೆ ಸಜ್ಜು

ಹಲವು ವರ್ಷಗಳಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಶಾಲಾ–ಕಾಲೇಜು, ಹೋಟೆಲ್, ರಿಯಲ್ ಎಸ್ಟೇಟ್ ಸಂಸ್ಥೆಗಳು

• ಆರ್. ಮಂಜುನಾಥ್

ಬೆಂಗಳೂರು: ಹಲವು ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದೆ ಇರುವುದರಿಂದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ, ಬಿಎಂಟಿಸಿ, ಬಿಎಂಆರ್‌ಸಿಎಲ್, ಪೊಲೀಸ್ ಇಲಾಖೆಯ ಆಸ್ತಿಗಳನ್ನು ಹರಾಜು ಹಾಕಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸಜ್ಜಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಲವು ಇಲಾಖೆಗಳು ಕೋಟ್ಯಂತರ ರೂಪಾಯಿ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದು, ಅವುಗಳ ಹರಾಜಿಗೆ ಮೊದಲ ಬಾರಿಗೆ ಜಿಬಿಎ ನೋಟಿಸ್ ಜಾರಿ ಮಾಡಿದೆ. ಇವುಗಳ ಜೊತೆಗೆ, ರಿಯಲ್ ಎಸ್ಟೇಟ್, ಶಾಲಾ–ಕಾಲೇಜು, ಹೋಟೆಲ್, ಐಟಿ–ಬಿಟಿ ಕಂಪನಿಗಳು ಸೇರಿದಂತೆ ನಾಗರಿಕರ ಆಸ್ತಿಗಳನ್ನೂ ಹರಾಜು ಮಾಡಲಿದೆ.

ಜಿಬಿಎ ವ್ಯಾಪ್ತಿಯಲ್ಲಿ ಏಳು ಸಾವಿರಕ್ಕೂ ಹೆಚ್ಚು ಆಸ್ತಿಗಳಿಂದ ₹437 ಕೋಟಿ ತೆರಿಗೆ ಹಲವು ವರ್ಷಗಳಿಂದ ಬಾಕಿ ಇದೆ. ಇದನ್ನು ವಸೂಲಿ ಮಾಡಲು ಆ ಆಸ್ತಿಗಳನ್ನು ಹರಾಜು ಮಾಡಲು ನಿರ್ಧರಿಸಲಾಗಿದೆ. ಎಲ್ಲ ಸುಸ್ತಿದಾರರಿಗೆ ಹರಾಜು ನೋಟಿಸ್ ಜಾರಿ ಮಾಡಿದ್ದು, ಆಯಾ ನಗರ ಪಾಲಿಕೆಗಳ ಕಂದಾಯ ಅಧಿಕಾರಿ, ಜಂಟಿ ಆಯುಕ್ತ, ವಲಯ ಉಪ ಆಯುಕ್ತರಿಗೆ ಫೆ.17ರಂದು ಹರಾಜು ಪ್ರಕ್ರಿಯೆ ನಡೆಸುವಂತೆ ಸೂಚಿಸಲಾಗಿದೆ.

ಕಳೆದ ವರ್ಷವೂ ಪ್ರಕ್ರಿಯೆ: ತೆರಿಗೆ ಬಾಕಿ ಉಳಿಸಿಕೊಂಡ ಆಸ್ತಿಗಳನ್ನು ಹರಾಜು ಮಾಡುವ ಪ್ರಕ್ರಿಯೆ 2025ರ ಫೆಬ್ರುವರಿಯಲ್ಲೂ ನಡೆದಿತ್ತು. ಆಗಿನ ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ 608 ಆಸ್ತಿಗಳನ್ನು ಹರಾಜು ಮಾಡಿ ₹30 ಕೋಟಿ ತೆರಿಗೆಯನ್ನು ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಆ ಸಂದರ್ಭದಲ್ಲಿ ಬಹುತೇಕರು ಆಸ್ತಿ ತೆರಿಗೆಯನ್ನು ಪಾವತಿಸಿದ್ದರಿಂದ ಹರಾಜು ಪ್ರಕ್ರಿಯೆ ನಿಲ್ಲಿಸಲಾಗಿತ್ತು.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ₹2 ಲಕ್ಷಕ್ಕಿಂತ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಂದ ಸುಮಾರು ₹390 ಕೋಟಿ ಪಾವತಿಯಾಗಬೇಕಿದೆ. ಹರಾಜಿನಂತಹ ಬಲವಂತದ ವಸೂಲಾತಿ ಕ್ರಮವನ್ನು ತಪ್ಪಿಸಲು ಆಸ್ತಿ ತೆರಿಗೆದಾರರು ಬಾಕಿ ಪಾವತಿಸಬೇಕು’ ಎಂದು ಮುನೀಶ್ ಮೌದ್ಗಿಲ್ ಆಗ ಹೇಳಿದ್ದರು. ಈಗ, ಏಳು ಸಾವಿರ ಆಸ್ತಿಗಳನ್ನು ಗುರುತಿಸಿ ಹರಾಜು ಪ್ರಕ್ರಿಯೆ ನಡೆಸಲು ಮುನೀಶ್ ಮೌದ್ಗಿಲ್ ಅವರೇ ಸೂಚಿಸಿದ್ದಾರೆ.

ಅತಿಹೆಚ್ಚು ತೆರಿಗೆ ಬಾಕಿಯಿರುವ ಆಸ್ತಿಗಳು

ಆಸ್ತಿ ಮಾಲೀಕರು	ಬಾಕಿ
ಚಾಲೆಟ್ ಹೋಟೆಲ್ಸ್	₹39.56 ಕೋಟಿ
ಗಂಗಾಧರ್, ರಾಮಚಂದ್ರ, ಟಿ. ಆನಂದ್, ಮಂಜುನಾಥ್	₹16.92 ಕೋಟಿ
ಬಿಎಂಆರ್‌ಸಿಎಲ್	₹8.77 ಕೋಟಿ
ರುಕ್ಮಿಣಿ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್	₹8.17 ಕೋಟಿ
ಮುತ್ತಯ್ಯ ಎ.ಎಲ್, ಅಣ್ಣಾಮಲೈ	₹8.15 ಕೋಟಿ
ಎಂ.ಡಿ. ಬಿಎಂಟಿಸಿ	₹5.61 ಕೋಟಿ
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	₹5.38 ಕೋಟಿ
ಬೂಪೇಶ್ ರೆಡ್ಡಿ, ಜಯರಾಂ ರೆಡ್ಡಿ, ದಯಾನಂದ ರೆಡ್ಡಿ	₹5.35 ಕೋಟಿ
ಬ್ರಿಗೇಡ್ ಫೌಂಡೇಷನ್	₹4.31 ಕೋಟಿ
ಬಾಲ್ಡ್‌ವಿನ್ ಬಾಯ್ಸ್ ಹೈಸ್ಕೂಲ್	₹4.03 ಕೋಟಿ



ರಾಷ್ಟ್ರಪತಿ, ರಾಜ್ಯಪಾಲರ ಹೆಸರಿನಲ್ಲಿರುವ ಆಸ್ತಿಗಳ ಹರಾಜಿಗೂ ನಿರ್ಧಾರ

ಮಲ್ಲೇಶ್ವರದ 11ನೇ ಅಡ್ಡರಸ್ತೆಯಲ್ಲಿರುವ ಬಾಹ್ಯಾಕಾಶ ಇಲಾಖೆ ಆಸ್ತಿಯ ₹11.38 ಲಕ್ಷ ತೆರಿಗೆ ಬಾಕಿ ಇದೆ. ಈ ಆಸ್ತಿ ರಾಷ್ಟ್ರಪತಿಯವರ ಹೆಸರಿನಲ್ಲಿದ್ದು, ಇದನ್ನು ಹರಾಜು ಹಾಕಲು ಅವರ ಹೆಸರಿನಲ್ಲೇ ನೋಟಿಸ್ ಜಾರಿ ಮಾಡಲಾಗಿದೆ. ಈ ಆಸ್ತಿಯ ಸರ್ಕಾರಿ ಮೌಲ್ಯ ₹16.96 ಕೋಟಿ.

ಮಲ್ಲೇಶ್ವರದ 3ನೇ ಅಡ್ಡರಸ್ತೆಯಲ್ಲಿರುವ ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಚೇರಿಯಿರುವ ಆಸ್ತಿಯ ತೆರಿಗೆ ₹44.55 ಲಕ್ಷ ಬಾಕಿ ಇದ್ದು, ₹32.66 ಕೋಟಿ ಮೌಲ್ಯದ ಆ ಆಸ್ತಿಯನ್ನು ಹರಾಜು ಮಾಡಲಾಗುತ್ತಿದೆ. ಇದು ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿದ್ದು, ಅವರ ಹೆಸರಿಗೇ ಹರಾಜು ನೋಟಿಸ್ ಜಾರಿಯಾಗಿದೆ. ಬೊಮ್ಮನಹಳ್ಳಿಯಲ್ಲಿರುವ ಸರ್ವೆ ಆಫ್ ಇಂಡಿಯಾದ ಆಸ್ತಿಯ ತೆರಿಗೆ ₹23.51 ಲಕ್ಷ ಬಾಕಿ ಇದ್ದು, ಆಸ್ತಿಯನ್ನು ಹರಾಜು ಹಾಕಲು ಜಿಬಿಎ ನಿರ್ಧರಿಸಿದೆ.

ಪರಪ್ಪನ ಅಗ್ರಹಾರ ಜೈಲಿಗೆ ಎರಡು ನೋಟಿಸ್

ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹವು ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದು, ಆಸ್ತಿ ಹರಾಜಿಗೆ ಎರಡು ನೋಟಿಸ್ ಜಾರಿ ಮಾಡಲಾಗಿದೆ. ಪರಪ್ಪನ ಅಗ್ರಹಾರದ ಹಲವು ಸರ್ವೆ ನಂಬರ್‌ಗಳಲ್ಲಿರುವ ಕೇಂದ್ರ ಕಾರಾಗೃಹ ₹56.43 ಲಕ್ಷ ತೆರಿಗೆ ಪಾವತಿಸಬೇಕಿದೆ. ಇದರ ಆಸ್ತಿ ಮೌಲ್ಯ ₹1,774.09 ಕೋಟಿ. ಇದಲ್ಲದೆ, ₹15.10 ಲಕ್ಷ ತೆರಿಗೆ ಬಾಕಿಗಾಗಿ, ₹85.76 ಕೋಟಿ ಮೌಲ್ಯದ ಆಸ್ತಿಯನ್ನು ಹರಾಜು ಮಾಡಲು ಜಿಬಿಎ ಸಜ್ಜಾಗಿದೆ.




ತೆರಿಗೆ ಬಾಕಿ ಉಳಿಸಿಕೊಂಡಿರುವ ಪ್ರಮುಖ ಸಂಸ್ಥೆಗಳು

- ಬೆಂಗಳೂರು ಮಹಾನಗರಸಾರಿಗೆ ಸಂಸ್ಥೆ (ಬಿಎಂಟಿಸಿ)
- ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್)
- ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಚೇರಿ
- ಪೊಲೀಸ್ ಕ್ವಾಟ್ರಸ್, ಶಾಂತಿನಗರ
- ಉಪ ಪೊಲೀಸ್ ಆಯುಕ್ತರ ಕಚೇರಿ– ಉತ್ತರ, ಯಲಹಂಕ
- ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಇಲಾಖೆ, ರಾಜರಾಜೇಶ್ವರಿನಗರ
- ಅಗ್ನಿಶಾಮಕ ಮತ್ತು ಗೃಹರಕ್ಷಕ ಇಲಾಖೆ, ಮಲ್ಲೇಶ್ವರ
- ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಅಪಾರ್ಟ್‌ಮೆಂಟ್, ಯಲಹಂಕ
- ಕಿರ್ಲೋಸ್ಕರ್ ಸಿಸ್ಟಮ್ಸ್, ಬ್ಯಾಟರಾಯನಪುರ
- ಕರ್ನಾಟಕ ವಕ್ಫ್ ಮಂಡಳಿ, ಎಸ್‌ಆರ್‌ಟಿ ರಸ್ತೆ, ಗಾಂಧಿನಗರ
- ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಶೇಷಾದ್ರಿ ರಸ್ತೆ
- ಪಿಯು ಬೋರ್ಡ್, ಮಲ್ಲೇಶ್ವರ
- ಗುಂಡಾಂಜನೇಯ ಸ್ವಾಮಿ ದೇವಸ್ಥಾನ, ಬ್ಯಾಟರಾಯನಪುರ

ಯಾವ ಪಾಲಿಕೆಯಲ್ಲಿ ಎಷ್ಟು ಆಸ್ತಿ ತೆರಿಗೆ ಬಾಕಿ? (₹ ಕೋಟಿಗಳಲ್ಲಿ)

ನಗರ ಪಾಲಿಕೆ	ಆಸ್ತಿಗಳು	ಒಟ್ಟು ಬಾಕಿ
ಪೂರ್ವ	1,615	119.90
ಪಶ್ಚಿಮ	1,504	84.23
ಕೇಂದ್ರ	1,398	81.26
ಉತ್ತರ	1,156	79.83
ದಕ್ಷಿಣ	1,347	72.30
ಒಟ್ಟು	7,020	437.55

ಹರಾಜು ಅಂತಿಮ ಹೆಜ್ಜೆ: ಮುನೀಶ್



‘ಆಸ್ತಿ ತೆರಿಗೆ ಪಾವತಿಸಲು ಆಸ್ತಿ ಮಾಲೀಕರಿಗೆ ಸಾಕಷ್ಟು ಎಚ್ಚರಿಕೆ ನೀಡಲಾಗಿದೆ. ಡಿಮ್ಯಾಂಡ್ ನೋಟಿಸ್, ಜಪ್ತಿ ಆದೇಶ, ಹಲವು ತಿಂಗಳಿಂದ ಪ್ರತಿದಿನ ಎಸ್‌ಎಂಎಸ್ ಕಳುಹಿಸಲಾಗಿದೆ. ಈ ನೋಟಿಸ್‌ಗಳ ವಿರುದ್ಧ ಆನ್‌ಲೈನ್‌ನಲ್ಲಿ (BBMP e-Nyaya) ಮೇಲ್ಮನವಿ ಸಲ್ಲಿಸಲೂ ಅವಕಾಶ ನೀಡಲಾಗಿತ್ತು. ಅದಕ್ಕೆ ಸ್ಪಂದಿಸದ ಮಾಲೀಕರ ಆಸ್ತಿಗಳನ್ನು ಹರಾಜು ಮಾಡಲು ಅಂತಿಮ ಹೆಜ್ಜೆ ಇರಿಸಲಾಗಿದೆ’ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಹರಾಜು ಪ್ರಕ್ರಿಯೆಯನ್ನು ತಪ್ಪಿಸಿಕೊಳ್ಳಬೇಕಾದರೆ, ಮಾಲೀಕರು ಕೂಡಲೇ ತೆರಿಗೆ ಪಾವತಿಸಿ, ಅದರ ಪ್ರತಿಯನ್ನು ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿ ಕಚೇರಿಗೆ ತಲುಪಿಸಬೇಕು ಎಂದರು.

ಚಿಟಿಕೆ ಸುದ್ದಿ

ಅಂಗವಿಕಲರ ಜಾಥಾ 19ರಿಂದ

ಬೆಂಗಳೂರು: ಅಂಗವಿಕಲರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇ 5ರಷ್ಟು ಮೀಸಲಾತಿ ನೀಡುವುದೂ ಸೇರಿದಂತೆ ಆರು ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಫೆ.19ರಿಂದ 23ರವರೆಗೆ ರಾಜ್ಯದಾದ್ಯಂತ ಜಾಥಾ ನಡೆಸಲಾಗುವುದು. 23ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟ ತಿಳಿಸಿದೆ.

ಒಕ್ಕೂಟದ ರಾಜ್ಯ ಅಧ್ಯಕ್ಷ ಶಿವಗೇರಿ ಅತ್ತನೂರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಬಜೆಟ್‌ನಲ್ಲಿ ಅಂಗವಿಕಲರ ಪಾಲು ಒದಗಿಸಬೇಕು. ಶಕ್ತಿ ಯೋಜನೆಯಡಿ ಉಚಿತ ಬಸ್ ಪಾಸ್ ನೀಡಬೇಕು. ವಿಆರ್‌ಡಬ್ಲ್ಯು, ಯುಆರ್‌ಡಬ್ಲ್ಯು, ಎಂಆರ್‌ಡಬ್ಲ್ಯು ಕಾರ್ಯಕರ್ತರಿಗೆ ಕನಿಷ್ಠ ವೇತನ ಜಾರಿಗೊಳಿಸಬೇಕು. ವೈಜ್ಞಾನಿಕವಾಗಿ ಮಾಸಾಶನ ಹೆಚ್ಚಿಸಬೇಕು. ಸರ್ಕಾರಿ, ಖಾಸಗಿ ಶಾಲೆಗಳಲ್ಲಿ ಅಂಗವಿಕಲರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡಬೇಕು ಎಂಬುದು ನಮ್ಮ ಬೇಡಿಕೆ’ ಎಂದು ಮಾಹಿತಿ ನೀಡಿದರು.

ಒಕ್ಕೂಟದ ಕಾರ್ಯದರ್ಶಿ ಅರುಣಕುಮಾರ್ ಎಸ್., ಸಹ ಕಾರ್ಯದರ್ಶಿ ಉಮೇಶ, ಸದಸ್ಯರಾದ ರಘು ಹುಬ್ಬಳ್ಳಿ, ತಿಪ್ಪಮ್ಮ, ಮಂಜುಳಾ, ರವಿ ಉಪಸ್ಥಿತರಿದ್ದರು.

ಮಹಾವಿಹಾರ ಮುಕ್ತಿ ಆಂದೋಲನ 12ಕ್ಕೆ

ಬೆಂಗಳೂರು: ಬುದ್ಧಗಯಾದಲ್ಲಿ ಇರುವ ಮಹಾಬೋಧಿ, ಮಹಾವಿಹಾರದ ಆಡಳಿತವನ್ನು ಬೌದ್ಧರಿಗೆ ಒಪ್ಪಿಸಬೇಕು ಎಂದು ಆಗ್ರಹಿಸಿ ಫೆ.12ರಂದು ದೆಹಲಿ ಚಲೊ ನಡೆಯಲಿದ್ದು, ರಾಜ್ಯದಿಂದ 50 ಸಾವಿರ ಜನ ಪಾಲ್ಗೊಳ್ಳಲಿದ್ದಾರೆ ಎಂದು ನಳಂದ ಉಪಾಸಿಕಾ ಮತ್ತು ಉಪಾಸಕಾ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಭಂತೆ ಬೋಧಿದತ್ತ ಥೇರ ತಿಳಿಸಿದರು.

ಬೋಧಗಯಾ ದೇವಾಲಯ (ಬಿ.ಟಿ) ಕಾಯ್ದೆ–1949 ಅನ್ನು ರದ್ದುಗೊಳಿಸಿ ಬೌದ್ಧರ ಪವಿತ್ರ ಸ್ಥಳವನ್ನು ಬೌದ್ಧರಿಗೇ ನೀಡಬೇಕು ಎಂದು ಒತ್ತಾಯಿಸಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ಮಿಷನ್ ಮಹಾಬೋಧಿ ಮಹಾವಿಹಾರ ಮುಕ್ತಿ ಆಂದೋಲನ ನಡೆಯಲಿದೆ ಎಂದು ವಿವರಿಸಿದರು.



ಆಂದೋಲನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಮುಂಚಿಣಿ ಭಂತೆ ವಿನಾಚಾರ್ಯ ಪಾಲ್ಗೊಳ್ಳಲಿದ್ದಾರೆ ಎಂದರು.

ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಭಂತೆ ವರಜ್ಯೋತಿ, ಭಂತೇನ್ಯಾನ ಲೋಕ, ಭಂತೆ ಅಮರ ಜ್ಯೋತಿ, ಪ್ರಕಾಶ, ರಾಹುಲ್ ಹುಲಿಮನಿ, ಶಿವಾನಂದ ಶಿಂಧೆ, ಮುರುಗೇಶ್ ಉಪಸ್ಥಿತರಿದ್ದರು.

‘ತಿಮ್ಮಾಪುರ ಗುರಿ ಮಾಡುವುದು ಸಲ್ಲ’

ಬೆಂಗಳೂರು: ದಲಿತ ಸಮುದಾಯಕ್ಕೆ ಸೇರಿದ ಆರ್.ಬಿ. ತಿಮ್ಮಾಪುರ ಅವರನ್ನು ಗುರಿ ಮಾಡಿ, ಬಿಜೆಪಿಯು ರಾಜೀನಾಮೆಗೆ ಒತ್ತಾಯಿಸುತ್ತಿರುವುದು ಸರಿಯಲ್ಲ ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯ ಪ್ರಧಾನ ಸಂಚಾಲಕ ಬಸವರಾಜ್ ಕೌತಾಳ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ‘ನಾವು ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳುತ್ತಿಲ್ಲ. ಆದರೆ, ಶೋಷಿತ ಸಮುದಾಯದ ನಾಯಕರನ್ನು ಗುರಿ ಮಾಡುವುದನ್ನು ಒಪ್ಪಲಾಗದು. ಪ್ರಕರಣದ ತನಿಖೆ ನಡೆಸಲಿ. ತಪ್ಪಿತಸ್ಥ ಎಂದು ಕಂಡು ಬಂದರೆ ಕ್ರಮ ಕೈಗೊಳ್ಳಲಿ’ ಎಂದು ಆಗ್ರಹಿಸಿದರು.

‘ಸಚಿವ ತಿಮ್ಮಾಪುರ ಇಲಾಖೆಯಲ್ಲಿ ರಚನಾತ್ಮಕ ಕೆಲಸ ಮಾಡುತ್ತಿದ್ದಾರೆ. ಅಬಕಾರಿ ಪರವಾನಗಿಯಲ್ಲಿ ದಲಿತರಿಗೂ ಪ್ರಾತಿನಿಧ್ಯ ನೀಡುತ್ತಿದ್ದಾರೆ. ಇದನ್ನು ಕೆಲವರು ಸಹಿಸುತ್ತಿಲ್ಲ’ ಎಂದು ದೂರಿದರು.

ಒಕ್ಕೂಟದ ಡಿ.ಟಿ. ವೆಂಕಟೇಶ, ವೇಣುಗೋಪಾಲ ಮೌರ್ಯ, ಮಂಜುನಾಥ ಮರಾಠ, ನಿಂಗರಾಜ ಗುಳ್ಳೆ ಉಪಸ್ಥಿತರಿದ್ದರು.

ಆರ್‌ಎನ್‌ಎಸ್‌ಐಟಿ ಎಂಸಿಎಗೆ 6 ರ‍್ಯಾಂಕ್

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಘೋಷಿಸಿದ ಎಂಬಿಎ ವಿಭಾಗದ 10 ರ‍್ಯಾಂಕ್‌ಗಳಲ್ಲಿ ಪ್ರಥಮ ರ‍್ಯಾಂಕ್ ಸೇರಿದಂತೆ ಒಟ್ಟು ಆರು ರ‍್ಯಾಂಕ್‌ಗಳು ಆರ್‌ಎನ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿದ್ಯಾರ್ಥಿಗಳ ಪಾಲಾಗಿವೆ.

ಎಚ್.ಸಿ.ಕಾವ್ಯಾ– ಪ್ರಥಮ ರ‍್ಯಾಂಕ್ (ಚಿನ್ನದ ಪದಕ), ಆರ್.ಪಿ.ಅನನ್ಯಾ (4), ಶಿವಾನಿ ಸೀತಾರಾಮ ನಾಯಕ್ (5), ಬಿ.ಸಿ.ಐಶ್ವರ್ಯಾ (7) ಸ್ಮಿತಾ ಸುಧಾಕರ್ ಹೆಗಡೆ (8), ಸೀಮಾ ಎಚ್. ಜೈನ್ (10) ರ‍್ಯಾಂಕ್ ಪಡೆದಿದ್ದಾರೆ.

2001ರಲ್ಲಿ ಸ್ಥಾಪಿತಗೊಂಡು ಪ್ರಸಕ್ತ ವರ್ಷ ರಜತ ಮಹೋತ್ಸವ ಆಚರಿಸುತ್ತಿರುವ ಆರ್‌ಎನ್‌ಎಸ್‌ಐಟಿ ಶೈಕ್ಷಣಿಕ ಶ್ರೇಷ್ಠತೆ, ಪ್ಲೇಸ್‌ಮೆಂಟ್, ಸಂಶೋಧನೆ, ನಾವೀನ್ಯ ಹಾಗೂ ಸಹಪಠ್ಯ ಚಟುವಟಿಕೆಗಳಿಗೆ ಹೆಸರುವಾಸಿಯಾಗಿದೆ ಎಂದು ಪ್ರಕಟಣೆ ಹೇಳಿದೆ.

‘ಮೌಲ್ಯಯುತ ಶಿಕ್ಷಣ ಅಗತ್ಯ’

ಪದವಿ ಪ್ರದಾನ ಸಮಾರಂಭದಲ್ಲಿ ಆದಿಚುಂಚನಗಿರಿ ಶ್ರೀ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಲ್ಯದಲ್ಲಿ ಕಲಿಯುವ ಉತ್ತಮ ಸಂಸ್ಕಾರ, ಶಿಕ್ಷಣ ಜೀವನದ ಕೊನೆಯವರೆಗೂ ಇರುತ್ತದೆ. ಹಾಗಾಗಿ, ಶಿಕ್ಷಣ ಸಂಸ್ಥೆಗಳು ಸಂಸ್ಕಾರ ಒಳಗೊಂಡ ಮೌಲ್ಯಯುತ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕು’ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಎಚ್‌ಬಿಆರ್ ಲೇಔಟ್‌ನ ಎಚ್‌ಎಂಆರ್ ಸಮೂಹ ವಿದ್ಯಾ ಸಂಸ್ಥೆ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಜನರಿಗೆ ವೈಜ್ಞಾನಿಕ ಮನೋಭಾವದಷ್ಟೇ ಸಮಾಜದ ಮೌಲ್ಯಗಳು ಮುಖ್ಯ. ವಿಶ್ವದ ದೇಶಗಳು ವಿಜ್ಞಾನ, ತಂತ್ರಜ್ಞಾನದಲ್ಲಿ ಎಷ್ಟೇ ಸಾಧನೆ ಮಾಡಿದರೂ ನೆಲದ ಸಂಸ್ಕಾರ, ಸಂಸ್ಕೃತಿ, ನಂಬಿಕೆ, ಮೌಲ್ಯಗಳ ಬೇರುಗಳನ್ನು ಜತನದಿಂದ ಕಾಪಾಡಿಕೊಳ್ಳಬೇಕು. ಆಗ ಮಾತ್ರ ವಿಜ್ಞಾನದ ಸಾಧನೆಗಳು ಸಾರ್ಥಕ ಆಗುತ್ತವೆ. ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗುತ್ತದೆ’ ಎಂದರು.



ಎಚ್‌ಎಂಆರ್ ಸಮೂಹ ವಿದ್ಯಾಸಂಸ್ಥೆ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಎಚ್.ಎಂ.ರಮೇಶ್ ಗೌಡ, ಸೀಮಾಂತ್‌ಕುಮಾರ್ ಸಿಂಗ್, ನಿರ್ಮಲಾನಂದನಾಥ ಸ್ವಾಮೀಜಿ, ನ್ಯಾಯಮೂರ್ತಿ ಬಿ.ವೀರಪ್ಪ, ರಮ್ಯಾ ರಮೇಶ್ ಭಾಗವಹಿಸಿದ್ದರು

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಮಾತನಾಡಿ, ‘ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಉತ್ತಮ ಕೆಲಸ ಪಡೆದರೆ ಸಾಲದು, ಭ್ರಷ್ಟಾಚಾರಕ್ಕೆ ಆಸ್ಪದ ನೀಡದೆ ಸಮಾಜದ ಜನರ ಋಣ ತೀರಿಸುವ ಪ್ರಾಮಾಣಿಕ ಅಧಿಕಾರಿ, ಸಿಬ್ಬಂದಿಗಳಾಗಬೇಕು. ಪ್ರಸ್ತುತ ಸನ್ನಿವೇಶದಲ್ಲಿ ಅಂತಹ ಪ್ರಾಮಾಣಿಕರ ಸಂಖ್ಯೆ ಕ್ಷೀಣಿಸುತ್ತಿರುವುದು ಆತಂಕದ ವಿಷಯ’ ಎಂದು ಹೇಳಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಸಮಾಜದಲ್ಲಿ ನಡೆಯುತ್ತಿರುವ ಅಪರಾಧ ಚಟುವಟಿಕೆ ಗಳ ಬಗ್ಗೆ ಮಾಹಿತಿ ನೀಡಿ, ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು. ವಿದ್ಯಾಸಂಸ್ಥೆ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ, ಸಿಇಒ ಎ.ರಮ್ಯಾ ರಮೇಶ್, ಪ್ರಾಂಶುಪಾಲರಾದ ಅಶ್ವಿನಿ ಆನಂದ್ ರತ್ನಮಾಲಾ ಉಪಸ್ಥಿತರಿದ್ದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿದ್ಯಾಶಂಕರ್

ಎಂಜಿನಿಯರಿಂಗ್: ‘ಮೂಲ ಮಾದರಿ’ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್‌ನಲ್ಲಿ ‘ನಾವೀನ್ಯ ಮತ್ತು ವಿನ್ಯಾಸ ಚಿಂತನಾ’ ವಿಷಯ ತೆಗೆದುಕೊಳ್ಳುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದು ಮೂಲ ಮಾದರಿ ನಿರ್ಮಿಸುವುದನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಕಡ್ಡಾಯಗೊಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಟಿಯು ಕುಲಪತಿ ಎಸ್.ವಿದ್ಯಾಶಂಕರ್, ನಾವೀನ್ಯ ಮತ್ತು ವಿನ್ಯಾಸ ಚಿಂತನಾ ವಿಷಯವನ್ನು ಈಗಾಗಲೇ ಎಂಜಿನಿಯರಿಂಗ್ ಕಾಲೇಜುಗಳ ಮೊದಲ ಸೆಮಿಸ್ಟರ್‌ನಲ್ಲಿ ಬೋಧಿಸಲಾಗುತ್ತಿದೆ. ಆದರೆ, ವಿಷಯ ಕುರಿತು ಯಾವುದೇ ನೈಜ ಕಾರ್ಯ ನಡೆಯುತ್ತಿಲ್ಲ. ವಿದ್ಯಾರ್ಥಿಗಳು ಕೆಲಸ ಮಾಡದೆ ಇದ್ದರೂ ಅವರಿಗೆ ಅಂಕಗಳನ್ನು ನೀಡಲಾಗುತ್ತಿದೆ. ಅದಕ್ಕಾಗಿ ಮೂಲ ಮಾದರಿ ನಿರ್ಮಿಸುವುದನ್ನು ಕಡ್ಡಾಯಗೊಳಿಸಲಾಗುತ್ತಿದೆ ಎಂದರು.

‘ವಿದ್ಯಾರ್ಥಿಗಳು ತಯಾರಿಸಿದ ಮೂಲ ಮಾದರಿಗಳ ಫೋಟೊ ಮತ್ತು ವಿಡಿಯೊಗಳನ್ನು ಅಪ್‌ಲೋಡ್ ಮಾಡಲು ಆ್ಯಪ್ ಅಭಿವೃದ್ಧಿಪಡಿಸಲು ವಿಶ್ವವಿದ್ಯಾಲಯ ಯೋಜನೆ ರೂಪಿಸಿದೆ. ವಿದ್ಯಾರ್ಥಿಗಳು ಮೊದಲು ಒಂದು ಸಮಸ್ಯೆಯನ್ನು ಗುರುತಿಸಬೇಕು. ಅದರ ಬಗ್ಗೆ ಯೋಚಿಸಿ ವಿಶ್ಲೇಷಣೆ ಮಾಡಿ, ನಂತರ ಪರಿಹಾರವನ್ನು ರೂಪಿಸಬೇಕು. ಇದರಿಂದ ನೈಜ ಕಲಿಕೆ ಸಾಧ್ಯವಾಗುತ್ತದೆ’ ಎಂದು ಹೇಳಿದರು.



ಒಪ್ಪಂದ ಪತ್ರವನ್ನು ಸಿಇಒ ಚಂದ್ರಶೇಖರ ನಾಗರಾಜು ಹಾಗೂ ಕುಲಪತಿ ಡಾ.ಎಸ್.ವಿದ್ಯಾಶಂಕರ್ ಪ್ರದರ್ಶಿಸಿದರು

ಪ್ರಸ್ತುತ ವಿಟಿಯುನ ನಾಲ್ಕು ಕೇಂದ್ರಗಳು ಮತ್ತು ವಿಶ್ವವಿದ್ಯಾಲಯದ ಮೂರು ಅಂಗ ಕಾಲೇಜುಗಳಲ್ಲಿ ಇದೇ ಮಾದರಿಯ ವ್ಯವಸ್ಥೆ ಜಾರಿಯಲ್ಲಿದ್ದು, ಸುಮಾರು 2,000 ವಿದ್ಯಾರ್ಥಿಗಳು ತಮ್ಮ ಕಲ್ಪನೆಗಳ ಆಧಾರದಲ್ಲಿ ಮೂಲ ಮಾದರಿಗಳನ್ನು ನಿರ್ಮಿಸುತ್ತಿದ್ದಾರೆ ಎಂದರು.

ವಿಟಿಯು ಬೆಂಗಳೂರು ಪ್ರಾದೇಶಿಕ ಕಚೇರಿಯ ನಿರ್ದೇಶಕ ಎಚ್.ಆರ್.ಸುದರ್ಶನ ರೆಡ್ಡಿ, ಚಿಯಾಕ್ ಎಎಸ್‌ಐನ ಸಹ ಸಂಸ್ಥಾಪಕ ಜೆ.ಎಚ್.ಪ್ರತೀಕ್, ಬೆಂಗಳೂರು ಪ್ರಾದೇಶಿಕ ಕಚೇರಿಯ ವಿಶೇಷಾಧಿಕಾರಿ ಅಜಿತ್ ಪದ್ಯಾಣ ಉಪಸ್ಥಿತರಿದ್ದರು.

ಕೃತಕ ಅತ್ಯುನ್ನತ ಬುದ್ಧಿಮತ್ತೆ ವಿಟಿಯು ಒಪ್ಪಂದ

ಕೃತಕ ಬುದ್ಧಿಮತ್ತೆಯನ್ನು(ಎಐ) ಮೀರಿಸುವ ಕೃತಕ ಅತ್ಯುನ್ನತ ಬುದ್ಧಿಮತ್ತೆ (ಎಎಸ್‌ಐ) ಅಳವಡಿಕೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮುಂದಾಗಿದ್ದು, ಬ್ರಿಟನ್‌ನ ‘ಚಿಯಾಕ್ ಎಎಸ್‌ಐ’ ಕಂಪನಿ ಜತೆ ಶುಕ್ರವಾರ ಒಪ್ಪಂದ ಮಾಡಿಕೊಂಡಿದೆ.

ಒಪ್ಪಂದಕ್ಕೆ ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಮತ್ತು ಚಿಯಾಕ್ ಎಎಸ್‌ಐ ಸಿಇಒ ಚಂದ್ರಶೇಖರ ನಾಗರಾಜು ಪರಸ್ಪರ ಸಹಿ ಮಾಡಿದರು.

ಒಪ್ಪಂದದ ನಂತರ ಮಾತನಾಡಿದ ವಿದ್ಯಾಶಂಕರ್, ‘ಮುಂದಿನ ಶೈಕ್ಷಣಿಕ ಸಾಲಿನಿಂದ ವಿಟಿಯು ತನ್ನ ಪಠ್ಯಕ್ರಮದಲ್ಲಿ ಭವಿಷ್ಯದ ತಂತ್ರಜ್ಞಾನ–ಎಎಸ್‌ಐ ಪರಿಚಯಿಸಲಿದ್ದು, ಚಿಯಾಕ್ ಸಂಸ್ಥೆ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಇಂಟರ್ನ್‌ಶಿಪ್‌ಗಳು ಹಾಗೂ ಪರಿಣಾಮಕಾರಿ ಬೋಧನೆಗಾಗಿ ಎಂಜಿನಿಯರಿಂಗ್ ಕಾಲೇಜು ಉಪನ್ಯಾಸಕರಿಗೆ ಪಠ್ಯಪುಸ್ತಕಗಳನ್ನು ಒದಗಿಸಲಿದೆ. ಈ ಪಠ್ಯಪುಸ್ತಕಗಳು ಸಂಶೋಧನೆ ಮುಂದುವರಿದಂತೆ ಸ್ವಯಂ ನವೀಕರಣಗೊಳ್ಳಲಿವೆ’ ಎಂದರು.

ಚಿಯಾಕ್ ಸಿಇಒ ಚಂದ್ರಶೇಖರ ನಾಗರಾಜು ಮಾತನಾಡಿ, ‘ರಾಷ್ಟ್ರೀಯ ಭದ್ರತಾ ದೃಷ್ಟಿಯಿಂದ 2030ರೊಳಗೆ ಎಎಸ್‌ಐ ಕ್ಷೇತ್ರದಲ್ಲಿ ಭಾರತ ಪ್ರಭುತ್ವ ಸಾಧಿಸಬೇಕಿದೆ. ಅಮೆರಿಕ ಮತ್ತು ಚೀನಾ ಈಗಾಗಲೇ ತಂತ್ರಜ್ಞಾನ ಅಭಿವೃದ್ಧಿಪಡಿಸುತ್ತಿವೆ. ಭಾರತದಲ್ಲಿ 10 ಲಕ್ಷ ಎಂಜಿನಿಯರ್‌ಗಳನ್ನು ಈ ಕ್ಷೇತ್ರಕ್ಕೆ ಪರಿಚಯಿಸುವ ಗುರಿಯನ್ನು ಹೊಂದಿದ್ದೇವೆ’ ಎಂದು ಹೇಳಿದರು.

‘ಕ್ಯಾನ್ಸರ್ ಪತ್ತೆ ತಡ: ಸಾವು ಹೆಚ್ಚಳ’

ಪ್ರಜಾವಾಣಿ ವಾರ್ತೆ



ಯಲಹಂಕ: ತಡವಾಗಿ ಕ್ಯಾನ್ಸರ್ ರೋಗ ಪತ್ತೆಯಾಗುವುದು ಹಾಗೂ ಒಂದೇ ಕೇಂದ್ರದಲ್ಲಿ ಸಮಗ್ರ ಚಿಕಿತ್ಸೆ ಲಭ್ಯವಿಲ್ಲದಿರುವುದೇ ಕ್ಯಾನ್ಸರ್ ರೋಗಿಗಳ ಹೆಚ್ಚಿನ ಮರಣಕ್ಕೆ ಪ್ರಮುಖ ಕಾರಣಗಳಾಗಿವೆ ಎಂದು ಮೆಡಿಕಲ್ ಆಂಕಾಲಜಿ ಲೀಡ್ ಕನ್ಸಲ್ಟೆಂಟ್ ಡಾ.ಪ್ರಸಾದ್ ನಾರಾಯಣನ್ ಹೇಳಿದರು.

ಯಲಹಂಕದಲ್ಲಿ ಆರಂಭಗೊಂಡಿರುವ ಮಣಿಪಾಲ್ ಆಸ್ಪತ್ರೆಯಲ್ಲಿ ಅಳವಡಿಸಿರುವ ಅತ್ಯಾಧುನಿಕ ವೈದ್ಯಕೀಯ ತಂತ್ರಜ್ಞಾನ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಇಂದಿನ ಕ್ಯಾನ್ಸರ್ ಚಿಕಿತ್ಸೆ ರೋಗಕ್ಕೆ ಮಾತ್ರ ಸೀಮಿತವಾಗದೆ, ರೋಗಿಯ ಅಗತ್ಯಕ್ಕೆ ಅನುಗುಣವಾಗಿ ರೂಪುಗೊಳ್ಳುತ್ತಿದೆ. ಪ್ರಿಸಿಷನ್ ಆಂಕಾಲಜಿ, ಇಮ್ಯುನೋಥೆರಪಿ ಹಾಗೂ ಸುಧಾರಿತ ಚಿಕಿತ್ಸಾ ಮಾರ್ಗಸೂಚಿಗಳು ರಿಮಿಷನ್ ಪ್ರಮಾಣ ಮತ್ತು ದೀರ್ಘಕಾಲಿಕ ಬದುಕನ್ನು ಗಮನಾರ್ಹವಾಗಿ ಹೆಚ್ಚಿಸಿವೆ. ಇದರಿಂದ ರೋಗಿಗಳಲ್ಲಿ ಹೊಸ ನಿರೀಕ್ಷೆ ಮೂಡುತ್ತಿದೆ’ ಎಂದರು.

ಮೆಡಿಕಲ್ ಆಂಕಾಲಜಿ ಕನ್ಸಲ್ಟೆಂಟ್ ಡಾ.ಹರೀಶ್. ಪಿ ಮಾತನಾಡಿ, ‘ರೋಗನಿರ್ಣಯದಿಂದ ಹಿಡಿದು ಬದುಕಿನ ಮುಂದಿನ ಹಂತದವರೆಗೆ ವೈದ್ಯಕೀಯ ತಂಡವು ರೋಗಿಯೊಂದಿಗೆ ಜೊತೆಯಾಗಿ ನಡೆಯುತ್ತದೆ. ಇದರಿಂದ ಚಿಕಿತ್ಸೆಯ ಪಯಣ ಸುಲಭವಾಗುತ್ತದೆ’ ಎಂದರು.

ಕ್ಯಾನ್ಸರ್ ತಜ್ಞರಾದ ಡಾ.ಜಗನ್ನಾಥ್ ದೀಕ್ಷಿತ್, ಡಾ.ಏರನ್ ಫರ್ನಾಂಡಿಸ್, ಡಾ.ಜೋಸೆಫ್ ಮ್ಯಾಥ್ಯೂ, ಡಾ.ವಿಕ್ರಮ್ ಮೈಯ್ಯ, ಡಾ.ರಾಮ್ ಮೋಹನ್ ರೆಡ್ಡಿ ಉಪಸ್ಥಿತರಿದ್ದರು.

‘ಪುರಾಣ ಗೀತಂ’

ಪ್ರಜಾವಾಣಿ ಚಿತ್ರ



ಭಾರತೀಯ ಸಾಮಗಾನ ಸಭಾವು ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ‘ಪುರಾಣ ಗೀತಂ’ 17ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಸಂದೀಪ್ ನಾರಾಯಣ, ಬಿ. ಅನಂತಕೃಷ್ಣನ್ (ಪಿಟೀಲು), ಎಸ್.ಜೆ. ಅರ್ಜುನ್ ಗಣೇಶ್ (ಮೃದಂಗ) ಹಾಗೂ ಎಸ್. ಕೃಷ್ಣ (ಘಟ) ಅವರನ್ನು ಒಳಗೊಂಡ ತಂಡವು ಕೀರ್ತನೆಗಳನ್ನು ಶುಕ್ರವಾರ ಪ್ರಸ್ತುತಪಡಿಸಿತು

ಪ್ರೇಮಿಗಳ ದಿನ ನಂದಿ ಗಿರಿಧಾಮಕ್ಕೆ ಪ್ರವೇಶ ನಿರ್ಬಂಧ

ಚಿಕ್ಕಬಳ್ಳಾಪುರ: ಪ್ರೇಮಿಗಳ ನೆಚ್ಚಿನ ತಾಣ ನಂದಿ ಗಿರಿಧಾಮಕ್ಕೆ ಫೆ.14 ಪ್ರೇಮಿಗಳ ದಿನ ಪ್ರವೇಶ ನಿರ್ಬಂಧಿಸಲಾಗಿದೆ.

ಸಾವಿರಾರು ಸಂಖ್ಯೆಯಲ್ಲಿ ಪ್ರೇಮಿಗಳು, ಪ್ರವಾಸಿಗರು ಗಿರಿಧಾಮಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ. ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ನಂದಿ ಗಿರಿಧಾಮಕ್ಕೆ ಅಂದು ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಪ್ರವಾಸಿಗರಿಗೆ ಹಾಗೂ ವಾಹನಗಳ ಪ್ರವೇಶ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಪ್ರಭು ತಿಳಿಸಿದ್ದಾರೆ. ಪ್ರತಿ ವರ್ಷದ ಫೆ.14ರಂದು ಗಿರಿಧಾಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಮಿಗಳು ಭೇಟಿ ನೀಡುವರು.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಆಗ್ರಹ

‘ಜಿಲ್ಲಾ ಮಟ್ಟದಲ್ಲಿ ಚಿತ್ರೋತ್ಸವ ನಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿನಿಮಾ ಸಂಸ್ಕೃತಿ, ಅಭಿರುಚಿ ಎಲ್ಲೆಡೆ ಬೆಳೆಯಲು ಚಿತ್ರೋತ್ಸವವನ್ನು ಜಿಲ್ಲಾ ಕೇಂದ್ರದಲ್ಲಿ ಮಾಡಬೇಕು’ ಎಂದು ನಿರ್ದೇಶಕ ರಾಜೇಂದ್ರ ಸಿಂಗ್ ಆಗ್ರಹಿಸಿದರು.

17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಶುಕ್ರವಾರ ನಡೆದ ‘ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ಛಾಯಾಚಿತ್ರಗ್ರಾಹಕ ಎಸ್.ರಾಮಚಂದ್ರ ಸಿನಿಪಯಣದ ಸುವರ್ಣ ಸಂಭ್ರಮ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕನ್ನಡ ಚಿತ್ರರಂಗದ ಪ್ರಸ್ತುತ ಸ್ಥಿತಿಗೆ ಪಾರ್ವತಮ್ಮ ರಾಜ್‌ಕುಮಾರ್ ಅವರಂಥ ನಾಯಕತ್ವದ ಕೊರತೆಯೇ ಕಾರಣ. ಚಿತ್ರರಂಗದ ಸಮಸ್ಯೆಗಳನ್ನು ಹೇಳಿದಾಗ ಅವರು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದರು. ಅದೊಂದು ಸುವರ್ಣ ಯುಗ. ಸದ್ಯ ಬರಗಾಲದಲ್ಲಷ್ಟೇ ಕನ್ನಡ ಸಿನಿಮಾಗಳಿಗೆ ಚಿತ್ರಮಂದಿರ ಸಿಗುತ್ತಿದೆ. ವಾರಕ್ಕೆ ಹತ್ತತ್ತು ಸಿನಿಮಾ ಬಿಡುಗಡೆ ಮಾಡಿ ನಮ್ಮ ತಲೆ ಮೇಲೆ ನಾವೇ ಕಲ್ಲು ಹಾಕಿಕೊಳ್ಳುತ್ತಿದ್ದೇವೆ.



ಸಿನಿ ಪಯಣದ ಸುವರ್ಣ ಸಂಭ್ರಮದಲ್ಲಿ ಜಯಮಾಲಾ, ಕೆ.ವಿ.ಪ್ರಭಾಕರ್, ಗಿರೀಶ ಕಾಸರವಳ್ಳಿ, ರಾಜೇಂದ್ರ ಸಿಂಗ್ ಬಾಬು ಹಾಗೂ ಪೂರ್ಣಿಮಾ ರಾಮ್‌ಕುಮಾರ್

ಒಳ್ಳೆಯ ಫಸಲು ಬಂದಾಗ ಪರಭಾಷಾ ಸಿನಿಮಾಗಳು ಚಿತ್ರಮಂದಿರಗಳಲ್ಲಿ ಇರುತ್ತವೆ. ಸದ್ಯ ಕಾದಂಬರಿ ಆಧಾರಿತ ಸಿನಿಮಾ ಮಾಡುತ್ತೇನೆ ಎಂದರೆ ಮನೆಗೇ ಸೇರಿಸುವುದಿಲ್ಲ. ಇದು ಸ್ವಂತ ಅನುಭವ. ಮಣ್ಣಿನ ಕಥೆಗಳನ್ನು ಬಿಟ್ಟಿರುವುದರಿಂದ ನಮ್ಮ ಜನ ಸಿನಿಮಾದಿಂದ ದೂರವಾಗುತ್ತಿದ್ದಾರೆ. ನಾನಂತೂ ನೂರನೇ ವಯಸ್ಸಿನಲ್ಲೂ ಕನ್ನಡ ಸಿನಿಮಾ ನಿರ್ದೇಶನ ಮಾಡುತ್ತೇನೆ. ಮೈಸೂರಿನಲ್ಲಿ ಚಿತ್ರನಗರಿ ಶೀಘ್ರದಲ್ಲೇ ಆಗಬೇಕಿದೆ. ಜನತಾ ಟಾಕೀಸ್ ನಿರ್ಮಾಣಕ್ಕೆ ಸಬ್ಸಿಡಿ ನೀಡುವುದಾಗಿ ಸರ್ಕಾರ ಘೋಷಿಸಿದೆ. ಇದೂ ಶೀಘ್ರದಲ್ಲೇ ಜಾರಿಯಾಗಬೇಕು’ ಎಂದರು.

‘ರಾಜ್‌ಕುಮಾರ್ ಅವರ ಜೊತೆ ಸಿನಿಮಾ ಮಾಡುವ ಕನಸಿತ್ತು. ಆದರೆ ಅದು ಈಡೇರಲೇ ಇಲ್ಲ’ ಎಂದು ಮಾತು ಆರಂಭಿಸಿದ ನಿರ್ದೇಶಕ ಗಿರೀಶ ಕಾಸರವಳ್ಳಿ, ‘ನನ್ನ ಎಂಟು ಚಿತ್ರಗಳಿಗೆ ಛಾಯಾಚಿತ್ರಗ್ರಹಣ ಮಾಡಿದವರು ಎಸ್. ರಾಮಚಂದ್ರ ಐತಾಳ್. ಅವರು ಎಂದೂ ತಮ್ಮ ಅಭಿಪ್ರಾಯವನ್ನು ಮುಚ್ಚಿಟ್ಟುಕೊಳ್ಳುತ್ತಿರಲಿಲ್ಲ. ವಿಷಯಗಳನ್ನು ನೇರಾ ನೇರ ಹೇಳುವ ಧೈರ್ಯ ಅವರಿಗಿತ್ತು. ಹೀಗಾಗಿಯೇ ಅವರ ಒಳನೋಟಗಳು ನನ್ನ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದವು’ ಎನ್ನುವುದನ್ನು ನೆನಪಿಸಿಕೊಂಡರು.

> ನಮ್ಮ ಇಡೀ ಕುಟುಂಬಕ್ಕೆ ಅಮ್ಮ ಅನ್ನಪೂರ್ಣೇಶ್ವರಿಯಂತೆ ಇದ್ದರು. ಸಿನಿಮಾ ಕುಟುಂಬಕ್ಕೂ ಹಾಗೆಯೇ ಇದ್ದರು. ಹಲವು ಕನ್ನಡದ ಕಲಾವಿದರನ್ನು ಪರಿಚಯಿಸಿದವರು ಅಮ್ಮ
> **ಪೂರ್ಣಿಮಾ ರಾಮ್‌ಕುಮಾರ್,** ನಟಿ

> ಕನ್ನಡ ಚಿತ್ರರಂಗಕ್ಕೆ ಪಾರ್ವತಮ್ಮ ರಾಜ್‌ಕುಮಾರ್ ಬೆನ್ನೆಲುಬಾಗಿದ್ದರು. ಯಾವುದೇ ಕಾರಣಕ್ಕೂ ಸಬ್ಸಿಡಿ ನಿಲ್ಲಿಸುವುದಿಲ್ಲ
> **ಕೆ.ವಿ.ಪ್ರಭಾಕರ್,** ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಮಾತನಾಡಿ, ‘ನಿರ್ಮಾಪಕರು, ಪ್ರದರ್ಶಕರು, ವಿತರಕರು ಸಂಕಷ್ಟದಲ್ಲಿದ್ದಾರೆ. ಸರ್ಕಾರ ಸಬ್ಸಿಡಿಯನ್ನು ತೆಗೆಯಬಾರದು. ಯಶಸ್ವಿನಿ ಕಾರ್ಡ್ ಅನ್ನು ಚಿತ್ರರಂಗಕ್ಕೂ ವಿಸ್ತರಿಸಬೇಕು. ನಿವೇಶನಕ್ಕಾಗಿ 50 ಎಕರೆ ಜಾಗವನ್ನು ಚಿತ್ರರಂಗಕ್ಕೆ ನೀಡಬೇಕು. ಹೊಸ ಬಡಾವಣೆಗಳಲ್ಲಿ ಮಿನಿ ಚಿತ್ರಮಂದಿರ ನಿರ್ಮಾಣ ಹಾಗೂ ಚಿತ್ರರಂಗಕ್ಕೆ ಸಮುದಾಯ ಭವನ ನಿರ್ಮಿಸಿ ಕೊಡಬೇಕು. ಶೀಘ್ರದಲ್ಲೇ ಚಿತ್ರನಗರಿಯ ಶಂಕುಸ್ಥಾಪನೆ ಮಾಡಿ ಚಿತ್ರೀಕರಣಕ್ಕೆ ಅವಕಾಶ ನೀಡಬೇಕು’ ಎಂದು ಸರ್ಕಾರವನ್ನು ಆಗ್ರಹಿಸಿದರು.

ಕನ್ನಡ ಚಿತ್ರರಂಗದಲ್ಲಿ 50 ವರ್ಷಗಳನ್ನು ಪೂರೈಸಿದ ನಿರ್ದೇಶಕರಾದ ಗಿರೀಶ ಕಾಸರವಳ್ಳಿ, ರಾಜೇಂದ್ರ ಸಿಂಗ್ ಬಾಬು, ನಟಿ ಜಯಮಾಲಾ, ನಿರ್ಮಾಪಕರಾದ ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ಛಾಯಾಚಿತ್ರಗ್ರಾಹಕ ಎಸ್.ರಾಮಚಂದ್ರ ಅವರಿಗೆ ಗೌರವಿಸಲಾಯಿತು. ಪಾರ್ವತಮ್ಮ ಅವರ ಪರವಾಗಿ ಮಗಳು ಪೂರ್ಣಿಮಾ ರಾಮ್‌ಕುಮಾರ್ ಹಾಗೂ ರಾಮಚಂದ್ರ ಅವರ ಪರವಾಗಿ ಅವರ ಸೋದರ ಶಂಕರ್ ಐತಾಳ್ ಸ್ಮರಣಿಕೆ ಸ್ವೀಕರಿಸಿದರು.

ಈ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ ಇದ್ದರು.

‘ತಂತ್ರಜ್ಞಾನದೊಂದಿಗೆ ಭವಿಷ್ಯ ರೂಪಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎಕ್ಸ್‌ಐಎಸ್‌ಎಸ್ ನಿರ್ದೇಶಕ ಜೋಸೆಫ್ ಕುಜುರ್ ಅಭಿಮತ
- ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟನೆ

ಬೆಂಗಳೂರು: ‘ಹಿಂದಿನ ವೈಜ್ಞಾನಿಕ ಸಾಧನೆಯನ್ನು ಗೌರವಿಸುವುದು, ನೂತನ ತಂತ್ರಜ್ಞಾನದೊಂದಿಗೆ ಭವಿಷ್ಯವನ್ನು ಕಟ್ಟುವುದು ನಮ್ಮ ಗುರಿ’ ಎಂದು ಎಕ್ಸ್‌ಐಎಸ್‌ಎಸ್ ನಿರ್ದೇಶಕ ಜೋಸೆಫ್ ಮೇರಿಯಾನಸ್ ಕುಜುರ್ ಎಸ್.ಜೆ. ತಿಳಿಸಿದರು.

‘ಸುಸ್ಥಿರ ಭವಿಷ್ಯಕ್ಕಾಗಿ ಆಡಳಿತದ ಮರುಕಲ್ಪನೆ: ಎ.ಐ ಯುಗದಲ್ಲಿ ಲಾಭ, ಉದ್ದೇಶ ಮತ್ತು ಜನರ ಸಮತೋಲನ’ ಕುರಿತು ಕ್ಸೇವಿಯರ್ ಸಾಮಾಜಿಕ ಸೇವಾ ಸಂಸ್ಥೆ (ಎಕ್ಸ್‌ಐಎಸ್‌ಎಸ್) ಹಮ್ಮಿಕೊಂಡಿದ್ದ ಮೂರು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕೃತಕ ಬುದ್ಧಿಮತ್ತೆಯ ಯುಗದಲ್ಲಿ ನೀತಿಶಾಸ್ತ್ರ, ಸುಸ್ಥಿರತೆ ಮತ್ತು ಮಾನವೀಯ ಮೌಲ್ಯಗಳು ಆಡಳಿತಕ್ಕೆ ಮಾರ್ಗದರ್ಶನವಾಗಲಿವೆ. ನೈತಿಕ ನಾಯಕತ್ವ, ಸಾಮಾಜಿಕ ನ್ಯಾಯ ಮತ್ತು ಜವಾಬ್ದಾರಿಯುತ ನಿರ್ವಹಣಾ ಶಿಕ್ಷಣ ಇಂದಿನ ಅಗತ್ಯ’ ಎಂದು ಹೇಳಿದರು.

ಎಕ್ಸ್‌ಐಎಸ್‌ಎಸ್–ಜಿಬಿ ಅಧ್ಯಕ್ಷ ಅಜಿತ್ ಕುಮಾರ್ ಕ್ಸೆಸ್ ಎಸ್.ಜೆ. ಮಾತನಾಡಿ, ‘ಸಂಸ್ಥೆಯು ತನ್ನ ಪ್ಲಾಟಿನಂ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನವು ಮೆರುಗು ನೀಡಿದೆ. ನಿಜವಾದ ಆಡಳಿತವು ಮಾನವ-ಕೇಂದ್ರಿತ, ಅಂತರ್ಗತ ಮತ್ತು ನೈತಿಕವಾಗಿಬೇಕು’ ಎಂದರು.

ಪ್ರಬೀರ್ ಝಾ ಪೀಪಲ್ ಅಡ್ವೈಸರಿ ಸಂಸ್ಥೆಯ ಸ್ಥಾಪಕ ಪ್ರಬೀರ್ ಝಾ, ಅಮೆರಿಕದ ಸಿಯಾಟಲ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕ ಜೋಸೆಫ್ ಎಂ. ಫಿಲಿಪ್ಸ್, ಪ್ರಧಾನ ಮಂತ್ರಿ ಕರ್ಮಯೋಗಿ ಭಾರತ್ ಉಪಕ್ರಮದ ಸಹ-ಸಂಸ್ಥಾಪಕ ಪಂಕಜ್ ಬನ್ಸಾಲ್, ಕೋಲ್ ಇಂಡಿಯಾ ಲಿಮಿಟೆಡ್ ನಿರ್ದೇಶಕ ವಿನಯ್ ರಂಜನ್, ಡೀನ್ ಡಾ. ಅಮರ್ ಇ. ಟಿಗ್ಗಾ ವಿವಿಧ ವಿಚಾರಗಳ ಕುರಿತು ಮಾತನಾಡಿದರು. ಮೊದಲ ದಿನ 13 ಪ್ರಬಂಧಗಳ ಮಂಡನೆಯಾಯಿತು.

ಜಾಹೀರಾತು: ಬಿಜೆಪಿ ವಿರುದ್ಧ 'ಕೈ' ದೂರು

ಹಿಂಸಾ ಪ್ರಚೋದಕ ಜಾಹೀರಾತಿನಲ್ಲಿ ಮಹಾತ್ಮ ಗಾಂಧಿ ಚಿತ್ರ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂಸಾ ಪ್ರಚೋದಕ ಜಾಹೀರಾತಿನಲ್ಲಿ ಮಹಾತ್ಮ ಗಾಂಧಿ ಅವರ ಚಿತ್ರವನ್ನು ದುರುಪಯೋಗ ಮಾಡಿಕೊಂಡಿರುವ ಬಿಜೆಪಿ ವಿರುದ್ಧ ಕ್ರಮ ತೆಗೆದುಕೊಳ್ಳಿ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಅವರು ಮುಖ್ಯ ಕಾರ್ಯದರ್ಶಿ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದ್ದಾರೆ.

ಬಿಜೆಪಿ ನೀಡಿದ್ದ ಜಾಹೀರಾತಿನಲ್ಲಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗಾಂಧೀಜಿ ಅವರು ದೊಣ್ಣೆಯಿಂದ ಹೊಡೆಯಲು ಮುಂದಾದ ಚಿತ್ರವಿತ್ತು.

'ಅಹಿಂಸೆಯ ಪ್ರತೀಕವಾಗಿರುವ ಗಾಂಧೀಜಿ ಅವರನ್ನು, ಶುಕ್ರವಾರ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಈ ಜಾಹೀರಾತಿನಲ್ಲಿ ಹಿಂಸಾರೂಪದಲ್ಲಿ ಚಿತ್ರಿಸಲಾಗಿದೆ. ರಾಷ್ಟ್ರಪಿತ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವಿಸಲ್ಪಡುವ ಮಹಾತ್ಮ ಗಾಂಧಿ ಅವರ ಭಾವಚಿತ್ರವನ್ನು ಹಿಂಸಾತ್ಮಕ ಕೃತ್ಯಗಳು/ ಹಿಂಸಾತ್ಮಕ ಸಂದೇಶಗಳು/ ಹಿಂಸೆಗೆ ಪ್ರಚೋದಿಸುವ ವಿಷಯಗಳೊಂದಿಗೆ



ತಪ್ಪಾಗಿ ಬಿಂಬಿಸಲಾಗಿದೆ' ಎಂದು ಅವರು ಆರೋಪಿಸಿದ್ದಾರೆ.

'ಈ ಜಾಹೀರಾತಿನ ಕಾರಣದಿಂದ ಗಾಂಧೀಜಿ ಅವರ ಪರಂಪರೆಗೆ ಧಕ್ಕೆಯಾಗಿದೆ. ಸಾರ್ವಜನಿಕರ ಭಾವನೆಗಳಿಗೆ ಆಘಾತವಾಗಿದೆ. ಶಾಂತಿ ಮತ್ತು ಸೌಹಾರ್ದಕ್ಕೆ ಮಾರಕವಾಗಿದೆ. ಈ ಜಾಹೀರಾತನ್ನು ನೀಡಿರುವ ಬಿಜೆಪಿ ರಾಜ್ಯ ಘಟಕದ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ 196 (ದ್ವೇಷ ಪ್ರಚೋದನೆ), 197 (ರಾಷ್ಟ್ರೀಯ ಏಕತೆಗೆ ಧಕ್ಕೆ), 299 (ಸಾರ್ವಜನಿಕ ಭಾವನೆಗಳಿಗೆ ಧಕ್ಕೆ), 353 (ಶಾಂತಿಗೆ ಭಂಗ) ಮತ್ತು 356 (ರಾಷ್ಟ್ರೀಯ ವ್ಯಕ್ತಿತ್ವದ ಗೌರವಕ್ಕೆ ಧಕ್ಕೆ) ಸೆಕ್ಷನ್‌ಗಳ ಅಡಿಯಲ್ಲಿ ಬಿಜೆಪಿ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ಕೋರಿದ್ದಾರೆ.

'ಬಿಜೆಪಿಯ ಹೀನ ಮನಸ್ಥಿತಿ'



'ಸತ್ಯ, ಅಹಿಂಸೆ, ಸಹಿಷ್ಣುತೆಯನ್ನೇ ಉಸಿರಾಡಿದ ಮಹಾತ್ಮಾ ಗಾಂಧಿ ಅವರನ್ನು ಕೊಂದ ಸಂಸ್ಕೃತಿಯವರ ಮಾನಸಿಕ ಕ್ರೌರ್ಯ ಮುಂದುವರೆಯುತ್ತಲೇ ಇದೆ. ಗಾಂಧೀಜಿಯನ್ನು ಅವಮಾನಿಸುವ, ಹೀಯಾಳಿಸುವ ಬಿಜೆಪಿಯು ತನ್ನ ಹೀನ ಮನಸ್ಥಿಯನ್ನೇ ಪತ್ರಿಕೆಗಳ ಮೂಲಕ ಜಾಹೀರಾತುಗಳಲ್ಲಿ ತೋರಿಸಿಕೊಂಡಿದೆ' ಎಂದು ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಅವರು ಟೀಕಿಸಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಆರ್‌ಎಸ್‌ಎಸ್ ಬಳಸುವ ಲಾಠಿ ಹಿಂಸೆಯ ಸೂಚಕ. ಗಾಂಧೀಜಿ ಅವರ ಊರುಗೋಲು ಕೇವಲ ಆಸರೆಯಲ್ಲ. ಬದಲಿಗೆ ಬಲ, ಪರಿಶ್ರಮ ಮತ್ತು ಛಲದ ಸಂಕೇತ. ಗಾಂಧೀಜಿ ಅವರ ತತ್ವಾದರ್ಶಗಳ ಮೇಲೆ ಬಿಜೆಪಿ ಮತ್ತು ಸಂಘಪರಿವಾರವು ನಿರಂತರ ದಾಳಿ ಮಾಡುತ್ತಲೇ ಇವೆ' ಎಂದಿದ್ದಾರೆ.

'ಗೋಡ್ಸೆವಾದಿಗಳಿಂದ ಗಾಂಧಿವಾದದ ಹತ್ಯೆ'



'ಅಂದು ಗೋಡ್ಸೆಯಿಂದ ಗಾಂಧಿ ಹತ್ಯೆ. ಇಂದು ಗೋಡ್ಸೆವಾದಿಗಳಿಂದ ಗಾಂಧಿವಾದದ ಹತ್ಯೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಜಗತ್ತಿಗೆ ಅಹಿಂಸೆಯ ಸಂದೇಶವನ್ನು ಪ್ರಬಲವಾಗಿ ನೀಡಿದ್ದವರು ಮಹಾತ್ಮ ಗಾಂಧಿ. ಅವರು ಎಂದಿಗೂ ತಮ್ಮ ಕೈಲಿದ್ದ ಕೋಲನ್ನು ಎತ್ತಿ ಹಲ್ಲೆಗೆ ಬಳಸಿದವರಲ್ಲ. ಆರ್‌ಎಸ್‌ಎಸ್ ಮತ್ತು ಬಿಜೆಪಿಯು ಮಹಾತ್ಮ ಗಾಂಧಿ ಅವರನ್ನು ಹಿಂಸೆಯ ಪ್ರತಿಪಾದಕರನ್ನಾಗಿ ಚಿತ್ರಿಸಿ ಜಾಹೀರಾತು ನೀಡುವ ಮೂಲಕ ಮತ್ತೊಮ್ಮೆ ಅವರನ್ನು ಅವಮಾನಿಸಿದೆ' ಎಂದಿದ್ದಾರೆ.

'ಮಹಾತ್ಮ ಗಾಂಧಿಯವರನ್ನು ದೈಹಿಕವಾಗಿ ಮುಗಿಸಿ ಹಾಕಿದ್ದಲ್ಲದೆ, ಈಗ ಅವರ ಸಿದ್ಧಾಂತವನ್ನೂ ಮುಗಿಸಿಹಾಕುವ ಕೆಲಸಕ್ಕೆ ಕೈ ಹಾಕಿರುವ ಬಿಜೆಪಿಯಿಂದ ಗಾಂಧೀಜಿಯನ್ನು ಮತ್ತು ಅವರ ತತ್ವಗಳನ್ನು ನಾವು ರಕ್ಷಿಸಬೇಕಿದೆ' ಎಂದು ಅವರು ಕರೆ ನೀಡಿದ್ದಾರೆ.

'ಗಾಂಧೀಜಿ ಬಗ್ಗೆ ಬಿಜೆಪಿಗಿರುವ ಗೌರವ ಜಗತ್ತಿಗೇ ಗೊತ್ತಿದೆ'



ಚಿಕ್ಕಮಗಳೂರು: 'ಮಹಾತ್ಮ ಗಾಂಧಿ ಕುರಿತು ಬಿಜೆಪಿಗೆ ಯಾವ ಮಟ್ಟದ ಗೌರವ ಭಾವನೆ ಇದೆ ಎಂಬುದು ಜಗತ್ತಿಗೇ ಗೊತ್ತಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಖಾಸಗಿ ಕಾರ್ಯಕ್ರಮಕ್ಕಾಗಿ ನಗರಕ್ಕೆ ಭೇಟಿ ನೀಡಿದ್ದ ಅವರು, 'ಗಾಂಧಿ ಹೆಸರಲ್ಲಿ ಈಗ ಜಾಹೀರಾತು ನೀಡಿದ್ದಾರೆ. ಗಾಂಧೀಜಿ ಅವರ ಬಗ್ಗೆ ಹೊಸದಾಗಿ ಮಾತನಾಡಲು ಹೊರಟಿದ್ದಾರೆ. ಅಷ್ಟೊಂದು ಗೌರವವಿದ್ದರೆ ಉದ್ಯೋಗ ಖಾತ್ರಿ ಯೋಜನೆಗೆ ಇದ್ದ ಗಾಂಧಿ ಹೆಸರನ್ನು ಏಕೆ ತೆಗೆದು ಹಾಕಿದರು? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಹೆಸರಿನೊಂದಿಗೆ ಗಾಂಧಿ ಹೆಸರು ಜೋಡಣೆ ಆಗಿದ್ದರಿಂದ ತೆಗೆದಿದ್ದಾರೆ. ನರೇಗಾ ಯೋಜನೆ ವಿಶ್ವದಲ್ಲೇ ಅತಿದೊಡ್ಡ ಪ್ರಮಾಣದಲ್ಲಿ ಉದ್ಯೋಗ ಒದಗಿಸುವ ಕಾರ್ಯಕ್ರಮ ಎಂದು ಹೆಸರುವಾಸಿಯಾಗಿದೆ. ಇಂತಹ ಸಾಧನೆ ಸಹಿಸದೇ ಜನರನ್ನು ತಪ್ಪುದಾರಿಗೆ ಎಳೆಯಲು ಜಾಹೀರಾತಿನ ಮೊರೆ ಹೋಗುತ್ತಿದ್ದಾರೆ ಎಂದರು.

'ಲೂಟಿ ನೋಡಿ ಗಾಂಧೀಜಿ ಕೈಗೆ ಕೋಲು ಬಂದಿದೆ'



'ಕಾಂಗ್ರೆಸ್‌ನ ಲೂಟಿ ನೋಡಿ ಗಾಂಧೀಜಿಯವರ ಕೈಗೆ ಕೋಲು ಬಂದಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ವಿಬಿ ಜಿ ರಾಮ್ ಜಿ ಯೋಜನೆಗೆ ಸಂಬಂಧಿಸಿದಂತೆ ನಾವು ಪಕ್ಷದ ವತಿಯಿಂದ ಜಾಹೀರಾತು ನೀಡಿದ್ದೇವೆ. ಕಾಂಗ್ರೆಸ್‌ನಂತೆ ನಾವು ಸರ್ಕಾರದ ಹಣದಿಂದ ಜಾಹೀರಾತು ಪ್ರಕಟಿಸಿಲ್ಲ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ರಾಜ್ಯ ಸರ್ಕಾರ ಮಹಾತ್ಮ ಗಾಂಧೀಜಿ ಆಶಯಕ್ಕೆ ವಿರುದ್ಧವಾಗಿ ಮದ್ಯದಂಗಡಿಗಳನ್ನು ತೆರೆಯುತ್ತಿದೆ. ಗೋಹತ್ಯೆ ನಿಲ್ಲಿಸಬೇಕು ಎಂದು ಗಾಂಧೀಜಿ ಹೇಳಿದ್ದರೆ ಕಾಂಗ್ರೆಸ್ ಗೋಹತ್ಯೆ ನಿಷೇಧ ಕಾಯ್ದೆಯನ್ನು ವಿರೋಧಿಸಿತ್ತು. ರಘುಪತಿ ರಾಘವ ರಾಜಾರಾಂ ಎಂದು ಹೇಳಿದ್ದ ಗಾಂಧೀಜಿಯವರ ಹೆಸರನ್ನು ಯೋಜನೆಗಳಿಗೆ ಇರಿಸುವ ಬದಲು ಇಂದಿರಾಗಾಂಧಿ, ರಾಜೀವ್ ಗಾಂಧಿ ಹೆಸರನ್ನು ಇಟ್ಟಿದ್ದಾರೆ. ಇವರೆಲ್ಲ ನಕಲಿ ಗಾಂಧಿಗಳು' ಎಂದು ಟೀಕಿಸಿದರು.

ಸುದ್ದಿ 2 ನಿಮಿಷ

ಜನರ ಕಣ್ಗಾವಲಿಗೆ ತಂತ್ರಾಂಶ: ಟೀಕೆ

ಬೆಂಗಳೂರು: ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರ್ಕಾರವು 'ಸೋಷಿಯಲ್ ಮೀಡಿಯಾ ಅನಾಲಿಟಿಕ್ಸ್ ಸಲ್ಯೂಷನ್ಸ್' ಮೂಲಕ ಸದ್ದಿಲ್ಲದೇ ಸಾರ್ವಜನಿಕರ ಮೇಲೆ ಕಣ್ಗಾವಲಿಡುವ ವ್ಯವಸ್ಥೆ ಜಾರಿ ಮಾಡುತ್ತಿದೆ ಎಂದು ಬಿಜೆಪಿ ನಾಯಕರು ಆರೋಪ ಮಾಡಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಬಿಜೆಪಿಯ ಅಮಿತ್ ಮಾಳವೀಯ ಅವರು, 'ಸುಳ್ಳು ಸುದ್ದಿ ಮತ್ತು ಹಾನಿಕಾರ ಮಾಹಿತಿಯನ್ನು ಪತ್ತೆ ಮಾಡುವುದಕ್ಕಾಗಿ ಎಂದರೂ, ಜನ ಸಾಮಾನ್ಯರ ಸಾಮಾಜಿಕ ಮತ್ತು ವೈಯಕ್ತಿಕ ಡಿಜಿಟಲ್ ಸಂವಹನದೊಳಗೆ ಈ ತಂತ್ರಾಂಶ ಮೂಗು ತೂರಿಸುತ್ತದೆ' ಎಂದು ಹೇಳಿದ್ದಾರೆ.

'ಇದು ಸರ್ಕಾರಿ ಪ್ರಾಯೋಜಿತ ಕಣ್ಗಾವಲು. ಇದು ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆ ಮತ್ತು ಖಾಸಗಿತನದ ಮೇಲಿನ ದಾಳಿ. ಕರ್ನಾಟಕವನ್ನು ಪೊಲೀಸ್ ರಾಜ್ಯವಾಗಿಸುವ ನಿಟ್ಟಿನಲ್ಲಿ ಒಂದು ಕ್ರೂರ ಹೆಜ್ಜೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. 'ಸರ್ಕಾರಕ್ಕೆ ಜನರ ಮುಕ್ತ ಅಭಿಪ್ರಾಯ ಮತ್ತು ಆಲೋಚನೆಗಳ ಬಗ್ಗೆ ಭಯವಿದೆ. ಹೀಗಾಗಿ ನಿಗಾ ಮತ್ತು ರಕ್ಷಣೆ ಇತ್ಯಾದಿ ಪದಗಳನ್ನು ಬಳಸುತ್ತಿದೆ. ಈ ಮೂಲಕ ಜನರನ್ನು ಬೆದರಿಸುವ, ಮಾಹಿತಿ ಸಂಗ್ರಹಿಸುವ ಮತ್ತು ನಿಯಂತ್ರಣದಲ್ಲಿಡಲು ಪ್ರಯತ್ನಿಸುತ್ತಿದೆ. ಇದನ್ನು ನಾಗರಿಕ ಸಮಾಜ ಒಪ್ಪಲು ಸಾಧ್ಯವಿಲ್ಲ. ಈ ಹುನ್ನಾರವನ್ನು ಬಯಲಿಗೆಳೆಯುವ ಮೂಲಕ ಪ್ರಬಲವಾಗಿ ವಿರೋಧಿಸಲಾಗುವುದು' ಎಂದು ಹೇಳಿದ್ದಾರೆ.

ವಿರೋಧಿಗಳ ಪತ್ತೆಗೆ ₹67 ಕೋಟಿ: 'ರಾಜ್ಯದ ಅಭಿವೃದ್ಧಿಗೆ ಹಣವಿಲ್ಲ. ನೌಕರರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ದ್ವೇಷ ಭಾಷಣ ಪ್ರತಿಬಂಧಕ ಮಸೂದೆ ಬಗ್ಗೆ ಅಧಿವೇಶನದಲ್ಲಿ ಚರ್ಚೆ ಮಾಡಲು ಸರ್ಕಾರ ತಯಾರಿರಲಿಲ್ಲ. ತನ್ನ ವಿರುದ್ಧ ಮಾತನಾಡುವವರನ್ನು ಪತ್ತೆ ಮಾಡಲು ಕಾಂಗ್ರೆಸ್ ಸರ್ಕಾರ ₹67 ಕೋಟಿ ದುಂದು ವೆಚ್ಚ ಮಾಡುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಪ್ರಾಂಶುಪಾಲರ ನೇಮಕಾತಿ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಪಟ್ಟಿ ಪ್ರಕಟಿಸದಂತೆ ಹೈಕೋರ್ಟ್ ಆದೇಶವಿದ್ದರೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆ ಪ್ರಕಟಿಸಿದೆ.

310 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿದ್ದ ರಾಜ್ಯ ಸರ್ಕಾರ ನೇರ ಪರೀಕ್ಷೆ ನಡೆದ ಎರಡೂವರೆ ವರ್ಷಗಳ ನಂತರ 256 ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿತ್ತು. ಈಗ ಕಲ್ಯಾಣ ಕರ್ನಾಟಕದ 36 ಹುದ್ದೆಗಳೂ ಸೇರಿ 267 ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಹೈಕೋರ್ಟ್‌ನ ಮುಂದಿನ ಆದೇಶದ ಷರತ್ತಿಗೆ ಒಳಪಟ್ಟು ನೇಮಕಾತಿ ಆದೇಶ ನೀಡುವಂತೆ ಸೂಚಿಸಿದೆ.

'ಎಂಜಿನಿಯರಿಂಗ್ ಸೇರಿ ಇತರೆ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡಿದವರು ಆಯ್ಕೆಯಾದರೆ ನಿಯಮದಂತೆ ಅವರು ವಾರಕ್ಕೆ ಆರು ಗಂಟೆ ಯಾವ ವಿಷಯ ಬೋಧಿಸಲು ಸಾಧ್ಯ? ಇಲಾಖೆಯ ಒಳಗಿನವರ ಸೇವಾ ಜ್ಯೇಷ್ಠತೆಗೂ ಧಕ್ಕೆಯಾಗುತ್ತದೆ. ವಯೋಮಿತಿ ಇಲ್ಲದಿರುವುದರಿಂದ, ಆಯ್ಕೆಯಾದವರು ಒಂದೇ ತಿಂಗಳಿಗೆ ನಿವೃತ್ತರಾದರೆ ಮತ್ತೆ ಪ್ರಭಾರ ಅನಿವಾರ್ಯವಾಗುತ್ತದೆ. ಹೀಗಾಗಿ ನೇಮಕಾತಿ ಪ್ರಕ್ರಿಯೆಯನ್ನೇ ರದ್ದು ಮಾಡಬೇಕು' ಎಂದು ಕೋರಿ ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರು ಹಾಗೂ ಇತರೆ ನ್ಯೂನತೆಗಳ ವಿರುದ್ಧ ಕೆಲ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಜತೆಗೆ, ಖಾಸಗಿ ಪ್ರಥಮ ದರ್ಜೆ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು ಸೇರಿದಂತೆ ಯಾವುದೇ ಪದವಿ ಕಾಲೇಜಿನಲ್ಲಿ 15 ವರ್ಷಗಳ ಬೋಧನಾನುಭವ ಹೊಂದಿರಬೇಕು. ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ಐದು ವರ್ಷಗಳ ನಂತರ ಪ್ರಾಂಶುಪಾಲರ ಸ್ಥಾನ ತ್ಯಜಿಸಿ, ಹಿಂದೆ ತಾವು ಕಾರ್ಯನಿರ್ವಹಿಸುತ್ತಿದ್ದ ಕರ್ತವ್ಯಕ್ಕೆ ಮರಳಬೇಕು ಎಂಬ ನಿಯಮ ರೂಪಿಸಲಾಗಿತ್ತು. ನೇರ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಲಿಖಿತ ಪರೀಕ್ಷೆ ನಡೆಸಿತ್ತು.

ಶಿಲ್ಪಕಲಾ ಅಕಾಡೆಮಿ: ಹತ್ತು ಶಿಲ್ಪಿಗಳಿಗೆ ಗೌರವ ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2024, 2025ನೇ ಸಾಲಿನ ಗೌರವ ಪ್ರಶಸ್ತಿ ಮತ್ತು 2024ನೇ ಸಾಲಿನ ಶಿಲ್ಪಶ್ರೀ ಪ್ರಶಸ್ತಿ ಪ್ರಕಟಿಸಿದೆ.

ಅಕಾಡೆಮಿಯ ಸರ್ವ ಸದಸ್ಯರ ಸಭೆಯಲ್ಲಿ ಗೌರವ ಪ್ರಶಸ್ತಿಗೆ ಹತ್ತು ಶಿಲ್ಪಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ತಲಾ ₹50 ಸಾವಿರ ನಗದು, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ನೀಡಲಾಗುತ್ತದೆ. ಮಾರ್ಚ್ ತಿಂಗಳಲ್ಲಿ ಬೀದರ್ ಅಥವಾ ಚಾಮರಾಜನಗರದಲ್ಲಿ ಸಮಾರಂಭ ಆಯೋಜಿಸಿ, ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಕಾಡೆಮಿ ಅಧ್ಯಕ್ಷ ಸಿ.ರಮೇಶ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

3 ವರ್ಷಗಳ ಪ್ರಶಸ್ತಿ

ಅಲ್ಲದೇ, 2024ನೇ ಸಾಲಿನ ಶಿಲ್ಪಶ್ರೀ ಪ್ರಶಸ್ತಿಗೆ ಹತ್ತು ಶಿಲ್ಪಿಗಳನ್ನು ಆಯ್ಕೆ ಮಾಡಲಾಗಿದ್ದು, ಪ್ರಶಸ್ತಿಯು ತಲಾ ₹25 ಸಾವಿರ ನಗದು, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ಒಳಗೊಂಡಿದೆ.



ಶ್ರೀಕಂಠಾಚಾರ್ಯ, ಸಾಯಿನಾಥ, ಸೋಮಚಾರಿ, ರಾಜಬಾಬು, ಎಂ.ಕೆ.ಗಿರೀಶ್, ಕಲ್ಲಣ್ಣ ಸಾಯಬಣ್ಣ, ಅರವಿಂದ ವಿ, ಯಚ್ಚರಪ್ಪ, ಅರುಣ ಬಿಕ್ಕು, ಕೆ.ರಾಘವೇಂದ್ರ

ಅಕಾಡೆಮಿಯ 19ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ 2025ಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಸಾಂಪ್ರದಾಯಿಕ ಮತ್ತು ಸಮಕಾಲೀನ, ಜಾನಪದ ಶೈಲಿಯ ಕಲಾಕೃತಿಗಳಲ್ಲಿ ಆರು ಶಿಲ್ಪ ಕಲಾಕೃತಿಗಳನ್ನು ಅಕಾಡೆಮಿಯ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

2024ನೇ ಸಾಲಿನ ಗೌರವ ಪ್ರಶಸ್ತಿ: ಎ.ಪಿ. ಶ್ರೀಕಂಠಾಚಾರ್ಯ (ಸಂಪ್ರದಾಯ ಶಿಲ್ಪ)-ದಾವಣಗೆರೆ, ಸಾಯಿನಾಥ ಭೀಮರಾಯಪ್ಪ (ಸಂಪ್ರದಾಯ ಶಿಲ್ಪ)-ಧಾರವಾಡ, ಸೋಮಚಾರಿ (ಸಂಪ್ರದಾಯ ಶಿಲ್ಪ)-ಹಾವೇರಿ, ಎಂ.ಕೆ.ಗಿರೀಶ್ ಕುಮಾರ್ (ಸಮಕಾಲೀನ ಶಿಲ್ಪ)-ವಿಜಯನಗರ

2025ನೇ ಸಾಲಿನ ಗೌರವ ಪ್ರಶಸ್ತಿ: ಕಲ್ಲಣ್ಣ ಸಾಯಬಣ್ಣ ಕಂಬಾರ (ಸಂಪ್ರದಾಯ ಶಿಲ್ಪ)-ಕಲಬುರಗಿ, ರವೀಂದ್ರ ವಿ ಬಡಿಗೇರ (ರಥ ಶಿಲ್ಪ)-ರಾಯಚೂರು, ಯಚ್ಚರಪ್ಪ ನಾಗಲಿಂಗಪ್ಪ ಪತ್ತಾರ (ಸಂಪ್ರದಾಯ ಶಿಲ್ಪ)-ಗದಗ, ಅರುಣ ಬುಕ್ಕಾ ಗುಡಿಗಾರ (ಸಂಪ್ರದಾಯ ಶಿಲ್ಪ)-ಉತ್ತರ ಕನ್ನಡ, ಕೆ.ರಾಘವೇಂದ್ರ (ಸಮಕಾಲೀನ ಶಿಲ್ಪ)-ಮೈಸೂರು

ಶಿಲ್ಪಕಲಾ ಪ್ರದರ್ಶನ ಬಹುಮಾನ ವಿಜೇತರು: ಬಿ.ಬ್ರಹ್ಮಚಾರಿ (ವಿಜಯನಗರ), ಎಲ್. ಪುರುಷೋತ್ತಮ್ (ಶಿವಮೊಗ್ಗ), ಎಸ್. ರಾಘವೇಂದ್ರ (ಶಿವಮೊಗ್ಗ), ಡಿ.ಎಂ.ಪ್ರದೀಪ್ ಕುಮಾರ್ (ದಾವಣಗೆರೆ), ವಿಶ್ವೇಶ್ವರ ಪರ್ಕಳ (ಉಡುಪಿ), ಕೆ.ಎಸ್.ಸ್ವಾತೀಶ್ (ಮಂಡ್ಯ)

ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಬಹುಮಾನಕ್ಕೆ ಈರಣ್ಣ (ರಾಯಚೂರು) ಅವರ ಶಿಲ್ಪಕಲಾಕೃತಿ ಆಯ್ಕೆಯಾಗಿದೆ. ಅದೇ ರೀತಿ ವಿಜಯಪುರದ ಮನೋಹರ ಕಾಳಪ್ಪ ಪತ್ತಾರ ದತ್ತಿ ಬಹುಮಾನಕ್ಕೆ ವಾದಿರಾಜ ಎಂ.ಬಡಿಗೇರ (ಕಲಬುರಗಿ), ಉಡುಪಿ ಜಿಲ್ಲೆ ತಲ್ಲೂರು ಫ್ಯಾಮಿಲಿ ಟ್ರಸ್ಟ್‌ನ ಬಹುಮಾನಕ್ಕೆ ರೂಪ ಖಂಗೋವಿ (ಬೆಂಗಳೂರು), ಪಿ.ಎಸ್.ಕೃಷ್ಣಮೂರ್ತಿ (ಬೆಂಗಳೂರು ದಕ್ಷಿಣ) ಮತ್ತು ಅರೇನಾ ಅನಿಮೇಷನ್ ಮಲ್ಲೇಶ್ವರಂ ಹಾಗೂ ವೇದಾತ್ಮ ಕಾಲೇಜ್ ಆಫ್ ಡಿಸೈನ್ ಟೆಕ್ನಾಲಜಿ ಮ್ಯಾನೇಜ್‌ಮೆಂಟ್ ಬಹುಮಾನಕ್ಕೆ ಆನಂದ ಬಿಳಗಿ (ಬಾಗಲಕೋಟೆ) ಅವರ ಶಿಲ್ಪಕಲಾಕೃತಿ ಆಯ್ಕೆಯಾಗಿದೆ.

2024ನೇ ಸಾಲಿನ ಶಿಲ್ಪಶ್ರೀ ಪ್ರಶಸ್ತಿ

ಬಸ್ತಿ ಸದಾಶಿವ ಶೆಣೈ (ದಕ್ಷಿಣ ಕನ್ನಡ), ದೇವಿಪ್ರಸಾದ್ ಎಂ.ಮಾಯಾಚಾರ್ಯ (ಬಾಗಲಕೋಟೆ), ಮಂಜುನಾಥ ಡಿ ಬಾರ್ಕಿ (ಹಾವೇರಿ), ರಾಜೇಶ್ ಎಂ.ಪತ್ತಾರ (ಗದಗ), ಆನಂದ ಹಾವನೂರು (ಬೆಳಗಾವಿ), ನವೀನ್ ಕಡ್ಲಾಸ್ಕರ್ (ಧಾರವಾಡ), ಕೆ.ಎನ್.ಕೃಷ್ಣಮೂರ್ತಿ ಆಚಾರ್ (ಚಿತ್ರದುರ್ಗ), ವಿಪಿನ್ ಭದೌರಿಯಾ (ಬೆಂಗಳೂರು), ಸಿ.ಪಿ.ವಿಶ್ವನಾಥ್ (ತುಮಕೂರು), ಎಂ.ಶರಣ್ (ಬೆಂಗಳೂರು ದಕ್ಷಿಣ)

ಹೊತ್ತಿ ಉರಿದ ಬಸ್: ಪ್ರಯಾಣಿಕರು ಪಾರು

ಪ್ರಜಾವಾಣಿ ವಾರ್ತೆ

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ-48ರ ಹನುಮಂತಪುರ ಗೇಟ್ ಬಳಿ ಶುಕ್ರವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಬಸ್‌ವೊಂದು ಹೊತ್ತಿ ಉರಿದಿದ್ದು, ಅಪಾಯ ಅರಿತ 40 ಪ್ರಯಾಣಿಕರು ಕೂಡಲೇ ಬಸ್‌ನಿಂದ ಕೆಳಕ್ಕೆ ಇಳಿದು ಪಾರಾಗಿದ್ದಾರೆ.

ವಿದ್ಯುತ್ ಕಂಬಕ್ಕೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೆಂಕಿ ಅವಘಡ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸಂಜನಾ ಟ್ರಾವೆಲ್ಸ್‌ಗೆ ಸೇರಿದ ಬಸ್ ಬೆಂಗಳೂರಿನಿಂದ ಕಲಬುರಗಿಗೆ ಹೊರಟಿತ್ತು. ಮೆಜೆಸ್ಟಿಕ್ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿ ಪ್ರಯಾಣಿಕರು ಬಸ್ ಹತ್ತಿದ್ದರು. ನಾಗಸಂದ್ರ ದಾಟುತ್ತಿದ್ದಂತೆಯೇ ಬಹುತೇಕ ಪ್ರಯಾಣಿಕರು ನಿದ್ರೆಗೆ ಜಾರಿದ್ದರು.

ಬಸ್ಸು ನೆಲಮಂಗಲ ಸಮೀಪದ ಹನುಮಂತಪುರ ಗೇಟ್ ಬಳಿ ವೇಗವಾಗಿ ಚಲಿಸುತ್ತಿತ್ತು. ಬಸ್, ಮೊದಲು ಚರಂಡಿಯ ಸ್ಲಾಬ್‌ಗೆ ಡಿಕ್ಕಿ ಹೊಡೆದಿದೆ. ಆ ರಭಸಕ್ಕೆ ಚಾಲಕನ ನಿಯಂತ್ರಣ ತಪ್ಪಿ, ರಸ್ತೆಯ ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಗುದ್ದಿದೆ. ಡಿಕ್ಕಿ ಹೊಡೆದ ತಕ್ಷಣ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಕ್ಷಣಾರ್ಧದಲ್ಲಿ ಧಗಧಗನೆ ಉರಿಯಲು ಆರಂಭಿಸಿತು.



ಬೆಂಕಿ ಅವಘಡದಲ್ಲಿ ಸುಟ್ಟು ಕರಕಲಾಗಿರುವ ಬಸ್

ಬೆಂಕಿ ಹೊತ್ತಿಕೊಳ್ಳುತ್ತಿರುವುದನ್ನು ಗಮನಿಸಿದ ಚಾಲಕ ಹಾಗೂ ನಿರ್ವಾಹಕ, ಬಸ್‌ನಿಂದ ಕೆಳಕ್ಕೆ ಇಳಿಯುವಂತೆ ಪ್ರಯಾಣಿಕರಿಗೆ ಕೂಗಿ ಹೇಳಿದ್ದರು. ಬೆಂಕಿ ಆವರಿಸಿಕೊಳ್ಳುವ ಮೊದಲೇ ಪ್ರಯಾಣಿಕರು ಬಸ್‌ನಿಂದ ಕೆಳಕ್ಕೆ ಇಳಿದಿದ್ದರಿಂದ ಯಾವುದೇ ಸಾವು-ನೋವು ಸಂಭವಿಸಿಲ್ಲ. ಬಸ್ ಸಂಪೂರ್ಣ ಭಸ್ಮವಾಗಿದೆ.

ಸ್ಥಳಕ್ಕೆ ಅಧಿಕಾರಿಗಳ ಭೇಟಿ: ಮಾಹಿತಿ ಪಡೆದ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದರು. ಆದರೆ, ಅಷ್ಟರಲ್ಲಿ ಬಸ್ ಸಂಪೂರ್ಣ ಸುಟ್ಟು ಹೋಗಿತ್ತು. ಲಗೇಜ್ ಬಾಕ್ಸ್‌ನಲ್ಲಿ ಇಟ್ಟಿದ್ದ ವಸ್ತುಗಳು ಸುಟ್ಟು ಭಸ್ಮವಾಗಿದ್ದವು. ಬೆಲೆ ಬಾಳುವ ವಸ್ತುಗಳನ್ನು ಕಳೆದುಕೊಂಡು ಪ್ರಯಾಣಿಕರು ಕಣ್ಣೀರಿಟ್ಟರು. ಸ್ಥಳಕ್ಕೆ ಬೇರೆ ಬಸ್ ಕರೆಯಿಸಿಕೊಂಡು ಪ್ರಯಾಣಿಕರನ್ನು ಕಲಬುರಗಿ ಸೇರಿದಂತೆ ಬೇರೆ ಬೇರೆ ಸ್ಥಳಗಳಿಗೆ ಕಳುಹಿಸಿಕೊಡಲಾಯಿತು.

ನೆಲಮಂಗಲ ಸಂಚಾರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಪಘಾತದ ಹಿನ್ನೆಲೆಯಲ್ಲಿ ಹೆದ್ದಾರಿಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಬೆಂಕಿ ನಂದಿಸಿದ ಬಳಿಕ ಕ್ರೇನ್ ಬಳಸಿ ಬಸ್ ತೆರವು ಮಾಡಲಾಯಿತು. ಬಳಿಕ ಹೆದ್ದಾರಿಯಲ್ಲಿ ವಾಹನಗಳು ಸುಗಮವಾಗಿ ಚಲಿಸಿದವು. ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ತೆರೆ

ಜಪಾನ್‌ನ 'ಲಾಸ್ಟ್ ಲ್ಯಾಂಡ್' ಅತ್ಯುತ್ತಮ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಶುಕ್ರವಾರ ನಗರದ ಲುಲು ಮಾಲ್‌ನಲ್ಲಿ ತೆರೆ ಬಿದ್ದಿದ್ದು, ಚಿತ್ರೋತ್ಸವದ ಏಷ್ಯನ್ ವಿಭಾಗದಲ್ಲಿ ಜಪಾನ್ ದೇಶದ 'ಲಾಸ್ಟ್ ಲ್ಯಾಂಡ್' ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದರೆ, ಮರಾಠಿಯ 'ಸಬರ್ ಬೊಂಡಾ' ಚಿತ್ರಭಾರತಿ ವಿಭಾಗದಲ್ಲಿ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿತು. ಕನ್ನಡ ವಿಭಾಗದಲ್ಲಿ 'ವನ್ಯಾ' ಚಿತ್ರ ಮೊದಲ ಬಹುಮಾನಕ್ಕೆ ಭಾಜನವಾಯಿತು.

ಏಷ್ಯನ್ ಚಿತ್ರ ವಿಭಾಗದಲ್ಲಿ ಭಾರತದ 'ಶೇಪ್ ಆಫ್ ಮೋಮೋ' ಮತ್ತು ಜಪಾನ್‌ನ 'ದಿ ಡೀಪೆಸ್ಟ್ ಸ್ಪೇಸ್ ಇನ್ ಯುಎಸ್' ಚಿತ್ರಗಳು ದ್ವಿತೀಯ ಮತ್ತು ತೃತೀಯ ಚಿತ್ರ ಪ್ರಶಸ್ತಿಗೆ ಭಾಜನವಾದವು. ಫಿಲಿಪ್ಪೀನ್ಸ್‌ನ 'ರಿಪಬ್ಲಿಕ್ ಆಫ್ ಪಿಪೊಲಿಪಿನಾಸ್' ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆಯಿತು.

ಭಾರತೀಯ (ಚಿತ್ರಭಾರತಿ) ವಿಭಾಗದಲ್ಲಿ ಮಲಯಾಳದ 'ಮೋಹಂ' ಮತ್ತು 'ಕಾಡು' ಚಿತ್ರಗಳು ಕ್ರಮವಾಗಿ 'ದ್ವಿತೀಯ ಮತ್ತು ತೃತೀಯ' ಪ್ರಶಸ್ತಿಗಳನ್ನು ಗೆದ್ದಿವೆ. ಮರಾಠಿ ಭಾಷೆಯ 'ಗೊಂದಾಳ್' ಚಿತ್ರವು ಫಿಪ್ರೆಸ್ಕಿ ಪ್ರಶಸ್ತಿ ಪಡೆದರೆ, ಮಲಯಾಳಂ ಭಾಷೆಯ 'ಸರ್ಕೀಟ್' ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆದಿದೆ.

ಕನ್ನಡ ಸ್ಪರ್ಧಾ ವಿಭಾಗದಲ್ಲಿ ದ್ವಿತೀಯ ಹಾಗೂ ತೃತೀಯ ಅತ್ಯುತ್ತಮ ಚಿತ್ರಗಳಾಗಿ 'ನಮ್ ಸಾಲಿ' ಮತ್ತು 'ರಾವಣ ರಾಜ್ಯದಲ್ಲಿ ನವದಂಪತಿಗಳು' ಆಯ್ಕೆಯಾದರೆ, 'ಹಕ್ಕಿಗಾಗಿ' ಚಿತ್ರಕ್ಕೆ ನೆಟ್‌ಪ್ಯಾಕ್ ತೀರ್ಪುಗಾರರ ಪ್ರಶಸ್ತಿ ಸಿಕ್ಕಿದೆ. 'ಮೃಗತೃಷ್ಣ' ಮತ್ತು 'ಫೋರ್ ಬೈ ಫೋರ್' ಚಿತ್ರಗಳು ತೀರ್ಪುಗಾರರ ವಿಶೇಷ ಮನ್ನಣೆಗೆ ಭಾಜನವಾಗಿವೆ.



ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು

> **ಸಿನಿಮಾ ಒಂದು ಭಾಷೆ. ಯಾವ ಸಿನಿಮಾವನ್ನೂ ಬೇಡ ಎನ್ನುವ ಹಕ್ಕಿಲ್ಲ. ಈ ಉದ್ದೇಶದಿಂದ ನಾನು ಚಿತ್ರೋತ್ಸವದ ಪ್ರಾರಂಭದಲ್ಲಿ ಮಾತನಾಡಿದ್ದೆ. ಪ್ರತಿ ದೇಶದ ಕಲಾವಿದ ಅವನ ನೋವನ್ನು ಹೇಳುತ್ತಾನೆ. ಅದಕ್ಕೆ ಅವಕಾಶ ನೀಡಬೇಕು**
> **ಪ್ರಕಾಶ್ ರಾಜ್**, ನಟ

ಅತ್ಯುತ್ತಮ ಚಿತ್ರ ಪ್ರಶಸ್ತಿ ವಿಜೇತರಿಗೆ ಪಾರಿತೋಷಕದ ಜೊತೆಗೆ ₹10 ಲಕ್ಷ ನಗದು ಬಹುಮಾನ ನೀಡಲಾಯಿತು. ದ್ವಿತೀಯ ಮತ್ತು ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗಳನ್ನು ಗೆದ್ದವರಿಗೆ ತಲಾ ₹5 ಲಕ್ಷ ಮತ್ತು ₹2 ಲಕ್ಷ ನೀಡಿ ಗೌರವಿಸಲಾಯಿತು.

ಇದೇ ವೇಳೆ ಸಂಗೀತ ನಿರ್ದೇಶಕ, ಗೀತ ಸಾಹಿತಿ ಹಂಸಲೇಖ ಅವರಿಗೆ 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. 'ಒಬ್ಬನಿಂದ ಸಿನಿಮಾವಲ್ಲ, ಇದೊಂದು ಸಾಮೂಹಿಕ ಕೃಷಿ. 'ಕಾಂತಾರ', 'ಕೆಜಿಎಫ್'ನಂಥ ಚಿತ್ರಗಳು ಉತ್ತರದವರು ದಕ್ಷಿಣದತ್ತ ತಿರುಗಿ ನೋಡುವಂತೆ ಮಾಡಿವೆ. ಜತೆಗೆ ಪ್ರಜಾಪ್ರಭುತ್ವ ರಕ್ಷಿಸುವ ಸಿನಿಮಾಗಳು ಬರಬೇಕು' ಎಂದು ಹಂಸಲೇಖ ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಮುರಳಿ ಪಿ.ಬಿ ಸೇರಿ ಅನೇಕ ಗಣ್ಯರು ಹಾಜರಿದ್ದರು.

ಸಂವಿಧಾನ ನಡಿಗೆ ಸರ್ವೋದಯದ ಮಾರ್ಗ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ

• ಬಿ.ಜೆ.ಧನ್ಯಪ್ರಸಾದ್

ಧಾರವಾಡ: ನಗರದ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ 'ಸಂವಿಧಾನವೇ ಬೆಳಕು- ಹೆಜ್ಜೆಯಿಡು ಹುಬ್ಬಳ್ಳಿ, ಧಾರವಾಡ' ಅಭಿಯಾನದಡಿ ಸಂವಿಧಾನ ನಡಿಗೆ (ವಾಕಥಾನ್) ಜರುಗಿತು. ಬೋಧಕರು, ವಿದ್ಯಾರ್ಥಿಗಳು, ಅಧಿಕಾರಿಗಳು, ವಕೀಲರು ಸೇರಿ ಹಲವರು ಧ್ವಜಗಳನ್ನು ಹಿಡಿದು ಉತ್ಸಾಹದಿಂದ ಹೆಜ್ಜೆ ಹಾಕಿದರು. 'ಅಂಬೇಡ್ಕರ್‌ಗೆ ಜೈ', 'ಸಂವಿಧಾನಕ್ಕೆ ಜೈ' ಎಂದು ಘೋಷಣೆ ಕೂಗಿದರು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗ ಹಾಗೂ ರಾಜ್ಯ ಸರ್ಕಾರದ ಸಮಾಜಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮಕ್ಕೂ ಮುನ್ನ ಗಾಂಧಿ ಭವನದಲ್ಲಿ ವಿಚಾರ ಸಂಕಿರಣ ನಡೆಯಿತು. ಅಲ್ಲಿ ಸಂವಿಧಾನದ ತಿರುಳನ್ನು ವಿವರಿಸಲಾಯಿತು. ಮಹತ್ವ ಮತ್ತು ಅಗತ್ಯ ತಿಳಿಯಪಡಿಸಲಾಯಿತು.

ಬೆಳಿಗ್ಗೆ 7ರಿಂದ 10ರವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಎಲ್ಲರೂ ಉತ್ಸಾಹದಿಂದ ಪಾಲ್ಗೊಂಡರು. ಕುಲಪತಿ ಪ್ರೊ.ಎ.ಎಂ.ಖಾನ್ ಅವರು ಚಾಲನೆ ನೀಡಿದರು. ವಿಶ್ವವಿದ್ಯಾಲಯದ ಆವರಣದಲ್ಲಿ ಮೂರು ಕಿಲೋ ಮೀಟರ್ ವಾಕಥಾನ್ ನಡೆಯಿತು. ಹಸಿರು ಪರಿಸರ, ಬೆಳಗಿನ ಎಳೆ ಬಿಸಿಲಿನಲ್ಲಿ ಎಲ್ಲರೂ ಹುರುಪಿನಿಂದ ಸಾಗಿದರು. ಗಾಂಧಿ ಭವನದಿಂದ ಆರಂಭಗೊಂಡು ಆಡಳಿತ ಕಚೇರಿ ಮುಂಭಾಗದ ರಸ್ತೆಯಲ್ಲಿ ಸಾಗಿ, ಕ್ರೀಡಾಂಗಣ ತಲುಪಿ, ಅಲ್ಲಿಂದ ಪುನಃ ಗಾಂಧಿ ಭವನಕ್ಕೆ ಮರಳಿದರು.

ಪ್ರೊ. ಎ.ಎಂ.ಖಾನ್ ಮಾತನಾಡಿ, 'ಸಂವಿಧಾನದ ಪ್ರಸ್ತಾವನೆಯನ್ನಷ್ಟೇ ಓದಿದರೆ ಸಾಲದು, ಸಂವಿಧಾನವನ್ನು ಪೂರ್ತಿ ಓದಬೇಕು. ಅಧ್ಯಯನ ಮಾಡಬೇಕು. ಹಕ್ಕುಗಳು, ಕರ್ತವ್ಯಗಳನ್ನು ಅರಿಯಬೇಕು. ಪ್ರಜೆಗಳು ಹೇಗೆ ಬದುಕಬೇಕು ಎಂಬುದನ್ನು ಮನಗಾಣಬೇಕು. ಸಂವಿಧಾನ ಪುಸ್ತಕ ದೊಡ್ಡದಿದೆ, ವಾರಕ್ಕೆ ಒಂದು ಪುಟವನ್ನಾದರೂ ಓದಿ, ಅರ್ಥೈಸಿಕೊಳ್ಳಬೇಕು. ಅದನ್ನು ಪಾಲಿಸಬೇಕು' ಎಂದು ಸಲಹೆ ನೀಡಿದರು.



'ಸಂವಿಧಾನವೇ ಬೆಳಕು' ಅಭಿಯಾನದ ವಾಕಥಾನ್‌ನಲ್ಲಿ ಗಣ್ಯರು, ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು
ಪ್ರಜಾವಾಣಿ ಚಿತ್ರ

'ಸಂವಿಧಾನಕ್ಕೆ ಸವಾಲು, ಹಿಮ್ಮೆಟ್ಟಿಸಲು ಸನ್ನದ್ಧರಾಗಿ'

'ಹಲವು ಸಾಧನೆಗಳು ಮತ್ತು ಅಭಿವೃದ್ಧಿಯ ನಂತರ ಸಂವಿಧಾನವೇ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಅವುಗಳನ್ನು ಹಿಮ್ಮೆಟ್ಟಿಸದಿದ್ದರೆ, ಪ್ರಜಾಪ್ರಭುತ್ವವಾದಿ ಆಡಳಿತ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದೇ ಕಷ್ಟವಾಗಬಹುದು' ಎಂದು ಗಾಂಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಶಿವಾನಂದ ವಿ.ಶೆಟ್ಟರ ಆತಂಕ ವ್ಯಕ್ತಪಡಿಸಿದರು.

ಸಂವಿಧಾನದ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, 'ಸಂವಿಧಾನ ಉಳಿಸಿಕೊಂಡಲ್ಲಿ ಮಾತ್ರವೇ ದೇಶದಲ್ಲಿ ಸೌಹಾರ್ದ ಮತ್ತು ಸಹಬಾಳ್ವೆ ಪರಂಪರೆ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಜೊತೆಗೂಡಿ, ಸಂವಿಧಾನ ರಕ್ಷಣೆಗೆ ಪಣತೊಡಬೇಕು' ಎಂದರು.

'ಹಕ್ಕುಗಳ ದಮನ, ಮಾನವ ಹಕ್ಕುಗಳ ಉಲ್ಲಂಘನೆ, ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ, ಮೂಲಭೂತವಾದ, ಕೋಮುವಾದ, ಪ್ರಜಾತಂತ್ರದ ಸಂಸ್ಥೆಗಳ ಸ್ವಾಯತ್ತತೆಗೆ ಧಕ್ಕೆಯಂಥ ಸವಾಲುಗಳಿವೆ. ಅವುಗಳನ್ನು ಹಿಮ್ಮೆಟಿಸಲು ಸನ್ನದ್ಧರಾಗಬೇಕು' ಎಂದರು.

'ಧರ್ಮ, ಜಾತಿ, ಭಾಷೆ, ಸಂಸ್ಕೃತಿ, ರಾಜಕೀಯ ಪಕ್ಷ, ಸಿದ್ಧಾಂತ ಸೇರಿ ಎಲ್ಲವೂ ವಿಭಿನ್ನವಾಗಿದ್ದರೂ ಎಲ್ಲದಕ್ಕೂ ಸಂವಿಧಾನ ಅವಕಾಶ ಕಲ್ಪಿಸುತ್ತದೆ. ಎಲ್ಲರನ್ನೂ, ಎಲ್ಲವನ್ನೂ ಒಳಗೊಳ್ಳುವ ಪ್ರಯತ್ನ ಮಾಡುತ್ತದೆ. ನಿಯಮಿತವಾಗಿ ಚುನಾವಣೆ ನಡೆದು, ಪ್ರಜಾಪ್ರಭುತ್ವ ವ್ಯವಸ್ಥೆಯು ಗಟ್ಟಿಯಾಗಿ ಉಳಿಯುವಲ್ಲಿ ಸಂವಿಧಾನ ಪ್ರಮುಖ ಪಾತ್ರ ವಹಿಸಿದೆ. ಸಂವಿಧಾನದ ಮೂಲತತ್ವಗಳನ್ನು ಎಲ್ಲರೂ ಅರಿತು, ಪಾಲಿಸಬೇಕು' ಎಂದರು.


ಪರೀಕ್ಷಾಂಗ ಕುಲಸಚಿವ ಪ್ರೊ. ಎನ್.ವೈ. ಮಟ್ಟಿಹಾಳ ಮಾತನಾಡಿ, 'ಸಂವಿಧಾನದೆಡೆ ನಡಿಗೆ ಎಂದರೆ ಸತ್ಯ, ಮಾನವೀಯತೆ, ಸಮಾನತೆ, ಭ್ರಾತೃತ್ವ, ನ್ಯಾಯದ ಕಡೆಗಿನ ನಡಿಗೆ. ಶೋಷಿತರು, ಬಡವರು, ಮಹಿಳೆಯರು ಎಲ್ಲರೂ ಸಮಾನತೆಯ ನೆಲಗಟ್ಟಿನಲ್ಲಿ ಬದುಕು ರೂಪಿಸಿಕೊಳ್ಳಲು ಸಾಧ್ಯ ಆಗಿಸುತ್ತಿರುವುದು ಸಂವಿಧಾನದ ಸಾಧನೆ' ಎಂದು ಹೇಳಿದರು.

'ಅಂಬೇಡ್ಕರ್ ಅವರು ಅಖಂಡ ಭಾರತಕ್ಕೆ ಸಂವಿಧಾನವನ್ನು ರಚಿಸಿಕೊಟ್ಟಿದ್ದಾರೆ. ದೇಶವನ್ನು ಭೌಗೋಳಿಕವಾಗಿ ಅಖಂಡವಾಗಿ ನೋಡಿದರೆ ಸಾಲದು, ಇಡೀ ಭಾರತದ ಬದುಕನ್ನು ಅಖಂಡವಾಗಿ ನೋಡಬೇಕು. ಸಂವಿಧಾನದ ಆಶಯಗಳು ಶೇ 100ರಷ್ಟು ಅನುಷ್ಠಾನವಾದರೆ, ಅದು ಸಾಧ್ಯವಾಗುತ್ತದೆ' ಎಂದು ವಿಶ್ಲೇಷಿಸಿದರು.

ಸಮಾಜಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಶುಭಾ ಪಿ. ಮಾತನಾಡಿ, 'ಪ್ರತಿದಿನ ಸೂರ್ಯನ ಬೆಳಕು ಚೈತನ್ಯ ನೀಡುವಂತೆ ಸಂವಿಧಾನವು ಚೈತನ್ಯ ನೀಡುತ್ತಿದೆ. ಸಂವಿಧಾನದಿಂದ ನಾವೇನು ಪಡೆದಿದ್ದೇವೆ ಎಂಬುದನ್ನು ತಿಳಿದುಕೊಳ್ಳಬೇಕು. ಅದರ ಶಕ್ತಿಯನ್ನು ಅರ್ಥ ಮಾಡಿಕೊಂಡು ಇತರರಿಗೂ ತಿಳಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡವರಿಗೆ ಪ್ರಮಾಣಪತ್ರ ವಿತರಿಸಲಾಯಿತು. 'ಪ್ರಜಾವಾಣಿ' ಹುಬ್ಬಳ್ಳಿ ಬ್ಯುರೊ ಮುಖ್ಯಸ್ಥ ರಾಹುಲ ಬೆಳಗಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಫಾರ್ಗಾದಲ್ಲಿ ಸಾಯಿಕುಮಾರ್ ಅಬ್ಬರ



ಫಾರ್ಗಾ

- ನಿರ್ಮಾಣ: ಅಶ್ವಿನಿ ರಾಮಪ್ರಸಾದ್
- ನಿರ್ದೇಶನ: ಎಂ.ಶಶಿಧರ
- ತಾರಾಗಣ: ಅರುಣ್ ರಾಮಪ್ರಸಾದ್, ಸಾಯಿಕುಮಾರ್, ಅರುಣ್ ಸಾಗರ್, ಸಂಪತ್ ರಾಜ್ ಮತ್ತಿತರರು

ಚಿತ್ರದ ಶೀರ್ಷಿಕೆಯಾಗಿರುವ 'ಫಾರ್ಗಾ' ಒಂದು ಕಾಲ್ಪನಿಕ ಊರು. ಅಲ್ಲಿ ಬಳಸುವ ಭಾಷೆಯಿಂದಾಗಿ, ಸಂಸ್ಕೃತಿಯಿಂದಾಗಿ ಕುಂದಾಪುರ ಕಡೆಯ ಊರೆಂಬ ಭಾವನೆ ಮೂಡುತ್ತದೆ. ಆದರೆ ಎಲ್ಲಿಯೂ ಇಂಥದ್ದೆ ಪ್ರಾಂತ್ಯಕ್ಕೆ ಸೇರಿರುವ ಊರು ಎಂಬುದನ್ನು ಕಥೆಯಲ್ಲಿ ಹೇಳಿಲ್ಲ. ಈ ಊರಿನಲ್ಲಿ ನಡೆಯುವ ಒಂದಷ್ಟು ವಿಸ್ಮಯಕಾರಿ ಘಟನೆಗಳೇ ಚಿತ್ರದ ಒಟ್ಟಾರೆ ಕಥೆ. ಮೊದಲಿಗೆ ಹಾರರ್ ಸಿನಿಮಾವಿರಬಹುದು ಎನಿಸಿದರೂ ಹಲವು ತಿರುವುಗಳನ್ನು ಪಡೆದುಕೊಳ್ಳುವ ಕಥೆ ಕೊನೆತನಕ ಕುತೂಹಲ ಉಳಿಸಿಕೊಳ್ಳುತ್ತದೆ.

ಕಥೆಯ ನಾಯಕ ವಿಕ್ರಮ್ ಅಡಿಗ ಒಂದು ಪುಸ್ತಕವನ್ನು ಹುಡುಕಿಕೊಂಡು 'ಫಾರ್ಗಾ'ದ ಗಜಾನನ ಐತಾಳರ ಮನೆಗೆ ಬರುತ್ತಾನೆ. ಪ್ರಾರಂಭದಲ್ಲಿ ಇದು ಈ ರೀತಿಯ ಕಥೆಯಾಗಿರಬಹುದೆಂಬ ಯಾವ ಸುಳಿವೂ ಸಿಗುವುದಿಲ್ಲ. ಆದರೆ ಈ ಊರಿಗೆ ಬರುವ ದಾರಿಯಲ್ಲಿ ನಡೆಯುವ ಒಂದಷ್ಟು ಘಟನೆಗಳಿಂದ ಇದೊಂದು ಹಾರರ್ ಸಿನಿಮಾವಿರಬಹುದೆಂಬ ಊಹೆ ಶುರುವಾಗುತ್ತದೆ. ಪ್ರೇಕ್ಷಕರನ್ನು ಭಯಗೊಳಿಸುವ ಸನ್ನಿವೇಶಗಳನ್ನು ಸೃಷ್ಟಿಸುವಲ್ಲಿ ನಿರ್ದೇಶಕ ಯಶಸ್ವಿಯಾಗಿದ್ದಾರೆ.

ಚಿತ್ರದ ಇಡೀ ಕಥೆ ನಡೆಯುವುದು ಗಜಾನನ ಐತಾಳರ ಮನೆಯಲ್ಲಿ. ಗಜಾನನ ಐತಾಳರ ತಂದೆ ಮಹಾಬಲ ಐತಾಳರು ಸಾಹಿತಿಯಾಗಿರುತ್ತಾರೆ. ಅವರು ಬರೆದ ಪುಸ್ತಕವೊಂದನ್ನು ಹುಡುಕಿಕೊಂಡು ನಾಯಕ ಅಲ್ಲಿಗೆ ಬಂದಿರುತ್ತಾನೆ. ಐತಾಳರ ಮನೆ, ಪರಿಸರ, ಅಲ್ಲಿನ ಪಾತ್ರಗಳ ಪರಿಚಯಕ್ಕೆ ನಿರ್ದೇಶಕ ತುಸು ಸಮಯ ತೆಗೆದುಕೊಳ್ಳುತ್ತಾರೆ. ಭಯದ ಸನ್ನಿವೇಶಗಳ ಜತೆ ಒಂದಷ್ಟು ಹಾಸ್ಯವನ್ನು ಬೆರೆಸಿ ಮೊದಲಾರ್ಧ ಮುಗಿಯುವ ಹೊತ್ತಿಗೆ ಕಥೆಗೊಂದು ಒಳ್ಳೆಯ ತಿರುವು ಸಿಕ್ಕಿರುತ್ತದೆ.

ಗಜಾನನ ಐತಾಳರಾಗಿ ನಟಿಸಿರುವ ಸಾಯಿಕುಮಾರ್ ಇಡೀ ಚಿತ್ರದ ಶಕ್ತಿ. ಅವರಿಗೆ ಚಿತ್ರದ ನಾಯಕನಿಗಿಂತ ಹೆಚ್ಚು ಪ್ರಾಮುಖ್ಯ ನೀಡಿರುವುದು ಚಿತ್ರದ ಸಣ್ಣಪುಟ್ಟ ಲೋಪಗಳನ್ನು ಮರೆಮಾಚುತ್ತದೆ. ಕುಂದಾಪುರ ಕಡೆಯ ಕೃಷಿಕನಾಗಿ ಸಾಯಿಕುಮಾರ್ ಪಾತ್ರವನ್ನು ಜೀವಿಸಿದ್ದಾರೆ. ಪಾತ್ರ ಪೋಷಣೆಯೂ ಬಹಳ ಸೊಗಸಾಗಿದೆ. ಸಾಯಿಕುಮಾರ್ ಅವರನ್ನು ರಗಡ್, ಖಡಕ್ ಪಾತ್ರಗಳಲ್ಲಿ ನೋಡಿದವರಿಗೆ ಇಲ್ಲೊಂದು ಅಚ್ಚರಿಯಿದೆ. ಅದನ್ನು ಚಿತ್ರದಲ್ಲಿಯೇ ನೋಡಬೇಕು. ವಿಕ್ರಮ್ ಅಡಿಗನಾಗಿ ಅರುಣ್ ರಾಮಪ್ರಸಾದ್ ಅವರದ್ದು ಮೊದಲ ಸಿನಿಮಾ ಎನ್ನಿಸುವುದಿಲ್ಲ.

ಮೊದಲಿಗೆ ಅತಿಯಾದ ಹಾಸ್ಯದಿಂದ ಹಿಂಸೆ ಎನಿಸುವ ಅರುಣ್ ಸಾಗರ್ ಪಾತ್ರ ಕೂಡ ಒಳ್ಳೆಯ ತಿರುವು ಪಡೆದುಕೊಳ್ಳುತ್ತದೆ. ಹೀಗಾಗಿ ಚಿತ್ರದ ಮೊದಲಾರ್ಧ ಮುಗಿದಿದ್ದೇ ತಿಳಿಯುವುದಿಲ್ಲ. ಆದರೆ ದ್ವಿತೀಯಾರ್ಧದ ಕಥೆಯನ್ನು ಸ್ವಲ್ಪ ಬಿಗಿಗೊಳಿಸುವ ಅವಕಾಶ ನಿರ್ದೇಶಕರಿಗಿತ್ತು. ಎಐ ದೃಶ್ಯಗಳನ್ನು ಬಳಸಿ ಕೊಂಡು ಪುರಾಣದ ಕಥೆಯನ್ನು ಮುಖ್ಯಕಥೆಯಲ್ಲಿ ಸೇರಿಸುವ ಸನ್ನಿವೇಶಗಳನ್ನು ಅರ್ಧದಷ್ಟು ಕತ್ತರಿಸಿದ್ದರೆ ದ್ವಿತೀಯಾರ್ಧವೂ ವೇಗ ಪಡೆಯುತ್ತಿತ್ತು. ಗುರುಕಿರಣ್ ಹಿನ್ನೆಲೆ ಸಂಗೀತ ಸನ್ನಿವೇಶಗಳಿಗೆ ಸೂಕ್ತವಾಗಿದ್ದರೂ, ಭಯಮೂಡಿಸಲೆಂದು ನೀಡಿರುವ ಹಿನ್ನೆಲೆ ಸಂಗೀತದ ಅಬ್ಬರ ಸ್ವಲ್ಪ ಕಡಿಮೆಯಾಗಬಹುದಿತ್ತು.

ವಿನಾಯಕ ಕೆ.ಎಸ್.

ನೋಡಬಹುದಾದ ಸಿನಿಮಾ

ನಾವು ನೋಡಿದ ಸಿನಿಮಾ

ಎಳೆ ರೌಡಿಯ ಪರಿವರ್ತನೆ ಕಥೆ



ಸೂರ್ಯ ಪ್ರಖ್ಯಾತ್

ಜೆಸಿ-ದಿ ಯೂನಿವರ್ಸಿಟಿ (ಕನ್ನಡ)

- ನಿರ್ಮಾಣ: ಧನಂಜಯ
- ನಿರ್ದೇಶನ: ಚೇತನ್ ಜೈರಾಮ್
- ತಾರಾಗಣ: ಸೂರ್ಯ ಪ್ರಖ್ಯಾತ್, ಥ್ರಿಲ್ಲರ್ ಮಂಜು, ರಂಗಾಯಣ ರಘು, ಭಾವನಾ ರೆಡ್ಡಿ ಮತ್ತಿತರರು.

ಭೂಗತಲೋಕ, ರೌಡಿಸಂ ಕುರಿತ ಕಥೆಯಿರುವ ಸಿನಿಮಾಗಳಲ್ಲಿ ನಾಯಕನನ್ನೇ ರೌಡಿಯನ್ನಾಗಿಸಿದರೆ ಆತ ಕ್ಲೈಮ್ಯಾಕ್ಸ್‌ನಲ್ಲಿ ಕೊಲೆಯಾಗುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಕಥೆಯ ಕೊನೆಯಲ್ಲಿ ಆತನಿಗೊಂದು ಪರಿವರ್ತನೆ ನೀಡುವುದು ಅನಿವಾರ್ಯವಾಗುತ್ತದೆ. 'ಜೋಗಿ', 'ಎಕ್ಕ' ಸೇರಿದಂತೆ ಹಲವು ಸಿನಿಮಾಗಳು ಇದೇ ಮಾದರಿಯಲ್ಲಿ ಬಂದಿವೆ. ಇದೇ ಅನಿವಾರ್ಯಕ್ಕೆ ಸಿಕ್ಕಿಕೊಂಡಂತೆ 'ಜೆಸಿ' ಸಿನಿಮಾ ಸಾಗುತ್ತದೆ.

ಮಧುಸೂದನ-ಮ್ಯಾಡಿ (ಸೂರ್ಯ ಪ್ರಖ್ಯಾತ್) ಕಾಲೇಜು ವಿದ್ಯಾರ್ಥಿ. ತಂದೆಗೆ (ರಂಗಾಯಣ ರಘು) ಮಗನ ಮೇಲೆ ಪ್ರೀತಿ ಕೊಂಚ ಹೆಚ್ಚು. ಮ್ಯಾಡಿಗೆ ಸಹಪಾಠಿ ಮೇಘನಾ(ಭಾವನಾ) ಮೇಲೆ ಪ್ರೀತಿ. ಎಂಜಿನಿಯರಿಂಗ್ ಓದುತ್ತಿರುವಾಗಲೂ ಈ ಪ್ರೀತಿ ಮುಂದುವರಿಯುತ್ತದೆ. ಈ ಸಂದರ್ಭದಲ್ಲಿ ಮೇಘನಾಳಿಗೆ ಅನಾಮಿಕನೊಬ್ಬ ಕರೆ ಮಾಡಿ ಪೀಡಿಸುತ್ತಾನೆ. ಈತನನ್ನು ವಿಚಾರಿಸಿಕೊಳ್ಳಲು ಹೊರಡುವ ಮ್ಯಾಡಿ 'ರಾಕಾ' ಎಂಬ ರೌಡಿ ಕೈಗೆ ಸಿಕ್ಕು ಏಟು ತಿನ್ನುತ್ತಾನೆ. ಈತನ ವಿರುದ್ಧ ಪ್ರತೀಕಾರಕ್ಕೆ ಹಟ ಹಿಡಿಯುವ ಮ್ಯಾಡಿ ಆಕಸ್ಮಿಕವಾಗಿ ಪೊಲೀಸ್ ಕೈಗೆ ಸಿಕ್ಕು ನ್ಯಾಯಾಂಗ ಬಂಧನಕ್ಕೆ (ಜುಡಿಷಿಯಲ್ ಕಸ್ಟಡಿ–ಜೆಸಿ) ಒಳಗಾಗಿ ಜೈಲು ಸೇರುತ್ತಾನೆ. ಇಲ್ಲಿಂದ 'ಕುಮಾರಿ' (ಥ್ರಿಲ್ಲರ್ ಮಂಜು) ಮೂಲಕ ರೌಡಿಸಂ ಲೋಕಕ್ಕೆ ಆತ ಇಳಿದ ಬಳಿಕ ಕಥೆ ತೆರೆದುಕೊಳ್ಳಲಾರಂಭಿಸುತ್ತದೆ.

ಭೂತ, ಭವಿಷ್ಯ ಹಾಗೂ ವರ್ತಮಾನದಲ್ಲಿ ನಡೆಯುತ್ತಿರುವಂತೆ ನಾನ್ ಲೀನಿಯರ್ ಮಾದರಿಯಲ್ಲಿ ಚಿತ್ರಕಥೆಯಿದೆ. ಕಥೆ ಹೀಗೆ ಸಾಗಲಿದೆ ಎಂದು ಊಹಿಸಬಹುದಾಗಿದೆ. ದ್ವಿತೀಯಾರ್ಧಕ್ಕೆ ಹೋಲಿಸಿದರೆ ಮೊದಲಾರ್ಧದ ಕಥೆ ಗಟ್ಟಿಯಾಗಿದೆ. ಆಗಾಗ ಸುದ್ದಿಯಾಗುವ ಜೈಲುಗಳಲ್ಲಿನ ಎಲ್ಲಾ ಅವ್ಯವಹಾರ, ಚಟುವಟಿಕೆಗಳನ್ನು ಕಥೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಪ್ರೀತಿ, ಅಪ್ಪನ ಭಾವನಾತ್ಮಕ ದೃಶ್ಯಗಳು, ಕ್ರೈಂ ಲೋಕ ಹೀಗೆ ಎಲ್ಲಾ ಅಂಶಗಳನ್ನು ಹದವಾಗಿ ಬೆರೆಸಲಾಗಿದೆ.

ಮೊದಲಾರ್ಧದಲ್ಲಿ ಎಲ್ಲಾ ಅವ್ಯವಹಾರಗಳ ತಾಣದಂತೆ ಕೇಂದ್ರ ಕಾರಾಗೃಹವನ್ನು ತೋರಿಸಲಾಗಿದೆ. ಆದರೆ ದ್ವಿತೀಯಾರ್ಧದಲ್ಲಿ ಇದೇ ಜೈಲು ಸ್ವಚ್ಛವಾಗಿದೆ ಎಂಬಂತೆ ಬಿಂಬಿಸಲಾಗಿದೆ. ನಾಯಕನ ಪರಿವರ್ತನೆಯನ್ನೇ ಧ್ಯೇಯವಾಗಿಸಿದ ನಿರ್ದೇಶಕರು ಬರವಣಿಗೆಯನ್ನು ಇಲ್ಲಿ ಸಡಿಲ ಮಾಡಿದ್ದಾರೆ. ಹೀಗಾಗಿಯೇ ಎಲ್ಲರಿಗೂ ಕಿವಿಮಾತು ಹೇಳುತ್ತಿದ್ದ 'ಕುಮಾರಿ' ಒಬ್ಬನೇ ಸಿಕ್ಕಿಹಾಕಿಕೊಂಡಾಗ, ಅಪ್ಪನನ್ನು ಕಂಡ ಕೂಡಲೇ ಏಕಾಏಕಿ ಪರಿವರ್ತನೆಯಾಗುವ ಮ್ಯಾಡಿಯನ್ನು ಕಂಡಾಗ, ಮ್ಯಾಡಿಯನ್ನು ಕೊಲ್ಲಲು ಹಪಹಪಿಸುತ್ತಿದ್ದ 'ಕವಳ' ಎಂಬ ರೌಡಿಯ ಹೆಂಡತಿ ಕ್ಲೈಮ್ಯಾಕ್ಸ್‌ನಲ್ಲಿ ಧ್ಯಾನಕ್ಕೆ ಕೂತಾಗ ಆಶ್ಚರ್ಯವಾಗುತ್ತದೆ. ರೌಡಿಸಂ ಸಿನಿಮಾಗಳಲ್ಲಿ ಸಂಭಾಷಣೆ ಇತ್ತೀಚಿನ ದಿನಗಳಲ್ಲಿ ಏಕತಾನತೆಯಂತೆ ಭಾಸವಾಗುತ್ತಿದೆ.

ನಟನೆಯಲ್ಲಿ ಸೂರ್ಯ ಪ್ರಖ್ಯಾತ್ 'ಮ್ಯಾಡಿ'ಯಾಗಿ ಜೀವಿಸಿದ್ದಾರೆ. ಭಾವನಾತ್ಮಕ ದೃಶ್ಯಗಳಲ್ಲಿ ರಂಗಾಯಣ ರಘು ನಟನೆ ಚೆನ್ನಾಗಿದೆ. 'ರಾಕಾ'ನಾಗಿ ವಿಜಯ್ ಸಿಂಹ ಖಳನಟನ ಪಾತ್ರಕ್ಕೆ ಗತ್ತು ತಂದಿದ್ದಾರೆ. ನೆನಪಿನಲ್ಲಿ ಉಳಿಯುವ ಹಾಡುಗಳಿಲ್ಲ.

ಅಭಿಲಾಷ್ ಪಿ.ಎಸ್.

ನೋಡಬಹುದಾದ ಚಿತ್ರ

ಬಡವರಿಗೆ ಎನ್‌ಆರ್‌ಐ 'ಸೂರು ಭಾಗ್ಯ'

ಬ್ಯಾಂಕ್ ಸಲಹೆಗಾರರ ಸಮಾಜಮುಖಿ ಸೇವೆ

• ಇದುವರೆಗೂ 56 ಮನೆಗಳ ಕೊಡುಗೆ

• ಎಂ.ಜಿ. ಬಾಲಕೃಷ್ಣ

ಹೊಸಪೇಟೆ (ವಿಜಯನಗರ): ಬಡತನ, ಸಂಕಷ್ಟದಲ್ಲಿ ಸಿಲುಕಿರುವ ಮಹಿಳೆಯರಿಗೆ ಮನೆ ಕಟ್ಟಿಸಿಕೊಡುವ ಸಮಾಜಮುಖಿ ಸೇವೆಯಲ್ಲಿ ಬೆಂಗಳೂರಿನ ಬ್ಯಾಂಕ್ ಸಲಹೆಗಾರ ನಿತ್ಯಾನಂದ (ನಿತಿ) ತೊಡಗಿದ್ದಾರೆ. ನ್ಯೂಯಾರ್ಕ್‌ನಲ್ಲಿ ನೆಲಸಿರುವ ಅವರು, ಹೊಸಪೇಟೆ ತಾಲ್ಲೂಕಿನಲ್ಲಿ 20 ಮನೆ ಕಟ್ಟಿಸಿಕೊಟ್ಟಿದ್ದಾರೆ.

ಪುನರ್ವಸತಿ ಕಲ್ಪಿತ ದೇವದಾಸಿಯರ ಪ್ರಗತಿ ಮತ್ತು ಇತರೆ ಸಮಾಜಮುಖಿ ಕಾರ್ಯದಲ್ಲಿ ನಿರತವಾಗಿರುವ 'ಸಖಿ' ಟ್ರಸ್ಟ್‌ನ ಕಾರ್ಯಗಳಿಂದ ಪ್ರೇರಿತರಾಗಿರುವ ನಿತ್ಯಾನಂದ, ಸದ್ಯ ತುಮಕೂರು ಜಿಲ್ಲೆ ಪಾವಗಡದ ಹಳ್ಳಿಗಳಲ್ಲಿ ಪೌರ ಕಾರ್ಮಿಕರಿಗೆ 20 ಮನೆಗಳನ್ನು ಸಖಿ ಟ್ರಸ್ಟ್ ಉಸ್ತುವಾರಿಯಲ್ಲೇ ಕಟ್ಟಿಸಿಕೊಡಲು ನಿರ್ಧರಿಸಿದ್ದಾರೆ.

ಹೊಸಪೇಟೆ ತಾಲ್ಲೂಕಿನ ಪಿ.ಕೆ. ಹಳ್ಳಿಯಲ್ಲಿ 9, ವಡ್ಡರಹಳ್ಳಿಯಲ್ಲಿ 1ಮನೆ, ಬಸವನದುರ್ಗ, 82 ಡಣಾಪುರ ಗ್ರಾಮದಲ್ಲಿ ತಲಾ 4, ಬೆನಕಾಪುರದಲ್ಲಿ 2 ಮನೆಗಳನ್ನು ಈಗ ನಿರ್ಮಿಸಲಾಗಿದ್ದು, ಅವುಗಳ ಉದ್ಘಾಟನೆಗೆ ಅಮೆರಿಕದಿಂದ ನಿತ್ಯಾನಂದ ಬಂದಿದ್ದಾರೆ.

'ರಾಜ್ಯದಲ್ಲಿ ಅರ್ಹ, ಬಡ ಮಹಿಳೆಯರಿಗೆ 100 ಮನೆ ಕಟ್ಟಿಸಿಕೊಡುವ ಸಂಕಲ್ಪ ಮಾಡಿದೆ. ಈಗ 56 ಮನೆ ನಿರ್ಮಾಣ ಆಗಿದೆ. ಸಖಿ ಟ್ರಸ್ಟ್ ಜೊತೆಗೆ ಮುಂದಿನ ಯೋಜನೆಗಳ ಜಾರಿಗೊಳಿಸುವ ಉದ್ದೇಶವಿದೆ. ಪಾವಗಡದಲ್ಲಿ ಪೌರಕಾರ್ಮಿಕರಿಗೆ 20 ಮನೆಗಳನ್ನು ನೀಡಲು ಅರ್ಹರ ಆಯ್ಕೆ ನಡೆದಿದೆ' ಎಂದು ನಿತ್ಯಾನಂದ ಹೇಳಿದರು.

> **ಬಡವರು, ನಿರ್ಗತಿಕರ ಹೆಸರಲ್ಲಿ ವಂಚಿಸುವುದು ದೊಡ್ಡ ತಪ್ಪು. ಮನೆ ದಾನ ಮಾಡುವಾಗಲೂ ಅಷ್ಟೇ, ನಿಜವಾದ ಫಲಾನುಭವಿಗಳನ್ನು ನಾನೇ ಆಯ್ಕೆ ಮಾಡುತ್ತೇನೆ, ಸಖಿ ಟ್ರಸ್ಟ್ ನನ್ನ ನಂಬಿಕೆ ಉಳಿಸಿಕೊಂಡಿದೆ**
> **ನಿತ್ಯಾನಂದ,** ಬ್ಯಾಂಕ್ ಸಲಹೆಗಾರ

> **ದಾನಿಗಳ ವಿಶ್ವಾಸ ಉಳಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಸಖಿ ಟ್ರಸ್ಟ್ ಅದಕ್ಕೆ ಪಾತ್ರವಾಗಿರುವುದರಿಂದ ಸಂತೋಷವಾಗಿದೆ. ನಮ್ಮ ಹೊಣೆಗಾರಿಕೆ ಇನ್ನಷ್ಟು ಹೆಚ್ಚಿದೆ**
> **ಎಂ.ಭಾಗ್ಯಲಕ್ಷ್ಮಿ,** ಅಧ್ಯಕ್ಷೆ, ಸಖಿ ಟ್ರಸ್ಟ್



ಹೊಸಪೇಟೆ ತಾಲ್ಲೂಕಿನ ಪಿ.ಕೆ.ಹಳ್ಳಿಯಲ್ಲಿ ನೀಡಿದ ₹3.50 ಲಕ್ಷ ಅನುದಾನದಲ್ಲಿ ನಿರ್ಮಿಸಿರುವ ಮನೆ ಹಸ್ತಾಂತರ ಸಂದರ್ಭದಲ್ಲಿ ನಿತ್ಯಾನಂದ. ಸಖಿ ಟ್ರಸ್ಟ್ ಅಧ್ಯಕ್ಷೆ ಭಾಗ್ಯಲಕ್ಷ್ಮಿ (ಎಡಬದಿ) ಇದ್ದಾರೆ –ಪ್ರಜಾವಾಣಿ ಚಿತ್ರ

ಒಳ್ಳೆ ಸುದ್ದಿ

'ಮನೆನಿರ್ಮಾಣದ ಇಡೀ ವೆಚ್ಚವನ್ನು ನಾನೇ ಭರಿಸುತ್ತೇನೆ. ದೇವರು ನನಗೆ ಅದೃಷ್ಟ, ಸಂಪತ್ತು ಕೊಟ್ಟಿದ್ದಾನೆ. ಸಾಯುವಾಗ ಸಂಪತ್ತನ್ನು ಕೊಂಡೊಯ್ಯುವುದಿಲ್ಲ. ಹೀಗಾಗಿ ನನ್ನಿಂದ ನೆರವು ಪಡೆದವರು ಮುಂದೊಂದು ದಿನ ಇತರರಿಗೂ ನೆರವಾಗುತ್ತಾರೆ ಎಂಬ ಭಾವನೆಯೊಂದಿಗೆ ಈ ಸೇವೆಯಲ್ಲಿ ತೊಡಗಿದ್ದೇನೆ' ಎಂದು ಅವರು ಹೇಳಿದರು.

ಎಲ್ಲೆಲ್ಲಿ ಮನೆ?: ನಿತ್ಯಾನಂದ ಅವರು ಹೊಸಪೇಟೆ ತಾಲ್ಲೂಕಿನಲ್ಲಿ ಮೊದಲ ವರ್ಷ ತಲಾ ₹2.80 ಲಕ್ಷ ವೆಚ್ಚದಂತೆ ಐದು ಮನೆಗಳನ್ನು, ಎರಡನೇ ವರ್ಷ ತಲಾ ₹2.90 ಲಕ್ಷ ವೆಚ್ಚದಂತೆ 10 ಮನೆಗಳನ್ನು ಕಟ್ಟಿಸಿಕೊಟ್ಟಿದ್ದರು. ಈ ಬಾರಿ 20 ಮನೆಗಳನ್ನು ತಲಾ ₹3.50 ಲಕ್ಷ ವೆಚ್ಚದಲ್ಲಿ ನಿರ್ಮಿಸಿ ಕೊಟ್ಟಿದ್ದಾರೆ. ಹೀಗಾಗಿ ಹೊಸಪೇಟೆ ತಾಲ್ಲೂಕಿನಲ್ಲಿಯೇ 35 ಮನೆಗಳನ್ನು ಕಟ್ಟಿಸಿಕೊಟ್ಟಂತಾಗಿದೆ. ಕೋಲಾರದಲ್ಲಿ 11, ಬೆಳಗಾವಿಯಲ್ಲಿ ನಾಲ್ಕು ಮತ್ತು ಚಾಮರಾಜನಗರದಲ್ಲಿ ಆರು ಮನೆಗಳನ್ನು ಅವರು ಕಟ್ಟಿಸಿಕೊಟ್ಟಿದ್ದಾರೆ.

ತಡೆ ಹಿಡಿದಿದ್ದ ₹10 ಕೋಟಿ ಬಿಡುಗಡೆ

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಗೆ ಕ್ರೆಸ್ಟ್‌ಗೇಟ್ ಅಳವಡಿಸಲು ಆಂಧ್ರಪ್ರದೇಶ ನೀಡಿದ್ದ ಹಣದಲ್ಲಿ ತಡೆಹಿಡಿದಿದ್ದ ₹10 ಕೋಟಿ ಅನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ' ಎಂದು ಸಂಸದ ಇ.ತುಕಾರಾಂ ಶುಕ್ರವಾರ ತಿಳಿಸಿದರು.

'ಕಾಮಗಾರಿಗೆ ಧಕ್ಕೆ ಆಗಬಾರದೆಂಬ ನನ್ನ ಮನವಿಗೆ ಸ್ಪಂದಿಸಿ ತುಂಗಭದ್ರಾ ಮಂಡಳಿಗೆ ಹಣ ಬಿಡುಗಡೆಗೆ ಸರ್ಕಾರ ಸೂಚಿಸಿದೆ'. ಪ್ರತಿಯನ್ನು ಮಂಡಳಿಗೂ ಕಳುಹಿಸಲಾಗಿದೆ' ಎಂದು ಶುಕ್ರವಾರ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಅಣೆಕಟ್ಟೆಗೆ ಫೆಬ್ರುವರಿ ಅಂತ್ಯದೊಳಗೆ 20 ಗೇಟ್ ಅಳವಡಿಸುವ ಭರವಸೆಯನ್ನು ಮಂಡಳಿ ನೀಡಿದೆ' ಎಂದರು.

ಹಣ ತಡೆ ಹಿಡಿದ ಕುರಿತು ಜ. 23, 28 ರಂದು 'ಪ್ರಜಾವಾಣಿ' ವರದಿ ಮಾಡಿತ್ತು.

'1.23 ಲಕ್ಷ ಮಂದಿಗೆ ಹಕ್ಕುಪತ್ರ ವಿತರಣೆ 14ಕ್ಕೆ'

ಹಾವೇರಿ: 'ನಗರದಲ್ಲಿ ಫೆ.14ರಂದು ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶ ನಡೆಯಲಿದ್ದು, ಒಟ್ಟು 1.23 ಲಕ್ಷ ಫಲಾನುಭವಿಗಳಿಗೆ ಕಂದಾಯ ಇಲಾಖೆಯಿಂದ ಹಕ್ಕುಪತ್ರ ವಿತರಣೆ ಮಾಡಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಶುಕ್ರವಾರ ಇಲ್ಲಿ ಹೇಳಿದರು.

ಸಮಾವೇಶ ಸ್ಥಳ ಪರಿಶೀಲಿಸಿ ಮಾತನಾಡಿದ ಅವರು, 'ಹಾವೇರಿ (50 ಸಾವಿರ) ಚಿತ್ರದುರ್ಗ (5,500), ದಾವಣಗೆರೆ (20 ಸಾವಿರ) ಶಿವಮೊಗ್ಗ (10 ಸಾವಿರ) ಚಿಕ್ಕಮಗಳೂರಿನ 7 ಸಾವಿರ, ಧಾರವಾಡ, ಗದಗ, ಕೊಪ್ಪಳ ಜಿಲ್ಲೆಯ ತಲಾ 10 ಸಾವಿರ ಮತ್ತು ಉತ್ತರ ಕನ್ನಡ ಜಿಲ್ಲೆಯ ಒಂದು ಸಾವಿರ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಗುವುದು' ಎಂದು ತಿಳಿಸಿದರು.

ಪತ್ರಕರ್ತರ 'ಬ್ರದರ್' ಇನ್ನಿಲ್ಲ



ಶ್ರೀನಿವಾಸನ್

ಮೈಸೂರು: ಗಾಂಧಿವಾದಿ, ಪತ್ರಕರ್ತ ಕೆ.ವಿ.ಶ್ರೀನಿವಾಸನ್ (81) ಅವರು ಹುಣಸೂರಿನ ಕಲ್ಕುಣಿಕೆ ಗ್ರಾಮದಲ್ಲಿ ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಅವಿವಾಹಿತರಾಗಿದ್ದ ಅವರು, ವೃತ್ತಿ ಬದ್ಧತೆ, ಕಿರಿಯರಿಗೆ ನೀಡುತ್ತಿದ್ದ ಪ್ರೋತ್ಸಾಹದ ಕಾರಣಕ್ಕೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ 'ಬ್ರದರ್' ಎಂದೇ ಹೆಸರಾಗಿದ್ದರು. ನಗರದ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಅವರನ್ನು ಕೆಲವು ದಿನಗಳ ಹಿಂದೆ ಕಲ್ಕುಣಿಕೆ ಗ್ರಾಮಕ್ಕೆ ಕರೆತರಲಾಗಿತ್ತು. ಅಂತ್ಯಕ್ರಿಯೆ ಶನಿವಾರ (ಫೆ.7) ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

1944ರ ಮಾರ್ಚ್ 6ರಂದು ಜನಿಸಿದ ಅವರು ಎಂ.ಎ ಪತ್ರಿಕೋದ್ಯಮ ಹಾಗೂ ಎಲ್‌ಎಲ್‌ಬಿ ಪದವಿ ಪಡೆದಿದ್ದರು. ಭಾರತೀಯ ಹಾಗೂ ಪಾಶ್ಚಾತ್ಯ ತತ್ವಶಾಸ್ತ್ರದ ಸರ್ಟಿಫಿಕೇಟ್ ಕೋರ್ಸ್ ಮಾಡಿದ್ದರು. ಗಾಂಧಿ ತತ್ವದಲ್ಲಿ ಅಪಾರ ಒಲವಿದ್ದ ಅವರು, ಗಾಂಧಿ ಅಧ್ಯಯನದಲ್ಲಿ ಡಿಪ್ಲೊಮಾ ಮಾಡಿದ್ದರು. 'ಪತ್ರಿಕೋದ್ಯಮಿಯಾಗಿ ಗಾಂಧೀಜಿ' ಮತ್ತು 'ಸಹ ಬರಹಗಾರರ ಜಾಹೀರಾತು' ಕೃತಿಗಳನ್ನು ಬರೆದಿದ್ದಾರೆ.

'ನವಧ್ವನಿ' ಕನ್ನಡ ವಾರಪತ್ರಿಕೆಯನ್ನು ಸ್ಥಾಪಿಸಿದ್ದರು. ಹಲವು ಪತ್ರಕರ್ತರನ್ನು ರೂಪಿಸಿದ 'ಮಹಾನಂದಿ' ಪತ್ರಿಕೆಯ ಸಹಾಯಕ ಸಂಪಾದಕರಾಗಿದ್ದರು. 'ಸಂಕ್ರಾಂತಿ', 'ಅಶೋಕ', 'ವಿಜಯ', 'ವರ್ತಮಾನ' ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದರು. ಆಕಾಶವಾಣಿಯ ವರದಿಗಾರರಾಗಿದ್ದರು. 70ರ ದಶಕದಲ್ಲಿ ಜಯಪ್ರಕಾಶ ನಾರಾಯಣ ಮುನ್ನಡೆಸಿದ ಚಳವಳಿಗಳಲ್ಲಿ ಪಾಲ್ಗೊಂಡಿದ್ದರು. ಹಿಂದಿ ವಿರೋಧಿ ಚಳವಳಿಯಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದ್ದರು. ಪತ್ರಕರ್ತರ ಅಭ್ಯುದಯಕ್ಕಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಹಲವು ಪ್ರಶಸ್ತಿಗಳನ್ನು ಸ್ಥಾಪಿಸಿದ್ದರು.

‘ಗರ್ಭಾವಸ್ಥೆ ಮುಂದುವರಿಸಲು ಹೇಳಲಾಗದು’

17 ವರ್ಷದ ಬಾಲಕಿಯ ಗರ್ಭಪಾತಕ್ಕೆ ಒಪ್ಪಿಗೆ • ಮುಂಬೈನ ಜೆ.ಜೆ.ಆಸ್ಪತ್ರೆಗೆ ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ(ಪಿಟಿಐ): ‘ಯಾವುದೇ ಮಹಿಳೆ, ಅದರಲ್ಲೂ ಬಾಲಕಿಯೊಬ್ಬಳು ಗರ್ಭಿಣಿಯಾಗಿದ್ದಲ್ಲಿ, ಗರ್ಭ ಧರಿಸಿರುವ ಸ್ಥಿತಿಯನ್ನು ಮುಂದುವರಿಸುವಂತೆ ನ್ಯಾಯಾಲಯ ಆಕೆಗೆ ಬಲವಂತ ಮಾಡಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

30 ವಾರಗಳ ಗರ್ಭಿಣಿಯಾಗಿರುವ 17 ವರ್ಷದ ಬಾಲಕಿಗೆ ಗರ್ಭಪಾತ ಮಾಡಿಸುವಂತೆ ಮುಂಬೈನ ಜೆ.ಜೆ. ಆಸ್ಪತ್ರೆಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ನೆರೆಮನೆ ಬಾಲಕನೊಂದಿಗೆ ಸಂಬಂಧ ಹೊಂದಿದ್ದ ಬಾಲಕಿಯು ಗರ್ಭಿಣಿಯಾಗಿದ್ದು, ಗರ್ಭಪಾತಕ್ಕೆ ಅನುಮತಿ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರು ಇದ್ದ ನ್ಯಾಯಪೀಠ ನಡೆಸಿತು.



‘ಬಾಲಕಿಯು ಗರ್ಭ ಧರಿಸಿರುವುದಕ್ಕೆ ಒಪ್ಪಿತ ಸಂಬಂಧ ಅಥವಾ ಲೈಂಗಿಕ ದೌರ್ಜನ್ಯ ಕಾರಣವೇ ಎಂಬುದು ಈಗ ನಮ್ಮ ಮುಂದಿರುವ ವಿಚಾರವಲ್ಲ. ಗರ್ಭಿಣಿ ಸ್ಥಿತಿಯನ್ನು ಮುಂದುವರಿಸುವ ಕುರಿತು ಅಪ್ರಾಪ್ತ ವಯಸ್ಕಳು ಹೊಂದಿರುವ ಹಕ್ಕನ್ನು ನ್ಯಾಯಾಲಯ ಪರಿಗಣಿಸಿದೆ’ ಎಂದು ಪೀಠ ಹೇಳಿದೆ.

‘ಸ್ವತಃ ಈಕೆ ಅಪ್ರಾಪ್ತ ವಯಸ್ಕಳು. ದುರದೃಷ್ಟವಶಾತ್, ತಾನು ಹೊಂದಿದ್ದ ಸಂಬಂಧದಿಂದಾಗಿ ಈ ಪರಿಸ್ಥಿತಿ ಎದುರಿಸುತ್ತಿದ್ದಾಳೆ. ಗರ್ಭ ಧರಿಸಿರುವ ಸ್ಥಿತಿಯನ್ನು ಆಕೆ ಮುಂದುವರಿಸುವುದು ಮೇಲ್ನೋಟಕ್ಕೆ ಕಾನೂನುಬಾಹಿರ ಎನಿಸುತ್ತದೆ. ಆಕೆಗೆ ಜನಿಸುವ ಮಗು ಕೂಡ ಅಕ್ರಮ ಸಂತಾನ ಎನಿಸುತ್ತದೆ. ಜೊತೆಗೆ, ಬಾಲಕಿಯು ಮಗುವಿಗೆ ಜನ್ಮ ನೀಡುವುದಕ್ಕೆ ಒಪ್ಪುತ್ತಿಲ್ಲ. ಈ ಎಲ್ಲ ಅಂಶಗಳನ್ನು ಪರಿಗಣಿಸಬೇಕಿದೆ’ ಎಂದೂ ಪೀಠ ಹೇಳಿದೆ.

‘ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯವು ನೈತಿಕತೆ ಮತ್ತು ಕಾನೂನಿಗೆ ಸಂಬಂಧಿಸಿ ಕಠಿಣವಾದ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ತಜ್ಞವೈದ್ಯರಿಂದ ಗರ್ಭಪಾತಕ್ಕೆ ಅವಕಾಶ ಕೊಡದಿದ್ದಲ್ಲಿ, ಜನರು ನಕಲಿ ವೈದ್ಯರು ಮತ್ತು ಕಾನೂನು-ಬಾಹಿರವಾಗಿ ಗರ್ಭಪಾತ ಮಾಡುವ ಆಸ್ಪತ್ರೆಗಳ ಕದತಟ್ಟುತ್ತಾರೆ. ಇದು ಸುರಕ್ಷಿತ ಆಯ್ಕೆಯಾಗದು’ ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದರು.

‘ಒಂದು ವೇಳೆ ಬಾಲಕಿಗೆ ಹೆರಿಗೆಯಾದಲ್ಲಿ ಮಗುವಿನ ಪ್ರಾಣಕ್ಕೆ ಯಾವುದೇ ಅಪಾಯ ಇಲ್ಲ ಎಂಬುದಾಗಿ ವೈದ್ಯಕೀಯ ವರದಿಗಳು ಹೇಳುತ್ತವೆ. ಅಲ್ಲದೇ, ತಾಯಿ ಆ ಮಗುವಿನ ಪಾಲನೆ-ಪೋಷಣೆಗೆ ಒಪ್ಪದಿದ್ದಲ್ಲಿ ಅದನ್ನು ಅನಾಥಾಶ್ರಮಕ್ಕೆ ಒಪ್ಪಿಸಬಹುದು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ’ ಎಂದು ಮಹಾರಾಷ್ಟ್ರ ಪರ ವಕೀಲರು ಪೀಠಕ್ಕೆ ತಿಳಿಸಿದರು.

ಈ ವಿಚಾರವಾಗಿ ವಿಸ್ತೃತ ಆದೇಶ ಪ್ರಕಟಿಸಲಾಗುವುದು ಎಂದು ಹೇಳಿದ ನ್ಯಾಯಪೀಠ, ಅರ್ಜಿ ವಿಲೇವಾರಿ ಮಾಡಿತು.

ಸುಶೀಲ್ ಜಾಮೀನು ಅರ್ಜಿ ತಿರಸ್ಕೃತ

ಮಾಜಿ ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಒಲಿಂಪಿಯನ್ ಸುಶೀಲ್ ಕುಮಾರ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ದೆಹಲಿಯ ನ್ಯಾಯಾಲಯ ಶುಕ್ರವಾರ ತಿರಸ್ಕರಿಸಿದೆ.

2021ರ ಮೇ 21ರಂದು ಇಲ್ಲಿನ ಛತ್ರಸಾಲ್ ಕ್ರೀಡಾಂಗಣದಲ್ಲಿ ಧನಕರ್ ಅವರ ಮೇಲೆ ನಡೆದ ಮಾರಣಾಂತಿಕ ಹಲ್ಲೆ ಪ್ರಕರಣದಲ್ಲಿ ಸುಶೀಲ್ ಕುಮಾರ್ ಮತ್ತು ಸಹಚರರು ಆರೋಪಿಗಳಾಗಿದ್ದಾರೆ.

ಸೆಷನ್ಸ್ ನ್ಯಾಯಾಲಯದ ನ್ಯಾ.ಸುಶೀಲ್ ಕುಮಾರ್ ಅವರು ಅರ್ಜಿಯನ್ನು ತಿರಸ್ಕರಿಸಿದರು. ಹರಿತವಾದ ಗಾಯದಿಂದಾಗಿ ಸಾಗರ್ ಅವರ ಮಿದುಳಿಗೆ ಹಾನಿಯಾಗಿರುವುದು ಮರಣೋತ್ತರ ಪರೀಕ್ಷೆಯಲ್ಲಿ ಪತ್ತೆಯಾಗಿತ್ತು. ಹಲ್ಲೆಯಲ್ಲಿ ಸಾಗರ್ ಅವರ ಜೊತೆಗಿದ್ದ ಇನ್ನಿಬ್ಬರು ಗಾಯಗೊಂಡಿದ್ದರು. ಬೇಸ್‌ಬಾಲ್ ಮತ್ತು ಹಾಕಿಸ್ಟಿಕ್‌ಗಳನ್ನು ಬಳಸಿ ಹಲ್ಲೆ ನಡೆಸಲಾಗಿತ್ತು.

ಮೊಣಕಾಲಿನ ಶಸ್ತ್ರಚಿಕಿತ್ಸೆಗೆಂದು ಸುಶೀಲ್ ಅವರಿಗೆ ಸೆಷನ್ಸ್ ನ್ಯಾಯಾಲಯ 2023ರ ಜುಲೈ 19ರಂದು ವಾರದ ಮಟ್ಟಿಗೆ ಜಾಮೀನು ನೀಡಿತ್ತು.

‘ನೀಟ್–ಪಿಜಿ’: ವಿವರಣೆ ನೀಡಲು ಎನ್‌ಬಿಇಎಂಎಸ್‌ಗೆ ಸೂಚನೆ

2025–26ನೇ ವರ್ಷದ ನೀಟ್–ಪಿಜಿಯ ಅರ್ಹತೆಗೆ ಸಂಬಂಧಿಸಿದ ಕಟ್‌ಆಫ್ ಪರ್ಸಂಟೈಲ್‌ಗಳನ್ನು ಗಣನೀಯವಾಗಿ ಕಡಿತಗೊಳಿಸುವ ನಿರ್ಧಾರದ ಕುರಿತು ವಿವರಣೆ ನೀಡುವಂತೆ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ(ಎನ್‌ಬಿಇಎಂಎಸ್) ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಅಲೋಕ್ ಆರಾಧೆ ಅವರು ಇದ್ದ ನ್ಯಾಯಪೀಠ, ಈ ಸಂಬಂಧ ಪ್ರಮಾಣಪತ್ರ ಸಲ್ಲಿಸುವಂತೆ ಮಂಡಳಿಗೆ ನಿರ್ದೇಶನ ನೀಡಿ, ಎರಡು ವಾರಗಳ ಬಳಿಕ ವಿಚಾರಣೆ ನಡೆಸುವುದಾಗಿ ಹೇಳಿತು.

ಫೆಬ್ರುವರಿ 4ರಂದು ಈ ವಿಚಾರಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಿದ್ದ ಪೀಠವು, ಕೇಂದ್ರ ಸರ್ಕಾರ, ಎನ್‌ಬಿಇಎಂಎಸ್ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ನೋಟಿಸ್ ನೀಡಿತ್ತು.

ದೇಶದಾದ್ಯಂತ 18 ಸಾವಿರಕ್ಕೂ ಹೆಚ್ಚು ವೈದ್ಯಕೀಯ ಸ್ನಾತಕೋತ್ತರ ಸೀಟುಗಳು ಭರ್ತಿಯಾಗದೇ ಉಳಿದಿರುವ ಕಾರಣ, ಮಂಡಳಿಯು ನೀಟ್–ಪಿಜಿ ಅರ್ಹತೆಗೆ ಸಂಬಂಧಿಸಿದ ಕಟ್‌ಆಫ್ ಪರ್ಸಂಟೈಲ್‌ಗಳನ್ನು ಕಡಿತ ಮಾಡಿತ್ತು.

‘ಬಿಆರ್‌ಎಸ್ ಶಾಸಕರ ಅನರ್ಹತೆ: 3 ವಾರಗಳಲ್ಲಿ ನಿರ್ಧರಿಸಿ’

ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿರುವ ಬಿಆರ್‌ಎಸ್ ಪಕ್ಷದ 10 ಶಾಸಕರನ್ನು ಅನರ್ಹಗೊಳಿಸುವಂತೆ ಕೋರಲಾದ ಅರ್ಜಿಗಳ ಕುರಿತು ಮೂರು ವಾರಗಳೊಳಗೆ ನಿರ್ಧಾರ ಕೈಗೊಳ್ಳಬೇಕು ಎಂದು ತೆಲಂಗಾಣ ವಿಧಾನಸಭೆ ಸ್ಪೀಕರ್‌ಗೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ಇದಕ್ಕೆ ತಪ್ಪಿದಲ್ಲಿ ಸ್ಪೀಕರ್ ವಿರುದ್ಧ ನ್ಯಾಯಾಂಗ ನಿಂದನೆಗೆ ಸಂಬಂಧಿಸಿ ಕ್ರಮ ಜರುಗಿಸಲಾಗುವುದು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಎ.ಜಿ.ಮಸೀಹ್ ಅವರು ಇದ್ದ ಪೀಠ ಎಚ್ಚರಿಸಿದೆ.

ಸುದ್ದಿ 2 ನಿಮಿಷ

ಅಗ್ನಿ–3 ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲೇಶ್ವರ (ಒಡಿಶಾ)(ಪಿಟಿಐ): ಅಣ್ವಸ್ತ್ರ ಸಿಡಿತಲೆ ಹೊತ್ತು ಸಾಗಬಲ್ಲ ಅಗ್ನಿ-3 ಬ್ಯಾಲಿಸ್ಟಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಕರಾವಳಿಯಲ್ಲಿ ಶುಕ್ರವಾರ ಯಶಸ್ವಿಯಾಗಿ ನೆರವೇರಿಸಲಾಯಿತು.

ನೆಲದಿಂದ ಚಿಮ್ಮಿ ನೆಲದಲ್ಲಿನ ಗುರಿಯನ್ನು ನಾಶಪಡಿಸುವ ಸಾಮರ್ಥ್ಯವಿರುವ ಈ ಕ್ಷಿಪಣಿ 3 ಸಾವಿರ ಕಿ.ಮೀ.ಗೂ ಅಧಿಕ ದೂರ ಸಾಗಬಲ್ಲದು. ಕಾರ್ಯಾಚರಣೆ ಹಾಗೂ ತಾಂತ್ರಿಕ ಸಾಮರ್ಥ್ಯಕ್ಕೆ ಸಂಬಂಧಿಸಿದ ಎಲ್ಲ ಮಾನದಂಡಗಳು ಈ ಪರೀಕ್ಷೆಯಲ್ಲಿ ದೃಢಪಟ್ಟವು ಎಂದು ಡಿಆರ್‌ಡಿಒ ಮೂಲಗಳು ಹೇಳಿವೆ.



ಈ ಶ್ರೇಣಿಯ ಕ್ಷಿಪಣಿಗಳ ಪೈಕಿ ಅಗ್ನಿ–3 ಅತ್ಯಾಧುನಿಕ ಆಯುಧವಾಗಿದೆ. ಇದು 1.5 ಟನ್ ತೂಕದ ಸಿಡಿತಲೆಗಳನ್ನು ಹೊತ್ತು ಸಾಗಬಲ್ಲದು ಎಂದು ಇವೇ ಮೂಲಗಳು ಹೇಳಿವೆ.

ಬಾಂಗ್ಲಾದೇಶ ವಿದ್ಯಮಾನ: ಭಾರತದಿಂದ ಸದಾ ನಿಗಾ

ನವದೆಹಲಿ (ಪಿಟಿಐ): ಭಾರತ ಮತ್ತು ಬಾಂಗ್ಲಾದೇಶದ ಜತೆಗಿನ ಸಂಬಂಧವು ಮೂರನೇ ದೇಶಗಳ ಸಂಬಂಧದಿಂದ ಸ್ವತಂತ್ರವಾಗಿದೆ ಎಂದು ಭಾರತ ಪ್ರತಿಪಾದಿಸಿದೆ.

ತನ್ನ ರಾಷ್ಟ್ರೀಯ ಹಿತಾಸಕ್ತಿಗಳ ಮೇಲೆ ಪ್ರಭಾವ ಬೀರುವಂತಹ ಪಕ್ಕದ ದೇಶಗಳ ವಿದ್ಯಮಾನಗಳ ಮೇಲೆ ಕೇಂದ್ರ ಸರ್ಕಾರ ಸದಾ ನಿಗಾವಹಿಸುತ್ತಿದೆ. ಅಲ್ಲದೆ ಅಲ್ಲಿರುವ ಭಾರತೀಯರನ್ನು ರಕ್ಷಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಸರ್ಕಾರ ಶುಕ್ರವಾರ ಲೋಕಸಭೆಗೆ ತಿಳಿಸಿದೆ.

ಪ್ರಜಾಪ್ರಭುತ್ವ, ಸ್ಥಿರ, ಶಾಂತಿಯುತ, ಪ್ರಗತಿಪರ ಮತ್ತು ಎಲ್ಲರನ್ನೂ ಒಳಗೊಂಡ ಬಾಂಗ್ಲಾದೇಶವನ್ನು ಭಾರತ ಬೆಂಬಲಿಸುತ್ತದೆ. ಈ ಕುರಿತು ಅಲ್ಲಿನ ಮಧ್ಯಂತರ ಸರ್ಕಾರಕ್ಕೂ ತಿಳಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ರಾಜ್ಯ ಖಾತೆ ಸಚಿವ ಕೀರ್ತಿ ವರ್ಧನ್ ಸಿಂಗ್ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

‘ಭಾರತವು ಪಕ್ಕದ ದೇಶಗಳ ಜತೆ ಉತ್ತಮ ಸಂಬಂಧ ಹೊಂದಲು ಆದ್ಯತೆ ನೀಡುತ್ತದೆ. ಪರಸ್ಪರ ಹಿತಾಸಕ್ತಿಗಳು, ಸೂಕ್ಷ್ಮತೆ ಮತ್ತು ಚಾಲ್ತಿಯಲ್ಲಿರುವ ದ್ವಿಪಕ್ಷೀಯ, ಪ್ರಾದೇಶಿಕ, ಜಾಗತಿಕ ಸಂದರ್ಭಗಳಿಗೆ ತಕ್ಕಂತೆ ಅದು ವಿಕಸನಗೊಳ್ಳುತ್ತದೆ’ ಎಂದು ಅವರು ಹೇಳಿದ್ದಾರೆ.

ಭಾರತ– ಬಾಂಗ್ಲಾದೇಶದ ನಡುವಿನ ದ್ವಿಪಕ್ಷೀಯ ಸಂಬಂಧಗಳು ಸೂಕ್ಷ್ಮ ಹಂತದಲ್ಲಿ ಸಾಗುತ್ತಿದೆಯೇ ಮತ್ತು ಪಾಕಿಸ್ತಾನವು ಈ ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸುತ್ತಿದೆಯೇ ಎಂದು ಕೇಳಲಾದ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

ವಿದೇಶಗಳ ಒತ್ತಡಕ್ಕೆ ಪ್ರಧಾನಿ ನರೇಂದ್ರ ಮೋದಿ ಮಣಿದಿದ್ದಾರೆ: ಆರೋಪ

ವಿರೋಧ ಪಕ್ಷಗಳ ಸಂಸದರಿಂದ ಪ್ರತಿಭಟನೆ

ನವದೆಹಲಿ (ಪಿಟಿಐ): ಭಾರತ–ಅಮೆರಿಕ ವ್ಯಾಪಾರ ಒಪ್ಪಂದ, ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ. ನರವಣೆ ಅವರ ‘ಅಪ್ರಕಟಿತ ಆತ್ಮಚರಿತ್ರೆ’ ಸುತ್ತಲಿನ ವಿವಾದ ಹಾಗೂ ಎಂಟು ಸಂಸದರ ಅಮಾನತು ವಿಚಾರವಾಗಿ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಸಂಸದರು ಸಂಸತ್ ಹೊರಗೆ ಶುಕ್ರವಾರ ಪ್ರತಿಭಟನೆ ನಡೆಸಿದರು.

ಲೋಕಸಭೆ ಕಲಾಪವು ಸೋಮವಾರದವರೆಗೆ ಮುಂದೂಡಿಕೆಯಾದ ನಂತರ ವಿರೋಧ ಪಕ್ಷಗಳ ಸಂಸದರು ಸಂಸತ್ತಿನ ಮಕರ ದ್ವಾರದ ಬಳಿ ಸೇರಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ‘ನರೇಂದ್ರ ಮೋದಿ ಶರಣಾಗಿದ್ದಾರೆ’, ‘ಪ್ರಜಾಪ್ರಭುತ್ವದ ಕಗ್ಗೊಲೆ ನಿಲ್ಲಿಸಿ’ ಎಂದು ಕೂಗಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಬಜೆಟ್ ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಂಡ ಸಂಸದರು ಮತ್ತು ಇತರ ಹಲವು ಸಂಸದರು ಭಾಗಿಯಾಗಿದ್ದರು. ಭಾರತ–ಅಮೆರಿಕ ವ್ಯಾಪಾರ ಒಪ್ಪಂದವನ್ನು ಉಲ್ಲೇಖಿಸುವ ‘ವಂಚಕ ಒಪ್ಪಂದ’ ಎಂದು ಬರೆದ ದೊಡ್ಡ ಫಲಕಗಳನ್ನು ಹಿಡಿದು ಅವರು ಆಕ್ರೋಶ ವ್ಯಕ್ತಪಡಿಸಿದರು.

‘ಪ್ರಧಾನಿ ಮೋದಿ ಅವರ ವೈಫಲ್ಯಗಳ ಕುರಿತು ಹೋರಾಟವನ್ನು ಮುಂದುವರಿಸುತ್ತೇವೆ’ ಎಂದು ಅಮಾನತುಗೊಂಡ ಸಂಸದ ಮಾಣಿಕ್ಯಂ ಠಾಗೋರ್ ಅವರು ಹೇಳಿದರು.

‘ಪ್ರಧಾನಿ ಮೋದಿ ಅವರು ಸಂಸತ್ತಿಗೆ ಬರಲು ಹೆದರುತ್ತಿದ್ದಾರೆ. ವಿದೇಶಗಳ ಒತ್ತಕ್ಕೆ ಮಣಿದಿದ್ದಾರೆ’ ಎಂದು ಆರೋಪಿಸಿದರು.



ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಸಂಸದರು ಸಂಸತ್ ಹೊರಗೆ ಶುಕ್ರವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಲೋಕಸಭೆ: ಮತ್ತೆ ಗದ್ದಲ

ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯ ಚರ್ಚೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಮಾತನಾಡಲು ಅವಕಾಶ ನೀಡದಿರುವುದನ್ನು ಖಂಡಿಸಿ ಇಂಡಿಯಾ ಮೈತ್ರಿಕೂಟದ ಸಂಸದರು ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದ್ದರಿಂದ ಲೋಕಸಭೆಯ ಕಲಾಪ ಶುಕ್ರವಾರವೂ ನಡೆಯಲಿಲ್ಲ.

ಬೆಳಿಗ್ಗೆ 11 ಗಂಟೆಗೆ ಕಲಾಪ ಆರಂಭವಾಗುತ್ತಿದ್ದಂತೆ ವಿಪಕ್ಷ ಸದಸ್ಯರು ಗದ್ದಲ ಎಬ್ಬಿಸಿದರು. ಪ್ರತಿಭಟನೆ ಕೈಬಿಡುವಂತೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಮನವಿ ಮಾಡಿದರು. ಇದಕ್ಕೆ ವಿಪಕ್ಷ ಸದಸ್ಯರು ಕಿವಿಗೊಡಲಿಲ್ಲ.

‘ಗದ್ದಲದಿಂದಾಗಿ ಇಲ್ಲಿಯವರೆಗೆ ಸದನದ 19 ಗಂಟೆ 13 ನಿಮಿಷಗಳು ವ್ಯರ್ಥವಾಗಿದೆ. ಜನರು ನಿಮ್ಮನ್ನು ಆಯ್ಕೆ ಮಾಡಿರುವುದು ಸದನದಲ್ಲಿ ಚರ್ಚೆ ಮಾಡಲು. ಘೋಷಣೆ ಕೂಗಲು ಅಲ್ಲ’ ಎಂದು ಓಂ ಬಿರ್ಲಾ ಹೇಳಿದರು. ಗದ್ದಲ ಹೆಚ್ಚಿದ್ದರಿಂದ ಕಲಾಪವನ್ನು 12 ಗಂಟೆಗೆ ಮುಂದೂಡಿದರು. ಮತ್ತೆ ಕಲಾಪ ಪುನರಾರಂಭಗೊಂಡಾಗ ವಿರೋಧ ಪಕ್ಷದ ಸದಸ್ಯರು ಜೋರಾಗಿ ಘೋಷಣೆ ಕೂಗುತ್ತಾ ಪ್ರತಿಭಟಿಸಿದರು. ಕಲಾಪವನ್ನು ಸೋಮವಾರಕ್ಕೆ ಸಭಾಧ್ಯಕ್ಷರು ಮುಂದೂಡಿದರು.

ಶಾ ರಾಜೀನಾಮೆಗೆ ಆಗ್ರಹ

ಭದ್ರತಾ ವೈಫಲ್ಯದ ಕಾರಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ಭಾಷಣ ಮಾಡಿಲ್ಲ. ಇದರ ಹೊಣೆ ಹೊತ್ತು ಗೃಹ ಸಚಿವ ಅಮಿತ್ ಶಾ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರ ಹೇಳಿಕೆಗಳನ್ನು ಗಮನಿಸಿದರೆ ಶಾ ವೈಫಲ್ಯ ಎದ್ದು ಕಾಣುತ್ತದೆ. ಪ್ರಧಾನಿಗೆ ಬೆದರಿಕೆ ಇದೆ ಎಂದರೆ ಶಾ ಅವರು ಸಚಿವ ಸ್ಥಾನದಲ್ಲಿ ಒಂದು ಗಳಿಗೆ ಕೂಡ ಇರಲು ಅರ್ಹರಲ್ಲ’ ಎಂದರು.

‘ಪ್ರಧಾನಿ ಮೋದಿ ಅವರು ಪತ್ರಕರ್ತರ ಪ್ರಶ್ನೆಗಳಿಗೆ ಹೆದರಿ 14 ವರ್ಷಗಳಿಂದ ಪತ್ರಿಕಾಗೋಷ್ಠಿ ನಡೆಸಿಲ್ಲ. ಈಗ ಅವರ ಪುಕ್ಕಲುತನ ಮತ್ತೊಮ್ಮೆ ಅನಾವರಣಗೊಂಡಿದೆ. ಬಿಜೆಪಿಯವರು ಹೇಡಿಗಳು’ ಎಂದು ಟೀಕಿಸಿದರು.

ಗಣಿ ಸ್ಫೋಟ: ಸಾವಿನ ಸಂಖ್ಯೆ 25ಕ್ಕೆ ಏರಿಕೆ

ಶಿಲ್ಲಾಂಗ್ (ಪಿಟಿಐ): ಮೇಘಾಲಯದ ಪೂರ್ವ ಜೈಯಂತಿಯಾ ಹಿಲ್ಸ್ ಜಿಲ್ಲೆಯ ಅಕ್ರಮ ಕಲ್ಲಿದ್ದಲು ಗಣಿಯೊಂದರಲ್ಲಿ ಸಂಭವಿಸಿದ್ದ ಸ್ಫೋಟದ ಪರಿಣಾಮವಾಗಿ ಮೃತಪಟ್ಟವರ ಸಂಖ್ಯೆ 25ಕ್ಕೆ ಏರಿಕೆಯಾಗಿದೆ.

ಥಾಂಗ್‌ಸ್ಕು ಪ್ರದೇಶದಲ್ಲಿ ಗುರುವಾರ ಅವಘಡ ಸಂಭವಿಸಿತ್ತು.

ಅದೇ ದಿನ 18 ಮೃತದೇಹಗಳು ಪತ್ತೆಯಾಗಿದ್ದವು. ಶುಕ್ರವಾರ ಏಳು ಶವಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಯತೀಂದ್ರ ನಮ್ಮ ಹೈಕಮಾಂಡ್: ಡಿಕೆಶಿ

ಒಂದನೇ ಪುಟದಿಂದ...

‘ಅಧಿಕಾರ ಹಂಚಿಕೆ ಒಪ್ಪಂದದ ಬಗ್ಗೆ ಹೈಕಮಾಂಡ್ ಸ್ಪಷ್ಟಪಡಿಸಬೇಕು’ ಎಂದು ಚನ್ನಗಿರಿಯ ಕಾಂಗ್ರೆಸ್ ಶಾಸಕ ಬಸವರಾಜು ಶಿವಗಂಗಾ ಹೇಳಿಕೆ ಬಗ್ಗೆ ಕೇಳಿದಾಗ, ‘ಅವರ ಮಾತಿಗೆ ಪ್ರತಿಕ್ರಿಯಿಸಲು ಇಷ್ಟವಿಲ್ಲ. ಏನು ಹೇಳಬೇಕೋ ಅದನ್ನು ದೆಹಲಿ ನಾಯಕರು ಹೇಳಬೇಕು’ ಎಂದರು.

‘ಕೆಪಿಸಿಸಿ ಅಧ್ಯಕ್ಷನಾಗಿ ಮಾರ್ಚ್ 10ಕ್ಕೆ 6 ವರ್ಷ ತುಂಬುತ್ತದೆ. ಆ ಸಂದರ್ಭದಲ್ಲಿ ರಾಜ್ಯದಲ್ಲಿ 100 ಕಚೇರಿಗಳಿಗೆ ಭೂಮಿಪೂಜೆ ಮಾಡಲು ನಿರ್ದೇಶನ ನೀಡಲಾಗಿದೆ. ಈ ನಿರ್ಧಾರವನ್ನು ಎಐಸಿಸಿ ಒಪ್ಪಲಿ, ಬಿಡಲಿ. ನಾನಂತೂ ಸಿದ್ಧನಿದ್ದೇನೆ’ ಎಂದರು.

ಯತೀಂದ್ರ ಹೇಳಿದ್ದೇನು?: ‘ನಾಯಕತ್ವ ಬದಲಾವಣೆ ಇಲ್ಲವೆಂದು ಹೈಕಮಾಂಡ್ ಕೂಡ ಹೇಳಿದೆ. ಯಾರ ಬೇಡಿಕೆಗೂ ಮನ್ನಣೆ ಕೊಟ್ಟಿಲ್ಲ. ಸದ್ಯಕ್ಕಂತೂ ಮುಖ್ಯಮಂತ್ರಿ ಬದಲಾವಣೆಯ ಗೊಂದಲ ಇಲ್ಲ’ ಎಂದೂ ಯತೀಂದ್ರ ಪ್ರತಿಪಾದಿಸಿದರು.

‘ಸಿದ್ದರಾಮಯ್ಯ ಮತ್ತು ರಾಜ್ಯ ಸರ್ಕಾರದ ಮೇಲೆ ಗುರುತರ ಆರೋಪ ಮಾಡಲು ಬಿಜೆಪಿ ನಾಯಕರಿಗೆ ಏನೂ ಇಲ್ಲ. ಹೀಗಾಗಿಯೇ ಕೆ.ಜೆ.ಜಾರ್ಜ್ ನನ್ನ ಬಗ್ಗೆ ಅಸಮಾಧಾನಗೊಂಡಿದ್ದಾರೆ ಎಂದು ಪ್ರಚಾರ ಮಾಡಿದರು. ಅಧಿವೇಶನದಲ್ಲೂ ವಿನಾ ಕಾರಣ ನನ್ನ ಹೆಸರು ಪ್ರಸ್ತಾಪಿಸಿದರು’ ಎಂದು ಹೇಳಿದರು.

‘ನಿಜವಾದ ಹೈಕಮಾಂಡ್ ಪವರ್‌ಲೆಸ್’

‘ಕಾಂಗ್ರೆಸ್‌ನ ಎಲ್ಲರೂ ಹೈಕಮಾಂಡ್ ತೀರ್ಮಾನ ಎಂದರೆ, ಯತೀಂದ್ರ ಮಾತ್ರ ನಮ್ಮಪ್ಪನೇ ಪೂರ್ಣಾವಧಿ ಮುಖ್ಯಮಂತ್ರಿ ಎನ್ನುತ್ತಾರೆ. ನಿಜವಾದ ಹೈಕಮಾಂಡ್ ಪವರ್‌ಲೆಸ್ ಆಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಕುಟುಕಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಿದ್ದರಾಮಯ್ಯ, ಶಿವಕುಮಾರ್ ಮಧ್ಯೆ ಕುರ್ಚಿಗಾಗಿ ಮತ್ತೆ ಕದನ ಆರಂಭವಾಗಿದ್ದು, ಯತೀಂದ್ರ ಈಗ ಕಾಂಗ್ರೆಸ್‌ನ ಹೊಸ ಹೈಕಮಾಂಡ್. ಕಾಂಗ್ರೆಸ್‌ನವರು ಮುಂದೆ ಸೋನಿಯಾಗಾಂಧಿ, ರಾಹುಲ್‌ಗಾಂಧಿ ಬದಲು ಯತೀಂದ್ರ ಅವರೇ ನಮ್ಮ ನಾಯಕ ಎಂದು ಹೇಳಿಕೊಳ್ಳಬೇಕಿದೆ’ ಎಂದರು.

‘ಉತ್ತರಿಸುವ ಧೈರ್ಯ ಮೋದಿಗಿಲ್ಲ’

ನವದೆಹಲಿ (ಪಿಟಿಐ): ‘ತಮಗೆ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸುವ ಧೈರ್ಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಲ್ಲ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ವಾಗ್ದಾಳಿ ನಡೆಸಿದರು.

ಮೋದಿ ಅವರು ರಾಜ್ಯಸಭೆಯಲ್ಲಿ ಗುರವಾರ ಮಾಡಿದ ಭಾಷಣವನ್ನು ಟೀಕಿಸಿದ ಅವರು, ‘ಸದನವನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ನಡೆಸಲು ಸರ್ಕಾರ ಬಯಸುತ್ತಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ರಾಷ್ಟ್ರಪತಿ ಅವರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಮೋದಿ ಅವರು ಬರಿ ಸುಳ್ಳುಗಳನ್ನೇ ಪುನರಾವರ್ತಿಸಿದ್ದಾರೆ’ ಎಂದು ಖರ್ಗೆ ಟೀಕಿಸಿದರು.

ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ.ನರವಣೆ ಅವರ ‘ಅಪ್ರಕಟಿತ ಆತ್ಮಚರಿತ್ರೆ’ ಕುರಿತು ಮಾತನಾಡಲು ಮುಂದಾದಾಗ ಅವಕಾಶ ನೀಡಲಿಲ್ಲ. ಈ ಪುಸ್ತಕ ಪ್ರಕಟವೇ ಆಗಿಲ್ಲ ಎಂದು ಕೇಂದ್ರದ ಹಿರಿಯ ಸಚಿವರು ಹೇಳಿದರು. ವಾಸ್ತವ ಏನೆಂದರೆ ಈ ಪುಸ್ತಕ ಅಸ್ತಿತ್ವದಲ್ಲಿದೆ ಎಂದರು.

‘ಮೊದಲು ಸತ್ಯವನ್ನು ಆಲಿಸಿ, ಬಳಿಕ ಉತ್ತರಿಸಿ’ ಎಂದ ಅವರು, ‘ನರೇಂದ್ರ ಮೋದಿ ಅವರಿಗೆ ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ಧೈರ್ಯ ಇಲ್ಲ’ ಎಂದು ಖರ್ಗೆ ಪ್ರತಿಪಾದಿಸಿದರು.

‘ಕಾಂಗ್ರೆಸ್ ಪಕ್ಷವು ಸಿಖ್ಖರನ್ನು ಅವಮಾನಿಸಿದೆ ಎಂದು ಪ್ರಧಾನಿ ಹೇಳಿದ್ದಾರೆ. ಸದನದ ಹೊರಗೆ ಇಬ್ಬರು ವ್ಯಕ್ತಿಗಳ ನಡುವೆ ನಡೆದ ಸಂಭಾಷಣೆಯನ್ನು ಹೀಗೆ ವ್ಯಾಖ್ಯಾನಿಸುವುದು ಸರಿಯಲ್ಲ. ಕಾಂಗ್ರೆಸ್ ಸಿಖ್ಖರನ್ನು ಬಹಳವಾಗಿ ಗೌರವಿಸುತ್ತದೆ. ಕಾಂಗ್ರೆಸ್ ಪಕ್ಷದಿಂದ ಮನಮೋಹನ ಸಿಂಗ್ ಅವರು ಹಣಕಾಸು ಸಚಿವರಾಗಿ, ಬಳಿಕ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದರು’ ಎಂದರು.

ಸುಪ್ರೀಂ ಕೋರ್ಟ್‌ಗೆ ಚುನಾವಣಾ ಆಯೋಗ ಮಾಹಿತಿ

‘ಪಶ್ಚಿಮ ಬಂಗಾಳ: ಎಸ್‌ಐಆರ್‌ಗೆ ಹಲವು ಅಡ್ಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಕೈಗೊಂಡಿರುವ ಎಸ್‌ಐಆರ್ ಕಾರ್ಯ ಹಲವು ಅಡಚಣೆಗಳನ್ನು ಎದುರಿಸುತ್ತಿದೆ. ಹಿಂಸಾಚಾರ, ಬೆದರಿಕೆ ಹಾಗೂ ರಾಜಕೀಯ ಹಸ್ತಕ್ಷೇಪದಿಂದಾಗಿ ಇಡೀ ಪ್ರಕ್ರಿಯೆಗೆ ಧಕ್ಕೆ ಆಗುತ್ತಿದೆ ಎಂದು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

‘ಕಳೆದ ವರ್ಷ ನವೆಂಬರ್ 24ರಂದು ಕೋಲ್ಕತ್ತದಲ್ಲಿ ಮುಖ್ಯ ಚುನಾವಣಾ ಅಧಿಕಾರಿ ಕಚೇರಿಗೆ ಘೇರಾವ್ ಹಾಕಲಾಗಿತ್ತು’ ಎಂದು ಆಯೋಗವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ವಿವರಿಸಿದೆ.

‘ಘೇರಾವ್ ವೇಳೆ, ಪ್ರತಿಭಟನಕಾರರು ಕಚೇರಿ ಪ್ರವೇಶಿಸಲು ಯತ್ನಿಸಿದರು. ಬ್ಯಾರಿಕೇಡ್‌ಗಳನ್ನು ಕಿತ್ತು-ಹಾಕಿದರಲ್ಲದೇ, ಗೇಟ್‌ಗೆ ಹೊರಗಿನಿಂದ ಬೀಗ ಹಾಕುವ ಮೂಲಕ ಯಾರೂ ಕಚೇರಿಯನ್ನು ಪ್ರವೇಶಿಸದಂತೆ ಹಾಗೂ ತೊರೆಯದಂತೆ ನಿರ್ಬಂಧಿಸಿದ್ದರು’ ಎಂದು ಆಯೋಗ ತಿಳಿಸಿದೆ.

ಬಿಎಲ್‌ಒ ಸಾವು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಮತಗಟ್ಟೆ ಅಧಿಕಾರಿಯೊಬ್ಬರು (ಬಿಎಲ್‌ಒ) ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹೆಸರಿನಲ್ಲಿ ಅಧಿಕಾರಿಗಳ ಮೇಲೆ ಒತ್ತಡ ಹೇರಲಾಗುತ್ತಿದೆ ಎಂಬ ಟಿಎಂಸಿ ಆರೋಪಕ್ಕೆ ಈ ಘಟನೆಯು ಮತ್ತಷ್ಟು ಇಂಬು ನೀಡಿದ್ದು, ರಾಜಕೀಯ ಆರೋಪ–ಪ್ರತ್ಯಾರೋಪಕ್ಕೆ ಕಾರಣವಾಗಿದೆ.

ಮೃತ ಮಾಯಾ ಮುಖ್ಯೋಪಾಧ್ಯಾಯ (58) ಅವರು ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದರು. ಇತ್ತೀಚೆಗೆ ಅವರನ್ನು ಮತಗಟ್ಟೆ ಸಂಖ್ಯೆ 251ಕ್ಕೆ ಬಿಎಲ್‌ಒ ಆಗಿ ನೇಮಿಸಲಾಗಿತ್ತು. ಗುರುವಾರ ರಾತ್ರಿ ಮನೆಯಲ್ಲಿ ಇದ್ದಕ್ಕಿದ್ದಂತೆ ಕುಸಿದುಬಿದ್ದಿದ್ದು, ಆಸ್ಪತ್ರೆಗೆ ಕೊಂಡೊಯ್ದ ಬಳಿಕ ಮಾಯಾ ಅವರು ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದರು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಹಕ್ಕಿಜ್ವರ: ತಮಿಳುನಾಡಿನಲ್ಲಿ ಕಟ್ಟೆಚ್ಚರ

ಚೆನ್ನೈ (ಪಿಟಿಐ): ತಮಿಳುನಾಡಿನ ಹಲವೆಡೆ ಭಾರಿ ಸಂಖ್ಯೆಯಲ್ಲಿ ಕಾಗೆಗಳು ಮೃತಪಟ್ಟ ಬಗ್ಗೆ ವರದಿಯಾಗಿದ್ದು, ಹಕ್ಕಿಜ್ವರದ ಭೀತಿ ಎದುರಾಗಿದೆ. ಹೀಗಾಗಿ ರಾಜ್ಯ ಸರ್ಕಾರವು ಕಟ್ಟೆಚ್ಚರ ವಹಿಸಿದೆ.

ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಗಳು, ಸೋಂಕು ಹರಡದಂತೆ ಕಡ್ಡಾಯವಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸಲಹಾ ಕ್ರಮಗಳ ಪಟ್ಟಿಯನ್ನು ಬಿಡುಗಡೆ ಮಾಡಿವೆ. ‘ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸಾರ್ವಜನಿಕರಿಗೆ ಪ್ರತ್ಯೇಕ ನಿರ್ದೇಶನವನ್ನು ನೀಡಲಾಗಿದೆ’ ಎಂದು ಸಾರ್ವಜನಿಕ ಆರೋಗ್ಯ ನಿರ್ದೇಶನಾಲಯದ ನಿರ್ದೇಶಕ ಡಾ.ಎ. ಸೋಮಸುಂದರಂ ಅವರು ತಿಳಿಸಿದ್ದಾರೆ.

‘ಕೆಮ್ಮು, ಜ್ವರ ಅಥವಾ ಉಸಿರಾಟ ಸಮಸ್ಯೆ ಸೇರಿದಂತೆ ಹಕ್ಕಿ ಜ್ವರದ ಲಕ್ಷಣಗಳು ಕಂಡುಬಂದರೆ ತಕ್ಷಣವೇ ವೈದ್ಯಕೀಯ ನೆರವು ಪಡೆಯಲು ಸೂಚಿಸಲಾಗಿದೆ. ಕಸಾಯಿಖಾನೆ ಅಥವಾ ರೋಗಪೀಡಿತ, ಮೃತ ಹಕ್ಕಿಗಳ ಸಂಪರ್ಕಕ್ಕೆ ಬರುವವರು ಹೆಚ್ಚಿನ ಎಚ್ಚರ ವಹಿಸುವಂತೆ ತಿಳಿಸಲಾಗಿದೆ’ ಎಂದು ಹೇಳಿದ್ದಾರೆ.

ಮೃತ ಹಕ್ಕಿಗಳನ್ನು ಸುಟ್ಟು ಹಾಕುವಂತೆ ಅಥವಾ ಮಣ್ಣಿನಲ್ಲಿ ಹೂತು ಹಾಕುವಂತೆ ಪಶುಸಂಗೋಪನೆ ಇಲಾಖೆಯು ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಸತ್ತ ಹಕ್ಕಿಗಳು ಕಂಡುಬಂದಲ್ಲಿ ತಕ್ಷಣವೇ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಅಂಕಗಳ ಮೇಲಷ್ಟೇ ಗಮನ ಬೇಡ, ಬದುಕು ಸುಧಾರಿಸಲು ಯತ್ನಿಸಿ: ಪ್ರಧಾನಿ ನರೇಂದ್ರ ಮೋದಿ

‘ಪರೀಕ್ಷೆಗಳನ್ನು ಹಬ್ಬದಂತೆ ಆಚರಿಸಬೇಕು’

ನವದೆಹಲಿ (ಪಿಟಿಐ): ‘ಶಿಕ್ಷಣವನ್ನು ಹೊರೆಯಾಗಿ ಭಾವಿಸಬಾರದು; ಕೇವಲ ಅಂಕಗಳ ಮೇಲೆ ಗಮನ ಇಡಬೇಡಿ, ಜೀವನ ಮಟ್ಟವನ್ನು ಸುಧಾರಣೆಗೆ ಆದ್ಯತೆ ನೀಡಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ.

ಶುಕ್ರವಾರ ತಮ್ಮ ನಿವಾಸದಲ್ಲಿ ಹಮ್ಮಿಕೊಂಡಿದ್ದ ‘ಪ್ರಧಾನಿ ಜೊತೆಗೆ ಪರೀಕ್ಷಾ ಪೇ ಚರ್ಚಾ’ದ 9ನೇ ಸರಣಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಎಲ್ಲರ ಸಲಹೆಗಳನ್ನು ಕೇಳಿ. ನಿಮ್ಮ ಮಾದರಿಯನ್ನು ಅಳವಡಿಸಿಕೊಂಡು ಪರೀಕ್ಷೆಯನ್ನು ಎದುರಿಸಬೇಕು. ಪರೀಕ್ಷೆ ಎಂಬುದು ಹೊರೆಯಲ್ಲ, ಹಬ್ಬದಂತೆ ಸಂಭ್ರಮಿಸಬೇಕು’ ಎಂದು ಅವರು ತಿಳಿಸಿದ್ದಾರೆ.

ಹೆಚ್ಚು ಅಂಕ ಪಡೆಯಲು ಗುರಿ ಇಡುವ ಕುರಿತು ಎಚ್ಚರಿಕೆ ನೀಡಿದ ಪ್ರಧಾನಿ, ಕಳೆದ ವರ್ಷದ ಬೋರ್ಡ್ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯ ಹೆಸರು ನೆನಪು ಇದೆಯಾ ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಿದರು.

ಇದಕ್ಕೆ ವಿದ್ಯಾರ್ಥಿಗಳು ‘ಇಲ್ಲ’ ಎಂದು ಉತ್ತರಿಸಿದರು. ಇಂತಹ ಸಾಧನೆಗಳನ್ನು ಕ್ಷಣಕಾಲ ನೆನಪಿಟ್ಟುಕೊಂಡು ಮರೆತುಬಿಡಬಹುದು. ಜೀವನ ಎಂಬುದು ಪರೀಕ್ಷೆಗಷ್ಟೇ ಸೀಮಿತವಲ್ಲ. ಶಿಕ್ಷಣವು ನಮ್ಮ ಅಭಿವೃದ್ಧಿಯ ಒಂದು ಮಾಧ್ಯಮ ಮಾತ್ರ’ ಎಂದು ಮನವರಿಕೆ ಮಾಡಿಕೊಟ್ಟರು.

ದಾಖಲೆ ಪ್ರಮಾಣದಲ್ಲಿ ನೋಂದಣಿ: ಟೌನ್‌ಹಾಲ್ ಮಾದರಿಯಲ್ಲಿ 2018ರಲ್ಲಿ ದೇಶದಲ್ಲಿ ಮೊದಲ ಶೈಕ್ಷಣಿಕ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿತ್ತು. ಮೊದಲ ವರ್ಷ 38.8 ಲಕ್ಷ ನೋಂದಣಿ ಮಾಡಿಕೊಂಡರೆ, 2024ರ ವೇಳೆಗೆ 2.26 ಕೋಟಿ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಕಳೆದ ವರ್ಷ 3.53 ಕೋಟಿ ನೋಂದಣಿ ಮಾಡಿಕೊಳ್ಳುವ ಮೂಲಕ ಗಿನ್ನೆಸ್ ದಾಖಲೆ ಬರೆದಿತ್ತು. 9ನೇ ಆವೃತ್ತಿನಲ್ಲಿ 4.5 ಕೋಟಿ ನೋಂದಣಿಯಾಗಿವೆ.



ನವದೆಹಲಿಯ ತಮ್ಮ ನಿವಾಸದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಪರೀಕ್ಷಾ ಪೇ ಚರ್ಚಾ’ದ 9ನೇ ಆವೃತ್ತಿಯಲ್ಲಿ ವಿದ್ಯಾರ್ಥಿಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಚರ್ಚೆ ನಡೆಸಿದರು –ಪಿಟಿಐ ಚಿತ್ರ

ಬೆಟ್ಟಿಂಗ್, ಗೇಮಿಂಗ್ ಆ್ಯಪ್ ಎಚ್ಚರವಹಿಸಿ

‘ದೇಶದಲ್ಲಿ ಆಟಗಳಲ್ಲಿ ಆನ್‌ಲೈನ್ ಬೆಟ್ಟಿಂಗ್, ಜೂಜಾಟವನ್ನು ನಾವು ಅನುಮತಿಸಬಾರದು. ಇದಕ್ಕಾಗಿ ನಾವು ಕಾನೂನನ್ನು ಮಾಡಿದ್ದೇವೆ. ಆಟವನ್ನು ರಚನಾತ್ಮಕ ಕೌಶಲವಾಗಿ ಪರಿಗಣಿಸಬೇಕು’ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

‘ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯುತವಾಗಿ ಬಳಸಬೇಕು. ಇಂದು ಇಂಟರ್‌ನೆಟ್ ಅಗ್ಗದಲ್ಲಿದ್ದು, ಸುಲಭವಾಗಿ ಪ್ರವೇಶಿಸಬಹುದು ಎಂದು ಕಾರಣಕ್ಕೆ ಸಮಯ ವ್ಯರ್ಥ ಮಾಡಬೇಡಿ. ಅದನ್ನು ಜನರ ಒಳಿತಿಗಾಗಿ ಬಳಸಿಕೊಳ್ಳಬೇಕು’ ಎಂದು ವಿವರಿಸಿದ್ದಾರೆ.

‘ಕೃತಕ ಬುದ್ಧಿಮತ್ತೆ (ಎ.ಐ) ಎಷ್ಟೇ ಮುಂದುವರಿದರೂ ಅದು ಮನುಷ್ಯನ ವಿಮರ್ಶಾತ್ಮಕ ಚಿಂತನೆಗೆ ಪರ್ಯಾಯವಾಗಲು ಸಾಧ್ಯವಿಲ್ಲ. ಓದುವುದು, ಬರೆಯುವುದು, ಆಳವಾಗಿ ಚಿಂತಿಸುವುದನ್ನು ಎ.ಐಗೆ ಬಿಟ್ಟುಕೊಡಬೇಡಿ. ಏಕಾಗ್ರತೆಯಿಂದ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು’ ಎಂದು ಅವರು ಹೇಳಿದ್ದಾರೆ.

ಅರಣ್ಯ ಇಲಾಖೆ ವಾಚರ್ ಆತ್ಮಹತ್ಯೆ

ಬೀದರ್: ಅರಣ್ಯ ಇಲಾಖೆಯ ವಾಚರ್ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾಲ್ಕಿ ಪಟ್ಟಣದ ಅರಣ್ಯ ಇಲಾಖೆ ಕಚೇರಿ ಸಮೀಪದ ವಸತಿ ಗೃಹದಲ್ಲಿ ಶುಕ್ರವಾರ ನಡೆದಿದೆ.



ಅಂಕುಶ್ ಸುಧಾಮ

ಭಾಲ್ಕಿ ತಾಲ್ಲೂಕಿನ ಬೋಳೆಗಾವ್ ಗ್ರಾಮದ ಅಂಕುಶ್ ಸುಧಾಮ (57) ಮೃತರು.

ಸಚಿವ ಈಶ್ವರ ಖಂಡ್ರೆ ಭಾಲ್ಕಿಯ ಪ್ರಾದೇಶಿಕ ವಲಯ ಅರಣ್ಯ ವಲಯ ಕಚೇರಿಗೆ ಭೇಟಿ ನೀಡಿ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ಎಸ್ಐಟಿ ವಿರುದ್ಧ ದೂರು

ಬೆಳಗಾವಿ: ಇಲ್ಲಿನ ಚೋರ್ಲಾ ಘಾಟ್ ಬಳಿ ನಡೆದಿದೆ ಎನ್ನಲಾದ ₹400 ಕೋಟಿಯ ಕಂಟೇನರ್ ದರೋಡೆಗೆ ಸಂಬಂಧಿಸಿದಂತೆ, ಅಪಹರಣಕ್ಕೆ ಒಳಗಾಗಿದ್ದ ಸಂದೀಪ ಪಾಟೀಲ ಅವರು ಮಹಾರಾಷ್ಟ್ರದ ಎಸ್ಐಟಿ ತಂಡದ ವಿರುದ್ಧವೇ ಆ ರಾಜ್ಯದ ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸಿದ್ದಾರೆ.

‘ಫೆಬ್ರುವರಿ 2ರಂದು ವಿಚಾರಣೆ ನೆಪದಲ್ಲಿ ನನ್ನನ್ನು ಕರೆಸಿದ ನಾಸಿಕ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಆರೋಪಿ ಕಿಶೋರ ಸಾವಳಾ ಎದುರಿಗೆ ಥಳಿಸಿದ್ದಾರೆ’ ಎಂದು ಆರೋಪಿಸಿದ್ದಾರೆ.

ವಿಧಾನಸಭಾ ಚುನಾವಣೆ– ಹೆಚ್ಚಿರುವ ಪ್ರತಿಭಟನೆ ಕಾರಣ

ಹೊಸೂರು ವಿಮಾನ ನಿಲ್ದಾಣ ಭೂಸ್ವಾಧೀನ ವಿಳಂಬಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಮತ್ತು ಕೆಲವೆಡೆ ಭೂಸ್ವಾಧೀನ ವಿರೋಧಿ ಪ್ರತಿಭಟನೆಗಳು ನಡೆಯುತ್ತಿರುವ ಕಾರಣ ಹೊಸೂರಿನ ವಿಮಾನ ನಿಲ್ದಾಣ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ವಿಳಂಬ ಮಾಡಲು ಡಿಎಂಕೆ ಸರ್ಕಾರ ನಿರ್ಧರಿಸಿದೆ.

ವಾರ್ಷಿಕವಾಗಿ 3 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವಿರುವ ವಿಮಾನ ನಿಲ್ದಾಣ ನಿರ್ಮಿಸಲು ಸರ್ಕಾರ ತನ್ನ ಒಡೆತನದ 800 ಎಕರೆ ಸೇರಿದಂತೆ ಸುಮಾರು 3,000 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ.

ಹೊಸೂರು– ಬೈರಿಗೆ– ಬಾಗಲೂರು– ಶೂಲಗಿರಿಗಳಲ್ಲಿ ವಿಮಾನ ನಿಲ್ದಾಣ ತಲೆಯೆತ್ತಲಿದ್ದು, 12 ಗ್ರಾಮಗಳಿಂದ 2,979 ಎಕರೆಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ತಮಿಳುನಾಡು ಸರ್ಕಾರ ಯೋಜಿಸಿದೆ.

ಇದಕ್ಕಾಗಿ ಕೃಷಿ ಭೂಮಿ ಸೇರಿದಂತೆ 2,134 ಎಕರೆ ಖಾಸಗಿ ಜಮೀನನ್ನು ವಶಕ್ಕೆ ಪಡೆಯಬೇಕಾಗಿದೆ. 12 ಹಳ್ಳಿಗಳ ಪೈಕಿ 10 ಹಳ್ಳಿಗಳು ಹೊಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬಂದರೆ, ಇನ್ನೆರಡು ಗ್ರಾಮಗಳು ಶೂಲಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದು ಪತ್ರ ಬರೆಯಲು ಸಿದ್ಧತೆ: ‘ಎಚ್ಎಎಲ್ ಕಾರ್ಯಾಚರಣೆಗಳ ಕಾರಣ ವಾಯುಪ್ರದೇಶ ಲಭ್ಯವಿಲ್ಲ ಎಂದು ಕೇಂದ್ರ ಸರ್ಕಾರ ಜನವರಿಯಲ್ಲಿ ಪತ್ರ ಮೂಲಕ ತಿಳಿಸಿದೆ. ಇದನ್ನು ಪರಿಶೀಲಿಸುತ್ತಿದ್ದೇವೆ. ಹೊಸೂರಿನಲ್ಲಿ ವಿಮಾನ ನಿಲ್ದಾಣದ ಅಗತ್ಯವನ್ನು ಮತ್ತು ಈ ಸೌಲಭ್ಯವು ಬೆಂಗಳೂರಿಗೂ ಹೇಗೆ ಉಪಯುಕ್ತವಾಗಲಿದೆ ಎಂಬುದನ್ನು ಉಲ್ಲೇಖಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತೊಂದು ಪತ್ರ ಬರೆಯುತ್ತೇವೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

2033ರವರೆಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಬಿಐಎಎಲ್) 150 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ವಿಮಾನ ನಿಲ್ದಾಣ ನಿರ್ಮಿಸಲು ಸಾಧ್ಯವಿಲ್ಲ. ಹೊಸ ವಿಮಾನ ನಿಲ್ದಾಣಕ್ಕೆ ಬಿಐಎಎಲ್‌ನಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆಯಬೇಕಿದೆ. ಹೀಗಾಗಿ ಈ ಕುರಿತ ಒಪ್ಪಂದದ ಅವಧಿ ಮುಗಿದ ಬಳಿಕ ವಿನಾಯಿತಿ ಪಡೆಯಲು ಸರ್ಕಾರ ಮುಂದಾಗಬಹುದು ಎಂದು ಮೂಲಗಳು ತಿಳಿಸಿವೆ.

ಜೆಡಿಎಸ್ ಜತೆ ಮೈತ್ರಿ ಮುಂದುವರಿಯಲಿದೆ: ಬಿಎಸ್‌ವೈ

ತುಮಕೂರು: ‘ವಿಧಾನಸಭೆಯ ಮುಂದಿನ ಚುನಾವಣೆಯಲ್ಲೂ ಜೆಡಿಎಸ್–ಬಿಜೆಪಿ ಮೈತ್ರಿ ಮುಂದುವರಿಯಲಿದೆ. ಮೈತ್ರಿ ಅನಿವಾರ್ಯವಾಗಿದೆ’ ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಸ್ಪಷ್ಟಪಡಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮೈತ್ರಿ ಕುರಿತು ಈಗಾಗಲೇ ನವದೆಹಲಿಯಲ್ಲಿ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಬಳಿ ಮಾತನಾಡಿ ಆಗಿದೆ’ ಎಂದು ಹೇಳಿದರು.

ವಾಪಸ್‌ಗೆ ಆಗ್ರಹ: ‘ಮೆಟ್ರೊ’ ಪ್ರಯಾಣ ದರ ಹೆಚ್ಚಳ ಸರಿಯಲ್ಲ. ಈಗಾಗಲೇ ಜನಸಾಮಾನ್ಯರು ಬದುಕುವುದು ಕಷ್ಟಕರವಾಗಿದೆ. ಹೆಚ್ಚಿಸಿರುವ ದರವನ್ನು ತಕ್ಷಣ ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿದರು.

‘ಎಸ್‌ಐಆರ್: ‘ವಿಶೇಷ’ ಪದದಲ್ಲೇ ಹುನ್ನಾರವಿದೆ...’

ಪ್ರಜಾವಾಣಿ ವಾರ್ತೆ

ಗದಗ: ‘ದೇಶದ 31 ರಾಜ್ಯಗಳಲ್ಲಿ ಮತಪಟ್ಟಿ ವಿಶೇಷ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯು ಪೂರ್ಣಗೊಳ್ಳುವ ವೇಳೆಗೆ, 20 ಕೋಟಿ ಜನರು ಪಟ್ಟಿಯಿಂದ ಹೊರಗುಳಿಯುತ್ತಾರೆ’ ಎಂದು ಚಿಂತಕ ಶಿವಸುಂದರ ಆತಂಕ ವ್ಯಕ್ತಪಡಿಸಿದರು.

ಮೇ ಸಾಹಿತ್ಯ ಮೇಳ, ಲಡಾಯಿ ಪ್ರಕಾಶನ ಹಾಗೂ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದಿಂದ ನಗರದಲ್ಲಿ ಶುಕ್ರವಾರ ನಡೆದ ‘ಎಸ್ಐಆರ್: ಪೌರತ್ವದ ಪ್ರಶ್ನೆ- ಪ್ರಭುತ್ವದ ಹುನ್ನಾರಗಳು’ ಸಂವಾದ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಸ್ಐಆರ್‌ನಲ್ಲಿರುವ ವಿಶೇಷ ಎಂಬ ಪದದಲ್ಲೇ ಅತಿದೊಡ್ಡ ಹುನ್ನಾರವಿದೆ. ಇದು ಕೇವಲ ಮತಪಟ್ಟಿಯ ವಿಶೇಷ ಪರಿಷ್ಕರಣೆ ಅಲ್ಲ. ಈ ದೇಶದ ನಾಗರಿಕರ ನಾಗರಿಕತ್ವದ ಪರಿಷ್ಕರಣೆ’ ಎಂದರು.



ಶಿವಸುಂದರ್

‘ಎಸ್ಐಆರ್ ಮೂಲಕ ಪ್ರಧಾನಿ ಮೋದಿ ಅವರು ದೇಶದ 140 ಕೋಟಿ ಜನರ ಮೇಲೆ ಆರೋಪ ಪಟ್ಟಿ ಹಾಕಿದ್ದಾರೆ. ಅಂದರೆ, ಈಗ ಇರುವವರೆಲ್ಲರೂ ಈ ದೇಶದ ನಾಗರಿಕರಲ್ಲ. ಅವರು ಕೇಳುವ ದಾಖಲೆಗಳನ್ನು ಒದಗಿಸಿ, ಭಾರತೀಯರು ಎಂದು ಸಾಬೀತು ಪಡಿಸಬೇಕೆಂದು ಅಗ್ನಿಪರೀಕ್ಷೆ ಇಟ್ಟಿದ್ದಾರೆ’ ಎಂದು ಹೇಳಿದರು.

‘12 ರಾಜ್ಯಗಳಲ್ಲಿ ಮತಪಟ್ಟಿ ವಿಶೇಷ ಪರಿಷ್ಕರಣೆ ನಡೆಯುತ್ತಿದ್ದು, ಎಸ್ಐಆರ್ ಪೂರ್ವ ಹಂತದಲ್ಲಿ ಮ್ಯಾಚಿಂಗ್ ಮತ್ತು ಮ್ಯಾಪಿಂಗ್ ನಡೆದಿದೆ. ಇಲ್ಲಿ ದಾಖಲೆಗಳು ಹೊಂದಾಣಿಕೆಯಾದರೆ ಸಮಸ್ಯೆ ಇಲ್ಲ. ಇಲ್ಲವಾದರೆ ದಾಖಲೆಗಳು ಒದಗಿಸಿಲ್ಲ ಎಂಬ ಕಾರಣಕ್ಕೆ ಈ ಹಂತದಲ್ಲಿ ಈಗಾಗಲೇ ಕೋಟ್ಯಂತರ ಜನರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಅವರಲ್ಲಿ ಮುಸ್ಲಿಮರು, ದಲಿತರು, ಆದಿವಾಸಿಗಳು, ಮಹಿಳೆಯರು ಹೆಚ್ಚಿದ್ದಾರೆ’ ಎಂದರು.

‘ಆರ್‌ಎಸ್‌ಎಸ್ ಅವರಿಗೆ ಹಿಂದೂ ದೇಶ ಕಟ್ಟಲು ಸಂವಿಧಾನವೇ ಅಡ್ಡಿಯಾಗಿದೆ. ಅದಕ್ಕಾಗಿ ಎಸ್ಐಆರ್ ಅಸ್ತ್ರ ಹಿಡಿದಿದ್ದಾರೆ’ ಎಂದರು.

ಬಿಎಲ್‌ಒಗೆ ‘ಕೈ’ ಮುಖಂಡನ ಧಮ್ಕಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಮಾಹಿತಿ ಕೇಳಿದ ಮತಗಟ್ಟೆ ಅಧಿಕಾರಿಗೆ (ಬಿಎಲ್‌ಒ) ಚಿಕ್ಕಬಳ್ಳಾಪುರ ಯುವ ಕಾಂಗ್ರೆಸ್ ಅಧ್ಯಕ್ಷ ನಾಗೇಶ್ ರೆಡ್ಡಿ ಮೊಬೈಲ್ ಕರೆ ಮಾಡಿ ಧಮ್ಕಿ ಹಾಕಿದ್ದಾರೆ. ಈ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

ನಾಗೇಶ್ ರೆಡ್ಡಿ ವರ್ತನೆ ತೀವ್ರ ಟೀಕೆಗೆ ಗುರಿಯಾಗಿದೆ. ತಾಲ್ಲೂಕಿನ ಗೊಲ್ಲಹಳ್ಳಿ ಪಂಚಾಯಿತಿ ವ್ಯಾಪ್ತಿಯ ಯರ್ರಮಾರೇನಹಳ್ಳಿ ಬಿಎಲ್‌ಒ ಶಿವಶಂಕರ್ ಅವರನ್ನು ನಾಗೇಶ್ ರೆಡ್ಡಿ ಏಕವಚನದಲ್ಲಿ ನಿಂದಿಸಿದ್ದಾರೆ.

‘ಯಾವ ರೂಲ್ಸ್ ಮಾತನಾಡುತ್ತೀರಿ ನೀವು. ಬಿಜೆಪಿಗೆ ಸಪೋರ್ಟ್ ಮಾಡ್ತಿಯಾ? ನೀ ಯಾವನಯ್ಯ ಕೇಳೋಕೆ. ...ನನ್ಮಗನೆ.... ನನ್ನ ಮೇಲೆ 2 ಕೇಸ್ ಇವೆ. ನೀನು ನನ್ನ ಮೇಲೆ ದೂರು ಕೊಡುತ್ತೀಯಾ. ನಿನ್ನದೊಂದು ಕೇಸ್ ಆಗಲಿ, ತಲೆಕೆಡಿಸಿಕೊಳ್ಳುವುದಿಲ್ಲ’ ಎಂದು ಶಿವಶಂಕರ್ ಜತೆ ಅವಾಚ್ಯವಾಗಿ ಮಾತನಾಡಿದ್ದು ಅಡಿಯೊದಲ್ಲಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಚಿಂತಿಸಿದಂತೆ ಅದನ್ನು ಕಾರ್ಯಗತಗೊಳಿಸಲು ಹಿಂದೆ ಬೀಳಬೇಡಿ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಟ್ರಂಪ್ ಸುಂಕ ಸಮರಕ್ಕೆ ತೆರೆ ಪ್ರಶ್ನೆ–ಗೊಂದಲಗಳಿಗಿಲ್ಲ ಕೊರೆ

ಭಾರತದೊಂದಿಗಿನ ಸುಂಕ ವ್ಯವಸ್ಥೆಗೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿರುವ ಒಪ್ಪಂದವು ಸಮಗ್ರವಾಗಿರದೆ, ಎರಡೂ ದೇಶಗಳ ನಡುವಣ ವ್ಯಾಪಾರ ಸಮಸ್ಯೆಗಳ ಒಂದು ಭಾಗದ ಮೇಲಷ್ಟೇ ಬೆಳಕು ಚೆಲ್ಲುವಂತಿದೆ. ಈ ಕೊರತೆಯ ನಡುವೆಯೂ ಇದೊಂದು ಮಹತ್ವದ ಒಪ್ಪಂದವಾಗಿದ್ದು, ಅಮೆರಿಕದೊಂದಿಗಿನ ಭಾರತದ ವ್ಯಾಪಾರ ಒಪ್ಪಂದಗಳ ಬಗ್ಗೆ ಕಳವಳ ಹೊಂದಿದ್ದ ವ್ಯಾಪಾರಿಗಳು ಹಾಗೂ ಷೇರು ಮಾರುಕಟ್ಟೆ ಸೇರಿದಂತೆ ಎಲ್ಲರಿಗೂ ನಿರಾಳಭಾವ ಉಂಟುಮಾಡುವಂತಹದ್ದಾಗಿದೆ. ದ್ವಿಪಕ್ಷೀಯ ಸಂಬಂಧಗಳಲ್ಲಿನ ಸಾಮಾನ್ಯ ಹಿನ್ನಡೆ ನಿವಾರಣೆಗೊಳ್ಳುವ ಭರವಸೆಯೂ ಈ ಒಪ್ಪಂದದಿಂದ ಉಂಟಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಟ್ರಂಪ್ ಅವರ ಘೋಷಣೆಗೆ ಒಪ್ಪಿಗೆ ನೀಡಿ ಪ್ರತಿಕ್ರಿಯಿಸಿದ್ದಾರೆ. ಉಭಯ ದೇಶಗಳ ವಾಣಿಜ್ಯ ಇಲಾಖೆಗಳು ಘೋಷಣೆಯನ್ನು ಅನುಮೋದಿಸಿವೆ ಹಾಗೂ ಕೆಲವು ವಿವರಣೆಗಳನ್ನೂ ನೀಡಿವೆ. ಭಾರತದಿಂದ ರಫ್ತಾಗುವ ವಸ್ತುಗಳ ಮೇಲಿನ ತೆರಿಗೆಯನ್ನು ಶೇ 50ರಿಂದ ಶೇ 18ಕ್ಕೆ ಅಮೆರಿಕ ಇಳಿಸಲಿದೆ; ಇದೇ ವೇಳೆ, ಅಮೆರಿಕದಿಂದ ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಭಾರತ ಯಾವುದೇ ಸುಂಕವನ್ನು ವಿಧಿಸುವುದಿಲ್ಲ ಎಂದು ಟ್ರಂಪ್ ಅವರ ಘೋಷಣೆ ತಿಳಿಸಿದೆ.

ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಭಾರತದಲ್ಲಿನ ಸಾಮಾನ್ಯ ಪ್ರತಿಕ್ರಿಯೆ ಧನಾತ್ಮಕವಾಗಿದ್ದರೂ, ಈ ಘೋಷಣೆ ಕೆಲವು ಪ್ರಶ್ನೆಗಳಿಗೆ ಆಸ್ಪದ ಕಲ್ಪಿಸಿದೆ. ಅಮೆರಿಕದಿಂದ ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಶೂನ್ಯ ಸುಂಕವನ್ನು ವಿಧಿಸುವುದು ಭಾರತದ ಹಿತಾಸಕ್ತಿಯ ದೃಷ್ಟಿಯಿಂದ ಕಳವಳಕ್ಕೆ ಕಾರಣವಾಗುವಂತಿದೆ. ಸುಂಕ ರಹಿತ ವ್ಯವಸ್ಥೆಯಿಂದಾಗಿ ಭಾರತದ ಮಾರುಕಟ್ಟೆಯಲ್ಲಿ ಅಮೆರಿಕದ ಉತ್ಪನ್ನಗಳ ಪೂರವೇ ಉಂಟಾಗಬಹುದು. ಇವುಗಳಲ್ಲಿ ಹೈನು ಹಾಗೂ ಕೃಷಿ ಉತ್ಪನ್ನಗಳೂ ಸೇರಿರಬಹುದು. ಈ ಪರಿಸ್ಥಿತಿ ಈಗಾಗಲೇ ಸಂಕಷ್ಟದಲ್ಲಿರುವ ಭಾರತದ ಕೃಷಿ ವಲಯಕ್ಕೆ ಮತ್ತಷ್ಟು ತೊಂದರೆ ಉಂಟುಮಾಡಬಹುದು. ಈ ಹಿನ್ನೆಲೆಯಲ್ಲಿ, ಭಾರತದ ಬೃಹತ್ ಮಾರುಕಟ್ಟೆಯನ್ನು ಅಮೆರಿಕದ ಕೃಷಿ ಉತ್ಪನ್ನಗಳು ತಲಪಲು ಪ್ರಸಕ್ತ ಒಪ್ಪಂದವು ಅನುಕೂಲಕರವಾಗಿದೆ ಎಂದಿರುವ ಅಮೆರಿಕದ ಕೃಷಿ ಕಾರ್ಯದರ್ಶಿ ಬ್ರೂಕ್ ರಾಲಿನ್ಸ್ ಹೇಳಿಕೆಯನ್ನು ಗಮನಿಸಬಹುದು. ಆದರೆ, ಭಾರತದ ಕೃಷಿ ವಲಯ ಸಂಪೂರ್ಣ ಸುರಕ್ಷಿತವಾಗಿದೆ ಎಂದು ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ. ಇದೇ ಬಗೆಯ ಭರವಸೆಯನ್ನು ಮೋದಿಯವರೂ ಈ ಹಿಂದೆ ನೀಡಿದ್ದಾರೆ. ಆದರೂ, ಪರಿಸ್ಥಿತಿ ಅಷ್ಟು ಸರಳವಾಗಿಲ್ಲ ಎನ್ನುವುದನ್ನು ಅಮೆರಿಕದ ಹೇಳಿಕೆಗಳು ಸೂಚಿಸುವಂತಿವೆ. ರೈತ ಚಳವಳಿಗಳ ಭಾರತೀಯ ಸಮನ್ವಯ ಸಮಿತಿ (ಐಸಿಸಿಎಫ್‌ಎಂ) ಕೂಡ, ಅಮೆರಿಕದ ಕೃಷಿ ಉತ್ಪನ್ನಗಳನ್ನು ತೆರಿಗೆಮುಕ್ತಗೊಳಿಸುವುದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆಯ ಮಾತು ಹೇಳಿದೆ.



ಅಮೆರಿಕದೊಂದಿಗಿನ ಭಾರತದ ವ್ಯಾಪಾರ ಒಪ್ಪಂದವು ಮಹತ್ವದ್ದಾಗಿದ್ದರೂ, ಕೃಷಿ ವಲಯದ ಹಿತಾಸಕ್ತಿಗೆ ಸಂಬಂಧಿಸಿದ ಗೊಂದಲಗಳು ಮುಂದುವರಿದಿವೆ. ರಷ್ಯಾ ಜೊತೆಗಿನ ಸಂಬಂಧದ ಕುರಿತೂ ಪ್ರಶ್ನೆಗಳು ಎದುರಾಗಿವೆ.

ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ವಿವರಣೆ ಅಗತ್ಯವಾದ ಹಾಗೂ ಪರಿಹರಿಸಿಕೊಳ್ಳಬೇಕಾದ ಕೆಲವು ವಿಷಯಗಳಿವೆ. ರಷ್ಯಾದಿಂದ ತೈಲ ಖರೀದಿಯನ್ನು ಭಾರತ ನಿಲ್ಲಿಸಿದೆ ಎಂದು ಟ್ರಂಪ್ ಹೇಳಿದ್ದಾರೆ. ಈ ಬಗ್ಗೆ ಭಾರತ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲವಾದರೂ, ರಷ್ಯಾದಿಂದ ತೈಲ ಖರೀದಿ ಸ್ಥಗಿತಗೊಳಿಸುವ ಬಗ್ಗೆ ಭಾರತದಿಂದ ಯಾವುದೇ ಸೂಚನೆ ಬಂದಿಲ್ಲ ಎಂದು ಕ್ರೆಮ್ಲಿನ್ ಹೇಳಿದೆ. ರಷ್ಯಾದಿಂದ ತೈಲ ಖರೀದಿಸದಿರುವ ನಿರ್ಧಾರ ಭಾರತದ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವುದರ ಜೊತೆಗೆ, ದೀರ್ಘಕಾಲದ ಹಾಗೂ ನಂಬಿಕೆಗೆ ಅರ್ಹವಾದ ದೇಶದೊಂದಿಗಿನ ಬಾಂಧವ್ಯವನ್ನೂ ಗಾಸಿಗೊಳಿಸುತ್ತದೆ; ವಿಚಿತ್ರ ಮನಃಸ್ಥಿತಿಯ ನಾಯಕನ ನೇತೃತ್ವದ ವಿಶ್ವಾಸಾರ್ಹವಲ್ಲದ ದೇಶದ ಒತ್ತಡಕ್ಕೆ ಭಾರತ ಮಣಿದಂತೆಯೂ ಆಗುತ್ತದೆ. ಸಾರಿಗೆ, ಇಂಧನ ಮತ್ತು ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಅಮೆರಿಕದಲ್ಲಿ 500 ಬಿಲಿಯನ್ ಡಾಲರ್‌ಗಳ ಹೂಡಿಕೆಗೆ ಭಾರತ ಬದ್ಧವಾಗಿದೆ ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಹೇಳಿದ್ದಾರೆ. ಈ ಹೇಳಿಕೆಯ ಬಗ್ಗೆಯೂ ಭಾರತದಿಂದ ಯಾವುದೇ ಸ್ಪಷ್ಟನೆ ದೊರೆತಿಲ್ಲ. ತೆರಿಗೆಗಳನ್ನು ತಕ್ಷಣದಿಂದಲೇ ಕಡಿತಗೊಳಿಸಲಾಗುತ್ತದೆ ಎಂದು ಟ್ರಂಪ್ ಹೇಳಿದ್ದರೆ, ವಿವರಗಳನ್ನು ಸದ್ಯದಲ್ಲೇ ಹಂಚಿಕೊಳ್ಳಲಾಗುವುದು ಎಂದು ಗೋಯಲ್ ಹೇಳಿದ್ದಾರೆ. ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ಸಾರ್ವಜನಿಕ ವೇದಿಕೆಯಲ್ಲಿ ದೊರೆಯುವಂತೆ ಮಾಡಬೇಕು ಹಾಗೂ ಒಪ್ಪಂದಕ್ಕೆ ಸಂಬಂಧಿಸಿದಂತೆ ಎದುರಾಗಿರುವ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಬೇಕು. ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲ ಗೊಂದಲ ಹಾಗೂ ಆತಂಕವನ್ನು ವಿಳಂಬವಿಲ್ಲದೆ ಪರಿಹರಿಸಬೇಕು.

ಪ್ರಜಾಪ್ರಭುತ್ವದ ಅಣಕ



ಈ ದೇಶದ ಪ್ರಧಾನಿಗೆ ಸಂಸತ್ತಿನೊಳಗೇ ರಕ್ಷಣೆ ಇಲ್ಲವೆಂದಾದರೆ, ಸಂಸತ್ತಿನ ಹೊರಗಿರುವ 140 ಕೋಟಿ ಮಂದಿಯನ್ನು ಯಾರು ರಕ್ಷಿಸುತ್ತಾರೆ? ಪ್ರಜಾಪ್ರಭುತ್ವದ ಅಣಕವೆಂದರೆ ಬಹುಶಃ ಇದೇ.

ಗಿರಿಧರ ಕಾರ್ಕಳ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಇಡೀ ದೇಶ ಆಧುನಿಕ ತಂತ್ರಜ್ಞಾನ ಬಳಕೆಯತ್ತ ಮುನ್ನಡೆಯುತ್ತಿದೆ. ಆದರೆ, ರಾಜ್ಯ ಸರ್ಕಾರ ಮತಪತ್ರಗಳ ಬಳಕೆಯ ಮೂಲಕ ಆಧುನಿಕತೆಗೆ ವಿರುದ್ಧವಾಗಿ ಕಾರ್ಯ ನಿರ್ವಹಿಸಲು ಮುಂದಾಗಿದೆ. ದೆಹಲಿ ಹೈಕಮಾಂಡ್‌ನ ಕೈಗೊಂಬೆಯಾಗಿರುವುದೇ ಇಂತಹ ನಿರ್ಣಯಕ್ಕೆ ಕಾರಣ.

ಪ್ರಲ್ಹಾದ ಜೋಶಿ, ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ

25 ವರ್ಷಗಳ ಹಿಂದೆ

ಬುಧವಾರ, 7-2-2001

• **ಡೇರಿಗೆ ನುಗ್ಗಿ ದಾಂಧಲೆ**

ಬೆಂಗಳೂರು, ಫೆ. 6– ಬೆಂಗಳೂರು ಡೇರಿಯ ಕೊಳಚೆ ನೀರು ಸಂಸ್ಕರಣಾ ಘಟಕದಿಂದ ಹೊರಸೂಸುವ ದುರ್ವಾಸನೆಯನ್ನು ತಡೆಗಟ್ಟುವಂತೆ ಒತ್ತಾಯಿಸಿ ಚಂದ್ರಪ್ಪ ಕೊಳೆಗೇರಿ ನಿವಾಸಿಗಳು ಮಾರಕಾಸ್ತ್ರಗಳೊಂದಿಗೆ ಡೇರಿಯ ಆವರಣಕ್ಕೆ ನುಗ್ಗಿ ಸಿಕ್ಕ ಸಿಕ್ಕವರ ಮೇಲೆ ಹಲ್ಲೆ ಮಾಡಿ ವಾಹನಗಳನ್ನು ಜಖಂಗೊಳಿಸಿ ಕಚೇರಿಯಲ್ಲಿ ದಾಂಧಲೆ ನಡೆಸಿರುವ ಘಟನೆ ಇಂದು ಸಂಜೆ ನಡೆದಿದೆ.

ಸಂಜೆ ಸುಮಾರು 4.30ರ ವೇಳೆಗೆ ಮಚ್ಚು, ದೊಣ್ಣೆ, ಸೈಕಲ್ ಚೈನ್ ಹಿಡಿದ ದುಷ್ಕರ್ಮಿಗಳು ಭದ್ರತಾ ಸಿಬ್ಬಂದಿಯನ್ನು ತಳ್ಳಿ ಒಳನುಗ್ಗಿದರು.

• **ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ**

ನವದೆಹಲಿ, ಫೆ. 6– ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ಸಂಪೂರ್ಣವಾಗಿ ನಿಷೇಧಿಸಲು ಕೇಂದ್ರ ಸರ್ಕಾರ ಇಂದು ನಿರ್ಧರಿಸಿತು.

ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಿಗರೇಟ್ ಮತ್ತಿತರ ತಂಬಾಕು ಕಂಪನಿಗಳು ಪ್ರಾಯೋಜಿಸುವುದನ್ನು ಕೂಡ ನಿಷೇಧಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿತು.

75 ವರ್ಷಗಳ ಹಿಂದೆ

ಬುಧವಾರ, 7-2-1951

• **ಪಾರ್ಲಿಮೆಂಟಿನಲ್ಲಿ ಹಿಂದೂ ಕೋಡ್ ಬಿಲ್ ಪರಿಶೀಲನೆ**

ನವದೆಹಲಿ, ಫೆ. 6– ಆರು ವಾರಗಳ ಅಂತರದ ಬಳಿಕ ಇಂದು ಪಾರ್ಲಿಮೆಂಟ್ ಮತ್ತೆ ಸೇರಿದಾಗ ವಿವಾದಾಸ್ಪದ ಹಿಂದೂ ಕೋಡ್ ಮಸೂದೆಯ ಒಂದೊಂದು ವಿಧಿಯನ್ನೂ ಪರಿಶೀಲಿಸಲಾಯಿತು.

ವಿವಿಧ ವಿಧಿಗಳಿಗೆ 560 ತಿದ್ದುಪಡಿಗಳಿಗೆ ನೋಟಿಸ್‌ಗಳನ್ನು ಇದುವರೆಗೆ ಹಂಚಲಾಗಿದೆ.

ಸಾವಕಾಶವಾಗಿ ಆದರೆ, ಉದ್ರೇಕಪೂರಿತವಾಗಿ ನಡೆದ ಈ ಚರ್ಚೆಯಲ್ಲಿ ಮಾತನಾಡಿದವರಲ್ಲಿ ಮಧ್ಯಭಾರತದ ವಿ.ಎಸ್. ಸಾರವಾಟೆಯವರು ಈ ಮಸೂದೆಯನ್ನು ಹಿಂದೂಗಳಿಗೆ ಮಾತ್ರವಲ್ಲದೆ, ಹಿಂದೂಗಳಲ್ಲದವರಿಗೂ ಅನ್ವಯಿಸಬೇಕೆಂದರು.

ಬಿಹಾರದ ಬಿ.ಪಿ. ಜುಂಜುನ್‌ವಾಲಾ ಮತ್ತು ಪಶ್ಚಿಮ ಬಂಗಾಳದ ನಾಜಿರುದ್ದೀನರು ಈ ಉದ್ದೇಶಕ್ಕಾಗಿ ದಾಖಲೆ ಮಾಡಿಕೊಂಡಿರುವವರಿಗೆ ಮಾತ್ರ ಈ ಮಸೂದೆಯನ್ನು ಅನ್ವಯಿಸಬೇಕೆಂದು ಹೇಳಿದರು.

ತಿದ್ದುವ ತಿವಿಯುವ 'ಕಾವ್ಯಖಡ್ಗ'



ವಿಶ್ಲೇಷಣೆ

ವೈ.ಎಸ್.ವಿ. ದತ್ತ

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಜನ್ಮಶತಾಬ್ದಿ ವರ್ಷವಿದು (ಜನನ: ಫೆ. 7, 1926). ಸಹೃದಯರಿಗೆ ಅವರು 'ಜಿಎಸ್‌ಎಸ್' ಎಂದೇ ಪ್ರಿಯರು. ನವೋದಯ ಹಾಗೂ ನವ್ಯ ಕಾವ್ಯ ಮಾರ್ಗಗಳ ಲಕ್ಷಣಗಳನ್ನು ಒಗ್ಗೂಡಿಸಲು ಯತ್ನಿಸಿದವರು ಎಂಬ ಅರ್ಥದಲ್ಲಿ, ಸಮಕಾಲೀನ ಕಾವ್ಯವನ್ನು ಚರ್ಚಿಸುವ ಸಂದರ್ಭಗಳಲ್ಲೆಲ್ಲ ಅವರನ್ನು 'ಸಮನ್ವಯ ಕವಿ' ಎನ್ನುವ ಪರಿಪಾಠವಿದೆ. ಆದರೆ, ಜಿಎಸ್‌ಎಸ್ ಅವರ ಕಾವ್ಯಮಾರ್ಗವೇ ವಿಶಿಷ್ಟ, ವಿಭಿನ್ನ. ನವೋದಯ ಕಾಲಘಟ್ಟದ ಕುವೆಂಪು ಅವರ ಪ್ರಭಾವಕ್ಕೆ ಒಳಗಾದರೂ, ತಮ್ಮ ನಾಲ್ಕು ದಶಕಗಳ ಕಾವ್ಯಕೃಷಿಯಲ್ಲಿ ಅವರು ತುಳಿದದ್ದು ತಮ್ಮದೇ ನೆಲವನ್ನು, ಬಿತ್ತಿದ್ದು ತಮ್ಮ ನಂಬುಗೆಯನ್ನು. ಅವರ ಕಾವ್ಯ ಮನೋಧರ್ಮವನ್ನು ಸರಳೀಕರಿಸಿ ಹೇಳುವುದಾದರೆ, ಅವರು ತಮ್ಮ ಕಾವ್ಯರಚನೆಯಲ್ಲಿ ನಿಭಾಯಿಸಿದ್ದು ಎರಡು ಜಗತ್ತುಗಳನ್ನು: ಮೊದಲನೆಯದು, ಇತ್ಯಾತ್ಮಕವಾದ ಜೀವಸಮೃದ್ಧಿ ಪ್ರಕೃತಿ ಜಗತ್ತು. ಎರಡನೆಯದು, ನೇತ್ಯಾತ್ಮಕವಾದ ಮಾನವಕೇಂದ್ರಿತ ಸಮಾಜ ವ್ಯವಸ್ಥೆಯ ಜಗತ್ತು. ಮೊದಲನೆಯ ಜಗತ್ತಿನ ಇತ್ಯಾತ್ಮಕತೆಯನ್ನು ನಿರೂಪಿಸುವಾಗ ವಿಸ್ಮಯ, ಉತ್ಸುಕತೆಗಳೇ ಪ್ರಧಾನ ಭಾವಗಳಾಗುತ್ತವೆ. ಎರಡನೆಯ ಜಗತ್ತಿನ ನೇತ್ಯಾತ್ಮಕತೆಯನ್ನು ನಿರೂಪಿಸುವಾಗ ಖಿನ್ನತೆ, ಸಾತ್ವಿಕ ಸಿಟ್ಟು, ಹತಾಶೆಯ ಅಂಚಿನಲ್ಲಿ ಉಳಿಯುವ ಅಸಹಾಯಕತೆ ಇವು ಅವರ ಕವಿತೆಗಳ ಪ್ರಧಾನ ಭಾವಗಳಾಗುತ್ತವೆ ಎಂಬ ವಿಮರ್ಶಕ ಕೆ.ವಿ. ನಾರಾಯಣ ಅವರ ಮಾತುಗಳು ಗಮನಾರ್ಹ.

ನವೋದಯದಿಂದ ಮೂಡಿಬಂದ ಈ ಕವಿ ಕನ್ನಡ ಕವಿತೆ ಹಾದುಹೋದ ಎಲ್ಲ ನೆಲೆಗಳನ್ನೂ ಕಂಡರು, ಪ್ರತಿಕ್ರಿಯಿಸಿದರು. ನವ್ಯ, ಬಂಡಾಯ ಮಾರ್ಗಗಳೂ ಅವರ ಕವಿತೆಗಳ ಪರಿವಲಯದಲ್ಲಿ ನುಗ್ಗಿ ಬಂದವು. ಯಾವ ಪಂಥಕ್ಕೂ ಕಟ್ಟು ಬೀಳದ ತಮ್ಮ ಕಾವ್ಯದ ಉದ್ದೇಶವನ್ನು ಜಿಎಸ್‌ಎಸ್ ಅವರು ಹೀಗೆ ಸಾರುತ್ತಾರೆ: 'ಅದೂ ಬೇಕು ಇದೂ ಬೇಕು, ಎಲ್ಲವೂ ಬೇಕು ನನಗೆ, ದಾರಿ ನೂರಾರಿವೆ ಬೆಳಕಿನರಮನೆಗೆ. ಬೇಡ ನನಗೆ ಸಿದ್ಧಾಂತಗಳ ರಾದ್ಧಾಂತ, ನೂರಾರು ಭಾವದ ಬಾವಿ; ಎತ್ತಿಕೋ ನಿನಗೆ ಬೇಕಾದಷ್ಟು ಸಿಹಿನೀರ, ಪಾತ್ರೆಯಾಕಾರಗಳ ಕುರಿತು ಏತಕೆ ಜಗಳ? ನಮಗೆ ಬೇಕಾದದ್ದು ದಾಹ ಪರಿಹಾರ' ('ಹಿನ್ನುಡಿ' ಕವಿತೆ).

'ಸಾಮಗಾನ'ದಿಂದ 'ದೀಪದ ಹೆಜ್ಜೆ' ಕವನ ಸಂಕಲನದವರೆಗಿನ ಅವರ ಸುಮಾರು 500 ಕವಿತೆಗಳಲ್ಲಿ ನನಗೆ ಇಂದಿನ ವ್ಯವಸ್ಥೆಗೆ ಪ್ರಸ್ತುತವೆನಿಸಿದ್ದು, ಮಾನವ ಕೇಂದ್ರಿತ ಸಮಾಜ ವ್ಯವಸ್ಥೆಗೆ ಕನ್ನಡಿ ಹಿಡಿಯುವ ಕವಿತೆಗಳು. ಅವು ಒಂದು ರೀತಿಯಲ್ಲಿ ಕಾವ್ಯಖಡ್ಗ. ನಮ್ಮನ್ನು ತಿವಿಯುತ್ತವೆ. ತಿದ್ದಲು ಯತ್ನಿಸುತ್ತವೆ.

ಐವತ್ತು ವರ್ಷಗಳ ಹಿಂದೆ ಅವರು ಬರೆದ ಕವನ 'ಗಾಂಧಿ'. ಗಾಂಧೀಜಿಯ ಹೆಸರೇ ರಾಜಕೀಯ ಲಾಭದ ಸರಕಾಗಿರುವ ಸಂದರ್ಭದಲ್ಲಿ ಈ ಕವನ ಹೆಚ್ಚು ಪ್ರಸ್ತುತವೆನಿಸುತ್ತದೆ. ಗಾಂಧೀಜಿಯನ್ನು 'ನೀನೊಬ್ಬ ವಿಚಿತ್ರ ಮನುಷ್ಯ' ಎಂದೆನ್ನುವ ಜಿಎಸ್‌ಎಸ್, 'ಎಲ್ಲವನ್ನೂ ಅಂಗಡಿ ತೆರೆದು ಬೆಲೆ ಕಟ್ಟಬರದ ಈ ಮಂದಿಯ ಮುಂದೆ ಹರಾಜಿಗಿಟ್ಟೆ, ಕಾಸಿಗೆ ಕಾಸು, ಬಡ್ಡಿಗೆ ಬಡ್ಡಿ ಸೇರಿಸುತ್ತಾ ಬ್ಯಾಂಕಿನಲ್ಲಿ ಬೆಳೆವ ಬಡ್ಡಿಗೆ ರೋಮಾಂಚನಗೊಳ್ಳುತ್ತಾ ಕೂತವರ ನಡುವೆ ನೀನು ಎಲ್ಲಿಂದ ಬಂದೆಯೋ ಮಹರಾಯ!' ಎನ್ನುವಲ್ಲಿನ ಅವರ ವ್ಯಂಗ್ಯ ಮತ್ತು 'ನೀ ಬಂದು ಹೋದಾ ಮೇಲೆ ಏನೇನಾಗಿದೆ ಎಂದು ಹೇಳಲಾರೆ, ನಿನ್ನೆದೆಗೆ ತಾಕಿದ ಗುಂಡು ನಮ್ಮೆದೆಗೂ ತಾಕಿದ್ದರೆ ಆ ಮಾತೇ ಬೇರೆ' ಎಂದು ಹೇಳುವಲ್ಲಿ ಮಡುಗಟ್ಟಿರುವ ಖಿನ್ನತೆ ಮಿಶ್ರ ಸಿಟ್ಟು ನಮ್ಮನ್ನು ತಟ್ಟದೇ ಇರದು.

'ಪ್ರೀತಿ ಇಲ್ಲದ ಮೇಲೆ' (1987) ಕವನದಲ್ಲಿ 'ಪ್ರೀತಿ ಇಲ್ಲದ ಮೇಲೆ, ಸಂಶಯದ ಗಡಿಗಳುದ್ದಕ್ಕೂ, ಸಿಡಿಗುಂಡುಗಳ ಕದನ ನಿಂತೀತು ಹೇಗೆ? ಜಾತಿ–ಮತ–ಭಾಷೆ–ಬಣ್ಣಗಳ ಗೋಡೆಯ ನಡುವೆ ನರಳುವ ಪಾಡು ತಪ್ಪೀತು ಹೇಗೆ? ನಮ್ಮ ನಿಮ್ಮ ಮನಸ್ಸು ಮರುಭೂಮಿಯಾಗದ ಹಾಗೆ ತಡೆಗಟ್ಟುವುದು ಹೇಗೆ?' ಎಂಬ ಅವರ ಪ್ರಶ್ನೆ ಈಗಲೂ ನಮ್ಮನ್ನು ಕಾಡುತ್ತಿರುವ ಪ್ರಶ್ನೆಯಾಗಿಯೇ ಉಳಿದಿದೆ.

> ವರ್ತಮಾನದ ಸಂಕಟಕ್ಕೆ ದನಿಯಾಗಿ 'ಹಣತೆಯ ಕವಿ' ಜಿ.ಎಸ್. ಶಿವರುದ್ರಪ್ಪನವರ ಕಾವ್ಯ ಒದಗಿಬರುತ್ತದೆ. ಮಾನವಕೇಂದ್ರಿತ ಸಮಾಜ ವ್ಯವಸ್ಥೆಯ ಬಗ್ಗೆ ಅವರಂತೆ ಪ್ರತಿಕ್ರಿಯಿಸಿರುವ ಕವಿಗಳು ವಿರಳ. ಜಿಎಸ್‌ಎಸ್ ಜನಶತಾಬ್ದಿ ವರ್ಷದಲ್ಲಿ ಅವರ ಕಾವ್ಯದ 'ಕೃಷ್ಣಶಕ್ತಿ' ನಾಡನ್ನು ಆವರಿಸಿಕೊಳ್ಳಬೇಕಾಗಿದೆ. ಜೊತೆಗೆ ಸಾತ್ವಿಕ ಸಿಟ್ಟು ಎಲ್ಲರದ್ದಾಗಬೇಕಾಗಿದೆ.

1992ನೇ ವರ್ಷ, ಅಯೋಧ್ಯೆಯ ನೆನಪು ನಿಮಗಿರಬಹುದು. ಆಗ ಜಿಎಸ್‌ಎಸ್ ಬರೆದ ಕವನ 'ನೀವೇ ಹೇಳಿ'. 'ಕೇಳಿದಿರಾ ಮಹಾಜನರೇ, ಕೇಳಿದಿರಾ? ದೇವಸ್ಥಾನಗಳನ್ನು ಕಟ್ಟುಸುತ್ತಾರಂತೆ ಇವರು. ಇನ್ನು ದೇವರುಗಳಿಗೆ ಭಯವಿಲ್ಲ. ಹಾಲಿನ ಮಳೆ ಸುರಿಯುತ್ತದೆ, ಜೇನಿನ ಹೊಳೆ ಹರಿಯುತ್ತದೆ, ರಾಮರಾಜ್ಯವಾಗುತ್ತದೆ ಇಡೀ ದೇಶ. ಇನ್ನು ತಡವಿಲ್ಲ. ಆದರೆ ಮಹಾಜನರೇ ಹೇಳಿ, ಈಗಾಗಲೇ ಹೊಟ್ಟೆಗಿಲ್ಲದೆ ತತ್ತರಿಸುವ ದೇವಸ್ಥಾನಗಳನ್ನೇನು ಮಾಡೋಣ? ಕಣ್ಣಲ್ಲೇ ಬೆಳಕಿಲ್ಲದ ದೇವಸ್ಥಾನಗಳನ್ನೇನು ಮಾಡೋಣ? ಬಾಯಿಲ್ಲದೆ ಬತ್ತಲಾಗಿ ಬಿದ್ದ ದೇವಸ್ಥಾನಗಳನ್ನೇನು ಮಾಡೋಣ? ನೀವೇ ಹೇಳಿ' ಎನ್ನುವ ಜಿಎಸ್‌ಎಸ್, 'ಸ್ಥಾವರಕ್ಕಳಿವುಂಟು, ಜಂಗಮಕ್ಕೆ ಅಳಿವಿಲ್ಲ' ಎಂಬ ಬಸವಣ್ಣನ ವಚನವನ್ನು ಜ್ಞಾಪಿಸುತ್ತಾರೆ. 'ಗುಡಿ–ಚರ್ಚು–ಮಸೀದಿಗಳ ಬಿಟ್ಟು ಹೊರ ಬನ್ನಿ' ಎಂದ ಕುವೆಂಪು ಅವರು ಜಿಎಸ್‌ಎಸ್ ಮೇಲೆ ಪ್ರಭಾವ ಬೀರಿದಂತೆ ಕಾಣುತ್ತದೆ.

ಇಂದಿನ ಜನತಂತ್ರ ವ್ಯವಸ್ಥೆಯಲ್ಲಿ ಜನರು ಪ್ರಜ್ಞಾವಂತಿಕೆ ಮರೆಯದಿದ್ದರೆ ಏನಾದೀತು? ಜಿಎಸ್‌ಎಸ್ 'ಸುವರ್ಣ ಸಂಕಟವಾದೀತು' ಎನ್ನುತ್ತಾರೆ ಅದೇ ಹೆಸರಿನ ಕವನದಲ್ಲಿ. 'ಹಿತ್ತಾಳೆಯೇ ಚಿನ್ನವೆಂದು ಕಬ್ಬಿಣಗಳೆಲ್ಲಾ ಉದ್ಘೋಷಿಸುವ ಹೊತ್ತಿನಲ್ಲಿ, ನಿಜವಾದ ಚಿನ್ನಕ್ಕೆ ಅನ್ನಿಸಿತು, ಮತ್ತೆ ನಾ ಹೋಗುವುದೇ ಸರಿ ನೆಲದಾಳಗಳ ನಿಶ್ಯಬ್ದದಲ್ಲಿ' ಎಂಬ ಸಾಲುಗಳಲ್ಲಿ ಸಜ್ಜನರೂ, ಸಭ್ಯರೂ, ಸಾರ್ವಜನಿಕ ಬದುಕಿಗೆ ಬರಲು ಹಿಂಜರಿಯುವ ಸ್ಥಿತಿಯ ಬಗ್ಗೆ ಗಮನ ಸೆಳೆಯುತ್ತಾರೆ.


ನಮ್ಮ ನಡುವೆ ವಿರಾಜಿಸುವ ಜನರಾದರೂ ಎಂತಹವರು ಎಂಬುದಕ್ಕೆ 'ಜನಗಣಮನ ಅಧಿನಾಯಕ' ಕವಿತೆಯನ್ನು ನೋಡಿ: 'ನಮ್ಮೀ ಜನಗಣಮನ ಅಧಿನಾಯಕ ಎಲ್ಲಿದ್ದಾನೆ? ಎಲ್ಲೆಲ್ಲೂ ಇದ್ದಾನೆ. ನಂಬದೆ ಕರೆದರು, ಕರೆಯದೇ ಇದ್ದರು, ಕಂಬಕಂಬದಲ್ಲಿ ಕೂತಿದ್ದಾನೆ, ಕೊಂಬೆಗೂ ಕೊಂಬೆಗೂ ನೆಗೆಯುತ್ತಾನೆ, ಗೋಸುಂಬೆಯ ಕೋಟನು ತೊಟ್ಟಿದ್ದಾನೆ, ಮುಖಕೆ ಮೈಕನ್ನು ಕಟ್ಟಿದ್ದಾನೆ, ಮೇಲ್ ಮನೆಯಲ್ಲೂ, ಕೆಳಮನೆಯಲ್ಲೂ, ಒಳಮನೆಯಲ್ಲೂ ಆ ಅವನೇ ತುಂಬಿದ್ದಾನೆ... ಎಚ್ಚರವಾಗಿರು, ನಮ್ಮೀ ಜನಗಣಮನ ಅಧಿನಾಯಕ ಇಲ್ಲೇ ಇದ್ದಾನೆ. 'ಜಯಹೇ' ಅನ್ನದೆ ಇದ್ದರೆ ನಿನಗೂ, ನೀ ಯಾರೆಂಬುದ ಕಾಣಿಸುತಾನೆ' ಎನ್ನುವಲ್ಲಿನ ಹರಿತ ವ್ಯಂಗ್ಯ ನಮ್ಮನ್ನು ಚುಚ್ಚದೇ ಇದ್ದೀತೆ? ಇಂತಹ 'ಜನಗಣಮನ ಅಧಿನಾಯಕ'ರೇ ಸಮಾಜದಲ್ಲಿ ತುಂಬಿ ತುಳುಕಿದಾಗ ನಾವು ಕಾಣುವ ಕನಸಾದರೂ ಎಂತಹುದು? ಅದೊಂದು 'ದುಃಸ್ವಪ್ನ' ಎನ್ನುತ್ತಾರೆ, ಅದೇ ಹೆಸರಿನ ಕವನದಲ್ಲಿ. ಆ ಕೆಟ್ಟ ಕನಸು ಹೀಗಿದೆ: 'ಗೊಮ್ಮಟನಾಗಿ ನಿಂತಿದ್ದ ಮಹಾಮೂರ್ತಿ ಕರಗಿ ಕೊಚ್ಚೆಯಾಗಿ ಹರಿದಿದ್ದ ಕಂಡೆ, ಇಂದ್ರನೈರಾವತಕ್ಕೆ ತೊಣಚಿ ಹತ್ತಿ ಬೀದಿನಾಯಾಗಿ ಬೂದಿಯಲ್ಲಿ ಹೊರಳಾಡಿದ್ದ ಕಂಡೆ, ಕೊಳಕುಮಂಡಲಕೆ ಏಳು ಹೆಡೆ ಮೂಡಿ ಮಾನಸ ಸರೋವರದಲ್ಲಿ ಜಲಕ್ರೀಡೆಯಾಡಿದ್ದ ಕಂಡೆ, ಸರಸ್ವತೀ ಮಂದಿರದ ಶ್ವೇತಚಾಮರ ಕೆಲವು ಮಂತ್ರಿಗಳ ಮನೆಯ ಕಸಪೊರಕೆಯಾದದ್ದ ಕಂಡೆ, ದೊಡ್ಡ ಪೀಠಗಳ ಮೇಲೆ ಸಣ್ಣಜನ ಇಲಿಹೆಗ್ಗಣಗಳಾಗಿ ಹರಿದಾಡಿದ್ದ ಕಂಡೆ' ಎನ್ನುವ ಕವಿ– 'ಕಂಡು ಎಚ್ಚರಗೊಂಡೆ, ಎಚ್ಚರವೆಲ್ಲಾ ನಿಗಿ ನಿಗಿ ಉರಿವ ಕೆಂಡದ ಉಂಡೆ' ಎನ್ನುತ್ತಾರೆ. ಉರಿವ ಕೆಂಡದ ಉಂಡೆಯಾಗುವ ಸಾತ್ವಿಕ ಸಿಟ್ಟು ನಮಗೆಂದು ಬಂದೀತು?

ಇಂದಿನ ಸಾಮಾಜಿಕ ವ್ಯವಸ್ಥೆ ಜಿಎಸ್‌ಎಸ್ ಅವರಿಗೆ 'ಅರೇಬಿಯನ್ ನೈಟ್ಸ್'ನ ಬಾಗ್ದಾದಿನ ಕಾರಿರುಳ ನೆನಪು ತರುತ್ತದೆ. ತಮ್ಮ 'ಷಹಜಾದೆಗೆ' ಕವನದಲ್ಲಿ ಕವಿ ಹೀಗೆ ಕೇಳುತ್ತಾರೆ. '... ಸಾವಿರದೊಂದು ಕಾರಿರುಳನ್ನು ಕತೆ ಹೇಳುತ್ತಲೇ ಗೆದ್ದ ಷಹಜಾದೆ, ಹೇಳೆ, ಈ ರಾತ್ರಿಗೆಂದು ಕೊನೆ? ಯಾವ ಕತೆ ನಮ್ಮನ್ನೀಗ ಉಳಿಸಬಹುದೇ?'

ದುಷ್ಟ ವ್ಯವಸ್ಥೆಯೊಂದರಲ್ಲಿ ಶಿಷ್ಟ ಜನರು ಅನುಭವಿಸುವ ಪಾಡನ್ನು 'ಭೀಮಾಲಾಪ' ಎನ್ನುತ್ತಾರೆ. ವಿರಾಟರಾಜನ ಅರಮನೆಯಲ್ಲಿ ಅಜ್ಞಾತವಾಸಿಗಳಾಗಿ ಜೀತ ಮಾಡಬೇಕಾದ ಪಾಂಡವರ ಪರಿಸ್ಥಿತಿಯನ್ನು ಭೀಮನ ಬಾಯಲ್ಲಿ ಜಿಎಸ್‌ಎಸ್ ಹೀಗೆ ಹೇಳಿಸುತ್ತಾರೆ: 'ಸೀರೆ ಉಟ್ಟು ಬಳೆ ತೊಟ್ಟು, ಕಾಲಿಗೆ ಗೆಜ್ಜೆ ಕಟ್ಟಿದ್ದಾನೆ ಒಬ್ಬ; ಇನ್ನೊಬ್ಬ ಕಾವಿ ಉಟ್ಟು ಮೂಲೆಗೆ ಕೂತಿದ್ದಾನೆ. ದನದ ಕೊಟ್ಟಿಗೆಯಲ್ಲಿ ಒಬ್ಬ, ಕುದುರೆಲಾಯದಲ್ಲಿ ಮತ್ತೊಬ್ಬ. ಇದ್ದಾಳೆ ಇವಳು, ಅವರಿವರ ತಲೆಯ ಹೇನು ಹೆಕ್ಕುತ್ತಾ, ಆಗಾಗ ನಮ್ಮನ್ನು ಕುಕ್ಕುತ್ತಾ, ನಾನೂ ಇದ್ದೇನೆ – ಅಡುಗೆ ಮನೆಯಲ್ಲಿ ಉರಿವ ಸೌದೆಗಳ ಜೊತೆಗೆ ಪಾತ್ರಗಳಲ್ಲಿ ಕೊತ ಕೊತ ಕುದ್ದು, ಹಳೆಯ ನೆನಪುಗಳನ್ನು ರುಬ್ಬುತ್ತಾ'. ಭೀಮನ ಆಲಾಪ ಅಲ್ಲಿಗೇ ಮುಗಿಯುವುದಿಲ್ಲ. 'ನೋಡುತ್ತಿದ್ದೇನೆ, ಸುತ್ತಲೂ ಎಂತೆಂಥವೋ ವಿಜೃಂಭಿಸಿ ಮೀಸೆ ತಿರುವುತ್ತವೆ, ಏರಬಾರದ ಕಡೆಗೆ ಏರಿ, ಇಳಿಯಬಾರದ ಕಡೆಗೆ ಇಳಿದು, ಕೆಡಿಸಿ ಹೊಲಸೆಬ್ಬಿಸಿವೆ. ಗೆರೆದಾಟಬಾರದ ನಾನು ಕಾಯುತ್ತಿದ್ದೇನೆ. ಉರಿವ ಸೌದೆಗಳ ಜೊತೆಗೆ ಪಾತ್ರೆಗಳಲ್ಲಿ ಕೊತ ಕೊತ ಕುದಿದು ಕಾಯುತ್ತಿದ್ದೇನೆ'. ಇಂದಿನ ಪರಿಸ್ಥಿತಿಯಲ್ಲಿ ಬಹುತೇಕರು 'ಭೀಮಾಲಾಪ'ದಂತೆ ಕೊತಕೊತ ಕುದಿದು ಕಾಯುತ್ತಿರುವ ಸಾತ್ವಿಕರಾಗಿದ್ದಾರಲ್ಲವೇ?

ಜಿಎಸ್‌ಎಸ್ ನಿರಾಶವಾದಿಗಳಲ್ಲ. ಹತಾಶೆಯ ಅಂಚಿನಲ್ಲಿ ಉಳಿಯುವ ಅಸಹಾಯಕತೆ ಅವರ ಕವಿತೆಗಳಲ್ಲಿ ಪದೇ ಪದೇ ಮಾರ್ದನಿಸಿದರೂ, ಅವರು ಕಾಣುವುದು ಬೆಳಕನ್ನೇ. ರಾತ್ರಿ ಕಳೆದೀತು, ಬೆಳಕು ಹರಿದೀತು ಎಂಬುದು ಅವರ ನಂಬಿಕೆ. ಅವರು ನಂಬಿರುವುದು ಜನತಾ ಜನಾರ್ದನರ 'ಕೃಷ್ಣಶಕ್ತಿ'ಯನ್ನು. ಕೊಳಲ ಹಿಡಿದ ಮೃದು ಬೆರಳುಗಳು ಅರ್ಜುನನ ರಥದ ವಾಘೆಯನ್ನು ಹಿಡಿಯಬೇಕಾಗಿದೆ. ಕೊಳಲಿನ ಜಾಗದಲ್ಲಿ ಪಾಂಚಜನ್ಯ ಮೊಳಗಬೇಕಾಗಿದೆ ಎನ್ನುತ್ತಾರೆ.

ಇಂದಿನ ಪರಿಸ್ಥಿತಿಯಲ್ಲಿ ಮೊದಲು ನಮ್ಮಲ್ಲಿ ಸಾತ್ವಿಕ ಸಿಟ್ಟು ಬರಬೇಕಾಗಿದೆ. ಅದಕ್ಕಾಗಿ ಜಿಎಸ್‌ಎಸ್ ಅವರ ಜನ್ಮಶತಾಬ್ದಿಯ ಈ ವರ್ಷವೆಲ್ಲ, ಅವರ ಸಾತ್ವಿಕ ಸಿಟ್ಟಿನ ಕವಿತೆಗಳ ಮೊರೆತ ನಾಡಿನಾದ್ಯಂತ ಹೆಚ್ಚು ಹೆಚ್ಚಾಗಿ ಕೇಳಿ ಬರಬೇಕಾಗಿದೆ.



ವಾಚಕರ ವಾಣಿ

'ಚೈತ್ರದ ಕವಿ'ಯ ಸಮಗ್ರ ಮರುಮುದ್ರಿಸಿ

2009ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕವಿ ಜಿ.ಎಸ್. ಶಿವರುದ್ರಪ್ಪನವರ ಸಮಗ್ರ ಸಾಹಿತ್ಯವನ್ನು ಒಂಬತ್ತು ಸಂಪುಟಗಳಲ್ಲಿ ಪ್ರಕಟಿಸಿದೆ. ಕವಿಯ ಜನ್ಮ ಶತಮಾನೋತ್ಸವದ ನಿಮಿತ್ತ ಸಮಗ್ರ ಸಂಪುಟವನ್ನು ಮರುಮುದ್ರಿಸಬೇಕಿದೆ. ಜಿಎಸ್‌ಎಸ್ ಕಾವ್ಯ, ವಿಚಾರ, ವಿಮರ್ಶೆ ಎಷ್ಟು ಪ್ರಸ್ತುತ ಎಂಬುದನ್ನು ಚರ್ಚೆಗೊಳಪಡಿಸಬೇಕು. ಜಿಎಸ್‌ಎಸ್ ಪ್ರತಿಷ್ಠಾನಕ್ಕೆ ಸದಸ್ಯರ ನೇಮಕದಲ್ಲಿ ರಾಜ್ಯದ ಇತರೆ ಭಾಗದ ಸಾಹಿತ್ಯ ಚಿಂತಕರನ್ನು ಕಡೆಗಣಿಸಲಾಗಿದೆ. ಪ್ರತಿಷ್ಠಾನ ಕೇವಲ ಹಿರಿಯ ಸಾಹಿತಿಗಳಿಗೆ ಸೀಮಿತವಾಗಿದ್ದು, ಕಿರಿಯರನ್ನು ನಿರ್ಲಕ್ಷಿಸಲಾಗಿದೆ. ಪ್ರತಿಷ್ಠಾನದ ದಿಕ್ಕುದೆಸೆಗಳಿಗೆ ಹಿರಿಯರ ಅನುಭವದ ಜೊತೆಗೆ, ಕಿರಿಯರ ಉತ್ಸಾಹವೂ ಒಗ್ಗೂಡಬೇಕಲ್ಲವೆ?

ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ಸ್ವಾಸ್ಥ್ಯಕ್ಕಿಂತ ಮಿಗಿಲಾದ ಪ್ರಚಾರ ಉಂಟೆ?

ರಾಜ್ಯದಲ್ಲಿ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ಸರ್ಕಾರಿ ಬಸ್‌ಗಳ ಮೇಲೆ ಅಂಟಿಸಿರುವ ಪಾನ್‌ಮಸಾಲ ಮತ್ತು ಗುಟ್ಕಾ ಜಾಹೀರಾತು ತೆರವುಗೊಳಿಸುವ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಬೆಳವಣಿಗೆ ಶ್ಲಾಘನೀಯ; ಸಮಾಜದ ಆರೋಗ್ಯ ಮತ್ತು ಮೌಲ್ಯಗಳ ರಕ್ಷಣೆಯತ್ತ ಯುವಜನ ಸಾಗುವ ಜಾಗೃತಿಯ ಸಂಕೇತ.

ಸರ್ಕಾರಿ ಬಸ್‌ಗಳು ಸಾರ್ವಜನಿಕರ ಪ್ರಯಾಣದ ಅವಿಭಾಜ್ಯ ಅಂಗ. ಇವುಗಳ ಮೇಲೆ ಹಾನಿಕಾರಕ ಪದಾರ್ಥಗಳ ಜಾಹೀರಾತು ಕಾಣಿಸಿಕೊಳ್ಳುವುದು ಯುವಜನತೆಗೆ ತಪ್ಪುಸಂದೇಶ ನೀಡುತ್ತದೆ. ಪಾನ್‌ಮಸಾಲ ಮತ್ತು ಗುಟ್ಕಾ ಸೇವನೆಯಿಂದ ಉಂಟಾಗುವ ಆರೋಗ್ಯ ಹಾನಿಗಳು ಎಲ್ಲರಿಗೂ ತಿಳಿದಿರುವ ವಿಷಯ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿ ಗಳು ಬಸ್‌ಗಳ ಮೇಲೆ ಸಮಾಜಕ್ಕೆ ತಪ್ಪುಸಂದೇಶ ನೀಡುವಂತಹ ಜಾಹೀರಾತು ಪ್ರಕಟಿಸದಂತೆ ಎಚ್ಚರವಹಿಸಬೇಕಿದೆ.

ಪ್ರವೀಣ ನಾಗಪ್ಪ ಯಲವಿಗಿ, ಮುಂಡಗೋಡ

ಆರೋಗ್ಯ ಜಾಗೃತಿಗೆ ಪಕ್ಷಗಳ ನಿರಾಸಕ್ತಿ

ಮೊಬೈಲ್ ಗೇಮ್ಸ್ ಮತ್ತು ಅತಿಯಾದ ಮೊಬೈಲ್ ಬಳಕೆಯಿಂದಾಗಿ ಉತ್ತರಪ್ರದೇಶದಲ್ಲಿ ಮೂವರು ಸಹೋದರಿಯರು ಜೀವತೆತ್ತಿದ್ದಾರೆ. ಇದು ಸಾಲದು ಎಂಬಂತೆ ಕಿರಿಯ ವಯಸ್ಸಿನ ಹಲವರು ಡ್ರಗ್ಸ್ ಮತ್ತು ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದಾರೆ. ಈ ಕುರಿತು ಸರ್ಕಾರ ಮತ್ತು ವಿಪಕ್ಷಗಳಿಗೆ ಪ್ರಜ್ಞೆ ಇಲ್ಲ. ಜಾಹೀರಾತು ರೂಪದಲ್ಲಿ ತಮ್ಮ ಪ್ರಚಾರಕ್ಕೆ ಲೆಕ್ಕವಿಲ್ಲದಷ್ಟು ಹಣ ಸುರಿಯುತ್ತಿವೆ. ಈ ಹಣದಲ್ಲಿ ಸ್ವಲ್ಪಭಾಗವನ್ನು ಮಕ್ಕಳು, ಯುವಜನರು ದುಶ್ಚಟದಿಂದ ದೂರವಿರುವಂತೆ ಜಾಗೃತಿ ಮೂಡಿಸಲು ಬಳಸಬಹುದಲ್ಲವೆ? ಇದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಉತ್ತಮ. ಮತ ಹಾಕಿದ ಜನರಿಗೆ ಕಿಂಚಿತ್ತು ಉಪಕಾರವಾದರೂ ಆದೀತು.

ಮುರಳಿ ಪುರೋಹಿತ್, ಮೇಲುಕೋಟೆ

'ನಮ್ಮ ಮೆಟ್ರೊ'ದ ಹಕ್ಕು ಮತ್ತು ಬಾಧ್ಯತೆ

'ನಮ್ಮ ಮೆಟ್ರೊ' ಸೇವೆಯು ಬಿಎಂಆರ್‌ಸಿಎಲ್‌ನ ಜೇಬು ತುಂಬಿಸುವುದಕ್ಕೆ ಸೀಮಿತ ಆಗಿದೆ. ಪ್ರಯಾಣಿಕರ ಹಿತವನ್ನು ಮರೆತಿದೆ. ಸಾರ್ವಜನಿಕ ಸಾರಿಗೆ ಸಂಸ್ಥೆಯೊಂದು ಲಾಭವನ್ನೇ ಸೇವೆಯ ಧ್ಯೇಯವಾಗಿ ಹೊಂದಿರುವುದು ದುರದೃಷ್ಟಕರ. ಜನರ ಅಸಹಾಯಕತೆಯೇ ಈ ಸಂಸ್ಥೆಗೆ ಬಂಡವಾಳ. ಹೀಗಿದ್ದಾಗ ಪ್ರಯಾಣಿಕರ ವಿಶ್ವಾಸ ಉಳಿಸಿಕೊಳ್ಳಲು ಸಾಧ್ಯವೇ? ಬೆಂಗಳೂರಿನ ರಸ್ತೆಗಳ ದಯನೀಯ ಪರಿಸ್ಥಿತಿಗೆ 'ನಮ್ಮ ಮೆಟ್ರೊ' ಕಾಮಗಾರಿ ಮುಖ್ಯ ಕಾರಣ ಎಂದು ಬಿಡಿಸಿ ಹೇಳಬೇಕಿಲ್ಲ. ಆದರೆ, ತಮ್ಮಿಂದ ಮಾತ್ರ ತ್ವರಿತಗತಿ ಪ್ರಯಾಣ ಸಾಧ್ಯ ಎಂದು ಬೀಗುವುದು ಕುಚೋದ್ಯ. ಬಿಎಂಆರ್‌ಸಿಎಲ್ ತನ್ನ ವ್ಯಾಪ್ತಿಗೆ ಬರುವುದಿಲ್ಲವೆಂದು ಕುಂಟುನೆಪ ಹೇಳುವುದನ್ನು ರಾಜ್ಯ ಸರ್ಕಾರ ಬಿಡಬೇಕು. ಪ್ರಯಾಣಿಕಸ್ನೇಹಿ ಅಲ್ಲದ ಅಧಿಕಾರಿ ಗಳನ್ನು ಅಲ್ಲಿಂದ ಎತ್ತಂಗಡಿ ಮಾಡಲಿ; ಇಲ್ಲವೇ ಮೆಟ್ರೊವನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಲಿ.

ಶ್ರೀಕಂಠ, ಬೆಂಗಳೂರು

ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರ್ಯಾರು?

ಪ್ರಸ್ತುತ ಭ್ರಷ್ಟಾಚಾರವು ಎಲ್ಲಾ ರಾಜಕೀಯ ಪಕ್ಷಗಳ ಸಾಮಾನ್ಯ ಕನಿಷ್ಠ ಕಾರ್ಯಕ್ರಮವಾಗಿದೆ. ಅದರ ನಿರ್ಮೂಲನೆ ಬಗ್ಗೆ ಯಾರೊಬ್ಬರಿಗೂ ಕಾಳಜಿ ಇಲ್ಲ. ಮತ್ತೊಂದೆಡೆ, ಸದನದಲ್ಲಿ ಶಾಸಕರು ಕೈಮಿಲಾಯಿಸುವ ಹಂತಕ್ಕಿಳಿದಿರುವುದು ವಿಪರ್ಯಾಸ. ಚಿಂತನೆಗಳು, ಅರ್ಥಪೂರ್ಣ ಚರ್ಚೆಗಳು ಮಾಯವಾಗಿವೆ. ವಿರೋಧಿಸುವುದೇ ತಮ್ಮ ಕೆಲಸವೆಂದು ವಿಪಕ್ಷಗಳು ಭಾವಿಸಿವೆ.

ಗಿರಿರಾಜ ಕೋಳಿಯನ್ನು ಪಕ್ಷದ ಯಾವ ಕಾರ್ಯಕರ್ತರಿಗೆ ನೀಡಬೇಕು, ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಬೇಕು, ಯಾವ ಅಧಿಕಾರಿಯನ್ನು ತನ್ನ ಕ್ಷೇತ್ರಕ್ಕೆ ವರ್ಗಾವಣೆ ಮಾಡಿಸಿಕೊಳ್ಳ ಬೇಕು, ತನ್ನ ಜಾತಿಯವರಿಗೆ ಯಾವ ಹುದ್ದೆ ನೀಡಬೇಕು, ಕಾರ್ಯಕ್ರಮದ ವೇದಿಕೆ ಮೇಲೆ ಯಾರು ಇರಬೇಕು; ಯಾರು ಇರಬಾರದು – ಇಂತಹ ಸ್ವಾರ್ಥದಲ್ಲೇ ಜನಪ್ರತಿನಿಧಿಗಳು ಮುಳುಗಿದ್ದಾರೆ. ಸರ್ಕಾರಿ ಅಧಿಕಾರಿಗಳು ವಶೀಲಿಬಾಜಿಯಲ್ಲಿ ತೊಡಗಿದ್ದಾರೆ. ಪರಿಸ್ಥಿತಿ ಹೀಗಿದ್ದಾಗ ಬೆಕ್ಕಿನ ಕೊರಳಿಗೆ ಗಂಟೆಯನ್ನು ಕಟ್ಟುವವರು ಯಾರು?

ಗೋವಿಂದ್ ಎಸ್. ಭಟ್, ಶಿರಸಿ

ಚಿರತೆ ಹಾವಳಿ ತಡೆಗೆ ಸರ್ಕಾರದ ನಿರ್ಲಕ್ಷ್ಯ

ಬೆಂಗಳೂರಿನ ತುರಹಳ್ಳಿ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಬನಶಂಕರಿ ಆರನೇ ಹಂತದ ಎರಡನೇ ಬಡಾವಣೆಯಲ್ಲಿ ಚಿರತೆ ಹಾವಳಿ ಹೆಚ್ಚಿದೆ. ಈ ಬಡಾವಣೆಯ ನಿವಾಸಿಗಳು ಆತಂಕದಲ್ಲಿಯೇ ದಿನಗಳನ್ನು ದೂಡುತ್ತಿದ್ದಾರೆ. ಸ್ಥಳೀಯರ ಆತಂಕ ನಿವಾರಿಸುವಂತೆ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘವು ಶಾಸಕರಿಗೆ ಹಾಗೂ ಅರಣ್ಯ ಇಲಾಖೆಗೆ ಮನವಿ ಮಾಡಿದೆ. ಆದರೆ, ಪ್ರತಿಸ್ಪಂದನ ಶೂನ್ಯ. ಚಿರತೆ ಸೆರೆಗೆ ಬೋನು ಅಳವಡಿಸದಿರುವುದು ಆಶ್ಚರ್ಯದ ಸಂಗತಿ. ಅಮಾಯಕರ ಮೇಲೆ ಚಿರತೆ ದಾಳಿ ಮಾಡಿ ಸಾವು–ನೋವು ಸಂಭವಿಸಿದಾಗ ಇಲಾಖೆಯು ಎಚ್ಚತ್ತುಕೊಳ್ಳುವುದರಲ್ಲಿ ಅರ್ಥವಿಲ್ಲ.

ಗೋಪಿ ರಾವ್, ಬೆಂಗಳೂರು

ಚುರುಮುರಿ



ಹುಲಿಯಾ? ಇಲಿಯಾ?

• ತುರುವೇಕೆರೆ ಪ್ರಸಾದ್

'**ನಾಯಕ್ರುದು** ಗುರ್ ಇಲ್ಲ, ಪಂಜ ಎತ್ತಲ್ಲ, ಅವರ ಹಿಂಡಿನೋರೆ ಬೆಕ್ಕಿನ್ ತರ ಬಾಲ ಹಿಡ್ಕಂಡ್ ಆಟ ಆಡುಸ್ತಾವ್ರೆ, ನೀವೀಗ ಹುಲಿಯಾ ಅಲ್ಲ ಅಂತಾವ್ರಲ್ಲ ಕಮಲ್ದೋರು' ಕ್ಯಾತೆ ತೆಗೆದ ಗುದ್ಲಿಂಗ.

'ಈಗ ಅಂಗೆ ಹುಲಿಯಾ ಅನ್ನಿಸ್ಕೊಳೋರು ಯಾರವ್ರಂತೆ? ಎಲ್ಲಾ ಒಬ್ರಿಗೊಬ್ರು ಮುಶಿಯಾ (ಕೋತಿ) ಅಂತ ಬೈದಾಡ್ಕೊತಾ ಇಲ್ವಾ?' ಎಂದ ಮಾಲಿಂಗ.

'ವಯಸ್ಸಾದಂಗೆ ಪಂಜದ ಉಗುರು ಮೊಂಡಾಯ್ತವೆ. ಕಾಲು ಕೀಲು ಹಿಡ್ಕೊಳುತ್ತೆ. ಗಂಟಲು ಗಸ ಗಸ ಅನ್ನತ್ತೆ... ಗುರ್ ಅಂದ್ರೆ ಪುರ್ ಅನ್ನೋ ಸೌಂಡ್ ಕೇಳುಸ್ತೆ'.

'ಮೇಲೆ ಫರ್ ಹಾಕ್ಕಂಡಾದ್ರೂ ಗುರ್ ಅನ್ಬೇಕಲ್ವಾ? ನೋಡ್ದೋರಿಗೆ ಹುಲಿವೇಷದ ತರನಾದ್ರೂ ಕಾಣ್ಬೇಕಲ್ವಾ?' ಕೇಳಿದ ಕಲ್ಲೇಶಿ.

'ಅದ್ನೇ ನಾಯಕ್ರು ಮಾಡುದ್ರಲ್ಲ. ಕಮಲದ ಮಂದೆ ಮೇಲೆ ಗುರ್ ಅಂದ್ರು. ತಮ್ಮ ಹಿಂಡಿನ ಮೇಲೆ ತಿರುಗಿ ಬಿದ್ದದ್ದಲ್ದೆ ಸ್ಪೀಕರ್ ಮೇಲೂ ಕರ ಕರ ಅಂದ್ರಲ್ಲ...'

'ಅಂಗಲ್ಲಲೇ, ಇನ್ನೊಂದು ಹುಲಿ ಜೊತೆ ಕಾದಾಡಿ ಕಾದಾಡಿ ದಣಿದಾಗ್ಲೂ ಇಂಗಾಯ್ತದೆ. ಎಷ್ಟು ಅಂತ ಗುರ್ ಅನ್ನಕ್ಕಾಯ್ತದೆ...'

'ಅದೂ ನಿಜವೇ ಅನ್ನು... ಕೊಟ್ಟ ಮಾತು ಉಳಿಸ್ಕ ಬೇಕಾದ್ದು ಆರ್ಡಿನರಿ ಗೋವು... ಹುಲಿಯಾ ಅಲ್ಲ... ಅದು ಬಲಿ ಹಾಕಕ್ಕೇ ಸೈ. ಹೈಕಮಾಂಡ್ ಹುಲಿಗಳ ಮುಂದೆ ಎಲ್ರೂ ಮೂಗಿಲಿನೇ! ಇಲ್ಲ ಅನ್ನೋ ಧೈರ್ಯ ಯಾರಿಗೈತೆ'.

'ಅಲ್ಲ, ಕೈ ನಾಯಕ್ರನ್ನ ಹುಲಿಯಾ ಅಲ್ಲ ಅಂತಾವ್ರಲ್ಲ, ಕಮಲ ನಾಯಕರೇನು ಹುಲಿಯಾಗಳಾ? ಅಂತಾ ರಾಜಾಹುಲೀನೆ 'ಮೇಲ್ ಹತ್ತು, ಕೆಳಗಿಳಿ' ಅಂತ ಒಂಟಿ ಕಾಲಲ್ಲಿ ಆಟ ಆಡುಸ್ಲಿಲ್ವಾ? ಈಗ್ಲೂ ಡೆಲ್ಲಿ ಹುಲಿಗಳ ಮುಂದೆ ಬಾಲ ಅಲ್ಲಾಡಿಸ್ಕೊಂಡು ಹುಲ್ ಮೂಸ್ಕಂಡಿಲ್ವಾ?'

'ನಿಜ ಕಣ್ರಲಾ, ನಮ್ ಬೆಂಗಾಲ್ ಮಮತಾ ಪ್ಯಾಂಥರ್ ಮಾತ್ರಾನೇ ಎಲ್ರನ್ನೂ ತರ ತರ ಅನ್ಸೋದು. ಹೌದು, ಇದಕ್ಕೆ ನಮ್ ಉಪನಾಯಕರು ಏನಂತಾರೋ?'

'ಅಯ್ಯೋ! ಯಾರು ಹುಲಿಯಾನೋ? ಸುಂಡಿಲಿಯಾನೋ? ಉಂಡೋರ್ನ ಮೇಲೆಬ್ಬಿ ಹಾಕ್ರಪ್ಪ ನಂಗೊಂದು 'ಎಲೆಯ' ಅಂತಿದಾರಂತೆ' ಎಂದ ಪರ್ಮೇಶಿ. ಎಲ್ಲಾ ಗಹಗಹಿಸಿ ನಕ್ಕರು.

ಸಂಗತ

ಜಾತಿಗಣತಿ ಏಕೆ? ಏನದರ ಅಗತ್ಯ–ಮಹತ್ವ?

ಜನರ ಜೊತೆಗೆ ಮನೆ ಹಾಗೂ ಜಾತಿ ಮಾಹಿತಿ ಸಂಗ್ರಹ ಮುಂಬರುವ ಗಣತಿಯಲ್ಲಿ ನಡೆಯಲಿದೆ. ಹೊಸ ಧರ್ಮ–ಬುಡಕಟ್ಟನ್ನು ದಾಖಲಿಸುವ ಗಣತಿಯೂ ಆಗಲಿದೆ.

• ರಾಘವೇಂದ್ರ ಕೆ. ತೊಗರ್ಸಿ

ಸಂವಿಧಾನದ ಪ್ರಸ್ತಾವನೆಯಲ್ಲಿ ಇರುವ 'ಸೆಕ್ಯುಲರ್' ಶಬ್ದಕ್ಕೆ ಧರ್ಮನಿರಪೇಕ್ಷತೆ ಎಂದರ್ಥ. ಇದು ಸಾರ್ವಜನಿಕ ಆಡಳಿತದಲ್ಲಿ ಇರಬೇಕು ಎನ್ನುವುದು ಆಶಯ. ಅದನ್ನು 'ಜಾತಿ' (ಕಾಸ್ಟ್) ಎನ್ನುವ ದೃಷ್ಟಿಯಲ್ಲಿ ನೋಡುವುದಲ್ಲದೆ, ಇದಕ್ಕೆಲ್ಲ ಬ್ರಿಟಿಷರೇ ಕಾರಣ ಎನ್ನುವ ವಾಟ್ಸ್‌ಆ್ಯಪ್ ನಿರೂಪಣೆ ಸದ್ಯ ಚಾಲ್ತಿಯಲ್ಲಿದೆ. ಭಾರತದ ಜಾತಿ ವ್ಯವಸ್ಥೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಜಾತಿಗಳನ್ನು ನಿಂದಿಸುವ ಮತ್ತು ಪ್ರಶಂಸಿಸುವ ನೂರಾರು ಗಾದೆಗಳು ನಮ್ಮಲ್ಲಿ ಇವೆ.

ರಾಮಾಯಣದಲ್ಲಿ ಶೂದ್ರ ಶಂಬೂಕ ತಪಸ್ಸು ಮಾಡಿ ಯುಗಧರ್ಮ ಮೀರಿದ್ದಕ್ಕೆ ರಾಮನಿಂದ ಹತನಾಗುತ್ತಾನೆ. ಮಹಾಭಾರತದಲ್ಲಿ ಗುರು ದ್ರೋಣನಿಗೆ ಏಕಲವ್ಯ ಹೆಬ್ಬೆರಳನ್ನು ದಕ್ಷಿಣೆಯಾಗಿ ನೀಡುತ್ತಾನೆ. ಪರಶುರಾಮನಿಂದ ಕರ್ಣ ಶಾಪಕ್ಕೆ ತುತ್ತಾಗುತ್ತಾನೆ. ಅನೇಕ ಬಾರಿ ಆತ ಜಾತಿನಿಂದನೆಗೆ ಒಳಗಾಗುತ್ತಾನೆ. 'ಮೀಂಗುಲಿಗ' ಎನ್ನುವ ಹೀಯಾಳಿಕೆಗೆ ಕರ್ಣ ಮತ್ತೆ ಮತ್ತೆ ಗುರಿಯಾಗುತ್ತಾನೆ. ಅಂದರೆ, ನಮ್ಮದು ಮೂಲದಲ್ಲಿಯೇ ಜಾತಿ ಆಧಾರಿತ ಸಮಾಜ. ಬಸವಣ್ಣನ ಕಾಲದಲ್ಲಿ ವರ್ಣಸಂಕರವೇ ಕಲ್ಯಾಣದ ಕ್ರಾಂತಿಗೆ ಕಾರಣವಾಗುತ್ತದೆ. ಜಾತಿವಿನಾಶ ಪ್ರಯತ್ನಕ್ಕೆ ಜಾತಿವಾದಿಗಳು ಆಗ ಬಹುದೊಡ್ಡ ಪೆಟ್ಟು ಕೊಟ್ಟರು. ಒಟ್ಟಾರೆ ದೇಶ ಎಂದರೆ ಜನ. ಜನ ಅಂದರೆ ಜಾತಿ. ಹಾಗಾಗಿ ಇಲ್ಲಿ ಜಾತಿಯೇ ವಾರಸುದಾರ, ಜಾತಿಯೇ ಪಾಲುದಾರ. ಜಾತಿ ಜನಸಂಖ್ಯೆಗೆ ಅನುಸಾರ ಅವಕಾಶದ ಪಾಲು ಹಂಚಿಕೆ ಆಗಬೇಕು. ಅಂದರೆ, ಜಾತಿವಾರು ಲೆಕ್ಕ ಪಕ್ಕಾ ಆಗಬೇಕು.

ಜಾತಿಗಣತಿಯನ್ನು 1931ರಲ್ಲಿ ಬ್ರಿಟಿಷ್ ಸರ್ಕಾರ ನಡೆಸಿತು. ಅದೇ ಅಂಕಿಅಂಶದ ಆಧಾರದ ಮೇಲೆ ಈಗಲೂ ಜಾತಿ ಲೆಕ್ಕಾಚಾರವನ್ನು ಮಾಡುತ್ತಿದ್ದೇವೆ. ಆ ತಪ್ಪನ್ನು ತಪ್ಪಿಸಲು ಪ್ರಸಕ್ತ ಗಣತಿ ಮುಖ್ಯ ಆಗಬಹುದು ಎನ್ನುವ ನಿರೀಕ್ಷೆ ಇದೆ. ಭಾರತದ ವೈಸರಾಯ್ ಲಾರ್ಡ್ ಮೇಯೊ ಜಾರಿ ಮಾಡಿದ ಅನೇಕ ಆಡಳಿತಾತ್ಮಕ ಸುಧಾರಣೆಗಳಲ್ಲಿ ಜನಗಣತಿಯೂ ಒಂದು. ಆತ 1872ರಲ್ಲಿ ಮೊದಲ ಬಾರಿಗೆ ಜನಗಣತಿ ಮಾಡಿಸಿದ. ನಂತರ ಲಾರ್ಡ್ ರಿಪ್ಪನ್ 1881ರಲ್ಲಿ ಜನಗಣತಿ ಮಾಡಿಸಿದ. ದಶಕಕ್ಕೊಮ್ಮೆ ಗಣತಿಯನ್ನು ಮಾಡಬೇಕು ಎನ್ನುವ ನಿಯಮವನ್ನೂ ರಿಪ್ಪನ್ ರೂಪಿಸಿದ. ಆ ಪದ್ಧತಿ 2011ರವರೆಗೂ ನಡೆದುಕೊಂಡು ಬಂದಿತ್ತು. 2021ರಲ್ಲಿ ಕೋವಿಡ್ ಕಾರಣಕ್ಕೆ ಗಣತಿ ಮಾಡಲು ಆಗಲಿಲ್ಲ. ಈ ವರ್ಷ ಜನಗಣತಿ ಜೊತೆಗೆ ಜಾತಿ ಮತ್ತು ಮನೆ ಗಣತಿ ನಡೆಸಲೂ ಸರ್ಕಾರ ಮುಂದಾಗಿದೆ.



ವೃತ್ತಿಯಾಧಾರಿತ ಜಾತಿ ಇಂದೂ ಅನೇಕ ಉದ್ಯೋಗಗಳಿಗೆ ಕಾರಣವಾಗಿದೆ. ಸರ್ಕಾರದ ಯೋಜನೆಯನ್ನು ಪರಿಣಾಮಕಾರಿಯಾಗಿ ರೂಪಿಸಲು ಈ ವಿವರವೇ ಆಧಾರ. ಮಾತ್ರವಲ್ಲದೆ, ಒಂದು ಜಾತಿ, ಉಪಜಾತಿ, ಲಿಂಗ, ಆರ್ಥಿಕ ಸ್ಥಿತಿಗತಿ, ಧರ್ಮಗಳ ದತ್ತಾಂಶವು ಕಲ್ಯಾಣ ಕಾರ್ಯಗಳ ಅನುಷ್ಠಾನಕ್ಕೆ ಬೇಕಾಗುತ್ತದೆ. ಈ ಕಾರಣಕ್ಕೆ 'ಜಾತಿ ಗಣತಿ' ತಮ್ಮ ಮೊದಲ ಆದ್ಯತೆ ಎಂದು ವಿರೋಧ ಪಕ್ಷ ಆಂದೋಲನವನ್ನೇ ನಡೆಸಿತ್ತು. ಅದನ್ನು ಕೇಂದ್ರ ಸರ್ಕಾರ ಸವಾಲಾಗಿ ತೆಗೆದುಕೊಂಡು 'ಜಾತಿ ಜನ ಗಣತಿ'ಯನ್ನು ಮಾಡುತ್ತಿದೆ. ಅದಕ್ಕೆ ಏಪ್ರಿಲ್ 1, 2026ರಿಂದ ಮಾರ್ಚ್ 31, 2027ರ ಗಡುವು ನೀಡಿದೆ. ಈ ಬಾರಿ ಡಿಜಿಟಲ್ ರೂಪದಲ್ಲೂ ಜಾತಿ–ಜನ ಎಣಿಕೆಯನ್ನು ಮಾಡಲಾಗುತ್ತದೆ. ಎರಡು ಹಂತದಲ್ಲಿ ಎಣಿಕೆ ಕಾರ್ಯ ಕೈಗೊಳ್ಳುವ ಸರ್ಕಾರ ಮೊದಲು ಗೃಹ ಘಟಕಗಳನ್ನು ಎಣಿಸಿ, ನಂತರ ಜನರ ಎಣಿಕೆಯನ್ನು ಮಾಡುತ್ತಿದೆ. ಕೇಂದ್ರಾಡಳಿತ ಪ್ರದೇಶದಲ್ಲಿ ಮೊದಲ ಸುತ್ತಿನ ಎಣಿಕೆ ಕಾರ್ಯ ನಡೆಯಲಿದೆ. ಸ್ವಯಂ ಪ್ರೇರಿತವಾಗಿಯೂ ಜಾತಿಗಣತಿ ಪ್ರಕ್ರಿಯೆಯಲ್ಲಿ ಜನ ಭಾಗಿಯಾಗುವ ಅವಕಾಶವನ್ನೂ ಕೊಟ್ಟಿದೆ. ಇದರ ಉಸ್ತುವಾರಿಯನ್ನು ಕೇಂದ್ರ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯ ನೋಡಿಕೊಳ್ಳಲಿದೆ. ಗಣತಿ ಕಾರ್ಯಕ್ಕೆ ರೂಪಿಸಲಾಗಿರುವ ಪ್ರಶ್ನಾವಳಿಯಲ್ಲಿ ದೋಷಗಳಿವೆ. ಅದನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳ ಜೊತೆ ಸಮಾಲೋಚನೆ ಮಾಡಿಲ್ಲ ಎಂದು ವಿರೋಧ ಪಕ್ಷ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ.

ಜಾತಿಗಣತಿ ಸಂವಿಧಾನ ಬದ್ಧವಾಗಿದ್ದು, ಜಾತಿ ಆಧಾರಿತ ಸಮಾಜದಲ್ಲಿ ಆಗಬೇಕಾದ ಮೂಲ ಕಾರ್ಯದಲ್ಲಿ ಒಂದಾಗಿದೆ. 1948ರ ಜನಗಣತಿ ಕಾಯ್ದೆಗೆ 1994ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ಅದರ ಅನುಸಾರ ಮೊದಲ ಜಾತಿಗಣತಿ ಪ್ರಕ್ರಿಯೆ ಈಗ ನಡೆಯಲಿದೆ.

ಪ್ರಸಕ್ತ 'ಜಾತಿ ಜನಗಣತಿ'ಯಲ್ಲಿ ಅಸ್ಸಾಂನ ಬೋಡೊ ಸಮುದಾಯದ ಬಾಥೌಯಿಸಂ ಧರ್ಮದ ಗಣನೆಗೆ ಮನ್ನಣೆ ಸಿಕ್ಕಿದೆ. ಕರ್ನಾಟಕದಲ್ಲಿ ಲಿಂಗಾಯತ ಧರ್ಮಕ್ಕೆ ಧಾರ್ಮಿಕ ಮನ್ನಣೆ ನೀಡಬೇಕೆಂಬ ಬೇಡಿಕೆ ಇದ್ದರೂ, ಅದಕ್ಕೆ ಮನ್ನಣೆ ನೀಡಿಲ್ಲ. ಆ ಸಮುದಾಯ 'ಇತರೆ' ವಿಭಾಗದಲ್ಲಿ ಲಿಂಗಾಯತ ಧರ್ಮವನ್ನು ನಮೂದಿಸಬೇಕು ಎಂದು ಜಾಗೃತಿ ಮೂಡಿಸುತ್ತಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ ನೆಲಸಿರುವ ಶೋಪೇನ್ ಎನ್ನುವ ಬುಡಕಟ್ಟು ಇದೇ ಮೊದಲ ಬಾರಿಗೆ ಸರ್ಕಾರಿ ಅಂಕಿಅಂಶಕ್ಕೆ ಸೇರುತ್ತಿದೆ. ಇದರ ಹೊರತಾಗಿ ಇನ್ನಷ್ಟು ಹೊಸ ಜಾತಿ–ಮತಗಳು ಮುನ್ನೆಲೆಗೆ ಬರಬಹುದು. ಈ ಎಲ್ಲ ಕಾರಣಕ್ಕೆ ಜಾತಿಗಣತಿ ಅತ್ಯಂತ ಮಹತ್ವ ಪಡೆದಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಟಿ20 ಕ್ರಿಕೆಟ್ ಶಕ್ತಿಕೇಂದ್ರ

• ಗಿರೀಶ ದೊಡ್ಡಮನಿ

ಅವತ್ತು ಲಂಡನ್‌ನ ಓವಲ್ ಮೈದಾನದಲ್ಲಿ ಮಳೆ ಸುರಿದಿತ್ತು. ಭಾರತ –ಇಂಗ್ಲೆಂಡ್ ನಡುವಣ ಸರಣಿಯ ಕೊನೆಯ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ದಿನದಾಟ ಆರಂಭವಾಗಲು ಜನರು ಕಾಯುತ್ತಿದ್ದರು. ಅದೇ ಮೈದಾನದ ಕಟ್ಟಡದ ಬಾಲ್ಕನಿಯಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯ ಕೌಂಟಿ ಕ್ರಿಕೆಟ್ ಮಾರುಕಟ್ಟೆ ಕಾರ್ಯನಿರ್ವಾಹಕ ಸ್ಟುವರ್ಟ್ ರಾಬರ್ಟ್ಸನ್ ನಿಂತಿದ್ದರು. ಆಗಲೇ ಅವರ ದೃಷ್ಟಿ ಮೈದಾನದ ಒಂದು ಮೂಲೆಯಲ್ಲಿದ್ದ ಫುಡ್ ಟ್ರಕ್‌ನತ್ತ ಹೊರಳಿತು. ಅದರ ಮುಂದೆ ದೊಡ್ಡ ಸರದಿ ಸಾಲಿನಲ್ಲಿ ಜನರು ನಿಂತಿದ್ದರು. ಅದನ್ನು ನೋಡಿದ ಸ್ಟುವರ್ಟ್ ಮತ್ತು ಸ್ನೇಹಿತರು ನಗುತ್ತ 'ಮಳೆ ಬರ್ತಿದ್ದರೂ ಇಷ್ಟು ಜನ ಇದ್ದಾರೆ. ಇವರಿಗಾಗಿ ಕೊನೆಗೆ 20 ಓವರ್ ಪಂದ್ಯ ಆಡಿಸಬೇಕಾ' ಎಂದು ಚಟಾಕಿ ಹಾರಿಸಿದ್ದರು. ಎಲ್ಲರೂ ಗೊಳ್ಳೆಂದು ನಕ್ಕರು.

ಆದರೆ ಸ್ಟುವರ್ಟ್ ಮನದಲ್ಲಿ 20 ಓವರ್ ಎಂಬುದು ಬೀಜವಾಗಿ ಉಳಿಯಿತು. ಕೆಲವು ದಿನಗಳ ನಂತರ ಟ್ವೆಂಟಿ–20 ಕ್ರಿಕೆಟ್ ಪರಿಕಲ್ಪನೆಯು ಮೊಳಕೆಯೊಡೆಯಿತು. ಅದಕ್ಕೊಂದು ಚೌಕಟ್ಟು ರೂಪಿಸಿದ ಸ್ಟುವರ್ಟ್, ಕೌಂಟಿ ಕ್ರಿಕೆಟ್‌ನಲ್ಲಿ ಆಡಿಸಲು ಪ್ರಸ್ತಾವ ಇಟ್ಟಾಗ ಎದುರಾದ ಟೀಕೆಗಳು ಒಂದೆರಡಲ್ಲ. ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ಮಾತ್ರ ನಡೆಯುತ್ತಿದ್ದ ಆ ಕಾಲಘಟ್ಟದಲ್ಲಿ ಚುಟುಕು ಕ್ರಿಕೆಟ್ ಪರಿಕಲ್ಪನೆಯನ್ನು ಸ್ವೀಕರಿಸಲು ಶೇ 90ರಷ್ಟು ಕ್ರಿಕೆಟಿಗರು ಒಪ್ಪಲಿಲ್ಲ. ಆದರೂ ಸ್ಟುವರ್ಟ್ ಅವರ ನಿರಂತರ ಪ್ರಯತ್ನದ ಫಲವಾಗಿ 2003ರಲ್ಲಿ ಕೌಂಟಿ ಕ್ರಿಕೆಟ್‌ನಲ್ಲಿ ಟಿ20 ಪಂದ್ಯಗಳ ಪ್ರಯೋಗ ಆರಂಭವಾಯಿತು. ಕೇವಲ ಮೂರು ತಾಸುಗಳ ಪಂದ್ಯವು ಯುವ ಪ್ರೇಕ್ಷಕರನ್ನು ಸೆಳೆಯುತ್ತಿದ್ದ ರೀತಿ, ಅದರಲ್ಲಿದ್ದ ಮನರಂಜನೆಯ ಅಂಶಗಳು ಮತ್ತು ಆರ್ಥಿಕ ಸಾಧ್ಯತೆಗಳು ಗಮನ ಸೆಳೆದವು. ಅಂತರ-ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಕೂಡ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಈ ಮಾದರಿ ಆರಂಭಿಸಲು ಒಲವು ತೋರಿತು. ಆದರೆ ಸಾಂಪ್ರದಾಯಿಕ ಕ್ರಿಕೆಟ್ ಪ್ರತಿಪಾದಕರು ವಿರೋಧಿಸುತ್ತಲೇ ಇದ್ದರು. ಅದರಲ್ಲಿ ಭಾರತದ ಹಲವು ದಿಗ್ಗಜರೂ ಇದ್ದರು. ಆರಂಭಿಕ ಕೆಲವು ವರ್ಷಗಳಲ್ಲಿ ಟಿ20 ಪಂದ್ಯಗಳನ್ನು ಆಡಲು ಆ ಕಾಲಘಟ್ಟದ ಖ್ಯಾತನಾಮ ಅಟಗಾರರೇ ಹಿಂಜರಿದರು. ಇದೀಗ ಅವರಲ್ಲಿಯೇ ಹಲವರು ಟಿ20 ತಂಡಗಳು ಮತ್ತು ಫ್ರ್ಯಾಂಚೈಸಿಗಳ ಮೆಂಟರ್‌ಗಳಾಗಿದ್ದಾರೆ. ಅಷ್ಟೇ ಅಲ್ಲ. ಇವತ್ತು ಟಿ20 ಮಾದರಿಯ ಯಶಸ್ಸು ಉತ್ತುಂಗಕ್ಕೆ ಏರಲೂ ಭಾರತವೇ ಕಾರಣವೆಂಬುದರಲ್ಲಿ ಅನುಮಾನವೇ ಇಲ್ಲ.

ಟಿ20 ವಿಶ್ವಕಪ್: ಈವರೆಗೆ ಪ್ರಶಸ್ತಿ ಗೆದ್ದ ತಂಡಗಳು

ವರ್ಷ	ಆತಿಥ್ಯ	ಗೆದ್ದ ತಂಡ	ರನ್ನರ್ಸ್ ಅಪ್	ಒಟ್ಟು ತಂಡಗಳು
2007	ದಕ್ಷಿಣ ಆಫ್ರಿಕಾ	ಭಾರತ	ಪಾಕಿಸ್ತಾನ	12
2009	ಇಂಗ್ಲೆಂಡ್	ಪಾಕಿಸ್ತಾನ	ಶ್ರೀಲಂಕಾ	12
2010	ವೆಸ್ಟ್ ಇಂಡೀಸ್	ಇಂಗ್ಲೆಂಡ್	ಆಸ್ಟ್ರೇಲಿಯಾ	12
2012	ಶ್ರೀಲಂಕಾ	ವೆಸ್ಟ್ ಇಂಡೀಸ್	ಶ್ರೀಲಂಕಾ	12
2014	ಬಾಂಗ್ಲಾದೇಶ	ಶ್ರೀಲಂಕಾ	ಭಾರತ	16
2016	ಭಾರತ	ವೆಸ್ಟ್ ಇಂಡೀಸ್	ಇಂಗ್ಲೆಂಡ್	16
2021	ಯುಎಇ/ಒಮನ್	ಆಸ್ಟ್ರೇಲಿಯಾ	ನ್ಯೂಜಿಲೆಂಡ್	16
2022	ಆಸ್ಟ್ರೇಲಿಯಾ	ಇಂಗ್ಲೆಂಡ್	ಪಾಕಿಸ್ತಾನ	16
2024	ಅಮೆರಿಕ/ವೆಸ್ಟ್‌ಇಂಡೀಸ್	ಭಾರತ	ದಕ್ಷಿಣ ಆಫ್ರಿಕಾ	20

ಭಾರತವೇ ಮೆಂಟರ್..

ಟಿ20 ಕ್ರಿಕೆಟ್ ಜನಿಸಿದ್ದು ಇಂಗ್ಲೆಂಡಿನಲ್ಲಿ. ಆದರೆ ಅದನ್ನು ಪೋಷಿಸಿ, ಬೆಳೆಸಿ 'ಲಾಭದಾಯಕ' ಮಾದರಿಯನ್ನಾಗಿ ಮಾಡಿದ ಶ್ರೇಯ ಭಾರತಕ್ಕೇ ಸಲ್ಲಬೇಕು. 2000ನೇ ಇಸವಿಯ ನಂತರದ ಕಾಲಘಟ್ಟದಲ್ಲಿ ಬೆಳೆದ ಕ್ರೀಡೆ ಮತ್ತು ವಾಣಿಜ್ಯ ಚಟುವಟಿಕೆಗಳಲ್ಲಿ ಟಿ20 ಮಾದರಿಯೂ ಒಂದು. 2007ರಲ್ಲಿ ಭಾರತ ತಂಡವು ಚೊಚ್ಚಲ ಟಿ20 ವಿಶ್ವಕಪ್ ಜಯಿಸಿದ್ದು ಕೂಡ ಮಹತ್ವದ ಬೆಳವಣಿಗೆ. ಅದಾಗಿ ಒಂದು ವರ್ಷ ಕಳೆಯುವಷ್ಟರಲ್ಲಿ ಶುರುವಾದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಇಡೀ ಕ್ರಿಕೆಟ್ ಲೋಕವನ್ನೇ ಪ್ರಭಾವಿಸಿಬಿಟ್ಟಿತು. ಹಣದ ಹೊಳೆ, ಮನರಂಜನೆಯ ಮಹಾಪೂರವೇ ಹರಿಯುತ್ತಿದೆ. ಲಲಿತ್ ಮೋದಿಯ ಪರಿಕಲ್ಪನೆ ಐಪಿಎಲ್ ಇವತ್ತು ಶ್ರೀಮಂತ ಲೀಗ್ ಆಗಿದೆ. ಅಷ್ಟೇ ಏಕೆ; ಕ್ರಿಕೆಟ್ ಎಂದರೆ ಮೂಗುಮುರಿಯುತ್ತಿದ್ದ ಇಟಲಿ, ಕೆನಡಾ, ಅಮೆರಿಕ, ನೆದರ್ಲೆಂಡ್ಸ್, ಸ್ಕಾಟ್ಲೆಂಡ್‌ನಂತಹ ದೇಶಗಳೂ ಪ್ರಸಕ್ತ ಟೂರ್ನಿಯಲ್ಲಿ ಆಡುತ್ತಿವೆ.

ಟಿ20 ಮಾದರಿಯ ಬೆಳವಣಿಗೆಯ ರಭಸಕ್ಕೆ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ಕೊಚ್ಚಿಹೋಗುವ ಭೀತಿ ಎದುರಿಸಿದವು. ಅದಕ್ಕಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆರಂಭವಾಯಿತು. ದೀರ್ಘ ಮಾದರಿಗಳಲ್ಲಿಯೂ ಆಟಗಾರರ ಶೈಲಿಯಲ್ಲಿ ಚುಟುಕು ಕ್ರಿಕೆಟ್ ಆಟದ ಕೌಶಲಗಳು ಈಗ ಢಾಳಾಗಿ ಕಾಣುತ್ತಿವೆ.

ಐಪಿಎಲ್‌ನಲ್ಲಿ ಆಡಲು ದೇಶ, ವಿದೇಶಗಳ ಆಟಗಾರರು ಹಾತೊರೆಯುತ್ತಿದ್ದಾರೆ. ಅದರಲ್ಲಿ ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಆಟಗಾರರೂ ಇದ್ದಾರೆ. ಅಷ್ಟೇ ಏಕೆ; ಐಸಿಸಿಗೆ ಸಿಗುವ ಆದಾಯದಲ್ಲಿ ಭಾರತದ್ದೇ ಸಿಂಹಪಾಲು.

ಹತ್ತು ವರ್ಷಗಳ ನಂತರ ಭಾರತದಲ್ಲಿ ಟಿ20 ವಿಶ್ವಕಪ್ ಟೂರ್ನಿಯ ಆಯೋಜನೆ ನಡೆಯುತ್ತಿದೆ. ನೆರೆಯ ದ್ವೀಪ ರಾಷ್ಟ್ರ ಶ್ರೀಲಂಕಾ ಜಂಟಿ ಆತಿಥ್ಯ ವಹಿಸಿದೆ.

ಈ ಸಲದ ವಿಶೇಷವೆಂದರೆ, ಆತಿಥೇಯ ಭಾರತವು 'ಹಾಲಿ ಚಾಂಪಿಯನ್' ಕೂಡ ಹೌದು. 2024ರಲ್ಲಿ ಅಮೆರಿಕದಲ್ಲಿ ನಡೆದಿದ್ದ ಟೂರ್ನಿಯಲ್ಲಿ ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ಟ್ರೋಫಿ ಜಯಿಸಿತ್ತು. ಆ ಟೂರ್ನಿಯ ಫೈನಲ್‌ನಲ್ಲಿ ಗೆದ್ದ ನಂತರ ಆಧುನಿಕ ಕ್ರಿಕೆಟ್ ದಿಗ್ಗಜರಾದ ರೋಹಿತ್, ವಿರಾಟ್ ಕೊಹ್ಲಿ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಟಿ20 ಮಾದರಿಗೆ ವಿದಾಯ ಹೇಳಿದ್ದರು. ಆದ್ದರಿಂದ ಈ ಸಲ ಅವರಿಲ್ಲದೇ ತಂಡವು ಕಣಕ್ಕಿಳಿಯಲಿದೆ. ಅದರಲ್ಲೂ ರೋಹಿತ್ ಅವರು 2007ರಲ್ಲಿ ವಿಶ್ವಕಪ್ ಗೆದ್ದ ತಂಡದಲ್ಲಿಯೂ ಆಡಿದ್ದರು.

ಅಂದಹಾಗೆ, ಆ ತಂಡದಲ್ಲಿ ಆಡಿದ್ದ ಗೌತಮ್ ಗಂಭೀರ್ ಇವತ್ತು ಭಾರತ ತಂಡದ ಮುಖ್ಯ ಕೋಚ್. ಆಲ್‌ರೌಂಡರ್ ಅಜಿತ್ ಅಗರ್ಕರ್ ಪ್ರಸಕ್ತ ತಂಡವನ್ನು ಆಯ್ಕೆ ಮಾಡಿರುವ ಸಮಿತಿಯ ಮುಖ್ಯಸ್ಥ. ಎರಡು ವರ್ಷಗಳ ಹಿಂದೆ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರು ಮಾಡಿದ್ದ ಸಾಧನೆಯನ್ನು ಸರಿಗಟ್ಟುವ ಸವಾಲು ಗಂಭೀರ್ ಎದುರಿಗೆ ಇದೆ. ಅಲ್ಲದೇ ಮಹೇಂದ್ರ ಸಿಂಗ್ ಧೋನಿ ಮತ್ತು ರೋಹಿತ್ ಅವರು ನಾಯಕರಾಗಿ ಮಾಡಿದ ಸಾಧನೆಯ ಎತ್ತರಕ್ಕೆ ಏರುವ ಅವಕಾಶ ನಾಯಕ ಸೂರ್ಯಕುಮಾರ್ ಯಾದವ್ ಅವರಿಗೆ ಇದೆ.



20
ಟೂರ್ನಿಯಲ್ಲಿ ಆಡಲಿರುವ ಒಟ್ಟು ತಂಡಗಳು

₹ 113
ಟೂರ್ನಿಯ ಒಟ್ಟು ಬಹುಮಾನ ಮೊತ್ತ

26
ಟೂರ್ನಿ ನಡೆಯಲಿರುವ ದಿನಗಳ ಸಂಖ್ಯೆ

55
ಒಟ್ಟು ಪಂದ್ಯಗಳು

8
ಪಂದ್ಯಗಳು ನಡೆಯಲಿರುವ ಒಟ್ಟು ತಾಣಗಳು, ಭಾರತದಲ್ಲಿ 5 ಮತ್ತು ಶ್ರೀಲಂಕಾದಲ್ಲಿ 3 ಕ್ರೀಡಾಂಗಣಗಳು


ಟಿ20 ವಿಶ್ವಕಪ್: ಅತಿ ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ದೇಶ	ಪಂದ್ಯ	ರನ್
ವಿರಾಟ್ ಕೊಹ್ಲಿ	ಭಾರತ	35	1,292
ರೋಹಿತ್ ಶರ್ಮಾ	ಭಾರತ	47	1,220
ಮಹೇಲಾ ಜಯವರ್ಧನೆ	ಶ್ರೀಲಂಕಾ	31	1016
ಜೋಸ್ ಬಟ್ಲರ್	ಇಂಗ್ಲೆಂಡ್	35	1013
ಡೇವಿಡ್ ವಾರ್ನರ್	ಆಸ್ಟ್ರೇಲಿಯಾ	41	984

ಟಿ20 ವಿಶ್ವಕಪ್: ಅತಿ ಹೆಚ್ಚು ವಿಕೆಟ್ ಪಡೆದವರು

ಬೌಲರ್	ದೇಶ	ಪಂದ್ಯ	ವಿಕೆಟ್
ಶಕೀಬ್ ಅಲ್ ಹಸನ್	ಬಾಂಗ್ಲಾದೇಶ	41	50
ಶಾಹೀದ್ ಅಫ್ರಿದಿ	ಪಾಕಿಸ್ತಾನ	34	39
ಲಸಿತ್ ಮಾಲಿಂಗ	ಶ್ರೀಲಂಕಾ	31	38
ವನಿಂದು ಹಸರಂಗ	ಶ್ರೀಲಂಕಾ	19	37
ರಶೀದ್ ಖಾನ್	ಅಫ್ಘಾನಿಸ್ತಾನ	23	37

'ಮಿಸ್ಟರ್ 360 ಡಿಗ್ರಿ' ಸೂರ್ಯ



ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಅವರು ತಮ್ಮ ಬ್ಯಾಟಿಂಗ್ ಶೈಲಿಯಿಂದ ಮಿಸ್ಟರ್ 360 ಡಿಗ್ರಿ ಎಂದೇ ಖ್ಯಾತರಾದವರು. ಅವರಂತೆಯೇ ಕ್ರೀಸ್‌ನಲ್ಲಿ ಎಲ್ಲ ಆಯಾಮಗಳಲ್ಲಿ ಕುಂತು, ನಿಂತು, ಎದ್ದು ಬಿದ್ದು ಬ್ಯಾಟ್ ಬೀಸುವ ಆಟಗಾರ ಸೂರ್ಯಕುಮಾರ್ ಯಾದವ್.

ಮುಂಬೈ ಆಟಗಾರ ಸೂರ್ಯ ಅವರಿಗೆ ಭಾರತ ತಂಡದಲ್ಲಿ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಲು ಅವಕಾಶ ಸಿಕ್ಕಿದ್ದು 2021ರಲ್ಲಿ. ಅದಕ್ಕಿಂತ ಮುನ್ನ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಬಹಳಷ್ಟು ರನ್‌ಗಳ ಹೊಳೆ ಹರಿಸಿದ್ದರು. ದೇಶಿ ಕ್ರಿಕೆಟ್‌ನಲ್ಲಂತೂ ಮುಂಬೈ ತಂಡದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ಐಪಿಎಲ್ ಪಂದ್ಯವೊಂದರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ವಿರಾಟ್ ಕೊಹ್ಲಿಯೊಂದಿಗಿನ 'ಜಟಾಪಟಿ' ಬಹಳ ಸುದ್ದಿ ಮಾಡಿತ್ತು. ನಂತರ ಅವರಿಬ್ಬರೂ ಭಾರತ ತಂಡದಲ್ಲಿ ಜೊತೆಯಾಗಿದ್ದರು.

104 ಟಿ20 ಪಂದ್ಯಗಳಲ್ಲಿ ಆಡಿರುವ ಅವರು 3 ಸಾವಿರಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ನಾಲ್ಕು ಶತಕಗಳು ಅವರ ಖಾತೆಯಲ್ಲಿವೆ. ಹಾರ್ದಿಕ್ ಪಾಂಡ್ಯ ಗಾಯಗೊಂಡು ಹೊರಗುಳಿದ ಕಾರಣ ಸೂರ್ಯ ಅವರಿಗೆ ಹೋದ ವರ್ಷ ನಾಯಕತ್ವದ ಪಟ್ಟ ಲಭಿಸಿತ್ತು. ತಂಡವು ಅವರ ನಾಯಕತ್ವದಲ್ಲಿ ಏಷ್ಯಾ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿತ್ತು.

ಆದರೆ ಕಳೆದ ಒಂದು ವರ್ಷದಿಂದ ಅವರ ಬ್ಯಾಟಿನಿಂದ ರನ್‌ಗಳು ಹರಿಯಲಿಲ್ಲ. ಆದರೆ ನ್ಯೂಜಿಲೆಂಡ್ ಎದುರಿನ ಸರಣಿಯ ಕೊನೆಯ ಮೂರು ಪಂದ್ಯಗಳಲ್ಲಿ ಅವರು ಲಯಕ್ಕೆ ಮರಳಿದರು. ಇದು ತಂಡದಲ್ಲಿ ಆತ್ಮವಿಶ್ವಾಸ ಇಮ್ಮಡಿಸುವಂತೆ ಮಾಡಿದೆ.

ತವರಿನಲ್ಲಿ ಟಿ20 ವಿಶ್ವಕಪ್ ಜಯಿಸಿದ ನಾಯಕ ಎನಿಸಿಕೊಳ್ಳುವ ಅವಕಾಶ ಅವರಿಗೆ ಇದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ತಂಡಗಳಿಗೆ ಸಡ್ಡು ಹೊಡೆಯಬಲ್ಲ ತಂಡದ ಬಲ ಅವರಿಗೆ ಇದೆ.

2026ರ ಟೂರ್ನಿಯ ಗುಂಪುಗಳು

ಎ ಗುಂಪು
- ಭಾರತ
- ಪಾಕಿಸ್ತಾನ
- ಅಮೆರಿಕ
- ನೆದರ್ಲೆಂಡ್ಸ್
- ನಮೀಬಿಯಾ

ಬಿ ಗುಂಪು
- ಆಸ್ಟ್ರೇಲಿಯಾ
- ಶ್ರೀಲಂಕಾ
- ಐರ್ಲೆಂಡ್
- ಜಿಂಬಾಬ್ವೆ
- ಒಮಾನ್

ಸಿ ಗುಂಪು
- ಇಂಗ್ಲೆಂಡ್
- ವೆಸ್ಟ್ ಇಂಡೀಸ್
- ನೇಪಾಳ
- ಇಟಲಿ
- ಸ್ಕಾಟ್ಲೆಂಡ್

ಡಿ ಗುಂಪು
- ನ್ಯೂಜಿಲೆಂಡ್
- ದಕ್ಷಿಣ ಆಫ್ರಿಕಾ
- ಅಫ್ಘಾನಿಸ್ತಾನ
- ಕೆನಡಾ
- ಯುಎಇ

ಆಟಗಾರರಿಗೆ ಭಾರತದ ಬೇರು


ನೋಷ್ತುಷ್ ಕೆಂಜಿಗೆ

• ನಾಗೇಶ್ ಶೆಣೈ

2024ರ ಟಿ20 ವಿಶ್ವಕಪ್‌ನ ಆ ಪಂದ್ಯವನ್ನು ಮರೆಯುವುದು ಕಷ್ಟ. ಜಂಟಿ ಆತಿಥೇಯ ಅಮೆರಿಕ ತಂಡವು, ಸೂಪರ್ ಓವರ್‌ವರೆಗೆ ಬೆಳೆದ ಪಂದ್ಯದಲ್ಲಿ ಪ್ರಬಲ ಪಾಕಿಸ್ತಾನಕ್ಕೆ ಆಘಾತ ನೀಡಿತ್ತು. ಆ ಗುಂಪು ಹಂತದ ಪಂದ್ಯದಲ್ಲಿ ಭಾರತೀಯ ಮೂಲದ ಆಟಗಾರರಾದ– ಸ್ಪಿನ್ನರ್ ನೋಷ್ತುಷ್ ಕೆಂಜಿಗೆ (30ಕ್ಕೆ3), ವೇಗದ ಬೌಲರ್ ಸೌರಭ್ ನೇತ್ರಾವಲ್ಕರ್ (18ಕ್ಕೆ2), ನಾಯಕ–ವಿಕೆಟ್ ಕೀಪರ್ ಮೊನಾಂಕ್ ಪಟೇಲ್ (50, 38ಎ) ಅವರು ಅನುಭವಿ ಪಾಕ್ ಎದುರು ಕೌಶಲ ತೋರಿದ್ದರು. ಆ ವಿಶ್ವಕಪ್‌ನಲ್ಲಿ ಇತರ ತಂಡಗಳಲ್ಲೂ ಭಾರತ ಮೂಲದ ಆಟಗಾರರು ಇದ್ದರು.

ಆಟದಲ್ಲಿ ಹೆಚ್ಚಿನ ಅವಕಾಶ, ಉದ್ಯೋಗ ಅರಸಿ ಹೊರದೇಶಗಳಲ್ಲಿ ಇರುವ ಭಾರತ ಮೂಲದ ಕ್ರಿಕೆಟಿಗರು ಆಯಾ ದೇಶಗಳ ತಂಡಗಳಲ್ಲಿ ಆಡುವ ಪರಿಪಾಟಕ್ಕೆ ಇತಿಹಾಸವೇ ಇದೆ. ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ 20 ತಂಡಗಳು ಕಣದಲ್ಲಿವೆ. ಭಾರತೀಯ ಮೂಲದ ಸುಮಾರು 40 ಕ್ರಿಕೆಟಿಗರು ವಿವಿಧ ತಂಡಗಳನ್ನು ಪ್ರತಿನಿಧಿಸುತ್ತಿದ್ದಾರೆ. ಕೆನಡಾ ತಂಡದಲ್ಲಿ 11 ಮಂದಿ ಭಾರತ ಮೂಲದ ಆಟಗಾರರು ಇದ್ದಾರೆ. ಅಮೆರಿಕ ತಂಡದಲ್ಲಿ 9 ಮಂದಿ, ಒಮಾನ್ ಮತ್ತು ಯುಎಇ ತಂಡದಲ್ಲಿ ತಲಾ ಏಳು ಭಾರತೀಯ ಮೂಲದ ಆಟಗಾರರಿದ್ದಾರೆ.

19 ವರ್ಷದೊಳಗಿನವರ ಕ್ರಿಕೆಟ್‌ನಲ್ಲಿ ಭಾರತ ತಂಡಕ್ಕೆ ಆಡಿದ್ದ ಎಡಗೈ ವೇಗಿ ಸೌರಭ್ ವಿಶ್ವಕಪ್‌ನ ಉದ್ಘಾಟನಾ ಪಂದ್ಯದಲ್ಲಿ ಆಡಲು ಸಜ್ಜಾಗಿದ್ದಾರೆ. 34 ವರ್ಷದ ಸೌರಭ್ 2024ರ ಆವೃತ್ತಿಯಲ್ಲಿ ಅಮೆರಿಕ ತಂಡ ಸೂಪರ್ 8 ಹಂತ ತಲುಪುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಭಾರತ ತಂಡದ ನಾಯಕರಾಗಿರುವ ಸೂರ್ಯಕುಮಾರ್ ಅವರ ಜೊತೆಗೇ ಸೌರಭ್ ಮುಂಬೈ ತಂಡದಲ್ಲಿ ಆಡಿದ್ದರು..

ಅಲಬಾಮಾದಲ್ಲಿ ಜನಿಸಿದ 34 ವರ್ಷ ವಯಸ್ಸಿನ ಎಡಗೈ ಸ್ಪಿನ್ನರ್ ನೋಷ್ತುಷ್ ಕೆಂಜಿಗೆ ಅವರ ಪೋಷಕರು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನವರು. ಮೊನಾಂಕ್ 2019ರಲ್ಲಿ ಅಮೆರಿಕ ತಂಡಕ್ಕೆ ಪದಾರ್ಪಣೆ ಮಾಡಿದವರು. ಅಮೆರಿಕ ತಂಡದ ಯಶಸ್ಸಿನಲ್ಲಿ ಈ 32 ವರ್ಷದ ಆಟಗಾರನ ಪಾತ್ರ ದೊಡ್ಡದಿದೆ.

ಆಲ್‌ರೌಂಡರ್ ಹರ್ಮೀತ್ ಸಿಂಗ್ ಅವರು 2012ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಆಡಿದ್ದರು. 2020ರ ಆರಂಭದಲ್ಲಿ ಅಮೆರಿಕಕ್ಕೆ ತೆರಳಿದ ಅವರು ಆ ತಂಡದ ಪ್ರಮುಖ ಆಟಗಾರ ಎನಿಸಿದ್ದಾರೆ.

ಇಟಲಿ ತಂಡದಲ್ಲಿರುವ ವೇಗದ ಬೌಲರ್ ಜಸ್‌ಪ್ರೀತ್ ಸಿಂಗ್ ಹುಟ್ಟಿದ್ದು ಪಂಜಾಬಿನ ಫಗ್ವಾಡಾದಲ್ಲಿ. ಹದಿಹರೆಯದಲ್ಲಿ ಕ್ರಿಕೆಟ್ ಅವಕಾಶ ಅರಸಿಕೊಂಡು ಇಟಲಿಯಲ್ಲಿ ನೆಲೆಕಂಡುಕೊಂಡರು. ಈಗ ಅವರು ಆ ದೇಶದ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ನೆದರ್ಲೆಂಡ್ಸ್ ತಂಡದಲ್ಲಿರುವ ಆಫ್ ಸ್ಪಿನ್ನರ್, 22 ವರ್ಷ ವಯಸ್ಸಿನ ಆರ್ಯನ್ ದತ್ ಅವರ ಕುಟುಂಬ ಭಾರತದಿಂದ ಆ ದೇಶಕ್ಕೆ ವಲಸೆ ಹೋಗಿತ್ತು.

19 ವರ್ಷದೊಳಗಿನವರ ಕ್ರಿಕೆಟ್‌ನಲ್ಲಿ ಮೊನಾಂಕ್ ಮತ್ತು ಜಸ್‌ಪ್ರೀತ್ ಬೂಮ್ರಾ ಗುಜರಾತ್ ತಂಡದಲ್ಲಿ ಜೊತೆಯಾಗಿ ಆಡಿದವರು. ಈಗ ಅವರು ವಿಶ್ವಶ್ರೇಷ್ಠ ವೇಗದ ಬೌಲರ್ ಆಗಿರುವ ಬೂಮ್ರಾ ಅವರನ್ನು ಎದುರಿಸಬೇಕಾಗಿದೆ! ಮೊನಾಂಕ್ ಪಟೇಲ್ ಗುಜರಾತ್‌ನ ಆನಂದ್ ಪಟ್ಟಣದಲ್ಲಿ ಜನಿಸಿದವರು.

ಇಟಲಿ ತಂಡದ ಜಸ್‌ಪ್ರೀತ್ ಸಿಂಗ್ ಮೇಲೆ ಎಲ್ಲರ ಗಮನ ನೆಟ್ಟಿದೆ. 32 ವರ್ಷ ವಯಸ್ಸಿನ ಈ ಬೌಲರ್, 2006ರಲ್ಲಿ ಕುಟುಂಬದ ಜೊತೆ ಮಿಲಾನ್ ಬಳಿಯ ಊರಿಗೆ ಬಂದು ನೆಲೆಸಿದ್ದರು. 2019ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು.

ಗುರುದಾಸಪುರದಲ್ಲಿ ಜನಿಸಿದ ದಿಲ್‌ಪ್ರೀತ್ ಬಾಜ್ವಾ, 2020ರಲ್ಲಿ ಕೆನಡಾಕ್ಕೆ ವಲಸೆ ಹೋದವರು. ಆರು ವರ್ಷಗಳ ನಂತರ ಅವರು ಕೆನಡಾ ತಂಡದ ನಾಯಕರಾಗಿದ್ದಾರೆ. ಈ ಬೌಲರ್ ಈಗ ತಾಯ್ನಾಡಿಗೆ ಬರುತ್ತಿದ್ದಾರೆ. 23 ವರ್ಷ ವಯಸ್ಸಿನ ಬಾಜ್ವಾ ಅವರು 2024ರ ಟಿ20 ತಂಡದಲ್ಲೂ ಆಡಿದ್ದರು.

ಲುಧಿಯಾನದಲ್ಲಿ ಜನಿಸಿದ ಜತಿಂದರ್ ಅವರು ಒಮಾನ್ ತಂಡಕ್ಕೆ ನಾಯಕರಾಗಿದ್ದಾರೆ. 36 ವರ್ಷದ ಈ ಆಫ್‌ಬ್ರೇಕ್ ಬೌಲರ್ ಭಾರತದಲ್ಲಿ ಹಿಂದೆಂದೂ ಆಡುವ ಅವಕಾಶ ಪಡೆದಿರಲಿಲ್ಲ. ಪ್ರಸ್ತುತ ಒಮಾನ್‌ನ ಎಲ್ಲ ಪಂದ್ಯಗಳೂ ಶ್ರೀಲಂಕಾದಲ್ಲಿ ನಡೆಯುವ ಕಾರಣ ಈ ಬಾರಿಯೂ ಅವರಿಗೆ ಭಾರತದಲ್ಲಿ ಆಡಲು ಅವಕಾಶ ಸಿಗುವ ಸಾಧ್ಯತೆಯಿಲ್ಲ.

ವಿವಾದದ ಹಾದಿ


ಮುಸ್ತಫಿಝುರ್ ರೆಹಮಾನ್

- ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾದ ಕಾರಣ, ಬಾಂಗ್ಲಾದ ಆಟಗಾರ ಮುಸ್ತಫಿಝುರ್ ರೆಹಮಾನ್ ಅವರನ್ನು ಐಪಿಎಲ್‌ನಿಂದ ಕೈಬಿಡುವಂತೆ ಆಗ್ರಹಗಳು ಕೇಳಿಬಂದವು. ಹೀಗಾಗಿ, ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಬಿಸಿಸಿಐ ನಿರ್ದೇಶನದಂತೆ ಅವರನ್ನು ಜನವರಿ 2ರಂದು ತಂಡದಿಂದ ಕೈಬಿಟ್ಟಿತು.
- ಮುಸ್ತಫಿಜುರ್ ಅವರನ್ನು ಐಪಿಎಲ್‌ನಿಂದ ಕೈಬಿಟ್ಟ ನಿರ್ಧಾರದಿಂದ ಅಸಮಾಧಾನಗೊಂಡ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು (ಬಿಸಿಬಿ), ತಮ್ಮ ತಂಡವು ಭಾರತದಲ್ಲಿ ಟಿ20 ವಿಶ್ವಕಪ್ ಪಂದ್ಯಗಳನ್ನು ಆಡಲು ಭದ್ರತೆಯ ಸಮಸ್ಯೆ ಇದೆ ಎಂಬ ಹೊಸ ಕ್ಯಾತೆ ತೆಗೆಯಿತು. ತಮ್ಮ ಪಂದ್ಯಗಳನ್ನು ಶ್ರೀಲಂಕಾಕ್ಕೆ ವರ್ಗಾಯಿಸುವಂತೆಯೂ ಐಸಿಸಿಗೆ ಮನವಿ ಮಾಡಿತು. ಇಲ್ಲದಿದ್ದರೆ, ಟೂರ್ನಿಯಿಂದ ಹಿಂದೆ ಸರಿಯುವುದಾಗಿ ತಿಳಿಸಿತು.
- ಬಿಸಿಬಿಯ ಮನವಿಯನ್ನು ಜ.21ರಂದು ತಿರಸ್ಕರಿಸಿದ ಐಸಿಸಿ, ಭಾರತದಲ್ಲಿ ಆಡುವಂತೆ ಮನವೊಲಿಸಲು ಯತ್ನಿಸಿತು. ಟೂರ್ನಿಯಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿ ನಿರ್ಧಾರ ತಿಳಿಸುವಂತೆ ಗಡುವನ್ನೂ ವಿಧಿಸಿತು. ಆದರೆ ಬಾಂಗ್ಲಾ ಪಟ್ಟು ಸಡಿಲಿಸಲಿಲ್ಲ.
- ಬಾಂಗ್ಲಾದೇಶದ ಬದಲಿಗೆ ಟೂರ್ನಿಯಲ್ಲಿ ಆಡಲು ಸ್ಕಾಟ್ಲೆಂಡ್ ತಂಡಕ್ಕೆ ಅವಕಾಶ ನೀಡಿರುವುದಾಗಿ ಐಸಿಸಿ ಜ.24ರಂದು ಪ್ರಕಟಿಸಿತು.
- ವಿವಾದದ ಆರಂಭದಿಂದಲೂ ಬಾಂಗ್ಲಾ ಪರ ನಿಲುವು ಹೊಂದಿದ್ದ ಪಾಕಿಸ್ತಾನ, ಲೀಗ್ ಹಂತದಲ್ಲಿ ಭಾರತ ತಂಡದ ವಿರುದ್ಧದ ಪಂದ್ಯವನ್ನು (ಫೆ.15) ಬಹಿಷ್ಕರಿಸುವುದಾಗಿ ಫೆಬ್ರುವರಿ 1ರಂದು ಘೋಷಿಸಿತು. ಈ ಪಂದ್ಯ ನಡೆಯುವ ಬಗ್ಗೆ ಅನುಮಾನಗಳು ಇನ್ನೂ ಬಗೆಹರಿದಿಲ್ಲ. ಅಲ್ಲದೆ, ನಾಕೌಟ್ ಪಂದ್ಯದಲ್ಲಿ ಭಾರತ ತಂಡ ಎದುರಾದರೆ ಆಡಬೇಕಾ ಇಲ್ಲವೇ ಎಂಬುದನ್ನು ಪಾಕ್ ಸರ್ಕಾರ ನಿರ್ಧರಿಸಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಹೇಳಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

07 ಫೆಬ್ರುವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಷಷ್ಠಿ ಗಂ. 26-55 ನಕ್ಷತ್ರ: ಚಿತ್ತಾ ಗಂ. 26-29, ಯೋಗ: ಶೂಲ ಗಂ. 23-41 ಕರಣ: ಗರ ಗಂ 14-03 ನಂತರ ವಣಿಜ ಗಂ 26-55 ಮಕರ ಮಾಸದ 24 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 1 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 **ಸೂರ್ಯೋದಯ :** 06-59 **ಸೂರ್ಯಾಸ್ತ :** 06-30, **ಮುಸ್ಲಿಂ ದಿನಾಂಕ :** 18 ಶಬನ್, ಅದೃಷ್ಟ ಸಂಖ್ಯೆ : 12, 4

ಮೇಷ: ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ನಡೆಸುವುದರಿಂದ ಸಮಸ್ಯೆಗಳ ಪರಿಹಾರವನ್ನು ಶಾಶ್ವತವಾಗಿ ಕಂಡುಕೊಳ್ಳುವಿರಿ. ಕುಟುಂಬದ ಸದಸ್ಯರ ನಡುವೆ ಅನಗತ್ಯ ಚರ್ಚೆ ಮಾಡಬೇಡಿ. ವಿಶೇಷ ಉಡುಗೊರೆ ದೊರಕಬಹುದು.

ವೃಷಭ: ಪುರುಷ ಪ್ರಯತ್ನದ ಜತೆಯಲ್ಲಿ ದೇವರ ಅನುಗ್ರಹ ಯೋಜನೆಗೆ ಪುಷ್ಟಿ ಕೊಡುವುದು ಸಂತಸದ ವಿಚಾರ. ಕೈತಪ್ಪಿ ಹೋಗಿದ್ದ ಕೆಲಸಗಳು ಹಿರಿಯರೊಬ್ಬರ ಸಹಾಯದಿಂದ ಪುನಃ ದೊರೆಯಲಿವೆ.

ಮಿಥುನ: ನ್ಯಾಯಾಂಗ ಇಲಾಖೆಯಲ್ಲಿ ಜೀವನ ನಡೆಸುತ್ತಿರುವವರಿಗೆ ಹಣದ ಆಸೆ ತೋರಿಸಿ ತಪ್ಪು ಕೆಲಸವನ್ನು ಮಾಡುವಂತೆ ಪ್ರಚೋದಿಸುವವರು ಎದುರಾಗಲಿದ್ದಾರೆ. ಧರ್ಮ ಕಾರ್ಯಗಳಿಗೆ ಧನ ವಿನಿಯೋಗಿಸುವ ಬಗ್ಗೆ ಯೋಚಿಸಿ.

ಕರ್ಕಾಟಕ: ಕಠಿಣ ಪರಿಶ್ರಮದಿಂದ ಕಾರ್ಯನಿರ್ವಹಿಸಿದಲ್ಲಿ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ. ಹಳೆಯ ವಿಷಯಗಳನ್ನು ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ. ಸಿಹಿ ಘಟನೆಗಳನ್ನು ಮೆಲುಕು ಹಾಕುವಿರಿ.

ಸಿಂಹ: ಸಣ್ಣಪುಟ್ಟ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಕ್ಕೆ ಹೊಸ ಕಾರ್ಯವು ಲಭ್ಯವಾಗಲಿದೆ. ಕೆಲಸ ಕಾರ್ಯಗಳನ್ನು ಶೀಘ್ರ ಪೂರ್ಣಗೊಳಿಸುವ ನಿರ್ಧಾರ ಮಾಡಿ. ವಿದೇಶ ಅಥವಾ ದೂರ ಸಂಚಾರದ ಯೋಗವಿದೆ.

ಕನ್ಯಾ: ಮಂದಗತಿಯಲ್ಲಿ ಸಾಗುತ್ತಿದ್ದ ಕೆಲವು ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು. ಶೈಕ್ಷಣಿಕ ರಂಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು.

ತುಲಾ: ಕಠಿಣ ಪ್ರಯತ್ನಗಳ ನಂತರವೂ ಸಿಗದ ಕಾಮ್ಯಗಳನ್ನು ಪಡೆದುಕೊಳ್ಳಲು ಪ್ರಯತ್ನ ಬೇಕು. ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ದೊರಕುವ ಮುನ್ಸೂಚನೆ ಸಿಗುತ್ತದೆ.

ವೃಶ್ಚಿಕ: ಮನೆ ಜಾಗದ, ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರುವುದು. ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವಿರಿ.

ಧನು: ವಿವಾದಗಳಿಂದ ದೂರ ಉಳಿದು ಕೆಲಸಗಳನ್ನು ನಿಧಾನವಾಗಿ ಪೂರ್ತಿ ಮಾಡುವಂಥ ತೀರ್ಮಾನಕ್ಕೆ ಬರುವುದು ಉತ್ತಮ. ನಿಮ್ಮ ಬಳಿ ಇರುವ ಸಂಪತ್ತು ಅನುಭವಿಸುವ ಚಟ ಉಂಟಾಗುವುದು.

ಮಕರ: ಹಿತೈಷಿಗಳಾಗಿದ್ದ ಬಂಧು-ಮಿತ್ರರು ಹಿತಶತ್ರುಗಳಾಗುವ ಸಾಧ್ಯತೆ ಅಧಿಕವಾಗಿ ತೋರುವುದು. ಮಾತಾ-ಪಿತೃಗಳಿಂದ ನಿಮ್ಮ ಆಸೆಗಳಿಗೆ ಪ್ರೋತ್ಸಾಹವನ್ನು ಹೊಂದುವಿರಿ. ವಾಹನ ವ್ಯವಹಾರಗಳಲ್ಲಿ ವಿಶೇಷ ಲಾಭ ಆಗುವುದು.

ಕುಂಭ: ಆಡಳಿತಾತ್ಮಕ ವಿಚಾರದಲ್ಲಿ ಭಾರಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ. ದಿನಾಂತ್ಯದಲ್ಲಿ ಆಭರಣಗಳು ಅಥವಾ ಕಲಾವಸ್ತುಗಳನ್ನು ಖರೀದಿಸುವ ಮನಸ್ಸು ಬರಲಿದೆ.


ಮೀನ: ಇನ್ನೊಬ್ಬರು ಮಾಡುತ್ತಿರುವುದು ಶುಭ ಅಥವಾ ಅಶುಭ ಕೆಲಸವಾದರೂ, ಅದರ ಬಗ್ಗೆ ಟೀಕೆ-ಟಿಪ್ಪಣಿ ನೀಡುವುದು ಸರಿಯಲ್ಲ. ನೀವು ಪ್ರಯತ್ನಿಸಿದ ಕಾರ್ಯಗಳು ಗುರು-ಹಿರಿಯರ ಅನುಗ್ರಹದಿಂದ ಕೈಗೂಡುತ್ತವೆ.

ಪದಬಂಧ 6308

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಂದೆಯ ತಂದೆ (4)
3.ನಗುವಿನಿಂದ ಕೂಡಿದ ಮುಖ (4)
5.ದುರಸ್ತಿಯನ್ನು ಹೀಗೆನ್ನಿ (3)
6.ವರ್ಷವನ್ನು ಹೀಗೂ ಹೇಳುವರು (4)
7.ಯತಿಗೆ ದೊರೆತಿರುವ ಸೋಡಿ (4)
9.ಈ ತರ ಬಂದಿರುವ ಏರ್ಪಾಟು! (4)
11. ಸಂಭ್ರಮಕ್ಕಿಲ್ಲಿ ಗರ ಬಡಿದಿದೆಯಲ್ಲಾ! (4)
13.ಕೈಯನ್ನು ಕೊನೆಗಿಟ್ಟಿರುವ ಆಳು (3)
15.ಜರಿ ಸೀರೆಯಲ್ಲಿರುವ ಬೆಲೆಯುಳ್ಳ ಮಣಿ (4)
16.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ
1.ಪಿನಾಕದ ಹತ್ತಿರವಿರುವ ಕೋಗಿಲೆ (2)
2.ಓಡುತ್ತಾಹೋಗಿ ಸುದ್ದಿ ಮುಟ್ಟಿಸುವವನು (4)
3.ಸುಮಾರು ಮೂರು ಮೈಲುಗಳ ಒಂದು ಅಳತೆ (4)
4.ಆಕಾಶದಲ್ಲಿ ಸಂಚರಿಸುವಂಥದ್ದು (2)
6.ಗಾಯನವನ್ನು ಹೀಗೆನ್ನಿ (3)
8.ಇಲ್ಲಿ ಅಂಧಕಾರ ಕವಿದಿದೆ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಗಂಡು ಕೋಳಿಯಿದು (2)
14.ಆ ಮನೆ ಹತ್ತಿರ ಕಾಣಿಸಿದ ಗಜ (2)



6307ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ನಿಷ್ಪಕ್ಷಪಾತ 4.ಆಮೋದ 5.ಕದ 7.ರದ 9.ನಗ 10.ಜ್ವಲ 12.ಕರಿ 15.ಪುರ 17.ಮಾಮರ 18.ವಿಮಾನಯಾನ

ಮೇಲಿಂದ ಕೆಳಕ್ಕೆ:
1.ಅಕ್ಷರಸ್ಥ 2.ಪಾತಕ 3.ನಿದರ್ಶನ 4.ಆರಾಧಕ 6.ದರ 8.ದವಳಾರ 11.ಅನುಮಾನ 13.ರಿಪು 14.ಬಡನಡು 16.ರವಿಕೆ

ಸುಡೊಕು 6692

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


2		9			7	1		4
				3	2			
5		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		

6691 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಪ್ರಜಾವಾಣಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,642
ಇಂದಿನ ಅಂತ್ಯ:	25,693
ದಿನದ ಗರಿಷ್ಠ:	25,703
	50

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹80
ಮೈಸೂರು:	100 ಕ್ಕೆ	₹562

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹202.50
ಆರ್‌ಎಸ್‌ಎಸ್-5	₹197.50
ಗುಡ್ ಲಾಟ್	₹185.50

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹422-768
ದ್ವಿತಳಿ (ಬಿ.ವಿ)	₹302-912

ಮುದ್ರೆಮನೆ ಕಾಫಿ	
ಎಪಿ	₹24100
ಎಸಿ	₹13000
ಆರ್‌ಪಿ	₹18100
ಆರ್‌ಸಿ	₹10150


ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1740 (1740)
ಸೋಯಾ (ರಿಫೈನ್ಡ್)	₹1405 (1410)
ಸೂರ್ಯಕಾಂತಿ (ರಿಫೈನ್ಡ್)	₹1615 (1620)
ಪಾಮೋಲಿನ್	₹1325 (1330)

ಮುಂಬೈ ಧಾರಣೆ (ಶೇಂಗಾ) 06-02-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1750 (1750)
ಒಂದು ವಾರದ ಡೆಲಿವರಿ	1745 (1745)
ಪಾಮ್ ವಾರದ ಡೆಲಿವರಿ	1323 (1328)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1525)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,53,000 (1,51,500)
ಬೆಳ್ಳಿ ಕೆ.ಜಿಗೆ	2,48,000 (2,55,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹28000-29900
ಪುತ್ತೂರು	₹6000-22000

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ



‘ಮೌಲ್ಯವರ್ಧಿಸಿದರಷ್ಟೇ ಕೃಷಿ ಲಾಭ’

‘ಉತ್ಪಾದನೋತ್ತರ ಕೃಷಿ-ರೈತರ ಸಬಲೀಕರಣ’ ವಾಣಿಜ್ಯ ಮೇಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಿಂದ ಮಾತ್ರವೇ ಕೃಷಿಯನ್ನು ಲಾಭದಾಯಕ ಆಗಿಸಬಹುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೃಷಿ ಇಲಾಖೆಯು ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿರುವ ‘ಉತ್ಪಾದನೋತ್ತರ ಕೃಷಿ ಹಾಗೂ ರೈತರ ಸಬಲೀಕರಣ’ ಪರಿಕಲ್ಪನೆಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಶುಕ್ರವಾರ ರೈತ ಸಾಧಕರಿಗೆ ‘ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಮತ್ತು ಕೃಷಿ ಪ್ರಶಸ್ತಿ’ ಗಳನ್ನು ಪ್ರದಾನ ಮಾಡಿ ಮಾತನಾಡಿದರು.

‘ಈ ಹಿಂದೆ ನಮ್ಮ ರೈತರು ರಾಗಿ, ಭತ್ತ, ಕಬ್ಬು ಬೆಳೆಯುತ್ತಿದ್ದರು. ಅವನ್ನು ಮಾರಾಟ ಮಾಡುತ್ತಿದ್ದರು. ಅವರು ಬೆಳೆದ ಬೆಳೆಯ ಲಾಭ ಅವರಿಗೆ ಸಿಗುತ್ತಲೇ ಇರಲಿಲ್ಲ. ಬದಲಿಗೆ ಮಧ್ಯವರ್ತಿಗಳ ಪಾಲಾಗುತ್ತಿತ್ತು. ಕೃಷಿಯನ್ನೂ ಹೇಗೆ ಲಾಭದಾಯಕ ಮಾಡಬಹುದು ಎಂಬುದನ್ನು ಹಲವು ರೈತರು ಸಾಧಿಸಿ ತೋರಿಸಿದ್ದಾರೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹೇಗೆ ಮಾಡಬೇಕು ಎಂಬುದನ್ನು ಸಾಕ್ಷೀಕರಿಸಿರುವ ಹಲವು ರೈತ-ಉದ್ಯಮಿಗಳು ವಸ್ತು ಪ್ರದರ್ಶನದಲ್ಲಿ ಮಳಿಗೆಗಳನ್ನು ಹಾಕಿದ್ದಾರೆ. ಅದನ್ನು ರೈತರು ಸ್ಫೂರ್ತಿಯನ್ನಾಗಿ ತೆಗೆದುಕೊಳ್ಳಬೇಕು’ ಎಂದರು.

‘ದಶಕಗಳ ಹಿಂದೆ ದೇಶದ ಶೇ 80ರಷ್ಟು ಜನರು ಕೃಷಿಯಲ್ಲಿ ತೊಡಗಿಕೊಂಡಿದ್ದರು. ಈಗ ಆ ಪ್ರಮಾಣ ಶೇ 62ಕ್ಕೆ ಕುಸಿದಿದೆ. 140 ಕೋಟಿಯಷ್ಟಿರುವ ನಮ್ಮ ಜನರಿಗೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸಲಾಗುತ್ತಿಲ್ಲ. ಹೀಗಾಗಿ ಕೃಷಿಯಲ್ಲಿ ಉದ್ಯಮಿಗಳಾಗಲು ಸಾಕಷ್ಟು ಅವಕಾಶಗಳಿವೆ. ಆ ನಿಟ್ಟಿನಲ್ಲಿ ಯುವಜನರು ಯೋಚನೆ ಮಾಡಬೇಕು. ಹೊಸತಲೆಮಾರಿನ ಅಗತ್ಯಗಳಿಗೆ ಕೃಷಿಯನ್ನು ಒಗ್ಗಿಸಿಕೊಳ್ಳಬೇಕು ಮತ್ತು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯ ಸಾಧ್ಯತೆಗಳನ್ನು ಪರಿಶೀಲಿಸಬೇಕು’ ಎಂದರು.

‘ಬೆಳೆ ವಿಮೆ ಯೋಜನೆಗೆ ನೋಂದಣಿ ಮಾಡಿಸುವಲ್ಲಿ ನಮ್ಮ ರಾಜ್ಯವು ದೇಶದಲ್ಲೇ ಎರಡನೆಯ ಸ್ಥಾನದಲ್ಲಿದೆ. ನಮ್ಮ ರೈತರಿಗೆ ₹6,000 ಕೋಟಿ ಮೊತ್ತದ ವಿಮೆ ಪರಿಹಾರವನ್ನು ಒದಗಿಸಲಾಗಿದೆ. ರೈತರ ಬದುಕು ಹಸನಾಗಬೇಕಾದರೆ, ನೀವು ನಮ್ಮ ಕೈ ಬಲಪಡಿಸಬೇಕು’ ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಇದ್ದರು.



ಬೆಂಗಳೂರಿನ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಸಿದ್ದರಾಮಯ್ಯ ಅವರು ಸಾವಯವ ಬೆಲ್ಲವನ್ನು ಪರಿಶೀಲಿಸಿದರೆ, ಎನ್. ಚಲುವರಾಯಸ್ವಾಮಿ ಬೆಲ್ಲವನ್ನು ಸವಿದರು –ಪ್ರಜಾವಾಣಿ ಚಿತ್ರ

‘ನರೇಗಾ ಮರು ಜಾರಿಗೆ ಒತ್ತಾಯಿಸಿ’

‘ಕೇಂದ್ರದ ಬಿಜೆಪಿ ಸರ್ಕಾರವು ನರೇಗಾವನ್ನು ರದ್ದುಪಡಿಸಿ, ವಿಬಿ ಜಿ–ರಾಮ್‌ಜಿ ಜಾರಿಗೆ ತಂದಿದೆ. ಇದರಿಂದ ಕೃಷಿ ಕಾರ್ಮಿಕರ ಉದ್ಯೋಗ ಇಲ್ಲವಾಗಲಿದೆ. ಇದರ ವಿರುದ್ಧ ರಾಜ್ಯ ರೈತರೆಲ್ಲರೂ ಒಗ್ಗೂಡಬೇಕು. ನರೇಗಾ ಮರು ಜಾರಿಗೆ ಒತ್ತಾಯಿಸಬೇಕು’ ಎಂದು ಸಿದ್ದರಾಮಯ್ಯ ಕರೆ ನೀಡಿದರು.

‘ರಾಜ್ಯಗಳಿಗೆ ಅನುದಾನ ಕಡಿತ ಮಾಡುವ ವಿಬಿ ಜಿ–ರಾಮ್‌ಜಿ ಯೋಜನೆಯನ್ನು ಯಾವ ರಾಜ್ಯ ಸರ್ಕಾರಗಳೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ರಾಜ್ಯಗಳ ಒಪ್ಪಿಗೆ ಇಲ್ಲದೆಯೇ ಕೇಂದ್ರದ ಬಿಜೆಪಿ ಸರ್ಕಾರ ಈ ಯೋಜನೆ ಜಾರಿಗೆ ತಂದಿದೆ. ನಿಮ್ಮ ಗ್ರಾಮಗಳ ವ್ಯಾಪ್ತಿಯಲ್ಲಿ ಯಾವ ಕಾಮಗಾರಿ ಆಗಬೇಕು ಎಂಬುದರ ಕುರಿತಾಗಿ ಗ್ರಾಮ ಪಂಚಾಯತಿಗಳು ನಿರ್ಧಾರ ತೆಗೆದುಕೊಳ್ಳಬಹುದಿತ್ತು. ಈಗ ಅದನ್ನು ಕೇಂದ್ರ ಸರ್ಕಾರವೇ ನಿರ್ಧರಿಸಲಿದೆ. ಉದ್ಯೋಗ ಇನ್ನೆಲ್ಲಿಂದ ಸಿಗಲಿದೆ. ಈ ಬಗ್ಗೆ ರೈತರು, ಕೃಷಿ ಕಾರ್ಮಿಕರು ಸಂಘಟಿತರಾಗಿ ಹೋರಾಡಬೇಕಾಗಿದೆ’ ಎಂದರು.

‘ಮಾರುಕಟ್ಟೆ ಕಂಡುಕೊಂಡರಷ್ಟೇ ಲಾಭ’

‘ರೈತರು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿಕೊಂಡರೂ, ಮಾರುಕಟ್ಟೆ ರೂಪಿಸಿಕೊಳ್ಳದೇ ಇದ್ದರೆ ಉಪಯೋಗವಿಲ್ಲ’ ಎಂದು ಮಂಡ್ಯದ ಗೌತಮ್ ಹೇಳಿದರು.

‘ನಾವು ಕೃಷಿ ಸಲಕರಣೆ ಮತ್ತು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತೇವೆ. ರೈತರು ಬೆಳೆದ ಕಬ್ಬಿನಿಂದ ಸಾವಯವ ರೀತಿಯಲ್ಲಿ ತಯಾರಿಸಿದ ಬೆಲ್ಲವನ್ನು ಮಾರುತ್ತೇವೆ. ಅದನ್ನು ಮೊದಲು ಕೆಲವು ಪ್ರತಿಷ್ಠಿತ ಇ-ಕಾಮರ್ಸ್ ಕಂಪನಿಗಳು 1 ಕೆ.ಜಿಗೆ ₹80ರ ದರದಲ್ಲಿ ಖರೀದಿಸುತ್ತಿದ್ದವು. ಅವನ್ನೇ ಆನ್‌ಲೈನ್‌ನಲ್ಲಿ ₹280–₹300ಕ್ಕೆ ಮಾರಾಟ ಮಾಡುತ್ತಿದ್ದವು. ರೈತನಿಗೆ, ಕೃಷಿ ಉತ್ಪನ್ನಕ್ಕೆ ಮೌಲ್ಯವರ್ಧನೆ ಮಾಡಿದವನಿಗೆ ಮಾಡುವ ಮೋಸವಲ್ಲವೇ ಇದು’ ಎಂದು ಪ್ರಶ್ನಿಸಿದರು.

‘ಮಧ್ಯವರ್ತಿಗಳಿಗೆ ಲಾಭ ಹೋಗುವುದನ್ನು ತಪ್ಪಿಸಲು ನಾವೇ ಮಾರುಕಟ್ಟೆ ಕಂಡುಕೊಳ್ಳುತ್ತಿದ್ದೇವೆ. ಆನ್‌ಲೈನ್‌ನಲ್ಲಿ ಪ್ರಚಾರ ಮಾಡಿ, ಗ್ರಾಹಕರನ್ನು ಹುಡುಕುತ್ತೇವೆ. ₹100ಕ್ಕೆ 1 ಕೆ.ಜಿ ಸಾವಯವ ಬೆಲ್ಲ ಮಾರುತ್ತಿದ್ದೇವೆ’ ಎಂದರು.

ಬೆಳ್ಳಿ ದರ ₹13 ಸಾವಿರ ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹3,400 ಕಡಿಮೆಯಾಗಿ, ₹1,57,200ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹13 ಸಾವಿರ ಇಳಿಕೆಯಾಗಿ, ₹2.55 ಲಕ್ಷಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಲಾಭದ ಗಳಿಕೆಗಾಗಿ ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದಾರೆ. ಇದು ದರ ಇಳಿಕೆಗೆ ಕಾರಣ ಎಂದು ವರ್ತಕರು ತಿಳಿಸಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಏರಿಕೆ: ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರ ಏರಿಕೆ ಕಂಡಿವೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 266 ಅಂಶ ಏರಿಕೆಯಾಗಿ, 83,580ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 50 ಅಂಶ ಹೆಚ್ಚಳವಾಗಿ, 25,693ಕ್ಕೆ ಅಂತ್ಯಗೊಂಡಿದೆ.

ರೂಪಾಯಿ ಮೌಲ್ಯ ಇಳಿಕೆ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 31 ಪೈಸೆಯಷ್ಟು ಕುಸಿದಿದೆ. ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹90.65 ಆಗಿದೆ.

ಅಡಿಕೆ ಧಾರಣೆ

ಚಿತ್ರದುರ್ಗ		ಪುತ್ತೂರು			
ಆಪಿ	52929-53399	ಕೋಕ	28000-36500	ಕೆಂಪುಗೋಟು	22699-37199
ಬೆಟ್ಟೆ	37639-38059	ಹೊಸತು	26000-46000	ರಾಶಿ	51599-56151
ಕೆಂಪುಗೋಟು	31100-31500	**ಶಿವಮೊಗ್ಗ**		**ಯಲ್ಲಾಪುರ**	
ರಾಶಿ	52449-52869	ಬೆಟ್ಟೆ	62099-66519	ಆಪಿ	60189-67621
ಕುಮಟಾ		ಗೊರಬಲು	20009-43019	ಬಿಳಿಗೋಟು	14012-37009
ಚಾಲಿ	47899-50649	ರಾಶಿ	45199-56596	ಕೋಕ	13009-32899
ಚಿಪ್ಪು	32089-38999	ಸರಕು	66600-98999	ಹಳೆಚಾಲಿ	38138-51139
ಕೋಕ	14569-35019	**ಶಿರಸಿ**		ಹೊಸಚಾಲಿ	37209-47899
ಫ್ಯಾಕ್ಟರಿ	10569-27829	ಬೆಟ್ಟೆ	35109-51589	ಕೆಂಪುಗೋಟು	16099-41099
ಹೊಸಚಾಲಿ	42999-47541	ಬಿಳಿಗೋಟು	26711-43878	ರಾಶಿ	45806-60099
		ಚಾಲಿ	42199-47511	ತಟ್ಟಿಬೆಟ್ಟೆ	40199-51899



ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ ಆತ್ಮಾಹುತಿ ಬಾಂಬರ್ ಸ್ಫೋಟಿಸಿಕೊಂಡ ಪ್ರದೇಶದಲ್ಲಿ ಪೊಲೀಸರು ಮತ್ತು ಜನರು ಸುತ್ತುವರಿದಿದ್ದರು – ಎಎಫ್‌ಪಿ ಚಿತ್ರ

ಇಸ್ಲಾಮಾಬಾದ್: ಆತ್ಮಾಹುತಿ ಬಾಂಬ್ ಸ್ಫೋಟ– 31 ಸಾವು

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನ ಶಿಯಾ ಮಸೀದಿ ಆವರಣದಲ್ಲಿ ಶುಕ್ರವಾರದ ಪ್ರಾರ್ಥನೆಯ ವೇಳೆ ಆತ್ಮಾಹುತಿ ಬಾಂಬರ್ ಒಬ್ಬರು ತನ್ನನ್ನು ಸ್ಫೋಟಿಸಿಕೊಂಡ ಪರಿಣಾಮ 31 ಜನರು ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ ಸುಮಾರು 170 ಜನರು ಗಾಯಗೊಂಡಿದ್ದಾರೆ.

‘ಖದೀಜತ್ ಉಲ್ ಕುಬ್ರಾ’ ಮಸೀದಿಯಲ್ಲಿ ಪ್ರಬಲ ಸ್ಫೋಟ ಸಂಭವಿಸಿದೆ. ತಕ್ಷಣವೇ ಪೊಲೀಸರು ಮತ್ತು ರಕ್ಷಣಾ ಪಡೆಯ ಸಿಬ್ಬಂದಿ ಸ್ಥಳಕ್ಕೆ ಬಂದು ರಕ್ಷಣಾ ಕಾರ್ಯಾಚರಣೆ ನಡೆಸಿದರು.

ಮಸೀದಿಯ ಪ್ರವೇಶ ದ್ವಾರದಲ್ಲಿಯೇ ಆತ್ಮಾಹುತಿ ಬಾಂಬರ್‌ನನ್ನು ತಡೆಯಲಾಯಿತು, ಆದರೆ ಆತ ಕ್ಷಣಮಾತ್ರದಲ್ಲಿಯೇ ತನ್ನನ್ನು ಸ್ಫೋಟಿಸಿಕೊಂಡ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಗಾಯಗೊಂಡವರನ್ನು ವಿವಿಧ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಇಸ್ಲಾಮಾಬಾದ್‌ನ ಡೆಪ್ಯುಟಿ ಕಮಿಷನರ್ ಇರ್ಫಾನ್ ನವಾಜ್ ಮೆಮನ್ ತಿಳಿಸಿದ್ದಾರೆ. ಪರಿಸ್ಥಿತಿಯನ್ನು ನಿಭಾಯಿಸಲು ರಾಜಧಾನಿಯ ಆಸ್ಪತ್ರೆಗಳಲ್ಲಿ ಜಿಲ್ಲಾಡಳಿತ ತುರ್ತು ಪರಿಸ್ಥಿತಿ ಘೋಷಿಸಲಾಯಿತು.

ವಿದೇಶಿ ಪ್ರಜೆಯಿಂದ ದಾಳಿ: ತಕ್ಷಣಕ್ಕೆ ಯಾವುದೇ ಗುಂಪು ಸ್ಫೋಟದ ಜವಾಬ್ದಾರಿಯನ್ನು ವಹಿಸಿಕೊಂಡಿಲ್ಲ. ದಾಳಿಕೋರ ವಿದೇಶಿ ಪ್ರಜೆಯಾಗಿದ್ದು, ‘ಫಿತ್ನಾ ಅಲ್ ಖವಾರಿಜ್’ ಜತೆ ಸಂಪರ್ಕ ಹೊಂದಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ನಿಷೇಧಿತ ‘ತೆಹ್ರೀಕ್–ಇ–ತಾಲಿಬಾನ್ ಪಾಕಿಸ್ತಾನ್’ (ಟಿಟಿಪಿ) ಉಗ್ರಗಾಮಿಗಳನ್ನು ಪಾಕ್‌ನ ಅಧಿಕಾರಿಗಳು ‘ಫಿತ್ನಾ ಅಲ್ ಖವಾರಿಜ್’ ಎಂದು ಉಲ್ಲೇಖಿಸುತ್ತಾರೆ.

ಇಸ್ಲಾಮಾಬಾದ್‌ನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಕಟ್ಟಡದ ಹೊರಗೆ ಮೂರು ತಿಂಗಳ ಹಿಂದೆಯಷ್ಟೇ ಆತ್ಮಾಹುತಿ ಬಾಂಬರ್ ತನ್ನನ್ನು ಸ್ಫೋಟಿಸಿಕೊಂಡ ಪರಿಣಾಮ 12 ಜನರು ಮೃತಪಟ್ಟಿದ್ದರು. ಅದಕ್ಕಿಂತ ತೀವ್ರವಾದ ಸ್ಫೋಟ ಈ ಬಾರಿ ನಡೆದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉಜ್ಬೇಕಿಸ್ತಾನದ ಅಧ್ಯಕ್ಷ ಶವ್ಕತ್ ಮಿರ್ಜಿಯೊಯೆವ್ ಅವರು ಎರಡು ದಿನಗಳ ಭೇಟಿಗಾಗಿ ಗುರುವಾರ ಪಾಕ್‌ಗೆ ಬಂದಿದ್ದಾರೆ. ಈ ವೇಳೆಯೇ ಈ ದಾಳಿ ನಡೆದಿದೆ.

ಖಂಡನೆ: ಪಾಕಿಸ್ತಾನದ ಅಧ್ಯಕ್ಷ ಅಲಿ ಜರ್ದಾರಿ, ಪ್ರಧಾನಿ ಶಹಬಾಜ್ ಶರೀಫ್, ಸೆನೆಟ್‌ನ ವಿರೋಧ ಪಕ್ಷದ ನಾಯಕ ಅಲ್ಲಮ ರಾಜಾ ನಾಸಿರ್ ಅಬ್ಬಾಸ್ ಈ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದಾರೆ.

‘ಮುಗ್ಧ ನಾಗರಿಕರನ್ನು ಗುರಿಯಾಗಿಸುವುದು ಮಾನವೀಯತೆಯ ವಿರುದ್ಧದ ಅಪರಾಧ’ ಎಂದು ಅಲಿ ಜರ್ದಾರಿ ಹೇಳಿದ್ದಾರೆ.

‘ಪೂಜಾ ಸ್ಥಳಗಳನ್ನು ಗುರಿಯಾಗಿಸುವುದು ಮಾನವೀಯತೆ, ಧರ್ಮ ಮತ್ತು ಸಾಮಾಜಿಕ ಮೌಲ್ಯಗಳ ಮೇಲಿನ ನೇರ ದಾಳಿಯಾಗಿದ್ದು, ಇದನ್ನು ಸಹಿಸಲಾಗದು’ ಎಂದು ರಾಜಾ ನಾಸಿರ್ ಅಬ್ಬಾಸ್ ಟೀಕಿಸಿದ್ದಾರೆ.

ಕಾನ್ಸುಲೇಟ್ ಕಚೇರಿ ತೆರೆಯಲು ಮುಂದಾದ ಕೆನಡಾ, ಫ್ರಾನ್ಸ್

ನೂಕ್ (ಗ್ರೀನ್‌ಲ್ಯಾಂಡ್) (ಎಪಿ): ಆರ್ಕ್‌ಟಿಕ್ ದ್ವೀಪ ರಾಷ್ಟ್ರದ ಮೇಲೆ ಅಮೆರಿಕವು ತನ್ನ ಹಿಡಿತ ಸಾಧಿಸಲು ಯತ್ನ ತೀವ್ರಗೊಳಿಸಿರುವ ಬೆನ್ನಲ್ಲೇ, ನ್ಯಾಟೊ ಮಿತ್ರ ರಾಷ್ಟ್ರವಾದ ಗ್ರೀನ್‌ಲ್ಯಾಂಡ್‌ಗೆ ಬೆಂಬಲ ಸೂಚಿಸುವ ಭಾಗವಾಗಿ ಕಾನ್ಸುಲೇಟ್ ಕಚೇರಿಗಳನ್ನು ತೆರೆಯಲು ಕೆನಡಾ ಹಾಗೂ ಫ್ರಾನ್ಸ್ ನಿರ್ಧರಿಸಿವೆ.

ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ಅವರು ನೂಕ್‌ಗೆ ಪ್ರಯಾಣ ಬೆಳೆಸಿದ್ದು, ಅಲ್ಲಿ ಸ್ಥಾಪಿಸಿರುವ ಕಾನ್ಸುಲೇಟ್ ಕಚೇರಿ ಉದ್ಘಾಟಿಸಲಿದ್ದಾರೆ.

ಜೀನ್ ನೊಯಲ್ ಅವರು ಗ್ರೀನ್‌ಲ್ಯಾಂಡ್‌ನ ಕಾನ್ಸುಲ್ ಜನರಲ್ ಆಗಿ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ ಎಂದು ಫ್ರಾನ್ಸ್‌ನ ವಿದೇಶಾಂಗ ಸಚಿವಾಲಯವು ತಿಳಿಸಿದೆ.

ಜಿಡಿಪಿ ಶೇ 7.4ರಷ್ಟು ನಿರೀಕ್ಷೆ

ವ್ಯಾಪಾರ ಒಪ್ಪಂದ, ಜಿಎಸ್‌ಟಿ ಪರಿಷ್ಕರಣೆ ಪ್ರಗತಿಗೆ ಕಾರಣ: ಆರ್‌ಬಿಐ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.4ರಷ್ಟಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಅಂದಾಜನ್ನು ಪರಿಷ್ಕರಿಸಿದೆ. ಈ ಮೊದಲು ಶೇ 7.3ರಷ್ಟಾಗಲಿದೆ ಎಂದು ಹೇಳಿತ್ತು.



ಮುಂದಿನ ಆರ್ಥಿಕ ವರ್ಷದ ಮೊದಲ ಮತ್ತು ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಕ್ರಮವಾಗಿ ಶೇ 6.9 ಮತ್ತು ಶೇ 7ರಷ್ಟಾಗಲಿದೆ ಎಂದು ಅಂದಾಜಿಸಿದೆ.

ಈ ಮೊದಲು ಡಿಸೆಂಬರ್‌ನಲ್ಲಿ ಜಿಡಿಪಿಯು ಇದೇ ಅವಧಿಯಲ್ಲಿ ಕ್ರಮವಾಗಿ ಶೇ 6.7 ಮತ್ತು ಶೇ 6.8ರಷ್ಟು ಇರಲಿದೆ ಎಂದು ಅಂದಾಜಿಸಿತ್ತು. ಮುಂದಿನ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಜಿಡಿಪಿಯು ಶೇ 6.95ರಷ್ಟಾಗಲಿದೆ.

2026–27ರ ಪೂರ್ಣ ಆರ್ಥಿಕ ವರ್ಷದ ಜಿಡಿಪಿಯನ್ನು ಏಪ್ರಿಲ್‌ನಲ್ಲಿ ನಡೆಯುವ ಮುಂದಿನ ಎಂಪಿಸಿ ಸಭೆಯಲ್ಲಿ ಆರ್‌ಬಿಐ ಪ್ರಕಟಿಸಲಿದೆ.

‘ವ್ಯಾಪಾರ ಒಪ್ಪಂದಗಳು, ಜಿಎಸ್‌ಟಿ ದರ ಪರಿಷ್ಕರಣೆ ಮತ್ತು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವು ಜಿಡಿಪಿ ಪರಿಷ್ಕರಣೆಗೆ ಕಾರಣ’ ಎಂದು ಆರ್‌ಬಿಐನ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಹಣಕಾಸು ನೀತಿ ಸಮಿತಿಯ (ಎಂಪಿಸಿ) ನಿರ್ಧಾರ ಪ್ರಕಟಿಸಿದ ಬಳಿಕ ಹೇಳಿದ್ದಾರೆ.

ದೇಶದಲ್ಲಿ ಜನರ ಖರೀದಿ ಸಾಮರ್ಥ್ಯ ಮತ್ತು ಸ್ಥಿರವಾದ ಹೂಡಿಕೆಯ ಪ್ರಮಾಣ ಹೆಚ್ಚಳವಾಗಿದೆ. ಇದು ಜಿಡಿಪಿ ಬೆಳವಣಿಗೆಗೆ ಸಹಕಾರಿ ಆಗಿದೆ ಎಂದು ಹೇಳಿದ್ದಾರೆ.

ಜಲಾಶಯಗಳಲ್ಲಿ ನೀರಿನ ಮಟ್ಟ ಮತ್ತು ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಹೆಚ್ಚಿದೆ. ಇದು ಕೃಷಿ ಚಟುವಟಿಕೆ ಪ್ರಗತಿಗೆ ನೆರವಾಗಿವೆ. ನಿರ್ಮಾಣ ಮತ್ತು ಸೇವಾ ವಲಯವು ದೇಶೀಯ ಬೇಡಿಕೆಯನ್ನು ಹೆಚ್ಚಿಸಿವೆ ಎಂದು ತಿಳಿಸಿದ್ದಾರೆ.

ಭಾರತ–ಐರೋಪ್ಯ ಮುಕ್ತ ವ್ಯಾಪಾರ ಒಪ್ಪಂದ, ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಸೇರಿ ಹಲವು ವ್ಯಾಪಾರ ಒಪ್ಪಂದಗಳು ದೇಶದ ರಫ್ತಿಗೆ ಸಹಕಾರಿ ಆಗಲಿವೆ. ಅಲ್ಲದೆ, ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ ಕ್ರಮಗಳು ಸಹ ಬೆಳವಣಿಗೆಗೆ ಕಾರಣವಾಗಲಿವೆ ಎಂದು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ದರ ಪರಿಷ್ಕರಣೆ

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು 2025–26ರ ಆರ್ಥಿಕ ವರ್ಷದಲ್ಲಿ ಶೇ 2.1ರಷ್ಟಾಗಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಪ್ರಸಕ್ತ ಮಾರ್ಚ್ ತ್ರೈಮಾಸಿಕದಲ್ಲಿ ಹಣದುಬ್ಬರ ಶೇ 3ಕ್ಕೂ ಹೆಚ್ಚಿರಲಿದೆ ಎಂದು ಹೇಳಿದೆ.

2026–27ರ ಆರ್ಥಿಕ ವರ್ಷದ ಮೊದಲ ಮತ್ತು ಎರಡನೇ ತ್ರೈಮಾಸಿಕದಲ್ಲಿ ಹಣದುಬ್ಬರವು ಕ್ರಮವಾಗಿ ಶೇ 4 ಮತ್ತು ಶೇ 4.2ರಷ್ಟಾಗಬಹುದು ಎಂದು ಹೇಳಿದೆ.

ಕಳೆದ ಡಿಸೆಂಬರ್‌ನಲ್ಲಿ ಆರ್‌ಬಿಐ, 2025–26ರಲ್ಲಿ ಚಿಲ್ಲರೆ ಹಣದುಬ್ಬರ ಶೇ 2ರಷ್ಟಾಗಲಿದೆ. ಇದು ಮುಂದಿನ ಆರ್ಥಿಕ ವರ್ಷದ ಮೊದಲ ಮತ್ತು ಎರಡನೇ ತ್ರೈಮಾಸಿಕದಲ್ಲಿ ಕ್ರಮವಾಗಿ ಶೇ 3.9 ಮತ್ತು ಶೇ 4ರಷ್ಟಾಗಬಹುದು ಎಂದು ಹೇಳಿತ್ತು. ಅಮೂಲ್ಯ ಲೋಹಗಳ ಬೆಲೆಯಲ್ಲಿ ಹೆಚ್ಚಳವಾಗಿದೆ. ಇದು ಚಿಲ್ಲರೆ ಹಣದುಬ್ಬರ ಏರಿಕೆಗೆ ಒಂದು ಕಾರಣ ಎಂದು ತಿಳಿಸಿದೆ.

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಜನವರಿ 30ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣ ₹1.30 ಲಕ್ಷ ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ಶುಕ್ರವಾರ ತಿಳಿಸಿದೆ.

ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹65.59 ಲಕ್ಷ ಕೋಟಿಯಾಗಿದೆ. ಇದು ಇದುವರೆಗಿನ ಗರಿಷ್ಠ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಚಿನ್ನದ ಮೀಸಲು ಸಂಗ್ರಹವು ₹12.47 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಸೈಬರ್ ವಂಚಿತರಿಗೆ ಪರಿಹಾರ

ಒಂದನೇ ಪುಟದಿಂದ...

ಹೆಚ್ಚಿನ ಗ್ರಾಹಕರಿಗೆ ಪ್ರಯೋಜನ: ‘ಮೂರನೆಯ ಎರಡರಷ್ಟು ಡಿಜಿಟಲ್ ವಂಚನೆ ಪ್ರಕರಣಗಳ ಮೊತ್ತವು ₹50 ಸಾವಿರಕ್ಕಿಂತ ಕಡಿಮೆ ಇರುತ್ತದೆ. ಹೀಗಾಗಿ ವಂಚನೆಗೆ ಒಳಗಾದ ಹೆಚ್ಚಿನ ಗ್ರಾಹಕರು ಈ ಸೌಲಭ್ಯದ ಪ್ರಯೋಜನ ಪಡೆಯಲಿದ್ದಾರೆ’ ಎಂದು ಆರ್‌ಬಿಐ ಅಧಿಕಾರಿಗಳು ಹೇಳಿದ್ದಾರೆ.

ಡಿಜಿಟಲ್ ವಂಚನೆಯಿಂದ ಕಳೆದುಕೊಂಡ ಮೊತ್ತವು ₹25 ಸಾವಿರಕ್ಕಿಂತ ಕಡಿಮೆ ಇದ್ದರೆ, ವಂಚನೆಗೆ ಒಳಗಾದ ಮೊತ್ತದ ಶೇ 85ರಷ್ಟನ್ನು ಪಾವತಿಸಲಾಗುವುದು. ಹೆಚ್ಚಿನ ಮೊತ್ತದ ಪ್ರಕರಣಗಳಲ್ಲೂ ಪರಿಹಾರವನ್ನು ₹25 ಸಾವಿರಕ್ಕೆ ನಿಗದಿಪಡಿಸಲಾಗಿದೆ ಎಂದು ಆರ್‌ಬಿಐ ಹೇಳಿದೆ.

ಎನ್‌ಬಿಎಫ್‌ಸಿ ಶಾಖೆ: ನಿಯಮ ಸಡಿಲಿಕೆ

ಲೀಡ್ ಬ್ಯಾಂಕ್‌ನ ದತ್ತಾಂಶ ನಿರ್ವಹಣೆಗಾಗಿ ಏಕೀಕೃತ ಪೋರ್ಟಲ್ ಸ್ಥಾಪಿಸುವುದು, ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ (ಎನ್‌ಬಿಎಫ್‌ಸಿ) ಶಾಖೆ ತೆರೆಯುವ ಮಾನದಂಡಗಳನ್ನು ಸಡಿಲಿಸುವ ನಿರ್ಧಾರವನ್ನೂ ಆರ್‌ಬಿಐ ಕೈಗೊಂಡಿದೆ. ಕೆಲವು ಸುರಕ್ಷತಾ ಕ್ರಮಗಳೊಂದಿಗೆ ರಿಯಲ್ ಎಸ್ಟೇಟ್ ಹೂಡಿಕೆ ಟ್ರಸ್ಟ್‌ಗಳಿಗೆ (ಆರ್‌ಇಐಟಿ) ಸಾಲ ನೀಡಲು ಬ್ಯಾಂಕ್‌ಗಳಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಗವರ್ನರ್ ಮಲ್ಹೋತ್ರಾ ಹೇಳಿದರು.

ರೆಪೊ ದರ ಯಥಾಸ್ಥಿತಿ

ಒಂದನೇ ಪುಟದಿಂದ...

ಇತ್ತೀಚೆಗೆ ಐರೋಪ್ಯ ಒಕ್ಕೂಟದೊಂದಿಗೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದ ಮತ್ತು ಅಮೆರಿಕದೊಂದಿಗೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದಗಳು ಆರ್ಥಿಕ ಬೆಳವಣಿಗೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದ್ದು, ಮುಂದಿನ ಎರಡು ತ್ರೈಮಾಸಿಕಗಳಲ್ಲೂ ಜಿಡಿಪಿ ಬೆಳವಣಿಗೆ ದರ ಮೇಲ್ಮುಖವಾಗಿಯೇ ಇರಲಿದೆ ಎಂದು ಅಂದಾಜಿಸಿದೆ.

> **ಠೇವಣಿದಾರರು ತಮ್ಮ ಠೇವಣಿಗಳನ್ನು ಮರಳಿ ಪಡೆಯುವಂತೆ ಜಾಗೃತಿ ಅಭಿಯಾನ ನಡೆಸಿದ್ದರಿಂದ ಠೇವಣಿಗಳ ಹಿಂತೆಗೆತವು ವಾರ್ಷಿಕ ₹5 ಸಾವಿರ ಕೋಟಿಗೆ ಏರಿಕೆಯಾಗಿದೆ**
> **ಶಿರೀಶ್ ಮುರ್ಮು,** ಡೆಪ್ಯುಟಿ ಗವರ್ನರ್

377 ವಿಮಾನಗಳಲ್ಲಿ ಪದೇ ಪದೇ ದೋಷ

ಪ್ರಜಾವಾಣಿ ವಾರ್ತೆ

ನವದೆಹಲಿ: 2025ರ ಜನವರಿಯಿಂದ 377 ವಿಮಾನಗಳಲ್ಲಿ ಪುನರಾವರ್ತಿತ ದೋಷಗಳು ಕಂಡು ಬಂದಿವೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ಲೋಕಸಭೆಯಲ್ಲಿ ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ಮತ್ತಿತರರು ಕೇಳಿದ ಪ್ರಶ್ನೆಗೆ ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಲಿಖಿತ ಉತ್ತರ ನೀಡಿದ್ದಾರೆ. ವಿವಿಧ ಸಂಸ್ಥೆಗಳ 754 ವಿಮಾನಗಳನ್ನು ಪರಿಶೀಲನೆ ನಡೆಸಿದಾಗ ದೋಷಗಳು ಕಂಡು ಬಂದಿವೆ ಎಂದು ತಿಳಿಸಿದ್ದಾರೆ.

ವಿಮಾನಯಾನ ಸಂಸ್ಥೆ	ವಿಮಾನಗಳ ಪರಿಶೀಲನೆ	ಪುನರಾವರ್ತಿತ ದೋಷ
ಇಂಡಿಗೊ	405	148
ಏರ್ ಇಂಡಿಯಾ	166	137
ಏರ್ ಇಂಡಿಯಾ ಎಕ್ಸ್‌ಪ್ರೆಸ್	101	54
ಸ್ಪೈಸ್‌ಜೆಟ್	43	16
ಅಲಯನ್ಸ್ ಏರ್	7	8
ಆಕಾಶ ಏರ್	32	14
ಒಟ್ಟು	754	377

ನಿರ್ವಹಣಾ ವೆಚ್ಚದ ಬಳಿಕವೂ ಮಿಗತೆ ಆದಾಯ: ಅಶ್ವಿನಿ ವೈಷ್ಣವ್

‘ರೈಲ್ವೆ ಹಣಕಾಸು ಸ್ಥಿತಿಯಲ್ಲಿ ಸುಧಾರಣೆ’

ನವದೆಹಲಿ (ಪಿಟಿಐ): ‘ಕಳೆದ ಹತ್ತು ವರ್ಷಗಳಲ್ಲಿ ಭಾರತೀಯ ರೈಲ್ವೆಯ ಹಣಕಾಸು ಸ್ಥಿತಿ ಸಾಕಷ್ಟು ಸುಧಾರಿಸಿದೆ. ಇಲಾಖೆಯ ಎಲ್ಲ ವೆಚ್ಚಗಳನ್ನು ಭರಿಸಿದ ಬಳಿಕವೂ ಸಣ್ಣ ಪ್ರಮಾಣದ ಮಿಗತೆ ಆದಾಯ ಇದೆ’ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶುಕ್ರವಾರ ಹೇಳಿದ್ದಾರೆ.

‘2014–2024 ಅವಧಿಯಲ್ಲಿ 5.05 ಲಕ್ಷ ಉದ್ಯೋಗಗಳನ್ನು ಸೃಜಿಸಲಾಗಿದೆ. ಸರ್ಕಾರದ ಮೂರನೇ ಅವಧಿಯಲ್ಲಿ 1.5 ಲಕ್ಷ ಉದ್ಯೋಗಗಳ ಸೃಷ್ಟಿಯಾಗಿದೆ’ ಎಂದೂ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಗಳಿಗೆ ಅವರು ಉತ್ತರಿಸುವ ವೇಳೆ ಅವರು ಈ ಮಾಹಿತಿ ನೀಡಿದ್ದಾರೆ.

‘ಕಳೆದ ಹತ್ತು ವರ್ಷಗಳಲ್ಲಿ ವೆಚ್ಚಗಳಿಗೆ ಕಡಿವಾಣ ಹಾಕುವ ಜೊತೆಗೆ, ಸರಕು ಸಾಗಣೆ ಪ್ರಮಾಣ ಹೆಚ್ಚಿಸಲು, ಪ್ರಯಾಣಿಕರಿಂದ ಬರುವ ಆದಾಯ ಹೆಚ್ಚಳಕ್ಕೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ’ ಎಂದು ಅವರು ಬಿಜೆಪಿಯ ಸಂಸದ ಲಕ್ಷ್ಮೀಕಾಂತ ಬಾಜಪೇಯಿ ಅವರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಈಶಾನ್ಯ ಭಾಗದಲ್ಲಿ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿಗೆ ನಮ್ಮ ಸರ್ಕಾರ ಒತ್ತು ನೀಡಿದೆ. ಈ ಭಾಗಕ್ಕೆ, ಯುಪಿಎ ಆಡಳಿತದ ಅವಧಿಯಲ್ಲಿ ₹2 ಸಾವಿರ ಕೋಟಿಯಷ್ಟು ಹಂಚಿಕೆ ಮಾಡಲಾಗುತ್ತಿತ್ತು. ನಮ್ಮ ಸರ್ಕಾರ ಬಂದ ಬಳಿಕ ಈ ಮೊತ್ತವನ್ನು ₹11,486 ಕೋಟಿಗೆ ಹೆಚ್ಚಿಸಲಾಗಿದೆ’ ಎಂದು ಹೇಳಿದರು.

> **ಎಲ್ಲ ರೈಲು ಮಾರ್ಗಗಳ ವಿದ್ಯುದ್ದೀಕರಣ ಕಾರ್ಯ ಪೂರ್ಣಗೊಳಿಸಿರುವ ಕಾರಣ ಇಂಧನಕ್ಕೆ ತಗಲುವ ವೆಚ್ಚವನ್ನು ತಗ್ಗಿಸಲು ಸಾಧ್ಯವಾಗಿದೆ. ಪರಿಸರಕ್ಕೆ ಆಗುವ ಹಾನಿಯೂ ಕಡಿಮೆಯಾಗಿದೆ**
> **ಅಶ್ವಿನಿ ವೈಷ್ಣವ್,** ಕೇಂದ್ರ ರೈಲ್ವೆ ಸಚಿವ

ಪ್ರಮುಖ ಅಂಶಗಳು

- ರೈಲ್ವೆಯ 12 ಲಕ್ಷ ಉದ್ಯೋಗಿಗಳ ವೇತನ ಹಾಗೂ ಇತರ ಭತ್ಯೆಗಳಿಗೆ ವರ್ಷಕ್ಕೆ ತಗಲುವ ವೆಚ್ಚ ₹1.18 ಲಕ್ಷ ಕೋಟಿ
- 18 ಲಕ್ಷ ನಿವೃತ್ತ ನೌಕರರ ಪಿಂಚಣಿಗೆ ವಾರ್ಷಿಕ ₹65 ಸಾವಿರ ಕೋಟಿ ವೆಚ್ಚ
- ಇಂಧನಕ್ಕಾಗಿ ₹32 ಸಾವಿರ ಕೋಟಿ, ನಿರ್ವಹಣೆಗೆ ₹8 ಸಾವಿರ ಕೋಟಿ ವೆಚ್ಚ
- ನಾಲ್ಕು ವರ್ಷಗಳ ಹಿಂದೆ ಇಂಧನ ವೆಚ್ಚ ₹37,841 ಕೋಟಿ ಇದ್ದದ್ದು ಈಗ ₹32,400 ಕೋಟಿಗೆ ತಗ್ಗಿದೆ
- ಎಲ್ಲ ವರ್ಗದ ಪ್ರಯಾಣಿಕರಿಗೆ ನೀಡುವ ವಾರ್ಷಿಕ ಸಬ್ಸಿಡಿ ಮೊತ್ತ ₹60 ಸಾವಿರ ಕೋಟಿ


ರೈಲ್ವೆ: ಗುಜರಾತ್, ರಾಜಸ್ಥಾನಕ್ಕಿಂತಲೂ ಕರ್ನಾಟಕಕ್ಕೆ ಕಡಿಮೆ ಅನುದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಈ ಸಲದ ಕೇಂದ್ರ ಬಜೆಟ್‌ನಲ್ಲಿ ರೈಲ್ವೆ ಯೋಜನೆಗಳ ಅನುಷ್ಠಾನಕ್ಕಾಗಿ ಗುಜರಾತ್, ರಾಜಸ್ಥಾನಕ್ಕಿಂತಲೂ ಕರ್ನಾಟಕಕ್ಕೆ ಕಡಿಮೆ ಅನುದಾನ ಸಿಕ್ಕಿದೆ.

ಜಿಎಸ್‌ಟಿ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿರುವ ರಾಜ್ಯವು ರೈಲ್ವೆ ಅನುದಾನ ಪಡೆದಿರುವ ರಾಜ್ಯಗಳ ಪಟ್ಟಿಯಲ್ಲಿ 11ನೇ ಸ್ಥಾನದಲ್ಲಿದೆ. ಗುಜರಾತ್‌ಗೆ ₹17,366 ಕೋಟಿ, ರಾಜಸ್ಥಾನಕ್ಕೆ ₹10,228 ಕೋಟಿ ಅನುದಾನ ಹಂಚಿಕೆಯಾಗಿದ್ದರೆ, ರಾಜ್ಯಕ್ಕೆ ನೀಡಿರುವುದು ₹7,748 ಕೋಟಿ.

ರಾಜ್ಯವಾರು ಅನುದಾನ ಹಂಚಿಕೆ (₹ಕೋಟಿಗಳಲ್ಲಿ)





ಭಾರತದ ಮೇಲೆ ನಿರೀಕ್ಷೆ ಅಪಾರ

ಮುಂಬೈಯಲ್ಲಿ ಸೂರ್ಯ ಪಡೆ–ಅಮೆರಿಕ ಹಣಾಹಣಿ ಇಂದು; ಅಭಿಷೇಕ್ ಮೇಲೆ ಚಿತ್ತ

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಅರಬ್ಬೀ ಸಮುದ್ರದಿಂದ ಬೀಸುವ ಗಾಳಿಯಲ್ಲಿ ಈಗ ಕ್ರಿಕೆಟ್ ಕಂಪು ತೇಲಿ ಬರುತ್ತಿದೆ. 'ಸ್ಥಳೀಯ ಹೀರೊ' ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡದ ಕೋಟಿ ಕೋಟಿ ಅಭಿಮಾನಿಗಳ ನಿರೀಕ್ಷೆಗಳ ನೋಟವೂ ನೆಟ್ಟಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾಗಲಿರುವ ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು ಉತ್ಸಾಹಿ ಆಟಗಾರರ ಅಮೆರಿಕ ಪಡೆಯನ್ನು ಎದುರಿಸಲಿದೆ. 'ಹಾಲಿ ಚಾಂಪಿಯನ್' ಆಗಿರುವ ಭಾರತಕ್ಕೆ ಸತತ ಎರಡನೇ ಬಾರಿ ಟಿ20 ಕಿರೀಟ ಧರಿಸಿದ ಸಾಧನೆ ಮಾಡುವ ತಂಡವಾಗಿ ಹೊರಹೊಮ್ಮುವ ಅವಕಾಶ ಇದೆ. ಅಲ್ಲದೇ ತವರಿನಂಗಳದಲ್ಲಿ ಟಿ20 ಟ್ರೋಫಿ ಜಯಿಸಿದ ಪ್ರಥಮ ತಂಡವಾಗುವ ನಿರೀಕ್ಷೆಯೂ ಸೂರ್ಯ ಪಡೆ ಮೇಲೆ ಇದೆ.

ರೋಹಿತ್ ಶರ್ಮಾ ನಾಯಕತ್ವದಲ್ಲಿ 2024ರಲ್ಲಿ ತಂಡವು ಚಾಂಪಿಯನ್ ಆಗಿತ್ತು. ಭಾರತ ತಂಡದ ಇಬ್ಬರು ಆಧಾರ ಸ್ತಂಭಗಳಾಗಿದ್ದ ರೋಹಿತ್ ಮತ್ತು ವಿರಾಟ್ ಕೊಹ್ಲಿ ಅವರು ನಿವೃತ್ತಿಯಾಗಿದ್ದಾರೆ. ಆದ್ದರಿಂದ ಅವರ ಸ್ಥಾನವನ್ನು ತುಂಬುವ ಅವಕಾಶ ಯುವ ಆಟಗಾರರಿಗೆ ಇದೆ. ನ್ಯೂಜಿಲೆಂಡ್ ಎದುರಿನ ಟಿ20 ಸರಣಿಯಲ್ಲಿ ಅಬ್ಬರದ ಬ್ಯಾಟಿಂಗ್ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮರಳಿರುವ ವಿಕೆಟ್‌ಕೀಪರ್ ಇಶಾನ್ ಕಿಶನ್ ಹಾಗೂ ನಿರ್ಭೀತ ಬ್ಯಾಟರ್ ಅಭಿಷೇಕ್ ಶರ್ಮಾ ಮೇಲೆ ಈಗ ಎಲ್ಲರ ಕಣ್ಣು ನೆಟ್ಟಿದೆ. ಇವರಿಬ್ಬರೂ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ.

ಗಾಯದಿಂದ ಚೇತರಿಸಿಕೊಂಡಿರುವ ತಿಲಕ್ ವರ್ಮಾ ಮೂರನೇ ಹಾಗೂ ಲಯಕ್ಕೆ ಮರಳಿರುವ ಸೂರ್ಯ ನಾಲ್ಕನೇ ಕ್ರಮಾಂಕದಲ್ಲಿದ್ದಾರೆ. ಬೌಲರ್‌ಗಳಿಗೆ ಈ ನಾಲ್ವರಷ್ಟೇ ಕಠಿಣ ಸವಾಲು ಅಲ್ಲ. ರಿಂಕು ಸಿಂಗ್, ಆಲ್‌ರೌಂಡರ್‌ಗಳಾದ ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್ ಹಾಗೂ ವಾಷಿಂಗ್ಟನ್ ಸುಂದರ್ ಕೂಡ ಈ ಸಾಲಿನಲ್ಲಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಸಾರಥ್ಯದ ಬೌಲಿಂಗ್ ಪಡೆಗೆ ಈಗ ಮೊಹಮ್ಮದ್ ಸಿರಾಜ್ ಕೂಡ ಸೇರ್ಪಡೆಯಾಗಿದ್ದಾರೆ. ಗಾಯಗೊಂಡಿರುವ ಹರ್ಷಿತ್ ರಾಣಾ ಬದಲಿಗೆ ಸಿರಾಜ್ ಆಡುವುದು ಬಹುತೇಕ ಖಚಿತವಾಗಿದೆ. ಎಡಗೈ ವೇಗಿ ಅರ್ಷದೀಪ್ ಸಿಂಗ್, ಸ್ಪಿನ್ ಜೋಡಿ ಕುಲದೀಪ್ ಯಾದವ್ ಮತ್ತು ವರುಣ್ ಚಕ್ರವರ್ತಿ ತಮ್ಮ ಮೋಡಿ ತೋರಲು ಸಿದ್ಧರಾಗಿದ್ದಾರೆ.

ಹೋದ ಸಲದ ವಿಶ್ವಕಪ್ ಟೂರ್ನಿಯಲ್ಲಿ ಅಚ್ಚರಿಯ ಫಲಿತಾಂಶ ನೀಡಿದ್ದ ಅಮೆರಿಕ ತಂಡದಲ್ಲಿ ಬಹುತೇಕ ಭಾರತೀಯ ಆಟಗಾರರೇ ಇದ್ದಾರೆ. ಅವರೀಗ ತಮ್ಮ ತಾಯ್ನೆಲದಲ್ಲಿ ಭಾರತ ತಂಡದ ಎದುರು ಆಡಲಿದ್ದಾರೆ. ನಾಯಕ ಮೊನಾಂಕ್ ಪಟೇಲ್ ಅವರ ಸಾರಥ್ಯದ ತಂಡವು ಸವಾಲೆಸೆಯಲು ಸಿದ್ಧವಾಗಿದೆ. ಅದರಲ್ಲಿ ಕನ್ನಡಿಗ ನಾಸ್ತುಷ್ ಕೆಂಜಿಗೆ ಕೂಡ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಅನುಭವ ಮತ್ತು ಸಾಮರ್ಥ್ಯದಲ್ಲಿ ಭಾರತವೇ ಗೆಲುವಿನ ನೆಚ್ಚಿನ ತಂಡ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅಮೆರಿಕವು ಕಠಿಣ ಪೈಪೋಟಿಯೊಡ್ಡಿದರೆ ಅಚ್ಚರಿಪಡಬೇಕಿಲ್ಲ. ಟಾಸ್ ಗೆದ್ದ ತಂಡವು ತೆಗೆದುಕೊಳ್ಳುವ ನಿರ್ಧಾರವೂ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.





ಇಶಾನ್ ಕಿಶನ್ (ಎಡ), ಅರ್ಷದೀಪ್ ಸಿಂಗ್ ಮತ್ತು ಸೂರ್ಯಕುಮಾರ್ ಯಾದವ್ ತಾಲೀಮು ಪಿಟಿಐ ಚಿತ್ರ

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಇಶಾನ್ ಕಿಶನ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ರಿಂಕು ಸಿಂಗ್, ಅಕ್ಷರ್ ಪಟೇಲ್ (ಉಪನಾಯಕ), ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ವರುಣ ಚಕ್ರವರ್ತಿ
ಅಮೆರಿಕ: ಮೊನಾಂಕ್ ಪಟೇಲ್ (ನಾಯಕ), ಆ್ಯಂಡ್ರೆಸ್ ಗೌಸ್ (ವಿಕೆಟ್‌ಕೀಪರ್), ಸಾಯಿತೇಜ್ ಮುಕ್ಕಮಲ್ಲಾ, ಶಯಾನ್ ಜಹಾಂಗೀರ್, ಹರಮೀತ್ ಸಿಂಗ್, ಶಿಹಾನ್ ಜಯಸೂರ್ಯ, ಸಂಜಯ್ ಕೃಷ್ಣಮೂರ್ತಿ, ಮಿಲಿಂದ್ ಕುಮಾರ್, ಮೊಹಮ್ಮದ್ ಮೊಹ್ಸಿನ್, ಶುಭಂ ರಾಂಜಣೆ, ಶ್ಯಾಡ್ಲಿ ವ್ಯಾನ್ ಶಾಲ್ಕ್‌ವೈಕ್, ಅಲಿ ಖಾನ್, ಜಸ್‌ದೀಪ್ ಸಿಂಗ್, ನಾಸ್ತುಷ್ ಕೆಂಜಿಗೆ, ಸೌರಭ್ ನೇತ್ರಾವಳ್ಕರ್
ಪಂದ್ಯ ಆರಂಭ: ರಾತ್ರಿ 7, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್ ಆ್ಯಪ್

ವಿಂಡೀಸ್‌ಗೆ ಸ್ಕಾಟ್ಲೆಂಡ್ ಸವಾಲು

ಕೊನೆಗಳಿಗೆಯಲ್ಲಿ ಅವಕಾಶ ಪಡೆದ ಯುರೋಪಿನ ತಂಡ

ಕೋಲ್ಕತ್ತ (ಪಿಟಿಐ): ಕೊನೆಯ ಗಳಿಗೆಯಲ್ಲಿ ಆಡುವ ಅವಕಾಶ ಪಡೆದಿರುವ ಸ್ಕಾಟ್ಲೆಂಟ್ ತಂಡ, ಈಡನ್‌ಗಾರ್ಡನ್‌ನಲ್ಲಿ ಶನಿವಾರ ನಡೆಯುವ ಟಿ20 ವಿಶ್ವಕಪ್ 'ಸಿ' ಗುಂಪಿನ ಪಂದ್ಯದಲ್ಲಿ ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ.

ಭದ್ರತೆಯ ಕಳವಳ ವ್ಯಕ್ತಪಡಿಸಿ ಭಾರತದಲ್ಲಿ ಆಡಲು ನಿರಾಕರಿಸಿದ ಬಾಂಗ್ಲಾದೇಶ ತಂಡವನ್ನು ಐಸಿಸಿ ಹೊರಗಟ್ಟಿತ್ತು. ಕೇವಲ ಎರಡು ವಾರ ಇರುವಾಗ, ರ‍್ಯಾಂಕಿಂಗ್ ಆಧಾರದಲ್ಲಿ ಸ್ಕಾಟ್ಲೆಂಡ್ ಅವಕಾಶ ಗಿಟ್ಟಿಸಿದೆ.

ಈ ಅನಿರೀಕ್ಷಿತ ಅವಕಾಶದಲ್ಲಿ ಪ್ರಬಲ ಎದುರಾಳಿ ತಂಡದ ಎದುರು ಉತ್ತಮ ಪ್ರದರ್ಶನ ತೋರುವ ಅವಕಾಶ ಸ್ಕಾಟ್ಲೆಂಡ್‌ಗೆ ಇದೆ.

ಸ್ಕಾಟ್ಲೆಂಡ್ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಆಸ್ಟ್ರೇಲಿಯಾದಲ್ಲಿ ನಡೆದ 2022ರ ಟಿ20 ವಿಶ್ವಕಪ್‌ನಲ್ಲಿ ಯುರೋಪಿನ ಈ ತಂಡ, ವೆಸ್ಟ್ ಇಂಡೀಸ್ ತಂಡಕ್ಕೆ 42 ರನ್‌ಗಳಿಂದ ಹೊಡೆತ ನೀಡಿತ್ತು. 2023ರ ಏಕದಿನ ವಿಶ್ವಕಪ್ ಅರ್ಹತಾ ಪಂದ್ಯದಲ್ಲೂ ವೆಸ್ಟ್ ಇಂಡೀಸ್‌ಗೆ ಏಳು ವಿಕೆಟ್‌ಗಳ ಆಘಾತ ನೀಡಿತ್ತು. ಇದು ತಂಡದ ವಿಶ್ವಾಸಕ್ಕೆ ಕಾರಣವಾಗಿದೆ.

ನ್ಯೂಜಿಲೆಂಡ್ ಮೂಲದ ಬ್ಯಾಟರ್ ಟಾಮ್ ಬ್ರೂಸ್, ಅಫ್ಗಾನಿಸ್ತಾನ ಸಂಜಾತ ವೇಗದ ಬೌಲರ್ ಜೈನುಲ್ಲಾ ಖಾನ್, ಆಕ್ರಮಣಕಾರಿ ಆಟಗಾರ ಬ್ರೆಂಡನ್ ಮೆಕ್‌ಮುಲೆನ್ ಹಾಗೂ ಎಡಗೈ ಸ್ಪಿನ್ನರ್ ಮಾರ್ಕ್ ವಾಟ್ ಸ್ಕಾಟ್ಲೆಂಡ್ ತಂಡದ ಅನುಭವಿಗಳಾಗಿದ್ದಾರೆ.

ಇದೇ ಕ್ರೀಡಾಂಗಣದಲ್ಲಿ ಹತ್ತು ವರ್ಷಗಳ ಹಿಂದೆ ಕೊನೆಯ ಬಾರಿ ವಿಶ್ವಕಪ್ ವಿಜೇತರಾದ ವೆಸ್ಟ್ ಇಂಡೀಸ್ ಅಸ್ಥಿರ ಪ್ರದರ್ಶನಕ್ಕೆ ಹೆಸರಾದರೂ, ಅಮೋಘ ಆಟವಾಡುವ ಸಾಮರ್ಥ್ಯ ಹೊಂದಿದೆ.

ಶೆರ್ಫೇನ್ ರುದರ್‌ಫೋರ್ಡ್ ಮತ್ತು ಶಾಯ್ ಹೋಪ್ (276) ಅವರು ಒಳ್ಳೆಯ ಲಯದಲ್ಲಿರುವ ಬ್ಯಾಟರ್‌ಗಳು. ಶಮರ್ ಜೋಸೆಫ್ ಮತ್ತು ಅಖೀಲ್ ಹುಸೇನ್ ಅವರು ವೇಗದ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.



ವೆಸ್ಟ್ ಇಂಡೀಸ್ ತಂಡದ ಆಟಗಾರರು ಶುಕ್ರವಾರ ತಾಲೀಮು ನಡೆಸಿದರು ಪಿಟಿಐ ಚಿತ್ರ

ಪಾಕಿಸ್ತಾನ–ನೆದರ್ಲೆಂಡ್ಸ್ ಮುಖಾಮುಖಿ

ಸಲ್ಮಾನ್ ಆಘಾ ನಾಯಕತ್ವದ ಪಾಕಿಸ್ತಾನ ತಂಡವು ಈ ಬಾರಿಯ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶನಿವಾರ ಎ ಗುಂಪಿನಲ್ಲಿ ಮೊದಲ ಪಂದ್ಯ ಆಡಲಿದೆ.

ಸ್ಕಾಟ್ ಎಡ್ವರ್ಡ್ಸ್ ನಾಯಕತ್ವದ ನೆದರ್ಲೆಂಡ್ಸ್ ಎದುರು ಪಾಕ್ ಕಣಕ್ಕಿಳಿಯಲಿದೆ. ಪಾಕ್ ತಂಡದಲ್ಲಿ ಅನುಭವಿ ಫಕಾರ್ ಜಮಾನ್, ಬಾಬರ್ ಆಜಂ ಅವರು ಬ್ಯಾಟಿಂಗ್ ವಿಭಾಗದ ಪ್ರಮುಖ ಆಟಗಾರರಾಗಿದ್ದಾರೆ. ಆಲ್‌ರೌಂಡರ್‌ಗಳಾದ ಮೊಹಮ್ಮದ್ ನವಾಜ್, ಶಾದಾಬ್ ಖಾನ್ ಅವರು ಮಧ್ಯಮ ಕ್ರಮಾಂಕದಲ್ಲಿ ಶಕ್ತಿಯಾಗಿದ್ದಾರೆ. ಶಾಹಿನ್ ಆಫ್ರಿದಿ ಸಾರಥ್ಯದ ಬೌಲಿಂಗ್ ಪಡೆಯಲ್ಲಿ ನಸೀಂ ಶಾ, ಅಬ್ರಾರ್ ಅಹಮದ್ ಅವರಿದ್ದಾರೆ. ಮುಖ್ಯ ಕೋಚ್ ಮೈಕ್ ಹೆಸನ್ ಅವರ ಮಾರ್ಗದರ್ಶನದಲ್ಲಿ ತಂಡವು ಸಿದ್ಧಗೊಂಡಿದೆ.

ಇದೇ 15ರಂದು ಭಾರತ ತಂಡದ ಎದುರಿನ ಪಂದ್ಯದಲ್ಲಿ ತಮ್ಮ ದೇಶದ ತಂಡವು ಆಡುವುದಿಲ್ಲ ಎಂದು ಪಾಕಿಸ್ತಾನ ಸರ್ಕಾರವು ಈಚೆಗೆ ಹೇಳಿದೆ. ಪಾಕ್ ತಂಡವು ಒಂದೊಮ್ಮೆ ಭಾರತದ ಎದುರು ಆಡದಿದ್ದರೆ ಎರಡು ಅಂಕ ಕಳೆದುಕೊಳ್ಳಲಿದೆ. ಆದ್ದರಿಂದ ಸೂಪರ್ 8 ಹಂತ ಪ್ರವೇಶಿಸಲು ಉಳಿದ ಪಂದ್ಯಗಳಲ್ಲಿ ಗೆಲುವು ಅಗತ್ಯವಾಗಿದೆ.

ಆದರೆ ಎರಡು ವರ್ಷಗಳ ಹಿಂದೆ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ಅಮೆರಿಕದ ವಿರುದ್ಧ ಆಘಾತ ಅನುಭವಿಸಿತ್ತು.

ಆದ್ದರಿಂದ ಯಾವುದೇ ತಂಡವನ್ನೂ ಇಲ್ಲಿ ಹಗುರವಾಗಿ ಪರಿಗಣಿಸುವಂತಿಲ್ಲ.

ಪಂದ್ಯ ಆರಂಭ: ಬೆಳಿಗ್ಗೆ 11.

ಭರವಸೆ, ಉತ್ಸಾಹದಲ್ಲಿ ನಮೀಬಿಯಾ, ಇಟಲಿ

● ಬಾಲರಾಜ್.ಎಸ್

ಆತಿಥೇಯ ಭಾರತ ಮತ್ತು ಶ್ರೀಲಂಕಾ ಸೇರಿದಂತೆ ಜಗತ್ತಿನ 20 ರಾಷ್ಟ್ರಗಳು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾಗವಹಿಸುತ್ತಿವೆ. ಈ ಪೈಕಿ 10 ರಾಷ್ಟ್ರಗಳು ಐಸಿಸಿಯ ಪೂರ್ಣ ಸದಸ್ಯತ್ವವನ್ನು ಹೊಂದಿದ್ದು ಉಳಿದವು ಸಹಸದಸ್ಯ ರಾಷ್ಟ್ರಗಳಾಗಿವೆ. ಐಸಿಸಿಯ ಪೂರ್ಣ ಸದಸ್ಯತ್ವ ಹೊಂದಿರುವ ಬಾಂಗ್ಲಾದೇಶ ತಂಡವು ಭಾರತದಲ್ಲಿ ಭದ್ರತೆಗೆ ಸಂಬಂಧಿಸಿ ಅಪಾಯವಿದೆ ಎಂದು ದೂರಿ, ಟೂರ್ನಿಯಿಂದ ಹಿಂದೆಸರಿದಿದೆ. ಬಾಂಗ್ಲಾ ಬದಲಿಗೆ ಸ್ಕಾಟ್ಲೆಂಡ್ ಅವಕಾಶ ಪಡೆದಿದೆ. 'ಕ್ರಿಕೆಟ್ ಲೋಕ'ದಲ್ಲಿ ಅಷ್ಟೇನೂ ಪರಿಚಿತವಲ್ಲದ ತಂಡಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ...

● **ನಮೀಬಿಯಾ:** ಪ್ರಾದೇಶಿಕ ಅರ್ಹತಾ ಟೂರ್ನಿಯ ಮೂಲಕ ಆಫ್ರಿಕಾ ಖಂಡದಿಂದ ಟಿ20 ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿಕೊಂಡಿರುವ ನಮೀಬಿಯಾ, ಕ್ರಿಕೆಟ್ ಜಗತ್ತಿನಲ್ಲಿ ಅಂಬೆಗಾಲಿಡುತ್ತಿರುವ ದೇಶಗಳಲ್ಲೊಂದು. 1992ರಿಂದ ಐಸಿಸಿಯ ಸಹ ಸದಸ್ಯತ್ವವನ್ನು ಹೊಂದಿದ್ದು, 2021, 2022 ಹಾಗೂ 2024ರ ಟಿ20 ವಿಶ್ವಕಪ್ ಆವೃತ್ತಿಗಳಲ್ಲಿ ಭಾಗವಹಿಸಿದೆ. 2025ರಲ್ಲಿ ನಡೆದ ಐಸಿಸಿ ಆಫ್ರಿಕಾ ಅರ್ಹತಾ ಟೂರ್ನಿಯಲ್ಲಿ ಫೈನಲ್ ತಲುಪಿದೆ. 2021ರಲ್ಲಿ ಸೂಪರ್ 12ರ ಸುತ್ತಿಗೆ ಪ್ರವೇಶ ಪಡೆದು ಗಮನ ಸೆಳೆದಿದ್ದ ನಮೀಬಿಯಾ, ಈ ಬಾರಿಯೂ ಉತ್ತಮ ಪ್ರದರ್ಶನ ನೀಡುವ ಉತ್ಸಾಹದಲ್ಲಿದೆ.

● **ಕೆನಡಾ:** ಐಸಿಸಿ ಅಮೆರಿಕ ಪ್ರಾದೇಶಿಕ ಅರ್ಹತಾ ಟೂರ್ನಿಯಲ್ಲಿ ಆರೂ ಪಂದ್ಯ ಗೆದ್ದು ಅಜೇಯವಾಗಿ ಟ್ರೋಫಿ ಜಯಿಸಿದ್ದ ಕೆನಡಾ ತಂಡವು ವಿಶ್ವಾಸಾರ್ಹ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಬಹುತೇಕ ಭಾರತ ಮೂಲದ ಆಟಗಾರರನ್ನೇ ಹೊಂದಿರುವ ಈ ತಂಡವು 2024ರ ವಿಶ್ವಕಪ್‌ನಲ್ಲೂ ಆಡಿತ್ತು. 22 ವರ್ಷ ವಯಸ್ಸಿನ, ಭಾರತ ಮೂಲದ ದಿಲ್‌ಪ್ರೀತ್ ಬಾಜ್ವಾ ತಂಡವನ್ನು ಮುನ್ನಡೆಸುತ್ತಿದ್ದಾರೆ. ಬಲಗೈ ಸ್ಪಿನ್ನರ್ ಶಿವಂ ಶರ್ಮಾ ಹಾಗೂ ಎಡಗೈ ಬ್ಯಾಟರ್ ಯುವರಾಜ್ ಸಾಮ್ರಾ ಉತ್ತಮ ಆಟದ ವಿಶ್ವಾಸದಲ್ಲಿದ್ದಾರೆ.

● **ಇಟಲಿ:** ಕ್ರಿಕೆಟ್ ಆಟವು ಅಷ್ಟೇನೂ ಪರಿಚಯವಿರದ ಇಟಲಿ, ಚೊಚ್ಚಲ ಬಾರಿಗೆ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿದೆ. ಐಸಿಸಿ ಯುರೋಪಿಯನ್ ಅರ್ಹತಾ ಟೂರ್ನಿಯ ಫೈನಲ್‌ನಲ್ಲಿ ನೆದರ್ಲೆಂಡ್ಸ್ ವಿರುದ್ಧ ಸೋಲನುಭವಿಸಿದರೂ, ನೆಟ್ ರನ್ ರೇಟ್ ಆಧಾರದಲ್ಲಿ ಅರ್ಹತೆ ಪಡೆದುಕೊಂಡಿದೆ. ಸಿ ಗುಂಪಿನಲ್ಲಿರುವ ಇಟಲಿ, ಮುಖ್ಯ ಸುತ್ತಿಗೆ ಪ್ರವೇಶಿಸಲು ಬಲಿಷ್ಠ ತಂಡಗಳಾದ ಇಂಗ್ಲೆಂಡ್ ಹಾಗೂ ವೆಸ್ಟ್ ಇಂಡೀಸ್ ಜೊತೆಗೆ ಪೈಪೋಟಿ ನಡೆಸಬೇಕಿದೆ. 42 ವರ್ಷ ವಯಸ್ಸಿನ ಅನುಭವಿ ಆಟಗಾರ ವೇಯ್ನ್ ಮ್ಯಾಡ್ಸನ್ ನಾಯಕರಾಗಿದ್ದು, ತಂಡದ ಆಧಾರ ಸ್ತಂಭವೂ ಹೌದು.

● **ಸ್ಕಾಟ್ಲೆಂಡ್:** ಸ್ಕಾಟ್ಲೆಂಡ್ ತಂಡವು ಟಿ20 ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯುವಲ್ಲಿ ವಿಫಲವಾದರೂ, ಅಂತಿಮ ಕ್ಷಣದಲ್ಲಿ ಟೂರ್ನಿಯಿಂದ ಹಿಂದೆ ಸರಿದ ಬಾಂಗ್ಲಾದೇಶದ ಬದಲಿಗೆ ಸ್ಥಾನ ಗಿಟ್ಟಿಸಿಕೊಂಡಿದೆ. ಐಸಿಸಿ ಟಿ20 ಟೀಮ್ ರ‍್ಯಾಂಕಿಂಗ್‌ನಲ್ಲಿ 14ನೇ ಸ್ಥಾನ ಹೊಂದಿರುವ ಸ್ಕಾಟ್ಲೆಂಡ್, ಐದು ತಂಡಗಳು ಭಾಗವಹಿಸಿದ್ದ ಯುರೋಪಿಯನ್ ಅರ್ಹತಾ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು. ಆದರೂ, ಗುಂಪು ಹಂತದ ಪಂದ್ಯದಲ್ಲಿ ಬಲಿಷ್ಠ ನೆದರ್ಲೆಂಡ್ಸ್ ತಂಡವನ್ನು 6 ರನ್ ಗಳಿಂದ ಮಣಿಸಿ, ಗಮನ ಸೆಳೆದಿತ್ತು.

● **ಅಮೆರಿಕ:** 2024ರ ಆವೃತ್ತಿಯಲ್ಲಿ ಪಾಕಿಸ್ತಾನಕ್ಕೆ ಆಘಾತ ನೀಡಿ, ಸೂಪರ್ 8ರ ಸುತ್ತಿಗೆ ಪ್ರವೇಶಿಸಿದ್ದ ಅಮೆರಿಕ ತಂಡವು ಈ ಬಾರಿಯೂ ಅಂಥದ್ದೇ ಅನಿರೀಕ್ಷಿತ ಸಾಧನೆಯ ಛಲದಲ್ಲಿದೆ. ಎಡಗೈ ಸ್ಪಿನ್ನರ್ ನೋಷ್ತುಷ್ ಕೆಂಜಿಗೆ ಹಾಗೂ ಎಡಗೈ ವೇಗಿ ಸೌರಭ್ ನೇತ್ರಾವಳ್ಕರ್ ಅವರಂತಹ ವಿಶ್ವಾಸಾರ್ಹ ಬೌಲರ್‌ಗಳು ತಂಡದಲ್ಲಿದ್ದಾರೆ. ಕಳೆದ ಆವೃತ್ತಿಯಲ್ಲಿ ನಾಯಕರಾಗಿದ್ದ ಮೊನಾಂಕ್ ಪಟೇಲ್ ಅವರೇ ಈ ಬಾರಿಯೂ ತಂಡವನ್ನು ಮುನ್ನಡೆಸಲಿದ್ದಾರೆ. ಎ ಗುಂಪಿನಲ್ಲಿರುವ ಅಮೆರಿಕ, ಭಾರತ ತಂಡದ ವಿರುದ್ಧ ಶನಿವಾರ ನಡೆಯಲಿರುವ ಪಂದ್ಯದ ಮೂಲಕ ಅಭಿಯಾನ ಆರಂಭಿಸಲಿದೆ.

ಡೇವಿಸ್ ಕಪ್ ಕ್ವಾಲಿಫೈಯರ್ಸ್ ಇಂದಿನಿಂದ

ಬೆಂಗಳೂರು: ಭಾರತ–ನೆದರ್ಲೆಂಡ್ಸ್ ನಡುವಣ ಡೇವಿಸ್ ಕಪ್ ಕ್ವಾಲಿಫೈಯರ್ಸ್ ಮೊದಲ ಸುತ್ತಿನ ಮುಖಾಮುಖಿ ಇಲ್ಲಿನ ಎಸ್.ಎಂ.ಕೃಷ್ಣ ಕ್ರೀಡಾಂಗಣದಲ್ಲಿ ಶನಿವಾರ ಮತ್ತು ಭಾನುವಾರ ನಡೆಯಲಿದೆ. ಶುಕ್ರವಾರ ಡ್ರಾ ಕಾರ್ಯಕ್ರಮ ನಡೆಯಿತು.

ಗಾಯದಿಂದ ಚೇತರಿಸಿಕೊಂಡಿರುವ ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಾಗಲ್ ಅವರು ಈ ಕಾರ್ಯಕ್ರಮದ ಆಕರ್ಷಣೆಯಾಗಿದ್ದರು. ನೆದರ್ಲೆಂಡ್ಸ್ ಎದುರಿನ ಪಂದ್ಯಗಳಿಗೆ ಅವರು ಲಭ್ಯವಿರುವುದಾಗಿ ಭಾರತ ತಂಡ ಖಚಿತಪಡಿಸಿತು.

ಶನಿವಾರ ನಡೆಯಲಿರುವ ಸಿಂಗಲ್ಸ್‌ನ ಮೊದಲ ಪಂದ್ಯದಲ್ಲಿ, 28 ವರ್ಷ ವಯಸ್ಸಿನ ನಾಗಲ್ ಅವರು ವಿಶ್ವ ಕ್ರಮಾಂಕದಲ್ಲಿ 162ನೇ ಸ್ಥಾನದಲ್ಲಿರುವ ಗಯ್ ಡೆನ್ ಔಡೆನ್ ಅವರನ್ನು ಎದುರಿಸಲಿದ್ದಾರೆ. 2025ರ ಪ್ರಾಗ್ ಚಾಲೆಂಜರ್ ಟೂರ್ನಿಯಲ್ಲಿ ಡಚ್ ಆಟಗಾರ 6-1, 6-1ರಿಂದ ನಾಗಲ್ ಅವರನ್ನು ನಿರಾಯಾಸವಾಗಿ ಮಣಿಸಿದ್ದರು. ಭಾರತ ತಂಡದ ಪಾಲಿಗೆ ದಕ್ಷಿಣೇಶ್ವರ ಸುರೇಶ್ ಅವರ ಪಾತ್ರ ನಿರ್ಣಾಯಕವಾಗಿದ್ದು, 6 ಅಡಿ 5 ಇಂಚು ಎತ್ತರದ ಈ ಆಟಗಾರ ಸಿಂಗಲ್ಸ್ ಎರಡನೇ ಪಂದ್ಯದಲ್ಲಿ ಎದುರಾಳಿ ತಂಡದ ನಾಯಕ ಜೆಸ್ಪರ್ ಡಿ ಜಾಂಗ್ ಅವರನ್ನು ಎದುರಿಸಲಿದ್ದಾರೆ.

ಭಾನುವಾರ ನಡೆಯಲಿರುವ ಡಬಲ್ಸ್ ಪಂದ್ಯಗಳಲ್ಲಿ ಯೂಕಿ ಭಾಂಬ್ರಿ- ಶ್ರೀರಾಮ್ ಬಾಲಾಜಿ ಮೇಲೆ ಆತಿಥೇಯರು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಋತ್ವಿಕ್ ಬೊಲ್ಲಿಪಲ್ಲಿ ಅವರು ಭಾಂಬ್ರಿ ಅವರ ಜೊತೆಗಾರನಾಗಿ ಕಣಕ್ಕಿಳಿಯುವ ನಿರೀಕ್ಷೆಯಿತ್ತು. ಆದರೆ, 'ಬಾಲಾಜಿ ಅವರು ವಿವಿಧ ಟೂರ್ನಿಗಳಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿದ್ದು, ಅವರ ಮೇಲೆ ವಿಶ್ವಾಸವಿಟ್ಟಿರುವೆ' ಎಂದು ಭಾರತ ತಂಡದ ನಾಯಕ ರೋಹಿತ್ ರಾಜ್‌ಪಾಲ್ ತಿಳಿಸಿದರು.



ಜೆಸ್ಪರ್ ಡಿ ಜಾಂಗ್ ಹಾಗೂ ಭಾರತದ ಸುಮಿತ್ ನಾಗಲ್

ಜಲಂಧರ್: ಆಪ್ ನಾಯಕನಿಗೆ ಗುಂಡಿಕ್ಕಿ ಹತ್ಯೆ

ಚಂಡೀಗಢ (ಪಿಟಿಐ): ಜಲಂಧರ್‌ನ ಮಾಡೆಲ್ ಟೌನ್‌ನಲ್ಲಿ ಶುಕ್ರವಾರ ಅಪರಿಚಿತ ವ್ಯಕ್ತಿಗಳು ನಡೆಸಿದ ಗುಂಡಿನ ದಾಳಿಗೆ ಆಮ್ ಆದ್ಮಿ ಪಕ್ಷದ ಸ್ಥಳೀಯ ಮುಖಂಡ ಲಕ್ಕಿ ಒಬೆರಾಯ್ ಮೃತಪಟ್ಟಿದ್ದಾರೆ.

ಬೆಳಿಗ್ಗೆ 7.30ಕ್ಕೆ ಘಟನೆ ನಡೆದಿದ್ದು, 43 ವರ್ಷದ ಲಕ್ಕಿ ಅವರು ಗುರುದ್ವಾರದಲ್ಲಿ ಪ್ರಾರ್ಥನೆ ಸಲ್ಲಿಸಿ, ಎಸ್‌ಯುವಿನಲ್ಲಿ ತೆರಳಲು ಅಣಿಯಾಗುತ್ತಿದ್ದ ವೇಳೆ ಘಟನೆ ನಡೆದಿದೆ.

ಗುರುದ್ವಾರದಿಂದ ಹೊರಬಂದ ಅವರು ಕಾರಿನಲ್ಲಿ ಕೂತಿದ್ದರು. ಈ ವೇಳೆ ಕರಿಕೋಟು ಧರಿಸಿದ ವ್ಯಕ್ತಿಯೊಬ್ಬ ನಿರಂತರ ಗುಂಡಿನ ದಾಳಿ ನಡೆಸಿದ್ದಾರೆ. ನಂತರ ಅನತಿ ದೂರದಲ್ಲಿದ್ದ ಮತ್ತೊಬ್ಬ ವ್ಯಕ್ತಿಯ ಜೊತೆ ಸ್ಕೂಟರ್ ಏರಿ ಪರಾರಿಯಾಗಿದ್ದಾರೆ.

ಇಬ್ಬರು ನಕ್ಸಲರ ಹತ್ಯೆ

ಗಡ್‌ಚಿರೋಲಿ (ಪಿಟಿಐ): ಮಹಾರಾಷ್ಟ್ರದ ಗಡ್‌ಚಿರೋಲಿ ಜಿಲ್ಲೆಯಲ್ಲಿ ನಡೆದ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಯ ಸಿಬ್ಬಂದಿಯೊಬ್ಬರು ಶುಕ್ರವಾರ ಹುತಾತ್ಮರಾಗಿದ್ದಾರೆ. ಇಬ್ಬರು ನಕ್ಸಲರೂ ಹತ್ಯೆಯಾಗಿದ್ದಾರೆ

'ನಕ್ಸಲರ ಚಲನವಲನದ ಬಗ್ಗೆ ದೊರೆತ ಮಾಹಿತಿಯ ಆಧಾರದಲ್ಲಿ ಭಮ್ರಗಢದಲ್ಲಿ ಭದ್ರತಾ ಸಿಬ್ಬಂದಿ ಮಂಗಳವಾರ ಕಾರ್ಯಾಚರಣೆ ಆರಂಭಿಸಿದ್ದರು. ಈ ಕಾರ್ಯಾಚರಣೆಯಲ್ಲಿ ಈವರೆಗೆ ಒಟ್ಟು ಮೂವರು ನಕ್ಸಲರನ್ನು ಹತ್ಯೆ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪೊಲೀಸ್ ಕಾನ್‌ಸ್ಟೆಬಲ್ ದೀಪಕ್ ಚಿನ್ನ ಮಾಡವಿ(38) ಅವರು ಮೃತಪಟ್ಟಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಕೆ: ರಾಜ್ಯ ಸರ್ಕಾರದ ನಿರ್ಧಾರ ಸರಿಯೇ?
•ಸರಿ •ತಪ್ಪು •ಗೊತ್ತಿಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪ್ರಸಿದ್ಧ, ವಿದ್ವತ್ ಬೌಲಿಂಗ್ ಸೊಬಗು

ರಣಜಿ ಕ್ವಾರ್ಟರ್‌ಫೈನಲ್: ಕುಸಿದ ಮುಂಬೈ ● ಇನಿಂಗ್ಸ್ ಮುನ್ನಡೆ ಸನಿಹ ರಾಜ್ಯ

ಮುಂಬೈ (ಪಿಟಿಐ): ವೇಗದ ಜೋಡಿ ಪ್ರಸಿದ್ಧಕೃಷ್ಣ ಹಾಗೂ ವಿದ್ವತ್ ಕಾವೇರಪ್ಪ ಅವರ ಅಮೋಘ ಬೌಲಿಂಗ್ ಮುಂದೆ ಮುಂಬೈ ತಂಡವು ಕುಸಿಯಿತು. ಇದರಿಂದಾಗಿ ಕರ್ನಾಟಕ ತಂಡವು ಇಲ್ಲಿ ಶುಕ್ರವಾರ ಆರಂಭವಾದ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆಯ ಹೊಸ್ತಿಲಿಗೆ ಬಂದು ನಿಂತಿದೆ.

ಎಂಸಿಎ–ಬಿಕೆಸಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಆತಿಥೇಯ ಮುಂಬೈ ತಂಡವು ಬ್ಯಾಟಿಂಗ್ ಮಾಡಿತು. ಆದರೆ ತಂಡದ ಈ ನಿರ್ಧಾರವು ತಿರುಗುಬಾಣವಾಯಿತು. ಭಾರತ ತಂಡದಲ್ಲಿ ಆಡಿರುವ ಅನುಭವಿ ಪ್ರಸಿದ್ಧ (21ಕ್ಕೆ3), ವಿದ್ವತ್ (38ಕ್ಕೆ3) ಮತ್ತು ಅವರಿಗೆ ತಕ್ಕ ಬೆಂಬಲ ನೀಡಿದ ಲೆಗ್‌ಸ್ಪಿನ್ನರ್ ಶ್ರೇಯಸ್ (4ಕ್ಕೆ3) ಅವರ ದಾಳಿಗೆ 48.1 ಓವರ್‌ಗಳಲ್ಲಿ 120 ರನ್‌ಗಳ ಅಲ್ಪಮೊತ್ತಕ್ಕೆ ಮುಂಬೈ ಕುಸಿಯಿತು. ಆರಂಭಿಕ ಬ್ಯಾಟರ್ ಅಖಿಲ್ ಹೆರ್ವಾಡ್ಕರ್ (60; 138ಎ, 4X9) ಅವರು ಏಕಾಂಗಿ ಹೋರಾಟ ಮಾಡಿದರು.

ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ (ಔಟಾಗದೇ 54) ಅವರ ಜವಾಬ್ದಾರಿಯುತ ಆಟದ ಬಲದಿಂದ ಮೊದಲ ದಿನದಾಟದ ಅಂತ್ಯಕ್ಕೆ ಕರ್ನಾಟಕವು 26 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 ರನ್ ಗಳಿಸಿತು. ಪ್ರಥಮ ಇನಿಂಗ್ಸ್ ಮುನ್ನಡೆಗೆ ಇನ್ನು 10 ರನ್‌ಗಳಷ್ಟೇ ಬೇಕಿದೆ. ಮಯಂಕ್ ಅವರೊಂದಿಗೆ ಕರುಣ್ ನಾಯರ್ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದಾರೆ.

ರಾಯಚೂರು ಹುಡುಗ ವಿದ್ಯಾಧರ್ ಪಾಟೀಲ ಅವರು ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಯಶಸ್ವಿ ಜೈಸ್ವಾಲ್ ವಿಕೆಟ್ ಕಬಳಿಸುವಲ್ಲಿ ಯಶಸ್ವಿಯಾದರು. ವಿಕೆಟ್‌ಕೀಪರ್ ಕೃತಿಕ್ ಕೃಷ್ಣ ಪಡೆದ ಕ್ಯಾಚ್‌ಗೆ ಯಶಸ್ವಿ ನಿರ್ಗಮಿಸಿದರು.





ಪ್ರಸಿದ್ಧ ಕೃಷ್ಣ (ಎಡ) ಹಾಗೂ ವಿದ್ವತ್ ಕಾವೇರಪ್ಪ ಪ್ರಜಾವಾಣಿ ಸಂಗ್ರಹ ಚಿತ್ರಗಳು

ಎರಡು ಓವರ್‌ಗಳ ನಂತರ ವಿದ್ವತ್ ಬೌಲಿಂಗ್‌ನಲ್ಲಿ ಮುಷೀರ್ ಖಾನ್ ಅವರು ಕೆ.ಎಲ್. ರಾಹುಲ್ ಅವರಿಗೆ ಕ್ಯಾಚ್ ಆದರು. ಸಿದ್ಧೇಶ್ ಲಾಡ್ ಮತ್ತು ಶಾರ್ದೂಲ್ ಠಾಕೂರ್ ವಿಕೆಟ್ ಕೂಡ ವಿದ್ವತ್ ಖಾತೆ ಸೇರಿದವು.

ಇನ್ನೊಂದು ಬದಿಯಿಂದ ಪ್ರಸಿದ್ಧ ಕೃಷ್ಣ ಅವರ ಸ್ವಿಂಗ್ ಪ್ರಭಾವ ಬೀರಿತು. ಸೂರ್ಯಾಂಶ್ ಶೆಡಗೆ, ಆಕಾಶ್ ಆನಂದ್ ಮತ್ತು ಶಮ್ಸ್ ಮುಲಾನಿ ಅವರ ವಿಕೆಟ್ ಗಳಿಸಿದರು. ಇದರಿಂದಾಗಿ ತಂಡವು 78 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತು.

ಕೆಳಕ್ರಮಾಂಕದ ಬ್ಯಾಟರ್‌ಗಳು ದೀರ್ಘ ಇನಿಂಗ್ಸ್ ಆಡಲು ಶ್ರೇಯಸ್ ಬಿಡಲಿಲ್ಲ. ಅವರ ಬೌಲಿಂಗ್‌ನಲ್ಲಿ ಆರಂಭಿಕ ಬ್ಯಾಟರ್ ಹೆರ್ವಾಡ್ಕರ್ ಕೊನೆಯವರಾಗಿ ಔಟಾದರು.

ಮಯಂಕ್ ಮಿಂಚು: ಕರ್ನಾಟಕ ತಂಡಕ್ಕೆ ಅನುಭವಿ ಜೋಡಿ ಕೆ.ಎಲ್. ರಾಹುಲ್ (28; 26ಎ, 4X6) ಮತ್ತು ಮಯಂಕ್ ಅವರು ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 10 ಓವರ್ ದಾಟುವಷ್ಟರಲ್ಲಿ 50 ರನ್‌ಗಳು ಸೇರಿದವು.

ಆದರೆ ಮೋಹಿತ್ ಅವಸ್ಥಿ ಅವರ ಎಸೆತದ ವೇಗ ಅಂದಾಜಿಸುವಲ್ಲಿ ಎಡವಿದ ರಾಹುಲ್ ಕ್ಲೀನ್‌ಬೌಲ್ಡ್ ಆದರು. ಜೊತೆಯಾಟ ಮುರಿಯಿತು. ನಾಯಕ ದೇವದತ್ತ ಪಡಿಕ್ಕಲ್ (17; 27ಎ, 4X2) ಅವರು ಆಟಕ್ಕೆ ಕುದುರಿಕೊಂಡಿದ್ದ ಹೊತ್ತಿನಲ್ಲಿ ಸೂರ್ಯಾಂಶ್ ಅವರ ಎಸೆತದಲ್ಲಿ ಆಕಾಶ್ ಆನಂದ್‌ಗೆ ಕ್ಯಾಚಿತ್ತರು. ಅವರು ಗುಂಪು ಹಂತದ ಕೊನೆ ಪಂದ್ಯದಲ್ಲಿ ಶತಕ ಬಾರಿಸಿ ಗೆಲುವಿಗೆ ಕಾರಣರಾಗಿದ್ದರು.

ಈ ಹಂತದಲ್ಲಿ ಮಯಂಕ್ ಅವರು ಜವಾಬ್ದಾರಿಯುತ ಆಟವಾಡಿದರು. ತಂಡವು ಕುಸಿಯದಂತೆ ತಡೆದರು. ಅವರೊಂದಿಗೆ ಕರುಣ್ ಕೂಡ ಸೇರಿಕೊಂಡರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 48.1 ಓವರ್‌ಗಳಲ್ಲಿ 120 (ಅಖಿಲ್ ಹೆರ್ವಾಡ್ಕರ್ 60, ಶಾರ್ದೂಲ್ ಠಾಕೂರ್ 16, ಸಿದ್ಧೇಶ್ ಲಾಡ್ 12, ಸೂರ್ಯಾಂಶ ಶೆಡಗೆ 12, ವಿದ್ವತ್ ಕಾವೇರಪ್ಪ 38ಕ್ಕೆ3, ಪ್ರಸಿದ್ಧಕೃಷ್ಣ 21ಕ್ಕೆ3, ಶ್ರೇಯಸ್ ಗೋಪಾಲ್ 4ಕ್ಕೆ3, ವಿದ್ಯಾಧರ್ ಪಾಟೀಲ 36ಕ್ಕೆ1) ಕರ್ನಾಟಕ: 26 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 (ಕೆ.ಎಲ್. ರಾಹುಲ್ 28, ಮಯಂಕ್ ಅಗರವಾಲ್ ಬ್ಯಾಟಿಂಗ್ 54, ದೇವದತ್ತ ಪಡಿಕ್ಕಲ್ 17, ಮೋಹಿತ್ ಅವಸ್ತಿ 21ಕ್ಕೆ1, ಸೂರ್ಯಾಂಶ್ ಶೆಡಗೆ 16ಕ್ಕೆ1)

ಚುರಾಚಾಂದಪುರ ಸಂಪೂರ್ಣ ಬಂದ್

ಇಂಫಾಲ್/ಚುರಾಚಾಂದಪುರ (ಪಿಟಿಐ): ಮಣಿಪುರದಲ್ಲಿ ನೂತನವಾಗಿ ರಚನೆಯಾದ ಸರ್ಕಾರದಲ್ಲಿ ಕುಕಿ ಸಮುದಾಯದ ಶಾಸಕರು ಭಾಗಿಯಾಗಿದ್ದನ್ನು ಖಂಡಿಸಿ ಕುಕಿ ಬುಡಕಟ್ಟು ಸಮುದಾಯದ ಎರಡು ಸಂಘಟನೆಗಳು ಶುಕ್ರವಾರ ಕರೆ ನೀಡಿದ್ದ ಚುರಾಚಾಂದಪುರ ಜಿಲ್ಲಾ ಬಂದ್ ಯಶಸ್ವಿಯಾಯಿತು.

ಕುಕಿ ಸಮುದಾಯದ ಪ್ರಾಬಲ್ಯ ಹೊಂದಿರುವ ಜಿಲ್ಲೆಯಲ್ಲಿ ಬೆಳಿಗ್ಗೆಯಿಂದಲೇ ವಾಹನಗಳ ಸಂಚಾರ ಬಹುಪಾಲು ಸ್ಥಗಿತಗೊಂಡಿತ್ತು. ಇದರ ಹೊರತಾಗಿಯೂ ಓಡಾಡಿದ ವಾಹನಗಳನ್ನು ತಡೆದ ಸಂಘಟನೆಯ ಕಾರ್ಯಕರ್ತರು ಕಲ್ಲುತೂರಾಟ ನಡೆಸಿದರು.

'ಜಿಲ್ಲೆಯ ಬಹುತೇಕ ಮಾರುಕಟ್ಟೆಗಳು ಸ್ಥಗಿತಗೊಂಡಿತ್ತು. ರಸ್ತೆಗಳು ಖಾಲಿ ಖಾಲಿಯಾಗಿದ್ದವು. ಶಾಲಾ– ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿ ಹಾಜರಾತಿ ತೀವ್ರ ಕಡಿಮೆಯಾಗಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕುಕಿ ಚುರಾಚಾಂದಪುರ ವಿದ್ಯಾರ್ಥಿ ಸಂಘಟನೆಯು ಶುಕ್ರವಾರ ಮಧ್ಯರಾತ್ರಿಯಿಂದಲೇ ಇಡೀ ಜಿಲ್ಲೆಯ ಬಂದ್‌ಗೆ ಕರೆ ನೀಡಿತ್ತು. ಏಳು ಸಂಘಟನೆಗಳ ಜಂಟಿ ಒಕ್ಕೂಟ (ಜೆಎಫ್–7) ಕುಕಿ ಬಹುಸಂಖ್ಯಾತ ಪ್ರದೇಶಗಳಲ್ಲಿ ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಬಂದ್ ಘೋಷಿಸಿತ್ತು.

'ಜಿಲ್ಲಾ ಕೇಂದ್ರವಾದ ತುಯಿಬಾಂಗ್ ಪ್ರದೇಶದಲ್ಲಿ ಬಂದ್ ಹೆಚ್ಚು ಪರಿಣಾಮಕಾರಿಯಾಗಿತ್ತು. ಜಿಲ್ಲೆಯಲ್ಲಿ ಪರಿಸ್ಥಿತಿ ಪ್ರಕ್ಷುಬ್ಧವಾಗಿದೆ. ಹೆಚ್ಚುವರಿ ಭದ್ರತಾ ಪಡೆಗಳನ್ನು ಜಿಲ್ಲೆಗೆ ಕಳುಹಿಸಿಕೊಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

60 ಸದಸ್ಯ ಬಲದ ಮಣಿಪುರ ವಿಧಾನಸಭೆಯಲ್ಲಿ ಕುಕಿ ಸಮುದಾಯದ 10 ಮಂದಿ ಶಾಸಕರಿದ್ದಾರೆ.

ಸೂರ್ಯವಂಶಿ ಅಬ್ಬರಕ್ಕೆ ಒಲಿದ ಕಿರೀಟ

ದಾಖಲೆಯ ಆರನೇ ಬಾರಿ ಯುವ ವಿಶ್ವಕಪ್ ಗೆದ್ದುಕೊಂಡ ಭಾರತ ತಂಡ



ವಿಶ್ವಕಪ್ ವಿಜೇತ ಭಾರತ 19 ವರ್ಷದೊಳಗಿನ ತಂಡದ ಆಟಗಾರರ ಸಂಭ್ರಮ ಐಸಿಸಿ ಚಿತ್ರ



ಸೂರ್ಯವಂಶಿ

ಹರಾರೆ (ಪಿಟಿಐ): ಮಿಂಚಿನ ವೇಗದಲ್ಲಿ ಸಿಕ್ಸರ್, ಬೌಂಡರಿಗಳ ಚಿತ್ತಾರ ಬಿಡಿಸಿದ 'ವಂಡರ್ ಕಿಡ್' ವೈಭವ್ ಸೂರ್ಯವಂಶಿ ಯುವ ವಿಶ್ವಕಪ್ ಇತಿಹಾಸದಲ್ಲೇ ಮೈನವಿರೇಳಿಸುವ ಇನಿಂಗ್ಸ್ ಆಡಿದರು. ಅವರ ಸ್ಫೋಟಕ 175 ರನ್‌ಗಳ ನೆರವಿನಿಂದ ಭಾರತ ತಂಡ ಶುಕ್ರವಾರ ನಡೆದ ಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಬರೋಬ್ಬರಿ 100 ರನ್‌ಗಳಿಂದ ಸೋಲಿಸಿತು.

ಆಯುಷ್ ಮ್ಹಾತ್ರೆ ನೇತೃತ್ವದ ಚಿಗುರುಮೀಸೆಯ ಹುಡುಗರ ಪಡೆ ದಾಖಲೆಯ ಆರನೇ ಬಾರಿ ಟ್ರೋಫಿ ಎತ್ತಿಹಿಡಿಯಿತು.

ಈಗಾಗಲೇ ಕಿರಿಯರ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿರುವ 14 ವರ್ಷ ವಯಸ್ಸಿನ ಸೂರ್ಯವಂಶಿ ಕೇವಲ 80 ಎಸೆತಗಳಲ್ಲಿ ದಾಖಲೆಯ 175 ರನ್ (4x15, 6x15) ಸಿಡಿಸಿದರು. ಇದರಲ್ಲಿ 150 ರನ್‌ಗಳು ಬೌಂಡರಿ, ಸಿಕ್ಸರ್‌ಗಳ ನೆರವಿನಿಂದಲೇ ಹರಿದುಬಂದವು. ಇಂಗ್ಲೆಂಡ್ ಆಟಗಾರರು ಬಸವಳಿದರು. ಭಾರತ 9 ವಿಕೆಟ್‌ಗೆ 411 ರನ್‌ಗಳ ಭಾರಿ ಮೊತ್ತ ದಾಖಲಿಸಿತು. ಹರಾರೆ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದ ಇಂಗ್ಲೆಂಡ್ ಆಗಲೇ ಪಂದ್ಯವನ್ನು ಅರ್ಧ ಸೋತಂತಾಗಿತ್ತು. ಇಂಗ್ಲೆಂಡ್ ಬೇಗನೇ ರನ್ ಗಳಿಸಿದರೂ ಗುರಿ ಬಲು ದೊಡ್ಡದಾಗಿತ್ತು. ಅಂತಿಮವಾಗಿ 40.2 ಓವರುಗಳಲ್ಲಿ 311 ರನ್‌ಗಳಿಗೆ ಆಲೌಟ್ ಆಯಿತು. 67 ಎಸೆತಗಳಲ್ಲಿ 115 ರನ್ ಹೊಡೆದ ಕೆಲೆಬ್ ಫಾಲ್ಕ್‌ನರ್ ಅವರೊಬ್ಬರಿಂದ ಪ್ರತಿರೋಧ ಎದುರಾಯಿತು. ಸೋಲಿನ ಅಂತರವೂ ಇಳಿಯಿತು.

ಆಕ್ರಮಣಕಾರಿ ಆಟವಾಡುವ ತಮ್ಮ ಕೌಶಲವನ್ನು ಈ ಮಹತ್ವದ ಪಂದ್ಯದಲ್ಲೂ ಪ್ರಸ್ತುತಪಡಿಸಿದ ಸೂರ್ಯವಂಶಿ ಕೇವಲ 55 ಎಸೆತಗಳಲ್ಲಿ ಶತಕ ದಾಟಿದರು. ಇದು ಈ ಟೂರ್ನಿಯ ಇತಿಹಾಸದಲ್ಲಿ ಎರಡನೇ ಅತಿ ವೇಗದ ಶತಕ ಎನಿಸಿತು. ಅವರು ಗಳಿಸಿದ 175 ರನ್ ಟೂರ್ನಿಯ ಗರಿಷ್ಠ ವೈಯಕ್ತಿಕ ಮೊತ್ತವೆನಿಸಿತು. ಭಾರತ ಗಳಿಸಿದ ಮೊತ್ತ ಫೈನಲ್‌ನಲ್ಲಿ ದಾಖಲಾದ ಅತಿ ಹೆಚ್ಚಿನ ಮೊತ್ತ ಎನಿಸಿತು. ಭಾರತದ ಮೊತ್ತ 21.4 ಓವರುಗಳಲ್ಲೇ 200ರ ಗಡಿ ದಾಟಿತ್ತು.

ನಾಯಕ ಆಯುಷ್ (53) ಜೊತೆಗೆ ಎರಡನೇ ವಿಕೆಟ್‌ಗೆ 142 ರನ್ ಸೇರಿಸಿದ ಬಿಹಾರದ ಹುಡುಗ, ಮೂರನೇ ವಿಕೆಟ್‌ಗೆ ವೇದಾಂತ್ ತ್ರಿವೇದಿ ಜೊತೆಗೆ (36, 32ಎ) ಕೇವಲ 7.2 ಓವರುಗಳಲ್ಲಿ 89 ರನ್ ಸೇರಿಸಿದರು. ಮೊದಲ ಅರ್ಧ ಶತಕಕ್ಕೆ 32 ಎಸೆತ ತೆಗೆದುಕೊಂಡ ಅವರು ನಂತರದ 50 ರನ್ನಿಗೆ 23 ಎಸೆತ ತೆಗೆದುಕೊಂಡರು. 71 ಎಸೆತಗಳಲ್ಲೇ 150ರ ಗಡಿ ದಾಟಿದರು.

ಅವರ ಅಬ್ಬರದಿಂದ ಭಾರತ ಓವರಿಗೆ 10 ರನ್‌ಗಳಂತೆ ಗಳಿಸುತ್ತಾ ಹೋಯಿತು. 26ನೇ ಓವರಿನಲ್ಲಿ ಅವರು ವಿಕೆಟ್ ಕೀಪರ್‌ಗೆ ಕ್ಯಾಚಿತ್ತ ನಂತರ (3 ವಿಕೆಟ್‌ಗೆ 251) ರನ್ ವೇಗ ಕಡಿಮೆಯಾಯಿತು. ಆದರೆ ಆ ಬುನಾದಿಯಲ್ಲಿ 400 ಮೊತ್ತ ದಾಟಲು ಸಾಧ್ಯವಾಯಿತು.

ಪಂದ್ಯದ ಹಾಗೂ ಸರಣಿಯ ಆಟಗಾರ ಗೌರವಕ್ಕೂ ಸೂರ್ಯವಂಶಿ ಪಾತ್ರರಾದರು.

ಕನ್ನಡಿಗ ಸುನೀಲ್ ಜೋಶಿ ಅವರು ವಿಜೇತ ತಂಡದ ಬೌಲಿಂಗ್ ಕೋಚ್ ಆಗಿದ್ದರು.

ಸೂರ್ಯವಂಶಿ ದಾಖಲೆ

- ಟೂರ್ನಿಯಲ್ಲಿ ಶತಕ ಸಿಡಿಸಿದ ಅತಿ ಕಿರಿಯ ಆಟಗಾರ (14 ವರ್ಷ)
- ಗರಿಷ್ಠ ವೈಯಕ್ತಿಕ ಮೊತ್ತ (175)
- ಇನಿಂಗ್ಸ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ (15)

ಸ್ಕೋರ್ ಕಾರ್ಡ್

ಭಾರತ: 9 ವಿಕೆಟ್‌ಗೆ 411 (50 ಓವರುಗಳಲ್ಲಿ)

ಆರನ್ ಸಿ ಮೇಯ್ಸ್ ಬಿ ಗ್ರೀನ್ 9 (11ಎ, 4x2)
ವೈಭವ್ ಸಿ ರಿವ್ ಬಿ ಲಮ್ಸ್‌ಡೆನ್ 175 (80ಎ, 4x15, 6x15)
ಆಯುಷ್ ಸಿ ಮೇಯ್ಸ್ ಬಿ ಗ್ರೀನ್ 53 (51ಎ, 4x7, 6x2)
ವೇದಾಂತ್ ಸಿ ಮೇಯ್ಸ್ ಬಿ ಮಿಂಟೊ 32 (36ಎ, 4x3)
ವಿಹಾನ್ ಸಿ ಡಾಕಿನ್ಸ್ ಬಿ ಮಿಂಟೊ 30 (36ಎ, 4x2)
ಅಬಿಜ್ಞಾನ್ ಸಿ ಆಲ್ಬರ್ಟ್ ಬಿ ಮಾರ್ಗನ್ 40 (31ಎ, 4x6, 6x1)
ಅಂಬರೀಶ್ ಬಿ ಮಿಂಟೊ 18 (24ಎ, 4x2)
ಕನಿಷ್ಕ್ ಔಟಾಗದೇ 37 (20ಎ, 4x3, 6x1)
ಖಿಲಾನ್ ಸಿ ಮೂರ್ಸ್ ಬಿ ಮಾರ್ಗನ್ 3 (4ಎ)
ಹೆನಿಲ್ ರನೌಟ್ (ಲಮ್ಸ್‌ಡೆನ್/ ರಿವ್) 5 (7ಎ)
ದೀಪೇಶ್ ಔಟಾಗದೇ 0 (0ಎ)
ಇತರೆ 9 (ವೈಡ್ 8, ಲೆಗ್‌ಬೈ 1)
ವಿಕೆಟ್ ಪತನ: 1–20 (ಆರನ್ ಜಾರ್ಜ್, 3.6), 2–162 (ಆಯುಷ್ ಮ್ಹಾತ್ರೆ, 18.6), 3–251 (ವೈಭವ್ ಸೂರ್ಯವಂಶಿ, 25.3), 4–302 (ವಿಹಾನ್ ಮಲ್ಹೋತ್ರಾ, 34.2), 5–308 (ವೇದಾಂತ್ ತ್ರಿವೇದಿ, 36.3), 6–359 (ಅಭಿಜ್ಞಾನ್ ಕುಂಡು, 44.2), 7–367 (ಆರ್.ಎಸ್.ಅಂಬರೀಶ್, 45.1), 8–375 (ಖಿಲಾನ್ ಪಟೇಲ್, 46.4), 9–393 (ಹೆನಿಲ್ ಪಟೇಲ್, 48.6).
ಬೌಲಿಂಗ್: ಸೆಬಾಸ್ಟಿಯನ್ ಮಾರ್ಗನ್ 9–0–74–2; ಅಲೆಕ್ಸ್ ಗ್ರೀನ್ 5–0–49–2; ಮ್ಯಾನಿ ಲಮ್ಸ್‌ಡೆನ್ 8–0–81–1; ಜೇಮ್ಸ್ ಮಿಂಟೊ 8–0–63–3; ಫರ್ಹಾನ್ ಅಹ್ಮದ್ 10–0–77–0; ರಾಲ್ಫಿ ಆಲ್ಬರ್ಟ್ 10–0–66–0

ಇಂಗ್ಲೆಂಡ್: 311 (40.2 ಓವರುಗಳಲ್ಲಿ)

ಡಾಕಿನ್ಸ್ ಸಿ ಖಿಲಾನ್ ಬಿ ಮ್ಹಾತ್ರೆ 66 (56ಎ, 4x7, 6x2)
ಮೂರ್ಸ್ ಬಿ ಅಂಬರೀಶ್ 17 (16ಎ, 4x4)
ಮೇಯ್ಸ್ ಸಿ ಹೆನಿಲ್ ಬಿ ಖಿಲಾನ್ 45 (28ಎ, 4x7, 6x2)
ಥಾಮಸ್ ಸಿ ಮ್ಹಾತ್ರೆ ಬಿ ಚೌಹಾನ್ 31 (18ಎ, 4x4, 6x1)
ಫಾಲ್ಕ್‌ನರ್ ಸಿ ಖಿಲಾನ್ ಬಿ ಚೌಹಾನ್ 115 (67ಎ, 4x9, 6x7)
ಆಲ್ಬರ್ಟ್ ರನೌಟ್ (ಖಿಲಾನ್/ ಕುಂಡು) 0 (2ಎ)
ಫರ್ಹಾನ್ ಸಿ ಕುಂಡು ಬಿ ದೀಪೇಶ್ 1 (2ಎ)
ಮಾರ್ಗನ್ ಸಿ ಮತ್ತು ಬಿ ದೀಪೇಶ್ 0 (2ಎ)
ಮಿಂಟೊ ಸಿ ಸಬ್ (ಇನಾನ್) ಬಿ ಅಂಬರೀಶ್ 28 (41ಎ, 4x1)
ಲಮ್ಸ್‌ಡೆನ್ ಸಿ ವೇದಾಂತ್ ಬಿ ಅಂಬರೀಶ್ 3 (10ಎ)
ಅಲೆಕ್ಸ್ ಗ್ರೀನ್ ಔಟಾಗದೇ 0 (0ಎ)
ಇತರೆ 5 (ಬೈ 1, ಲೆಗ್‌ಬೈ 2, ವೈಡ್ 2)
ವಿಕೆಟ್ ಪತನ: 1–19 (ಜೋಸೆಫ್ ಮೂರ್ಸ್, 5.4), 2–93 (ಬೆನ್ ಮೇಯ್ಸ್, 12.6), 3–142 (ಥಾಮಸ್ ರಿವ್, 17.6), 4–174 (ಬೆನ್ ಡಾಕಿನ್ಸ್, 20.4), 5–174 (ರಾಲ್ಫಿ ಆಲ್ಬರ್ಟ್, 20.6), 6–177 (ಫರ್ಹಾನ್, 21.4), 7–177 (ಸೆಬಾಸ್ಟಿಯನ್, 21.6), 8–269 (ಜೇಮ್ಸ್ ಮಿಂಟೊ, 35.2), 9–281 (ಮ್ಯಾನಿ ಲಮ್ಸ್‌ಡೆನ್, 37.6), 10–311 (ಕೆಲೆಬ್ ಫಾಲ್ಕ್‌ನರ್, 40.2)
ಬೌಲಿಂಗ್: ಅಂಬರೀಶ್ 9–1–56–3; ಹೆನಿಲ್ ಪಟೇಲ್ 4–2–28–0; ದೀಪೇಶ್ ದೇವೇಂದ್ರನ್ 6–0–64–2; ಖಿಲಾನ್ ಪಟೇಲ್ 8–0–66–1; ಕನಿಷ್ಕ್ ಚೌಹಾನ್ 8.2–0–63–2; ಆಯುಷ್ ಮ್ಹಾತ್ರೆ 5–0–31–1

ಬ್ಯಾಡ್ಮಿಂಟನ್: ಭಾರತ ತಂಡಗಳ ನಿರ್ಗಮನ

ಕ್ವಿಂಗ್ದಾವೊ (ಚೀನಾ), (ಪಿಟಿಐ): ಬ್ಯಾಡ್ಮಿಂಟನ್ ಏಷ್ಯಾ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಭಾರತ ಮಹಿಳಾ ತಂಡದ ಅಭಿಯಾನ ಕ್ವಾರ್ಟರ್‌ಫೈನಲ್‌ನಲ್ಲೇ ಅಂತ್ಯಗೊಂಡಿತು. ಎರಡನೇ ಹಂತದ ಆಟಗಾರ್ತಿಯರಿದ್ದ ಚೀನಾ ತಂಡ ಶುಕ್ರವಾರ 3–0ಯಿಂದ ಭಾರತ ತಂಡವನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು. ಪುರುಷರ ತಂಡವೂ ಎಂಟರ ಘಟ್ಟದಲ್ಲೇ ಹೊರಬಿತ್ತು. ಕೊರಿಯಾ 3–1 ರಿಂದ ಜಯಗಳಿಸಿ ಸೆಮಿಫೈನಲ್ ತಲುಪಿತು.

ತನ್ವಿ ಶರ್ಮಾ ಮೊದಲ ಸಿಂಗಲ್ಸ್‌ನಲ್ಲಿ 9–21, 9–21 ರಿಂದ ಗಾವೊ ಫಾಂಗ್ ಜೀ ಅವರಿಗೆ ಮಣಿದರು. ಗಾಯತ್ರಿ ಗೋಪಿಚಂದ್– ಟ್ರೀಸಾ ಜೋಳಿ ಜೋಡಿ 22–24, 18–21 ರಿಂದ ಜಿಯಾ ಯಿ ಫಾನ್– ಝಾಂಗ್ ಶು ಷಿಯಾನ್ ಎದುರು ಹಿಮ್ಮೆಟ್ಟಿತು. ಭಾರತಕ್ಕೆ ನಿರ್ಣಾಯಕವಾಗಿದ್ದ ಪಂದ್ಯದಲ್ಲಿ ರಕ್ಷಿತಾ ರಾಮರಾಜ್ 14–21, 21–15, 17–21 ರಲ್ಲಿ ಸೋತರು.

ಲಕ್ಷ್ಯ ಸೇನ್ ಲಕ್ಷ್ಯ ಬದಲು ಕಣಕ್ಕಿಳಿದ ಆಯುಷ್ ಶೆಟ್ಟಿ ಮೊದಲ ಸಿಂಗಲ್ಸ್‌ನಲ್ಲಿ ಯೂ ತೇ ಬಿನ್ ಅವರಿಗೆ 21–18, 14–21, 26–24 ರಲ್ಲಿ ಮಣಿದರು. ಚಿರಾಗ್ ಶೆಟ್ಟಿ– ಹರಿಹರನ್ ಅಮ್ಸಕರುಣನ್ ಅವರು 11–21, 13–21ರಲ್ಲಿ ಸಾಂಗ್ ಹ್ಯುಮ್ ಚೊ– ಕಿಮ್ ವೊನ್ ಹೊ ಎದುರು ಸೋತರು. ಕಿದಂಬಿ ಶ್ರೀಕಾಂತ್ 21–15, 21–16ರಲ್ಲಿ ಚೊಯ್ ಜಿ ಹೂನ್ ಅವರನ್ನು ಸೋಲಿಸಿದ್ದರಿಂದ ಪಂದ್ಯ ಜೀವಪಡೆಯಿತು. ಆದರೆ ನಂತರದ ಡಬಲ್ಸ್‌ನಲ್ಲಿ ಪೃಥ್ವಿ ಕೃಷ್ಣನ್– ಕೆ.ಸಾಯಿ ಪ್ರತೀಕ್ 11–21, 16–21 ರಲ್ಲಿ ಜಿನ್ ಯಾಂಗ್– ಕಿ ಡಾಂಗ್ ಜು ಅವರಿಗೆ ಮಣಿದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

ANJANAPURA BDA Sites 8th-Block 50x80 North Commercial 80ft`Road 40x60`E/W 1st`Block 40x60-N/W Corner 30x40-E/N 2nd Block`30x40 East & North Call:9538903671 9535843671

ANJANAPURA SALE 20x60, 20x60 Adjoining 2Sites N/F 8th-Block Parallel 80feet Vajramuni Road Cheque Payment 10.5K Per Sft Call:9945922769

BDA SITE FOR SALE Anjanapura 9th Block 30×40 & Anjanapura 1st Block 40×60 North Contact: 9845090471

SALE BDA 30x40 Anjanapura 5th G Block South facing also 40x60 west facing commercial site 2nd Block. 9620041313, 9945373839

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

SALE BSK 6th stage 4th B Block 40x60 west facing 2.10Cr also 40x60 South Facing 6th Block 2.20Cr behind 100Ft Road, site owners 9945373839, 9620041313

BDA SITE, PRIME LOCATION Banashankri 6th, 2nd Block 30x40 East Facing, Brokers Excuse. 98458-59217/ 98456-09477.

BDA SITE SALE BANASHANKARI, 6TH STAGE, 4TH BLACK, 40X60 GOOD LOCATION, NEAR ATHMSHRAMA: 9845146725/ 9741466369

Girinagar

40X60 GIRINAGAR and 40x60 North Face in Hanumatha Nagar. Good Location. Please CONTACT: 6362196652

Jayanagar

SALE BDA-SITE 19x24 NORTH WEST CORNER JAYANAGAR 6TH BLOCK NEAR METRO STATION Rs.1.15CR Call:7892531744 9448369117

Kempegowda Layout

BDA SITE for Sale Nadaprabhu kempegowda layout 40x60, 1st block H Sector, Near 330 feet PRR Road South, Broker excuse Genuine buyers only: 7349549087

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

DIRECT OWNER 30x40 BDA Site Sale, KEMPEGWODA LAYOUT BLOCK-3 'J' SECTOR,Behind 80ft Road KOMMAGATTA. 9742681666

SITE 30X40 EF BDA, Rs. 10000/- Negotiable, Nada Prbhu Kempegowda Layout, 1st Block H- Sector: 9916826976

SITE EF 40x60, Rs. 9750/- Negotiable, Nada Prbhu Kempegowda Layout, 1st Block, K Sector 9916826976

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

BTM Layout

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

Nagarabhavi

NAGARBHAVI RHS Layout, 40x60 East Facing, Pure Commercial, Near BDA Complex, Genuine Buyers Only: 9980409820

"AVAILABLE `D`GROUP 30x40 East MPM 40x60 near AIT COLLEGE, Vishveshwaraiah 30x40 East 50x80 Commercial. 9448733456/ 7259675150"

"AVAILABLE ANNAPOORNESWA- RINAGAR RHSCS Layout 30X50 Site for Sale 40 FEET ROAD NEAR BDA COMPLEX 9448733456 7259675150"

Nelamangala

5390 SQFT, S/W Corner, E-Khata Villa Plot, Sri Sai Krishna Villas, Hassan- Mangaluru Road, Lakkenahalli, Bengaluru.Rs. 4500/- psft. (slightly negotiable)Genuine buyers only Contact: 9480217325

BYRASHETTYHALLI AISHWARYA County BMRDA 40x60, East And Banashankari BDA 30x40,Sites For Sale : 9620117773/9845857006

Jakkur

JUDICIAL LAYOUT Site For Sale 7850sft East Facing Residential Plan Sanctioned on 14th Main 22k per sft Call:9845922769

FOR SALE -JAKKUR4000 square feet(50×80) residential plot,Telecom Layout. A-Khata(clear title) 13,500/sqft(5.4 Cr).Direct owner. Whatsapp: 9591918278 9844019327

HUBBALLI INDUSTRIAL SHED AVAILABLE FOR RENT OR SALE
TOTAL BUILT UP AREA: 23,000 SQFT (100' X 230').
SITE: 1 ACRE 11 GUNTAS, FULLY COMPOUNDED.
FEATURES: VDF #5 FLOORING, 125HP POWER.
LOCATION: 10KM FROM HUBLI AIRPORT. MANGALORE-DHARWAD HIGHWAY.
ADDRESS: SURVEY #74 MANGALORE-DHARWAD HIGHWAY, NEAR SPICER INDIA LTD. FACTORY, DEVALINGEKOPPA, KALAGHATI TALUK, DHARWAD DISTRICT:
RS. 11/SQFT (NEGOTIABLE) OR OUTRIGHT SALE.
CONTACT: MRITYUNJAYA
+91 94481 45437

BUNGALOW FOR SALE
5989 Sq ft, Furnished 4 BHK Bungalow for sale in Baglur. It's 20 minutes drive to Airport. Price 5cr. Call owner :
9113209192

Mysore Road

PRICE 2450SFT only. Mysore Road Near Christ College 60x90 E-Khatha Site Immediate Settlement. Call:7619444766

Rajarajeshwari Nagar

RAJARAJESHWARI NAGAR 30X40 East Facing Site For Sale Excellent Location BDA APPROVED Call: 9341260828

Dodda Aladamara

TWO 40×60' Sites in KNS NESTER, West Facing, BMRDA approved, 2,650 /sqft. Slightly Negotiable. 9686885275

Vishweshwariah Layout

40X60 NORTH Facing site, SMV 5th block, DC converted, BBMP A & E Khata. Close to proposed Metro phase 3. Contact: 9900266984

FOR SALE BDA Site EAST Facing 30x40 SMV Layout, 6th Block, Direct owner Contact. 9019962007

2400 SFT BDA Site near Secret Place 8th Block Muddayanapalya. Brokers Excuse. Vinod: 9844509888, 9108288121.

BDA SITE SALE 40×60 N/F 3RD BLOCK SMV LAYOUT 14500/- SRI RAMA PROPERTIES 9108133156/ 9632763003

SMVL 7TH Block, 40×60 Site, DC Conversion, E Katha, NF, Byregowda Layout Near Ullal RTO: 9980433004

VISHWESHWARAIAH LAYOUT, BDA 7th Block, 30x40 SF, Near RTO Office, Site No. 1476, Direct Owner Meeting: 9902956166

"SALE WEST SOUTH Corner 1170 Sqft near Vidhyanikethan School Ullal Road BDA KHATHA. Call: 9916651999"

Mysore

MYSORE BDA (MUDA) Site Sale, Dattagalli 3rd Stage 823 Sqft, No.55 East- Corner. 9845729728.

Villas/Bunglows

Kanakapura Road

SALE 30X50 CORNER Brand-New 3BHK Duplex-Villa Gated Community @ Nanda Prakruthi E-katha Off Kanakapura Road Near`Nice`Road Rs.1.89cr Negotiable Call:9901011122 9845064043

New Building with 65 Rooms For Rent
near MANYATA TECH PARK
Suitable for
Student Hostel
Company Guest House
Lodging
Attached Bath and Ample Car Parking
PG
Contact
98450 08811

House

Bannerghatta Road

SALE 30x50 With House Off BG Road
SUDDAGUNTEPALYA
Near Dairy Circle, Christ University Back Gate. Near Metro Station. Good Location
Call: 99019 54048

Agricultural Land Converted

Bangalore South

SOUTH BANGALORE 95acre Land for Sale yellowzone, City Limit (Layout, farm Land, Multiple Development) 7619444766

Agricultural Land

Mysore

MYSORE NANJANGUDU 5acre and 10acre Land For Immediate Sale 25 Lakhs only Per Acre: 7619444766

Flat

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Industrial & Factory

Magadi Road

FOR SALE Industrial Building off Magadi road North Facing, 30 Ft Road, Land: 8,000 Sqft, Built up- 16000 Sqft, Power: 200KvA. Contact: 9035609555

Out-Station

BUILT-TO-SUIT AVAILABLE
10 Acres Land
Fit For Warehouse / Industrial Construction
APIIC Industrial Area, Hindupur
Contact: Ravi
63662 36307

REAL ESTATE BUYING

Joint Development

General

WANTED LAND Suitable for Apartment on JD Or Outright Sale on Min 40 feet Road in Bangalore Call: 9606252997

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

Banashankari

BDA-SITES WANTED @ BSK 6th Stage all Blk Vishweshwaraiah Lyt Kempegowda Lyt 30x40, 40x60, 50x80 Call:9845555666

Multiple Locations

WANTED BDA Sites Anjanapura- Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

VALENZA TRAVELS
www.valenzatravels.com | valenzatravels@gmail.com
ಬೇಸಿಗೆ ರಜಾ ಪ್ರವಾಸ
5 ಸೀಟಿಗೆ 1 ಸೀಟು ಉಚಿತ
ಕಡಿಮೆ ದರ
ಬುಕಿಂಗ್ 7, 8ನೇ ಫೆಬ್ರವರಿ 2026
ಈ ಕೊಡುಗೆ 2 ದಿನಗಳು ಮಾತ್ರ

ಕಾಶಿ, ಗಯಾ, ಅಯೋಧ್ಯಾ 6 ರಾತ್ರಿ ₹ 29,000/-	ಅಂಡಮಾನ್ 6 ರಾತ್ರಿ ₹ 27,000/-
ಶಿಮ್ಲಾ, ಮನಾಲಿ 6 ರಾತ್ರಿ ₹ 27,000/-	ಥೈಲ್ಯಾಂಡ್ 5 ರಾತ್ರಿ ₹ 36,000/-
ಶ್ರೀಲಂಕಾ 6 ರಾತ್ರಿ ₹ 45,000/-	ಬಾಲಿ 6 ರಾತ್ರಿ ₹ 45,000/-

ಏಪ್ರಿಲ್ 10, 20, 25 ರಂದು ಮತ್ತು ಮೇ 5, 10, 15 ರಂದು ಗ್ರೂಪ್ ಪ್ರವಾಸವನ್ನು ನಡೆಸಲಾಗುತ್ತದೆ.
ಸೀಮಿತ ಆಸನಗಳು ಲಭ್ಯವಿದೆ !
ವಿಶ್ವಪ್ರಿಯ ಲೇಔಟ್, 1ನೇ ಕ್ರಾಸ್, ಜೈಶ್ರೀ ಆಸ್ಪತ್ರೆ ಎದುರು, ಬೇಗೂರು, ಬೊಮ್ಮನಹಳ್ಳಿ, ಬೆಂಗಳೂರು-560068.
6366506611
6366437755

EUROPE, CURATED TO PERFECTION 14 DAYS
Tree of Life
• Italy • Vatican • Switzerland • Germany • Netherlands • Belgium • France
Rome, Vatican, Florence, Venice, Mt. Titlis, Rhine Falls, Amsterdam Canal Cruise, Eiffel Tower
Keukenhof Tulip Gardens (Seasonal)
Call / WhatsApp: +91 9880 999875
Limited Seats · Book Early
Fixed Departure in April-2026 from Bangalore

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EPOXY GROUTING for bathroom & balconies. Heat reflecting coating for terraces. Contact Roof & Walls, Bangalore. 9845987989

RENTAL PROPERTIES

Accommodation Available

Commercial

24000 SFT (Ground, First & Second Floor - EACH FLOOR 8000 sqft) Parking - 6000 sqft Contact: +91- 9845761737.

JOB OPPORTUNITIES

Marketing & Sales

WANTED SALES Managers, Sales Executives, Telecallers for real estate firm. Attractive salary + Incentives. 8867627879

EDUCATIONAL

Correspondence Courses

PASS DIRECT SSLC, 2nd-PUC within 4 months, eligible for NEET and CET also for Admission Contact: 9880498484/ 9900004099.

PERSONAL

Change of Name

CHANGE OF NAME
I, **SATYANARAYAN,** aged 53 years, S/o Anant Rao, R/at Flat No F-101,1st Floor, Shivashree Garden, 4th Cross, 5th Stage, BEML Layout, Rajarajeshwari Nagar, Bengaluru-560098, have changed my name to **SATYANARAYAN PATIL** vide affidavit dated 27/01/2026, notarized before the advocate Aravind Patil, Bengaluru

CHANGE OF NAME
I, **Venkatesh Iyer & Venkatesh Balakrishnan Iyer,** R/at No. 477, Shiva Ganga, Kariappa Road, Gokarna, Uttara Kannada Dist, Karnataka-581326, declare that the above names pertain to me only & henceforth I shall be known as **VENKATESH BALAKRISHNAN IYER** vide affidavit dated 04-02-2026 before notary C Venkatapathy, Bangalore.

I, SAMEER PRATAPKUMAR PARIKH, have changed to New name SAMEER PRATAP PARIKH, residing at C001, The Five Summits Address, Road No- 10, EPIP Area, Whitefield, Bengaluru- 560066, vide affidavit dated 06/02/2026 before Veena J., notary Bengaluru .



email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

RERA NUMBER : PRM/KA/RERA/1251/310/PR/220722/005096

MARS BUILDERS

ಮಾರ್ಸ್ ಪ್ಲಾನೆಟ್
MARS PLANET
ಹೊಸಕೆರೆಹಳ್ಳಿ

opp. to TATA PROMONT on Hills of Banashankari

ಐಷಾರಾಮಿ ಅಪಾರ್ಟ್‌ಮೆಂಟ್ ಮಾರಾಟಕ್ಕೆ ಲಭ್ಯ

ಸ್ವರ್ಗದಂತಿರುವ ನಿಮ್ಮದೇ ಸ್ಥಳದಲ್ಲಿ ಐಶ್ವರ್ಯಭರಿತ ಜೀವನ ನಡೆಸಿರಿ

ಪ್ರಾರಂಭಿಕ ಬೆಲೆ

₹9999/- per sqft

(all inclusive)



178 Units | 18 Floors | Built in 2.5 Acres | 75% Open Space

AMENITIES

- Gymnasium
- Jogging Track
- Indoor Games
- Children Play Area
- Swimming Pool
- Multi Purpose Hall
- Outdoor Sports
- Rain Water Harvesting
- CCTV Camera Surveillance
- Sewage Treatment Plant

READY for POSSESSION

ಹತ್ತಿರದ ಸ್ಥಳಗಳು

- ಜನತಾ ಬಜಾರ್ (Ring Road) : 1.4 kms
- ಬಿಗ್ ಬಜಾರ್ (ಕಾಮಾಕ್ಯ) : 2.4 kms
- ವಿದ್ಯಾಪೀಠ ಸರ್ಕಲ್ : 3.1 kms
- ಬಸವನಗುಡಿ : 4.3 kms
- ಚಾಮರಾಜ ಪೇಟೆ : 5.1 kms
- ವಿ. ವಿ. ಪುರಂ : 6.0 kms

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

87921 55802 | 97438 99993 | 9538 040404